2016

ಹೊಸ ದಿಗಂತ
ಬೆಂಗಳೂರು
ಸೋಮವಾರ, 26 ಡಿಸೆಂಬರ್ 2016

ಶಿಕ್ಷಣದಲ್ಲಿ ನೈತಿಕ ಮೌಲ್ಯ ಬೋಧನೆ ಅಗತ್ಯ

ಬೆಂಗಳೂರು: ಹಿಂದಿನಂತೆ ಇಂದಿನ ಶಿಕ್ಷಣದಲ್ಲಿ ನೈತಿಕ ಮೌಲ್ಯ ಬೋಧಿಸುತ್ತಿಲ್ಲ. ಶೈಕ್ಷಣಿಕ ಕ್ಷೇತ್ರವು ಮಕ್ಕಳಿಗೆ ಒಳ್ಳೆಯ ಜ್ಞಾನ ನೀಡುವ ಕ್ಷೇತ್ರವಾಗದೇ ಕೇವಲ ಹಣ ಗಳಿಕೆಯ ಉದ್ಯಮವಾಗಿ ಬೆಳೆಯುತ್ತಿದೆ ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಬೇಸರ ವ್ಯಕ್ತಪಡಿಸಿದರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಭಾನುವಾರ ಶೇಷಾದ್ರಿಪುರ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 7ನೇ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಒಂದು ಕಾಲದಲ್ಲಿ ಕೇವಲ ಅಕ್ಷರವನ್ನು ಕಲಿತರೆ ಸಾಕು ವಿದ್ಯಾವಂತ ಎಂಬ ಭಾವನೆ ಇತ್ತು. ಆದರೆ, ಇಂದು ಕಂಪ್ಯೂಟರ್ ಶಿಕ್ಷಣ ಕಲಿತು ತಂತ್ರಜ್ಞಾನ ಬಲ್ಲವನಾಗಿದ್ದರೆ ಮಾತ್ರ ವಿದ್ಯಾವಂತ ಎಂದು ಭಾವಿಸಲಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಭಾನುವಾರ ಶೇಷಾದ್ರಿಪುರ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 7ನೇ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶವನ್ನು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು. ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಕನ್ನಡಿಗರ ಸ್ನೇಹ ಕೂಟದ ಸಂಸ್ಥಾಪಕ ರಾಂ. ಕೆ. ಹನುಮಂತಯ್ಯ ಇನ್ನಿತರರಿದ್ದರು.

ಕೆಟ್ಟದ್ದು, ಒಳ್ಳೆಯದರ ಅರಿವಿರಬೇಕು

ಹೊಸ ತಂತ್ರಜ್ಞಾನ ತಿಳಿಯದವರನ್ನು ಅಜ್ಞಾನಿಗಳು ಎಂದು ಭಾವಿಸುವ ವಾತಾವರಣ ನಿರ್ಮಾಣವಾಗಿದೆ. ಆದರೆ, ಇಂದು ನಮ್ಮಲ್ಲಿ ಕಂಪ್ಯೂಟರ್ ಕಲಿಕೆಯ ಸಾಕ್ಷರತಾ ಪ್ರಮಾಣ ಕೇವಲ ಶೇ.12 ರಷ್ಟು ಇದೆ. ಹಳೆ ಹಾಗೂ ಹೊಸ ತಲೆಮಾರುಗಳ ನಡುವೆ ಯಾವಾಗಲೂ ಒಂದು ಕಂದಕವಿದ್ದೇ ಇರುತ್ತದೆ.

ಹಳೆ ತಲೆಮಾರಿನ ಜನ ನಮ್ಮ ಕಾಲವೇ ಶ್ರೇಷ್ಠ ಎಂದರೆ, ಹೊಸ ತಲೆಮಾರಿನ ಜನ ತಮ್ಮ ಕಾಲವೇ ಶ್ರೇಷ್ಠ ಎಂದು ಹೇಳುತ್ತಾರೆ. ಇದು ಒಂದು ತಪ್ಪು ಕಲ್ಪನೆಯಾಗಿದ್ದು, ಎಲ್ಲ ಕಾಲದಲ್ಲಿಯೂ ಒಳ್ಳೆಯದು, ಕೆಟ್ಟದು ಇದ್ದೇ ಇರುತ್ತದೆ. ಆದರೆ, ಅದರ ಪ್ರಮಾಣ ಮಾತ್ರ ಬೇರೆ ಬೇರೆಯಾಗಿರುತ್ತದೆ. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ನಿರ್ಧಾರ ಮಾಡುವಂತಹ ಔಚಿತ್ಯ ಮತ್ತು ವಿವೇಕವನ್ನು ನಾವು ಪಡೆಯಬೇಕಾಗುತ್ತದೆ ಎಂದರು.

ಬುದ್ಧ, ಬಸವ, ಗಾಂಧಿ ಸತ್ಯ ಹಾಗೂ ಸಮಾನತೆಗಾಗಿ ಅಧಿಕಾರವನ್ನು ಬಿಟ್ಟು ಅಪವರ್ಗೀಕರಣಕ್ಕೆ ಒಳಗಾಗುವುದರ ಮೂಲಕ ಜನ ಸಾಮಾನ್ಯರ ಜೊತೆ ಗುರುತಿಸಿಕೊಂಡರು. ಜನಸಮಾನ್ಯರ ನೆಲೆಯಿಂದ ಸಮಾಜದ ಹಿತಕ್ಕಾಗಿ ಶ್ರಮಿಸಿದರು. ಇವರ ವಿಚಾರಧಾರೆಗಳು ಇಂದೂ ಪ್ರಸ್ತುತ, ಮುಂದೆಯೂ ಪ್ರಸ್ತುತವಾಗಿ ಇರುತ್ತವೆ ಎಂದು ಹೇಳಿದರು.

ಸಂಸ್ಕೃತಿ ಮೌಲ್ಯಗಳೂ ಮುಖ್ಯ

ಸಮಾವೇಶದ ಮುಖ್ಯ ಅತಿಥಿ ಶಿಕ್ಷಣ ತಜ್ಞ ಹಾಗೂ ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಇಂದಿನ ಯುವ ಜನತೆಗೆ ಗಾಂಧಿ, ಬುದ್ಧ, ಬಸವಣ್ಣನವರ ವಿಚಾರಧಾರೆಗಳ ಹಾಗೂ ಜೀವನದ ಮೌಲ್ಯಗಳ ಬಗ್ಗೆ ಪರಿಚಯವೇ ಇಲ್ಲವಾಗಿದೆ. ತಾಂತ್ರಿಕತೆಯ ಜೊತೆ ನಾವು ನಿಲ್ಲಬೇಕಾದರೆ ಸಂಸ್ಕೃತಿಯ ಮೌಲ್ಯಗಳು ಮುಖ್ಯವಾಗಿದ್ದು, ಆದ್ದರಿಂದ ಮಕ್ಕಳಿಗೆ ತಾಂತ್ರಿಕ ಶಿಕ್ಷಣದ ಜೊತೆಗೆ ಸಂಸ್ಕೃತಿಯ ಮೌಲ್ಯಗಳನ್ನು ತಿಳಿಸಬೇಕಾಗಿದೆ.ಎಂದರು.

ಕನ್ನಡಿಗರ ಸ್ನೇಹ ಕೂಟದ ಸಂಸ್ಥಾಪಕ ರಾಂ. ಕೆ. ಹನುಮಂತಯ್ಯ ಅಧ್ಯಕ್ಷತೆ ವಹಿಸಿದ್ದರು, ಬುದ್ಧ ಬಸವ ಗಾಂಧಿಸಾಂಸ್ಕೃತಿಕಟ್ರಸ್ಟ್ ಅಧ್ಯಕ್ಷಎಸ್.ರಾಮಲಿಂಗೇಶ್ವರ (ಸಿಸಿರಾ) ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹಿಂದಿನ ಸಮಾವೇಶದ ಅಧ್ಯಕ್ಷ ಇಂಜನಿಯರ್ ದಾಳೇಗೌಡ ಹೊಸಳ್ಳಿ, ಇತಿಹಾಸ ಪ್ರಾಧ್ಯಾಪಕ ಡಾ.ಚಿಕ್ಕಚನ್ನಯ್ಯ ವ್ಯಾವಾಪಟ್ಟಿ ಸಮಾಜ ಸೇವಕಿ ರೇಣುಕಾ ನಾಗಪ್ರಿಯ ಸಮಾವೇಶದಲ್ಲಿ ಉಪಸ್ಥಿತರಿದ್ದರು.

ಬೆಂಗಳೂರು ಉದಯವಾಣಿ
ಸೋಮವಾರ | ಡಿಸೆಂಬರ್ | 26 | 2016

ಬುದ್ಧ, ಬಸವ ಜಾತಿ ಸ್ವತ್ತಾಗುತ್ತಿರುವುದು ದುರದೃಷ್ಟಕರ: ಸಾಹಿತಿ ಬರಗೂರು



ಶೇಷಾದ್ರಿಪುರ ಕಾಲೇಜು ಆವರಣದಲ್ಲಿ 'ಬುದ್ಧ-ಬಸವ-ಗಾಂಧಿ ಸಾಂಸ್ಕೃತಿಕ ಟ್ರಸ್ಟ್' ವತಿಯಿಂದ ಶೇಷಾದ್ರಿಪುರ ಕಾಲೇಜಿನಲ್ಲಿ ಭಾನುವಾರ ಏರ್ಪಡಿಸಲಾಗಿದ್ದ 'ಏಳನೇ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶ'ವನ್ನು ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು.

ಬೆಂಗಳೂರು: ಅಹಿಂಸೆ ಮತ್ತು ಸಮಾನತಾ ವಾದದ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸಿ, ತಳ ಸಮುದಾಯದವರ ಅಭಿವೃದ್ಧಿ ಕನಸು ಕಂಡ ಗಾಂಧಿ, ಬುದ್ಧ ಮತ್ತು ಬಸವಣ್ಣ ಕೆಲವೇ ಜನಾಂಗದ ಸ್ವತ್ತಾಗುತ್ತಿರುವುದು ದುರದೃಷ್ಟಕರ. ಅವರ ತತ್ವಾದರ್ಶ ಎಲ್ಲರೂ ಪಾಲನೆ ಮಾಡುವಂತಾಗಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.

ಭಾನುವಾರ ನಗರದ ಶೇಷಾದ್ರಿಪುರ ಕಾಲೇಜು ಆವರಣದಲ್ಲಿ 'ಬುದ್ಧ-ಬಸವ-ಗಾಂಧಿ ಸಾಂಸ್ಕೃತಿಕ ಟ್ರಸ್ಟ್' ವತಿಯಿಂದ ಶೇಷಾದ್ರಿಪುರ ಕಾಲೇಜಿನಲ್ಲಿ ಭಾನುವಾರ ಏರ್ಪಡಿಸಲಾಗಿದ್ದ 'ಏಳನೇ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶ'ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಈ ಮೂವರು ಮಹಾ ವ್ಯಕ್ತಿಗಳು ಸಾರಿದ ತತ್ವಗಳನ್ನು ಪ್ರತಿಯೊಬ್ಬರೂ ತಮ್ಮದಾಗಿಸಿಕೊಳ್ಳಬೇಕು. ಇವರು ತುಳಿತಕ್ಕೊಳಗಾದವರನ್ನು ಮೇಲ್ಪಂಕ್ತಿಗೆ ತರಲು ಶ್ರಮಿಸಿದರು. ಆದರೆ, ಬುದ್ಧ, ಬಸವಣ್ಣರನ್ನು ಕೆಲ ಜಾತಿಯವರು ತಮ್ಮ ಸ್ವತ್ತನ್ನಾಗಿಸಿಕೊಂಡಿದ್ದು, ಅವರು ಒಂದು ಜಾತಿ, ಜನಾಂಗಕ್ಕೆ ಸೀಮಿತವಾಗಿಸಬಾರದು ಎಂದರು.

ಹಿಂದಿನ ಹಿರಿಯ ತಲೆಮಾರು ಹಾಗೂ ಈಗಿನ ಕಿರಿಯ ತಲೆಮಾರಿನವರ ನಡುವೆ ಭಾರೀ ಕಂದಕ ಸೃಷ್ಟಿಯಾಗಿದ್ದು, ಇಬ್ಬರನ್ನೂ ಮುಖಾಮುಖಿಯಾಗುವಂತೆ ಮಾಡಬೇಕಿದೆ. ಎರಡೂ ತಲೆಮಾರಿನಲ್ಲೂ ಒಳ್ಳೆಯದು ಮತ್ತು ಕೆಟ್ಟದು ಇದ್ದೇ ಇರುತ್ತದೆ. ಹಿಂದಿನ ತಲೆಮಾರು ಪರಂಪರೆಯಾದರೆ, ಈಗಿನ ತಲೆಮಾರು ಪ್ರಗತಿ., ಸಂಸ್ಕೃತಿಯು ಚಲನಶೀಲವಾಗಿರುವುದರಿಂದ ಕಾಲ ಕಾಲಕ್ಕೆ ಬದಲಾಗುತ್ತದೆ. ಹೀಗಾಗಿ ಹಿರಿಯ ಹಾಗೂ ಕಿರಿಯರಲ್ಲೂ ಹೊಂದಾಣಿಕೆ ನಿರೀಕ್ಷಿಸುವ ಬದಲಾವಣೆ ಅಗತ್ಯ ಎಂದರು.

- **ವ್ಯಾಪಾರವಾದ ಶಿಕ್ಷಣ:** ಇಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣದಿಂದಾಗಿ ಶಿಕ್ಷಣ ಒಂದು ಉದ್ಯಮ ಹಾಗೂ ವ್ಯಾಪಾರ ವಸ್ತುವಾಗಿ ಬದಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡಿರುವರಲ್ಲಿ ಯಾರು ಶಿಕ್ಷಣ ವ್ಯಾಪಾರದ ವಸ್ತುವಾಗಬಾರದು ಎಂದು ಹೇಳುತ್ತಾರೆಯೋ ಅವರು ನಿಜವಾದ ತಜ್ಞರಾಗಿರುತ್ತಾರೆ. ಅವರಿಗೆ ಶಿಕ್ಷಣದ ಮಹತ್ವ ಅರಿವಿರುತ್ತದೆ ಎಂದು ಹೇಳಿದರು. ಸಮಾವೇಶದ ಅಧ್ಯಕ್ಷ ರಾಂ.ಕೆ. ಹನುಮಂತಯ್ಯ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ.ವುಡೇ ಪಿ. ಕೃಷ್ಣ, ಸಮಾಜ ಸೇವಕಿ ರೇಣುಕಾ ನಾಗಪ್ರಿಯ ಹಾಜರಿದ್ದರು.

ಈ ಸಂಜೆ
ಭಾನುವಾರ, 25-12-2016



ಸಿದ್ದನಹಳ್ಳಿಯ ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 7ನೆ ಕನ್ನಡ ಸಾಹಿತ್ಯ ಸಂಸ್ಕೃತಿ ಸಮಾವೇಶದಲ್ಲಿ ನಾಡೋಜ ಡಾ.ಬರಗೂರು ರಾಮಚಂದ್ರಪ್ಪ, ಸಮಾವೇಶದ ಅಧ್ಯಕ್ಷ ರಾಂ.ಕೆ.ಹನುಮಂತಯ್ಯ ಹೆಬ್ಬಗೋಡಿ ಗೋಪಾಲ್, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ವೂಡೆ.ಪಿ.ಕೃಷ್ಣ ತ್ತಿತರರು ಪಾಲ್ಗೊಂಡಿದ್ದರು.

ಸಂಜೆವಾಣಿ

ಭಾನುವಾರ 25 ಡಿಸೆಂಬರ್ 2016



ಶೇಷಾದ್ರಿಪುರಂನಲ್ಲಿ ಇಂದು ನಡೆದ 7ನೇ ಕನ್ನಡ ಸಾಹಿತ್ಯ – ಸಾಂಸ್ಕೃತಿಕ ಸಮಾವೇಶವನ್ನು ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು. ಶಿಕ್ಷಣ ತಜ್ಞ ಡಾ. ವೂಡೆ ಪಿ. ಕೃಷ್ಣ, ದಾಸೇಗೌಡ ಹೊಸಳ್ಳಿ, ರಾಂ. ಕೆ. ಹನುಮಂತಯ್ಯ ಇದ್ದಾರೆ.

ಹೊಸ ದಿಗಂತ
ಬೆಂಗಳೂರು
ಶುಕ್ರವಾರ, 23 ಡಿಸೆಂಬರ್ 2016



ಮಹಾರಾಣಿ ಕಾಲೇಜಿನಲ್ಲಿ ಚಿನ್ಮಯಿ ಸೇವಾ ಟ್ರಸ್ಟ್ ಮತ್ತು ಗಾಂಧಿ ಭವನ ಆಯೋಜಿಸಿದ್ದ ಗಾಂಧೀಜಿ ಅವರ ಮೌಲ್ಯಗಳು ಕುರಿತ ಕಾರ್ಯಾಗಾರದಲ್ಲಿ ಗಾಂಧಿಭವನದ ಅಧ್ಯಕ್ಷ ಹೆಚ್. ಶ್ರೀನಿವಾಸಯ್ಯ, ಪ್ರೊ. ಪಿ.ಕೃಷ್ಣ, ಕಾಲೇಜಿನ ಪ್ರಾಂಶುಪಾಲರಾದ ಆರ್. ಶಾಂತಕುಮಾರಿ ಭಾಗವಹಿಸಿದ್ದರು.



ಮಹಾರಾಣಿ ಮಹಿಳಾ ಕಲಾ ವಾಣಿಜ್ಯ ಮತ್ತು ನಿರ್ವಹಣ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಗಾಂಧಿ ತತ್ವಗಳನ್ನು ಈಗಿನ ವ್ಯವಹಾರದಲ್ಲಿ ಅಳವಡಿಸಿಕೊಳ್ಳುವ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಸ್ವಾಮಿ ರಾಮಾತ್ಮನಂದಾಜಿ, ಗಾಂಧಿ ಭವನದ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ, ಡಾ. ವೂಡೆ. ಪಿ. ಕೃಷ್ಣ, ಡಾ. ಆರ್. ಶಾಂತಕುಮಾರಿ, ಎಚ್. ವಾಸುಕಿ ಮತ್ತಿತರರಿದ್ದರು.

ಕನ್ನಡಪ್ರಭ
ಸೋಮವಾರ 19.12.2016
ಶಿವಮೊಗ್ಗ

ಮಾಧ್ಯಮಗಳಿಂದ ಅನಗತ್ಯ ವಿಚಾರ ವೈಭವೀಕರಣ ಸಲ್ಲ

ಕುಲಪತಿ ಪ್ರೊ. ಹಿ.ಚಿ. ಬೋರಲಿಂಗಯ್ಯ ಅಭಿಪ್ರಾಯ । ಜಾನಪದ ತಜ್ಞ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಕೃತಿಗಳ ಬಿಡುಗಡೆ

• ಕನ್ನಡಪ್ರಭ ವಾರ್ತೆ ಚಿತ್ರದುರ್ಗ

ದೇಶಕ್ಕೆ ಅನ್ನ ನೀಡುವ ಅನ್ನದಾತ ರೈತನನ್ನೇ ಎಲ್ಲ ಸರ್ಕಾರಗಳು ಕಡೆಗಣಿಸುತ್ತಿವೆ. ಇನ್ನು ಜಾನಪದ ಪರಂಪರೆ, ಬುಡಕಟ್ಟು ಸಂಸ್ಕೃತಿ ಉಳಿಯುವುದಾದರೂ ಹೇಗೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ವಿಶ್ರಾಂತಿ ಕುಲಪತಿ ಪ್ರೊ. ಹಿ.ಚಿ. ಬೋರಲಿಂಗಯ್ಯ ಪ್ರಶ್ನಿಸಿದರು.

ದಾವಣಗೆರೆ ರಸ್ತೆಯ ಜಗಳೂರು ಮಹಲಿಂಗಪ್ಪ ಟವರ್ಸ್ ಫಾರ್ಚೂನ್ ಹಾಲ್‌ನಲ್ಲಿ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ, ಸಿ.ವಿ.ಜಿ. ಪಬ್ಲಿಕೇಷನ್ ಸಹಯೋಗದಲ್ಲಿ ಭಾನುವಾರ ನಡೆದ ಜಾನಪದ ತಜ್ಞ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ ಕೃತಿ ಕನ್ನಡಿ, ನುಡಿ ಕನ್ನಡಿ, ಜಾನಪದ ಕಣಜ ಸಿರಿಯಜ್ಜಿ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಮನುಷ್ಯ ಸ್ವಾರ್ಥಿ ಆಗಿರುವುದರಿಂದ ಇಡೀ ವ್ಯವಸ್ಥೆ ಕಾರ್ಪೊರೇಟ್ ಸಂಸ್ಕೃತಿ ಹಿಂದೆ ಬಿದ್ದು, ಜಾನಪದ ಸಂಸ್ಕೃತಿ ವಿನಾಶದತ್ತ ಸಾಗುತ್ತಿದೆ. ಆದರೂ ಜಾನಪದ, ಬುಡಕಟ್ಟುಸಂಸ್ಕೃತಿಯಲ್ಲಿಇನ್ನುಮೌಲ್ಯಗಳು ಉಳಿದಿವೆ. ಬಹುಸಂಖ್ಯಾತರನ್ನು ಓಲೈಸುವ ರಾಜಕಾರಣಿಗಳು ಕಡಿಮೆ ಸಂಖ್ಯೆಯಲ್ಲಿರುವ ಜಾನಪದ ಕಲಾವಿದರನ್ನು ಮತ್ತು ಕಲೆಗಳನ್ನು ತಿರಸ್ಕರಿಸುತ್ತಿರುವುದು ಸರಿಯಲ್ಲ. ಮಾಧ್ಯಮಗಳು ಹಳ್ಳಿಗಾಡಿನ ಸಂಸ್ಕೃತಿ ಮರೆತು ಅನಗತ್ಯ ವಿಚಾರಗಳನ್ನು ವೈಭವೀಕರಿಸುತ್ತಿರುವುದು ನೋವಿನ ಸಂಗತಿ. ಮೀರಾಸಾಬಿಹಳ್ಳಿ ಶಿವಣ್ಣನವರ ಕೃತಿಗಳನ್ನು ಓದಿದರೆ ಒಮ್ಮೆ ಹಳ್ಳಿಗಾಡಿನ ಸಿರಿವಂತಿಕೆಯ ಬಣ್ಣ ಬಣ್ಣದ ಜಾತ್ರೆಯನ್ನು ಸುತ್ತಿ ಬಂದಂತಾಗುತ್ತದೆ ಎಂದು ಬಣ್ಣಿಸಿದರು.

ಡಾ. ಮೀರಾಸಾಬಿಹಳ್ಳಿ ಶಿವಣ್ಣನವರ 3 ಕೃತಿಗಳು ತಳವರ್ಗದ ನೋವು, ಸಂಕಟ, ಅಭಿಪ್ರಾಯಗಳಿಂದ ಆರಂಭಗೊಂಡಿರುವುದು ನಿಜಕ್ಕೂ ವಿಶೇಷ. ಕೆಲವರು ಮೀರಾಸಾಬಿಹಳ್ಳಿ ಶಿವಣ್ಣ ಅವರನ್ನು ಜೋಗಿ, ಸಂತ, ಬಂಧು, ಒಡನಾಡಿ, ಆಧ್ಯಾತ್ಮಿ ಎಂದೆಲ್ಲಾ ಕರೆದಿದ್ದಾರೆ. ಮನುಷ್ಯ ಪ್ರೀತಿಗಾಗಿ ಹಂಬಲಿಸುವ ತುಡಿತ ಇವರ ಕೃತಿಗಳಲ್ಲಿ ಅಡಕವಾಗಿದೆ. ಗ್ರಾಮೀಣ ನೆಲಸ ಸೊಗಡಿನ ಜಾನಪದ ಪರಂಪರೆಯನ್ನು ರಕ್ಷಿಸಿಕೊಳ್ಳುವ ತವಕವನ್ನು ಡಾ.ಮೀರಾಸಾಬಿಹಳ್ಳಿ ಶಿವಣ್ಣ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಅವರು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜಾನಪದ ಕಲೆ ಮತ್ತು ಕಲಾವಿದರು, ಅನ್ನದಾತ ರೈತನನ್ನು ಉಳಿಸಿ ಕೊಳ್ಳವತ್ತ ಗಮನ ಕೊಡಬೇಕು ಒತ್ತಾಯಿಸಿದರು.

ಸಾಹಿತಿ ಡಾ.ಕಾಳೇಗೌಡ ನಾಗವಾರ ಮಾತನಾಡಿ, ಕಾಡುಗೊಲ್ಲರ ಮುಗ್ಧತೆ, ಸಮೃದ್ಧವಾದ ಸಾಂಸ್ಕೃತಿಕ ಸಂಗತಿ, ಎಲ್ಲ ಬುಡಕಟ್ಟು ಜನಾಂಗಗಳ ಸಾಂಸ್ಕೃತಿಕ ಸಂಗತಿಗಳು ಡಾ.ಮೀರಾಸಾಬಿಹಳ್ಳಿ ಶಿವಣ್ಣನವರ 3 ಕೃತಿಗಳಲ್ಲಿ ಅಡಕವಾಗಿದೆ. ಜಾನಪದ ಕಲಾವಿದರೆಂದರೆ ಅನಕ್ಷರಸ್ಥರು. ಆದರೆ ಅವರೆಲ್ಲ ಜ್ಞಾನಿಗಳು. ಅನೇಕ ಪ್ರತಿ ಭಾವಂತರು ತಮ್ಮ ತೊಂದರೆ ಸಮಸ್ಯೆಗಳ ನಡುವೆಯೇ ಕಲೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಅಂತಹವರನ್ನು ಗುರುತಿಸಿ ಬೆಳಕಿಗೆ ತರುವ ಕೆಲಸ ಮಾಡಬೇಕಿದೆ ಎಂದು ಹೇಳಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೂಡೆ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಸಭೆ ಮಾಜಿ ಸದಸ್ಯ ಎಚ್. ಹನು ಮಂತಪ್ಪ, ತೆಲುಗಿನ ಖ್ಯಾತ ಕಥೆಗಾರ ಕೇತು ವಿಶ್ವನಾಥರೆಡ್ಡಿ, ಕೇಂದ್ರ ಸಾಹಿತ್ಯ ಅಕಾಡೆಮಿ ವಿಶ್ರಾಂತ ಕಾರ್ಯದರ್ಶಿ ಅಗ್ರಹಾರ ಕೃಷ್ಣ ಮೂರ್ತಿ, ಸಂಶೋಧಕ ಡಾ. ಬಿ.ರಾಜಶೇಖರಪ್ಪ, ನಿವೃತ್ತ ಐಎಎಸ್ ಅಧಿಕಾರಿ ಕೆ.ಅಮರನಾರಾಯಣ ಉಪಸ್ಥಿತರಿದ್ದರು.

ಜಾನಪದ ಗಾಯಕ ಬಾನಂದೂರು ಕೆಂಪಯ್ಯ ಅವರ ಜನಪದ ಸಂಗೀತ, ನಿಸರ್ಗ ಗೋವಿಂದರಾಜು ಅವರ ಬುಡಕಟ್ಟು ಸಂಸ್ಕೃತಿಯ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.



ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ ಅಭಿನಂದನಾ ಕೃತಿ ಹಾಗೂ ಇತರೆ 2 ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ರಾಜ್ಯಸಭೆ ಮಾಜಿ ಸದಸ್ಯ ಎಚ್. ಹನುಮಂತಪ್ಪ ಇತರರು ಇದ್ದರು.

ಗ್ರಾಮೀಣ ಊಟಣಕೂಟ ಜಾರಿಗೆ ಒತ್ತಾಯ

• ಕನ್ನಡಪ್ರಭ ವಾರ್ತೆ ಚಿತ್ರದುರ್ಗ

ಗ್ರಾಮೀಣ ಊಟಣಕೂಟ ರಾಜ್ಯದಲ್ಲಿ ಜಾರಿಯಾಗಲಿ ಎಂದು ಡಾ.ಕಾಳೇಗೌಡ ನಾಗವಾರ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು. ಜಗಳೂರು ಮಹಲಿಂಗಪ್ಪ ಟವರ್ಸ್‌ನ ಫಾರ್ಚೂನ್ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜಾನಪದ ತಜ್ಞ ಡಾ.ಮೀರಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ತಮಿಳುನಾಡಿನ ಸರ್ಕಾರ ಅಮ್ಮಾ ಹೋಟೇಲ್ ಜಾರಿಗೊಳಿಸುವ ಮೂಲಕ ಅಲ್ಲಿನ ಬಡಜನರಿಗೆ ಅನುಕೂಲ ಮಾಡಿದೆ. ಅದೇ ರೀತಿ ರಾಜ್ಯದಲ್ಲಿ ಗ್ರಾಮೀಣ ಊಟಣಕೂಟ ಜಾರಿಗೊಳಿಸುವ ಮೂಲಕ ಗ್ರಾಮೀಣರು, ಬಡವರು, ನಿರ್ಗತಿಕರಿಗೆ ಸರ್ಕಾರ ಆಸರೆ ಯಾದರೆ ಮುಖ್ಯಮಂತ್ರಿಗಳಿಗೆ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿದೆ ಎಂದು ತಿಳಿಸಿದರು.

ಡಾ.ಮೀರಾಸಾಬಿಹಳ್ಳಿ ಶಿವಣ್ಣ ಸಾಹಿತ್ಯ ಪ್ರಶಸ್ತಿ ಹಾಗೂ ಜಾನಪದ ರತ್ನ ಮೀರಾಸಾಬಿಹಳ್ಳಿ ಶಿವಣ್ಣ ಪ್ರಶಸ್ತಿ ಘೋಷಿಸಲಾಯಿತು. 2017- 18ನೇ ಸಾಲಿನ ಮೀರಾಸಾಬಿಹಳ್ಳಿ ಶಿವಣ್ಣ ಪ್ರಶಸ್ತಿಗೆ ಡಾ. ಜಿ.ವಿ. ಆನಂದಮೂರ್ತಿಯನ್ನು ಆಯ್ಕೆ ಮಾಡಿದೆ.

ಪ್ರಶಸ್ತಿಯನ್ನು ಜನವರಿಯಲ್ಲಿ ನೀಡಲಾಗುವುದು ಎಂದು ಅಭಿನಂದನಾ ಸಮಿತಿ ತಿಳಿಸಿತು. ಸಿವಿಜಿ ಪಬ್ಲಿಕೇಷನ್ ವತಿಯಿಂದ ಜಾನಪದ ರತ್ನ ಮೀರಾಸಾಬಿಹಳ್ಳಿ ಶಿವಣ್ಣ ಪ್ರಶಸ್ತಿ ಪ್ರತಿವರ್ಷ ನೀಡಲಾಗುವುದು ಎಂದು ಪ್ರಕಾಶಕರಾದ ಗಿರಿಜಾ ಚಂದ್ರು ತಿಳಿಸಿದರು.

vishwavani.news
19.12.2016
ಸೋಮವಾರ

ಡಾ.ಮೀರಾಸಾಬಿಹಳ್ಳಿ ಶಿವಣ್ಣಗೆ ಅಭಿನಂದನಾ ಸಮಾರಂಭ | ಕೃತಿ ಕನ್ನಡಿ, ನುಡಿ ಕನ್ನಡಿ, ಜನಪದ ಕಣಜ ಸಿರಿಯಜ್ಜಿ ಮೂರು ಕೃತಿ ಬಿಡುಗಡೆ

ಅಳಿವಿನಂಚಿನಲ್ಲಿ ಗ್ರಾಮೀಣ ಜನಪದ ಸಂಸ್ಕೃತಿ

ವಿಶ್ವವಾಣಿ ಸುದ್ದಿಮನೆ ಚಿತ್ರದುರ್ಗ



ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಾರಂಭದಲ್ಲಿ ಡಾ.ಮೀರಾಸಾಬಿಹಳ್ಳಿ ಶಿವಣ್ಣರವರ ಕೃತಿ ಕನ್ನಡಿ, ನುಡಿ ಕನ್ನಡಿ, ಜಾನಪದ ಕಣಜ ಸಿರಿಯಜ್ಜಿ ಎಂಬ ಮೂರು ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಬಹುಸಂಖ್ಯಾತರ ಓಲೈಸುವ ರಾಜಕಾರಣಿ ಕಡಿಮೆ ಸಂಖ್ಯೆಯಲ್ಲಿರುವ ಜನಪದ ಕಲಾವಿದರನ್ನು ಮತ್ತು ಕಲೆಯನ್ನು ತಿರಸ್ಕರಿಸುತ್ತಿರುವುದು ಸರಿಯಲ್ಲ. ಮಾಧ್ಯಮಗಳು ಹಳ್ಳಿಗಾಡಿನ ಸಂಸ್ಕೃತಿ ಮರೆತು ಅನಗತ್ಯ ವಿಚಾರ ವೈಭವೀಕರಿಸುತ್ತಿರುವುದು ನೋವಿನ ಸಂಗತಿ ಎಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ವಿಶ್ರಾಂತಿ ಕುಲಪತಿ ಹಿ.ಚಿ.ಬೋರಲಿಂಗಯ್ಯ ಹೇಳಿದರು.

ನಗರದ ಜಗಳೂರು ಮಹಲಿಂಗಪ್ಪ ಹಾಲ್‌ನಲ್ಲಿ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ , ಹಾಗೂ ಸಿವಿಜಿ ಪಬ್ಲಿಕೇಷನ್ ಸಹಯೋಗದಲ್ಲಿ ಭಾನುವಾರ ನಡೆದ ಜನಪದ ತಜ್ಞ ಡಾ.ಮೀರಾ ಸಾಬಿಹಳ್ಳಿ ಶಿವಣ್ಣರವರ ಕೃತಿ ಕನ್ನಡಿ, ನುಡಿ ಕನ್ನಡಿ, ಜನಪದ ಕಣಜ ಸಿರಿಯಜ್ಜ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ದೇಶಕ್ಕೆ ಅನ್ನ ನೀಡುವ ಅನ್ನದಾತ ರೈತನನ್ನೆ ಎಲ್ಲ ಸರಕಾರಗಳು ಕಡೆಗಣಿಸುತ್ತಾ ಬರುತ್ತಿದ್ದು, ಇನ್ನು ಜನಪದ ಪರಂಪರೆ, ಬುಡಕಟ್ಟು ಸಂಸ್ಕೃತಿ ಉಳಿಯು ವುದಾದರೂ ಹೇಗೆ. ಮನುಷ್ಯ ಸ್ವಾರ್ಥಿಯಾಗಿರುವು ದರಿಂದ ಇಡೀ ವ್ಯವಸ್ಥೆ ಕಾರ್ಪೊರೇಟ್ ಹಿಂದೆ ಬಿದ್ದು, ಜನಪದ ಸಂಸ್ಕೃತಿ ವಿನಾಶದತ್ತ ಸಾಗುತ್ತಿದೆ. ಆದರೂ ಜನಪದ ಮತ್ತು ಬುಡಕಟ್ಟು ಸಂಸ್ಕೃತಿ ಇನ್ನು ತನ್ನ ಮೌಲ್ಯ ಉಳಿದುಕೊಂಡಿದೆ ಎಂದರು.

ಗ್ರಾಮೀಣ ಪ್ರದೇಶದಿಂದ ಬಂದಿರುವ ಜನಪದ ಕಲೆಯ ಮಹತ್ವ ವಿವರಿಸಿದ್ದು, ಮೀರಾಸಾಬಿಹಳ್ಳಿ ಶಿವಣ್ಣನವರ ಈ ಕೃತಿ ಓದಿದರೆ ಒಮ್ಮೆ ಹಳ್ಳಿಗಾಡಿನ ಸಿರಿವಂತಿಕೆಯ ಬಣ್ಣ ಬಣ್ಣದ ಜಾತ್ರೆ ಸುತ್ತಿ ಬಂದಂತಾಗುತ್ತದೆ ಎಂದರು.

ಡಾ.ಮೀರಾಸಾಬಿಹಳ್ಳಿ ಶಿವಣ್ಣನವರ ಮೂರು ಕೃತಿ ತಳವರ್ಗದ ನೋವು, ಸಂಕಟ, ಅಭಿಪ್ರಾಯಗಳಿಂದ ಆರಂಭಗೊಂಡಿದ್ದು, ನಿಜಕ್ಕೂ ವಿಶೇಷ. ಕೆಲವರು ಮೀರಾಸಾಬಿಹಳ್ಳಿ ಶಿವಣ್ಣನವರನ್ನು ಜೋಗಿ, ಸಂತ, ಬಂಧು, ಒಡನಾಡಿ, ಆಧ್ಯಾತ್ಮಿ ಎಂದೆಲ್ಲಾ ಕರೆದಿದ್ದು, ಮನುಷ್ಯ ಪ್ರೀತಿಗಾಗಿ ಹಂಬಲಿಸುವ ತುಡಿತ ಇವರ ಕೃತಿಗಳಲ್ಲಿ ಅಡಕವಾಗಿದೆ. ಗ್ರಾಮೀಣ ನೆಲಸ ಸೊಗಡಿನ ಜನಪದ ಪರಂಪರೆ ರಕ್ಷಿಸಿಕೊಳ್ಳುವ ತವಕವನ್ನು ಡಾ.ಮೀರಾಸಾಬಿಹಳ್ಳಿ ಶಿವಣ್ಣ ಕೃತಿ ಕಟ್ಟಿಕೊಟ್ಟಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರಕಾರಗಳು ಜನಪದ ಕಲೆ ಮತ್ತು ಕಲಾವಿದರು, ಅನ್ನದಾತನ್ನು ಉಳಿಸಿ ಕೊಳ್ಳವತ್ತ ಗಮನ ಕೊಡಬೇಕು ಎಂದರು. ಸಾಹಿತಿ ಡಾ. ಕಾಳೇಗೌಡ ನಾಗವಾರ ಮಾತ ನಾಡಿ, ಕಾಡುಗೊಲ್ಲರ ಮುಗ್ಧತೆ, ಸಮೃದ್ಧವಾದ ಸಾಂಸ್ಕೃತಿಕ ಸಂಗತಿ ಹಾಗೂ ಎಲ್ಲ ಬುಡಕಟ್ಟು ಜನಾಂಗಗಳ ಸಾಂಸ್ಕೃತಿಕ ಸಂಗತಿಗಳು ಡಾ.ಮೀರಾಸಾಬಿಹಳ್ಳಿ ಶಿವಣ್ಣನವರ ಮೂರು



ಕೃತಿಗಳಲ್ಲಿ ಅಡಕವಾಗಿದೆ. ಜನಪದ ಕಲಾವಿದರೆಂದರೆ ಅನಕ್ಷರಸ್ಥರು. ಆದರೆ, ಅವರೆಲ್ಲ ಜ್ಞಾನಿಗಳಾಗಿ ರುತ್ತಾರೆ. ಅನೇಕ ಪ್ರತಿಭಾವಂತರು ತಮ್ಮ ತೊಂದರೆ ಸಮಸ್ಯೆಗಳ ನಡುವೆಯೇ ಕಲೆಯನ್ನು ಮುಂದು ವರೆಸಿಕೊಂಡು ಹೋಗುತ್ತಿದ್ದಾರೆ ಅಂತಹವರನ್ನು ಗುರುತಿಸಿ ಬೆಳಕಿಗೆ ತರುವ ಕೆಲಸ ಮಾಡಬೇಕಿದೆ ಎಂದರು. ಮೇಲ್ವರ್ಗದವರಿಂದ ಹಿಡಿದು ಎಲ್ಲ ಜಾತಿಗಳಲ್ಲಿಯೂ ಅನಕ್ಷರಸ್ಥರು ಇದ್ದೇ ಇರುತ್ತಾರೆ. ಹಾಗಂತ ಅವರೆಲ್ಲಾ ದಡ್ಡರೆಂದು ಭಾವಿಸುವುದು ಸರಿಯಲ್ಲ. ಅನಕ್ಷರಸ್ಥರ ನಾಡಿನಲ್ಲಿ ಜನಪದ ಕಥೆ ಗಳು ಜಾಸ್ತಿ ಸಿಗುತ್ತಿದ್ದು, ಗ್ರಾಮೀಣ ಭಾಗದ ಮಹಿಳೆಯರು ಮತ್ತು ಮಕ್ಕಳು ವಿಶೇಷವಾಗಿ ಗರ್ಭಿ ಣಿಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಹಿಂದೆ ಬರಗಾಲದಲ್ಲಿ ಜನರು ಹುಳುಗಳಂತೆ ಸಾಯುತ್ತಿದ್ದರು. ಈಗ ಆಹಾರವಿದೆ. ಆದರೆ, ಪೌಷ್ಟಿಕತೆಯ ಕೊರತೆಯಿದೆ ಎಂದರು.

ಜನಪದ ಗಾಯಕ ಬಾನಂದೂರು ಕೆಂಪಯ್ಯನವರ ಜನಪದ ಸಂಗೀತ, ಸೋಬಾನೆ ಹಾಡು, ಡೊಳ್ಳುಕುಣಿತ, ರಂಗಗೀತೆ, ಗಣಿಹಾಡು, ಛಾಯಾಗ್ರಾಹಕ ನಿಸರ್ಗ ಗೋವಿಂದರಾಜು ಅವರ ಬುಡಕಟ್ಟು ಸಂಸ್ಕೃತಿಯ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷ ಮುರುಳೀಧರ ಹಾಲಪ್ಪ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೂಡೆ ಪಿ.ಕೃಷ್ಣ , ರಾಜ್ಯಸಭೆ ಮಾಜಿ ಸದಸ್ಯ ಎಚ್. ಹನುಮಂತಪ್ಪ, ತೆಲುಗಿನ ಖ್ಯಾತ ಕಥೆಗಾರ ಕೇತು ವಿಶ್ವನಾಥರೆಡ್ಡಿ, ಸಾಹಿತ್ಯ ಅಕಾಡೆಮಿ ವಿಶ್ರಾಂತ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ, ಸಂಶೋಧಕ ಡಾ.ಬಿ.ರಾಜ ಶೇಖರಪ್ಪ, ನಿವೃತ್ತ ಐಎಎಸ್ ಅಧಿಕಾರಿ ಕೆ.ಅಮರನಾರಾಯಣ ಇದ್ದರು.

ಚಿತ್ರದುರ್ಗ ಬುಡಕಟ್ಟು ಹಾಗೂ ಸಂಪ್ರದಾಯದ ಜಿಲ್ಲೆ. ಪ್ರಮುಖವಾಗಿ ಬಯಲು ಸೀಮೆ ಜನರಿಗೆ ಉದ್ಯೋಗದ ಅವಶ್ಯಕತೆ ಇದ್ದು, ಈ ದೆಸೆಯಲ್ಲಿ ಮಾರ್ಚ ತಿಂಗಳಲ್ಲಿ ರಾಜ್ಯಮಟ್ಟದ ಉದ್ಯೋಗ ಮೇಳ ನಡೆಸಲಾಗುವುದು. ಯುವ ಸಮೂಹಕ್ಕೆ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ಕುರಿತು ಅಗತ್ಯವಾದ ಉದ್ಯೋಗ ದೊರಕಿಸಿಕೊಡುವುದು ನಮ್ಮ ಉದ್ದೇಶ.

ಮುರುಳೀಧರ ಹಾಲಪ್ಪ, ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ನಿಗಮದ ಅಧ್ಯಕ್ಷರು.

ಜನಪದದಲ್ಲಿ ಮಹದಾಳದ ಕನಸುಗಳಿದ್ದು, ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಹಾಗೂ ಯುವತಿಯರಿಗೆ ಗ್ರಾಮೀಣ ಭಾಗದ ಔತಣವನ್ನು ನೀಡವ ಚಿಂತನೆಯಿದೆ. ರಾಗಿ, ಸಜ್ಜೆ, ನವಣೆ ಹೀಗೆ ಅನೇಕ ಕಿರುಧಾನ್ಯಗಳಲ್ಲಿ ಔಷಧ ಗುಣಗಳ ಜತೆ ಪೌಷ್ಟಿಕತೆಯಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಇವೆಲ್ಲಾ ಕಣ್ಮರೆಯಾಗುತ್ತಿವೆ. ಅನಕ್ಷರಸ್ಥರ ಆತ್ಮಕಥೆಗಳು ಭಾರತದಲ್ಲಿ ಬರಬೇಕಿದೆ.

ಕೆ. ಅಮರನಾರಾಯಣ, ನಿವೃತ್ತ ಐಎಎಸ್ ಅಧಿಕಾರಿ.

ಉದಯವಾಣಿ ದಾವಣಗೆರೆ
ಸೋಮವಾರ | ಡಿಸೆಂಬರ್ | 19 | 2016

ಅಭಿನಂದನಾ ಗ್ರಂಥ ಬಿಡುಗಡೆ

ಗ್ರಾಮೀಣ ಸಂಸ್ಕೃತಿ ಪುನರುತ್ಥಾನಗೊಳ್ಳಲಿ


■ ಕೃಷಿ, ಜಾನಪದ, ಕಲಾ ಪ್ರಕಾರಗಳು ನೇಪಥ್ಯಕ್ಕೆ ಸಾಹಿತಿ ಪ್ರೊ| ಕಾಳೇಗೌಡ ನಾಗವಾರ ವಿಷಾದ

ಚಿತ್ರದುರ್ಗ: ಗ್ರಾಮೀಣ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸಲು ಮುಖ್ಯಮಂತ್ರಿಯವರು ಮುಂದಾಗಬೇಕು ಎಂದು ಹಿರಿಯ ಸಾಹಿತಿ ಪ್ರೊ| ಕಾಳೇಗೌಡ ನಾಗವಾರ ಒತ್ತಾಯಿಸಿದರು.

ಇಲ್ಲಿನ ಜಗಳೂರು ಮಹಲಿಂಗಪ್ಪ ಟವರ್ಸ್ ಸಭಾಂಗಣದಲ್ಲಿ ಡಾ| ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ ಹಾಗೂ ಬೆಂಗಳೂರಿನ ಸಿ.ವಿ.ಜಿ ಪಬ್ಲಿಕೇಷನ್ಸ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಡಾ| ಮೀರಾಸಾಬಿಹಳ್ಳಿ ಶಿವಣ್ಣನವರ ಬದುಕು-ಬರಹ ಕುರಿತ ಅಭಿನಂದನಾ ಗ್ರಂಥ 'ನುಡಿ ಕನ್ನಡಿ', ಕನ್ನಡಿ ಮತ್ತು ಸಿರಿಯಜ್ಜ ಸಂಸ್ಕೃತಿ ಕಥನ. ಕೃತಿ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಚಟುವಟಿಕೆಗಳಾದ ಕೃಷಿ, ಜಾನಪದ ಕಲೆ, ಸಂಗೀತ ಎಲ್ಲವೂ ಕಣ್ಮರೆಯಾಗಿದೆ. ನಾನು ಸಾಕಷ್ಟು ಸಲ ಮುಖ್ಯಮಂತ್ರಿಗಳಿಗೆ ಸಲಹೆ ನೀಡಿ ಗ್ರಾಮೀಣ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುವಂತೆ ತಿಳಿಸಿದ್ದೇನೆ ಎಂದರು.

ಗ್ರಾಮೀಣ ಭಾಗದಲ್ಲಿ ಹಿಂದೆ ದೊರೆಯುತ್ತಿದ್ದ ಹಾರಕ, ರಾಗಿ, ಸಜ್ಜೆ, ನವಣೆ, ಜೋಳ ಮತ್ತಿತರ ಸಿರಿಧಾನ್ಯಗಳು ನಾಡಿನ ಎಲ್ಲ ಜನರಿಗೂ ದೊರೆಯಬೇಕು. ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸಿರಿಧಾನ್ಯಗಳು ಪೂರಕ. ಸಿರಿಧಾನ್ಯಗಳಲ್ಲಿ



ಚಿತ್ರದುರ್ಗ: ಡಾ| ಮೀರಾಸಾಬಿಹಳ್ಳಿ ಶಿವಣ್ಣ ಅವರ ಅಭಿನಂದನಾ ಗ್ರಂಥ ಹಾಗೂ ಕೃತಿಗಳನ್ನು ಹಂಪಿ ಕನ್ನಡ ವಿವಿಯ ವಿಶ್ರಾಂತ ಕುಲಪತಿ ಪ್ರೊ| ಹಿ.ಚಿ. ಬೋರಲಿಂಗಯ್ಯ ಬಿಡುಗಡೆ ಮಾಡಿದರು.

ಅಪಾರ ಪ್ರಮಾಣದ ಔಷಧೀಯ ಗುಣವಿದೆ. ಆದರೆ ಸಿರಿಧಾನ್ಯ ಬೆಳೆಯುವ ಕೈಗಳು ಕಡಿಮೆಯಾಗುತ್ತಿವೆ. ಹಳ್ಳಿಗಳನ್ನು ತೊರೆದು ಯುವ ಸಮುದಾಯ ಪೇಟೆ ಸೇರಿದೆ. ಆದ್ದರಿಂದ ಮುಖ್ಯಮಂತ್ರಿಗಳು ಇದರ ಕಡೆ ಗಮನ ನೀಡಬೇಕು ಎಂದು ತಿಳಿಸಿದರು.

ಮೀರಾಸಾಬಿಹಳ್ಳಿ ಶಿವಣ್ಣ ಒಬ್ಬ ಜ್ಞಾನಾಕಾಂಕ್ಷಿ. ಹಗಲು ರಾತ್ರಿ ಶೋಷಿತ ತಳ ಸಮುದಾಯಗಳ ಪರ ಅಧ್ಯಯನ ಮಾಡಿ ಇಡೀ ಹಳ್ಳಿಗಾಡಿನ ಶೋಷಿತ ತಳ ಸಮುದಾಯಗಳ ಜನಜೀವನ, ಪರಿಶ್ರಮ, ಆಚಾರ, ವಿಚಾರ ಮತ್ತಿತರ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ ಎಂದು ಶ್ಲಾಘಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ| ಹಿ.ಚಿ.ಬೋರಲಿಂಗಯ್ಯ ಅವರು ಶಿವಣ್ಣನವರ ಮೂರು ಕೃತಿಗಳನ್ನು ಬಿಡುಗಡೆ ಮಾಡಿದರು. ನಂತರ ಮಾತನಾಡಿದ ಅವರು, ಜಾನಪದ ತಜ್ಞ ಡಾ| ಮೀರಾಸಾಬಿಹಳ್ಳಿ ಶಿವಣ್ಣನವರ ಕೃತಿಗಳನ್ನು ಓದಿದರೆ ಹಳ್ಳಿಗಾಡಿನ ದೇವರ ಜಾತ್ರೆ, ಸಂತೆಗೆ ಹೋಗಿ ಬಂದ ಅನುಭವ ಆಗುತ್ತದೆ. ಒಂದು ಜಾತ್ರೆಗೆ ಹೋದಾಗ ಅಲ್ಲಿ ದೊರೆಯುವ ಎಲ್ಲ ರೀತಿಯ ವಸ್ತುಗಳ ಅನುಭವ ಅವರ ಕೃತಿಗಳಲ್ಲಿವೆ ಎಂದರು. ಹಳ್ಳಿಗಾಡಿನ ಜಾನಪದ ಸಂಪತ್ತು ಉಳಿಯಬೇಕು. ಉಳಿದು ಅನುಭವಿಸಬೇಕು. ಇಂತಹ ಸರಕುಗಳನ್ನು ಇಟ್ಟುಕೊಂಡೇ ಇನ್ನೂ ನೂರು ವರ್ಷ ಬರೆಯುವಷ್ಟು ಶಕ್ತಿಯನ್ನು ಮೀರಾಸಾಬಿಹಳ್ಳಿ ಶಿವಣ್ಣ ಹೊಂದಿದ್ದಾರೆ ಎಂದು ಬಣ್ಣಿಸಿದರು.

ಗ್ರಾಮೀಣ ಬದುಕು, ಬವಣೆ ಬಗ್ಗೆ ಮಾಧ್ಯಮಗಳು ಗಮನ ಸೆಳೆಯಬೇಕು. ವೈಭವೀಕರಣಗೊಳ್ಳದೆ ಹೃದಯವನ್ನು ಕಟ್ಟಿ ಕೊಡಬೇಕು. ಆದರೆ ಮಾಧ್ಯಮಗಳು ಇದರ ಕಡೆ ಗಮನ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದೇಶಕ್ಕೆ ಅನ್ನ ನೀಡುವ ಅನ್ನದಾತರನ್ನು ಸರ್ಕಾರಗಳು ಕಡೆಗಣಿಸಿವೆ. ಇನ್ನು ಜಾನಪದ ಪರಂಪರೆ, ಬುಡಕಟ್ಟು ಸಂಸ್ಕೃತಿ ಉಳಿಯುವುದಾದರೂ ಹೇಗೆ! ಎಂದು ಪ್ರಶ್ನಿಸಿದ ಹಿ.ಚಿ. ಬೋರಲಿಂಗಯ್ಯ, ಮನುಷ್ಯ ಸ್ವಾರ್ಥಿಯಾಗಿದ್ದರಿಂದ ಇಡೀ ವ್ಯವಸ್ಥೆ ಕಾರ್ಪೊರೆಟ್ ಜಗತ್ತಿನ ಹಿಂದೆ ಬಿದ್ದಿವೆ. ಇದರಿಂದ ಜಾನಪದ ಸಂಸ್ಕೃತಿ ವಿನಾಶದತ್ತ ಸಾಗುತ್ತಿದೆ. ಆದರೂ ಜಾನಪದ ಮತ್ತು ಬುಡಕಟ್ಟು ಸಂಸ್ಕೃತಿಯಲ್ಲಿ ಇನ್ನೂ ಮೌಲ್ಯಗಳು ಉಳಿದುಕೊಂಡಿದೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಕೆ.ಅಮರನಾರಾಯಣ ಮಾತನಾಡಿ, ಕೆರೆ, ಕಟ್ಟೆ ಚೆಕ್‌ಡ್ಯಾಂಗಳಲ್ಲಿ ಪೋಲಾಗಿ ಹರಿದು ಹೋಗುವ ಮಳೆ ನೀರನ್ನು ಸಂರಕ್ಷಿಸುವ ಕಾರ್ಯ ಆಗಬೇಕಿದೆ. ಈ ರೀತಿಯ ಚಿತ್ರಣಗಳನ್ನು ಮೀರಾಸಾಬಿಹಳ್ಳಿ ಶಿವಣ್ಣನವರು ತಮ್ಮ ಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ| ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಜ್ಯಸಭೆ ಮಾಜಿ ಸದಸ್ಯ ಎಚ್. ಹನುಮಂತಪ್ಪ, ತೆಲುಗಿನ ಖ್ಯಾತ ಕತೆಗಾರ ಡಾ| ಕೇತು ವಿಶ್ವನಾಥ ರೆಡ್ಡಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಮಾಜಿ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ, ಜಾನಪದ ಗಾಯಕ ಡಾ| ಬಾನಂದೂರು ಕೆಂಪಯ್ಯ, ಡಾ| ಜಿ.ವಿ. ಆನಂದಮೂರ್ತಿ, ಡಾ| ಬಿ.ರಾಜಶೇಖರ್, ಜಿ.ಎಸ್. ಉಜ್ಜಿನಪ್ಪ ಮೊದಲಾದವರು ಪಾಲ್ಗೊಂಡಿದ್ದರು.

ಅನಕ್ಷರಸ್ಥರ ಆತ್ಮಕಥೆ ಹೊರ ಬರಲಿ

ಜಿಲ್ಲೆ ಬರಕ್ಕೆ ಹೆಸರುವಾಸಿ. ಇಲ್ಲಿ ಬರ ಇದೆ ನಿಜ, ಆದರೆ ಜೀವನಕ್ಕೆ ಅಭದ್ರತೆಯಿಲ್ಲ. ಅಷ್ಟು ಗಟ್ಟಿಮುಟ್ಟು ಇಲ್ಲಿನ ಜನತೆ. ಇವು ಸಂಶೋಧನೆಗೆ ಒಳಪಡಬೇಕು. ಜಿಲ್ಲೆಯ ಬಹುತೇಕ ಜನರು ಅನಕ್ಷರಸ್ಥರಾದರೂ ಅಪಾರ ಜ್ಞಾನಿಗಳಾಗಿದ್ದಾರೆ. ದಲಿತರಿಂದ ಬ್ರಾಹ್ಮಣರ ತನಕ ಎಲ್ಲ ಜಾತಿ ವರ್ಗಗಳಲ್ಲೂ ಬಡವರು, ಅನಕ್ಷರಸ್ಥರಿದ್ದಾರೆ. ಅನಕ್ಷರಸ್ಥರ ಆತ್ಮಕಥೆಗಳು ಹೊರಬರಬೇಕು. ಆಗ ನೈಜ ಸಮಸ್ಯೆಗಳು ತಿಳಿಯಲಿವೆ. ಜನಪದರ ಕನಸುಗಳು ದೊಡ್ಡದು. ಕಾಡುಗೊಲ್ಲ, ಬೇಡ ಮತ್ತಿತರ ಬುಡಕಟ್ಟುಗಳ ಹೊಸತನದ ಸಮಗ್ರ ಅಧ್ಯಯನ ನಡೆಯಬೇಕು ಎಂದು ಪ್ರೊ| ಕಾಳೇಗೌಡ ನಾಗವಾರ ಪ್ರತಿಪಾದಿಸಿದರು.


ಸಂಯುಕ್ತ ಕರ್ನಾಟಕ ಚಿತ್ರದುರ್ಗ ಸೋಮವಾರ, 19, ಡಿಸೆಂಬರ್, 2016, ದಾವಣಗೆರೆ

ಕಾರ್ಪೋರೇಟ್‌ನಿಂದ ಜಾನಪದ ಸಂಸ್ಕೃತಿ ವಿನಾಶ

ಚಿತ್ರದುರ್ಗ: ದೇಶಕ್ಕೆ ಅನ್ನ ಕೊಡುವ ಅನ್ನದಾತನ ಸಂಕಷ್ಟವನ್ನು ದೂರ ಮಾಡದ ಸರ್ಕಾರಗಳು ಇನ್ನೂ ಜಾನಪದ, ಬುಡಕಟ್ಟು ಸಂಸ್ಕೃತಿ ಉಳಿಸಲು ಅಸಾಧ್ಯ. ಇದರಿಂದ ಜನಸಾಮಾನ್ಯರಿಗೆ ಜಾನಪದ ಉಳಿವಿಗೆ ಸಂಕಲ್ಪ ಮಾಡಬೇಕು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತಿ ಕುಲಪತಿ ಹಿ.ಚಿ.ಬೋರಲಿಂಗಯ್ಯ ಅಭಿಪ್ರಾಯಪಟ್ಟರು.

ನಗರದ ದಾವಣಗೆರೆ ರಸ್ತೆಯಲ್ಲಿರುವ ಜಗಳೂರು ಮಹಾಲಿಂಗಪ್ಪ ಟವರ್ಸ್‌ರ್ ಫಾರ್ಚೂನ್ ಹಾಲ್‌ನಲ್ಲಿ ಭಾನುವಾರ ಡಾ.ಮೀರಾಸಾಬಿಹಳ್ಳಿಶಿವಣ್ಣಅಭಿನಂದನಾ ಸಮಿತಿ ಹಾಗೂ ಸಿ.ವಿ.ಜಿ.ಪಬ್ಲಿಕೇಷನ್ ಸಹಯೋಗದಲ್ಲಿ ನಡೆದ ಜಾನಪದ ತಜ್ಞ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ 'ಕೃತಿ ಕನ್ನಡಿ', 'ನುಡಿ ಕನ್ನಡಿ', 'ಜಾನಪದ ಕಣಜ ಸಿರಿಯಜ್ಜಿ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಮನುಷ್ಯ ಸ್ವಾರ್ಥಿಯಾಗಿರುವುದರಿಂದ ಇಡೀ ವ್ಯವಸ್ಥೆ ಕಾರ್ಪೋರೇಟ್ ಹಿಂದೆ ಬಿದ್ದು ಜಾನಪದ ಸಂಸ್ಕೃತಿ ವಿನಾಶದತ್ತ ಸಾಗುತ್ತಿದೆ. ಆದರೂ ಜಾನಪದ ಮತ್ತು ಬುಡಕಟ್ಟು ಸಂಸ್ಕೃತಿಯಲ್ಲಿ ಇನ್ನು ಮೌಲ್ಯಗಳು ಉಳಿದುಕೊಂಡಿವೆ. ಬಹುಸಂಖ್ಯಾತರನ್ನು ಓಲೈಸುವ ರಾಜಕಾರಣಿಗಳು ಕಡಿಮೆ ಸಂಖ್ಯೆಯಲ್ಲಿರುವ ಜಾನಪದ ಕಲಾವಿದರನ್ನು ಮತ್ತು ಕಲೆಗಳನ್ನು ತಿರಸ್ಕರಿಸುತ್ತಿರುವುದು ಸರಿಯಲ್ಲ ಎಂದರು.



ಚಿತ್ರದುರ್ಗದಲ್ಲಿ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ ಕೃತಿಗಳನ್ನು ವಿಶ್ರಾಂತ ಕುಲಪತಿ ಬೋರಲಿಂಗಯ್ಯ ಬಿಡುಗಡೆಗೊಳಿಸಿದರು.

ಮಾಧ್ಯಮಗಳು ಹಳ್ಳಿಗಾಡಿನ ಸಂಸ್ಕೃತಿಯನ್ನು ಮರೆತು ಅನಗತ್ಯ ವಿಚಾರಗಳನ್ನು ವೈಭವೀಕರಿಸುತ್ತಿರುವುದು ನೋವಿನ ಸಂಗತಿ ಮೀರಾಸಾಬಿಹಳ್ಳಿ ಶಿವಣ್ಣನವರ ಈ ಕೃತಿಗಳನ್ನು ಓದಿದರೆ ಒಮ್ಮೆ ಹಳ್ಳಿಗಾಡಿನ ಸಿರವಂತಿಕೆಯ ಬಣ್ಣ ಬಣ್ಣದ ಜಾತ್ರೆಯನ್ನು ಸುತ್ತಿ ಬಂದಂತಾಗುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೂರು ಕೃತಿಗಳು ತಳವರ್ಗದ ನೋವು, ಸಂಕಟ. ಅಭಿಪ್ರಾಯಗಳಿಂದ ಆರಂಭಗೊಂಡಿರುವುದು ನಿಜಕ್ಕೂ ವಿಶೇಷ. ಕೆಲವರು ಮೀರಾಸಾಬಿಹಳ್ಳಿ ಶಿವಣ್ಣನವರನ್ನು ಜೋಗಿ, ಸಂತ, ಬಂಧು, ಒಡನಾಡಿ, ಆಧ್ಯಾತ್ಮಿ ಎಂದೆಲ್ಲಾ ಕರೆದಿದ್ದಾರೆ. ಮನುಷ್ಯ ಪ್ರೀತಿಗಾಗಿ ಹಂಬಲಿಸುವ ತುಡಿತ ಇವರ ಕೃತಿಗಳಲ್ಲಿ ಅಡಕವಾಗಿದೆ. ಗ್ರಾಮೀಣ ನೆಲ ಸೊಗಡಿನ ಜಾನಪದ ಪರಂಪರೆಯನ್ನು ರಕ್ಷಿಸಿಕೊಳ್ಳುವ ತವಕವನ್ನು ಡಾ.ಮೀರಾಸಾಬಿಹಳ್ಳಿ ಶಿವಣ್ಣ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದರು.

ಸಾಹಿತಿ ಡಾ.ಕಾಳೆಗೌಡ ನಾಗವಾರ ಮಾತನಾಡಿ, ಕಾಡುಗೊಲ್ಲರ ಮುಗ್ಧತೆ, ಸಮೃದ್ಧವಾದ ಸಾಂಸ್ಕೃತಿಕ ಸಂಗತಿ ಹಾಗೂ ಎಲ್ಲಾ ಬುಡಕಟ್ಟು ಜನಾಂಗಗಳ ಸಾಂಸ್ಕೃತಿಕ ಸಂಗತಿಗಳು ಡಾ.ಮೀರಾಸಾಬಿಹಳ್ಳಿ ಶಿವಣ್ಣನವರ ಮೂರು ಕೃತಿಗಳಲ್ಲಿ ಅಡಕವಾಗಿದೆ. ಜಾನಪದ ಕಲಾವಿದರೆಂದರೆ ಅನಕ್ಷರಸ್ಥರು. ಆದರೆ ಅವರೆಲ್ಲಾ ಜ್ಞಾನಿಗಳಾಗಿರುತ್ತಾರೆ. ಅನೇಕ ಪ್ರತಿಭಾವಂತರು ತಮ್ಮ ತೊಂದರೆ ಸಮಸ್ಯೆಗಳ ನಡುವೆಯೇ ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಅಂತಹವರನ್ನು ಗುರುತಿಸಿ ಬೆಳಕಿಗೆ ತರುವ ಕೆಲಸವನ್ನು ಮಾಡಬೇಕಿದೆ ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೂಡೆ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಸಭೆ ಮಾಜಿ ಸದಸ್ಯ ಹೆಚ್.ಹನುಮಂತಪ್ಪ, ತೆಲುಗಿನ ಖ್ಯಾತ ಕಥೆಗಾರ ಕೇತುವಿಶ್ವನಾಥರೆಡ್ಡಿ, ಸಾಹಿತ್ಯ ಅಕಾಡೆಮಿ ವಿಶ್ರಾಂತ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ, ಸಂಶೋಧಕ ಡಾ.ಬಿ.ರಾಜಶೇಖರಪ್ಪ,ನಿವೃತ್ತಐ.ಎ.ಎಸ್. ಅಧಿಕಾರಿ ಕೆ. ಅಮರನಾರಾಯಣ ಮತ್ತಿತರರಿದ್ದರು.

ಜಾನಪದ ಗಾಯಕ ಬಾನಂದೂರು ಕೆಂಪಯ್ಯನವರ ಜನಪದ ಸಂಗೀತ, ಸೋಬಾನೆ ಹಾಡು, ಡೊಳ್ಳುಕುಣಿತೆ, ರಂಗಗೀತೆ, ಗಣೆಹಾಡು, ಛಾಯಾಗ್ರಾಹಕನಿಸರ್ಗಗೋವಿಂದರಾಜು ಅವರ ಬುಡಕಟ್ಟು ಸಂಸ್ಕೃತಿಯ ಛಾಯಾಚಿತ್ರ ಪ್ರದರ್ಶನ ಎಲ್ಲರ ಗಮನಸೆಳೆದವು.

ವಿಜಯ ಕರ್ನಾಟಕ

ನಮ್ಮ ಚಿತ್ರದುರ್ಗ

ಸೋಮವಾರ, 19 ಡಿಸೆಂಬರ್ 2016, ಚಿತ್ರದುರ್ಗ

ಡಾ.ಮೀರಾಸಾಬಿಹಳ್ಳಿ ಅವರಿಗೆ ಅಭಿನಂದನೆ ಕಾರ್ಯಕ್ರಮ

ಜನಪದ ಕಲಾವಿದರ ಆತ್ಮಕಥೆ ರಚನೆಯಾಗಲಿ

■ ವಿಕ ಸುದ್ದಿಲೋಕ ಚಿತ್ರದುರ್ಗ

ಜನಪದ ಕಲಾವಿದರೆಂದರೆ ಅನಕ್ಷರಸ್ಥರು, ಆದರೆ ಅವರೆಲ್ಲಾ ಜ್ಞಾನಿಗಳು. ನಾನಾ ಸಮಸ್ಯೆಗಳ ನಡುವೆಯೂ ತಮ್ಮ ಪ್ರತಿಭೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಇಂತಹವರನ್ನು ಗುರುತಿಸಿ ಬೆಳಕಿಗೆ ತಂದು, ಅವರ ಆತ್ಮಕಥೆಗಳನ್ನು ಬರೆಸುವ ಕೆಲಸ ಆಗಬೇಕು ಎಂದು ಸಾಹಿತಿ ಮೈಸೂರಿನ ಪ್ರೊ. ಕಾಳೇಗೌಡ ನಾಗವಾರ ತಿಳಿಸಿದರು.

ನಗರದ ಜಗಳೂರು ಮಹಲಿಂಗಪ್ಪ ಟವರ್ಸ್‌ನ ಜೆಎಂ ಫಾರ್ಚ್ಯೂನ್ ಹಾಲ್‌ನಲ್ಲಿ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ ಹಾಗೂ ಸಿ.ವಿ.ಜಿ. ಪಬ್ಲಿಕೇಷನ್ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಜಾನಪದ ತಜ್ಞ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ ನುಡಿ ಕನ್ನಡಿ, ಕೃತಿ ಕನ್ನಡಿ, ಸಿರಿಯಜ್ಜಿ ಸಂಸ್ಕೃತಿ ಕಥನ ಕೃತಿಗಳ ಬಿಡುಗಡೆಗೊಳಿಸಿ, ಚಮ್ಮಾಳ ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭಾರತ ಅನಕ್ಷರಸ್ಥರ ನಾಡಾಗಿದ್ದಾಗ ಜನಪದ ಕಥೆಗಳ ತವರು ಎಂದು ಕರೆಯಲಾಗುತ್ತಿತ್ತು. » IV



ಚಿತ್ರದುರ್ಗದಲ್ಲಿ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮವನ್ನು ಪ್ರೊ.ಕಾಳೇಗೌಡ ನಾಗವಾರ ಚಮ್ಮಾಳ ಬಾರಿಸುವ ಮೂಲಕ ಉದ್ಘಾಟಿಸಿದರು.

ತಮಿಳುನಾಡಿನಲ್ಲಿ ಅಮ್ಮ ಕ್ಯಾಂಟೀನುಗಳು ಇರುವಂತೆ ಸಿರಿಧಾನ್ಯಗಳಿಂದ ತಯಾರಿಸಿದ ನಾನಾ ಖಾದ್ಯಗಳು ಒಂದೇ ಸೂರಿನಡಿ ದೊರೆಯುವಂತಾಗಬೇಕು. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಲಾಗಿದೆ.

- ಪ್ರೊ.ಕಾಳೇಗೌಡ ನಾಗವಾರ, ಸಾಹಿತಿ

ಪ್ರಜಾಪ್ರಗತಿ ಚಿತ್ರದುರ್ಗ 19 ಡಿಸೆಂಬರ್ 2016 ಸೋಮವಾರ

ಬೋರಲಿಂಗಯ್ಯ ವಿಷಾದ | ಮೀರಾಸಾಬಿಹಳ್ಳಿಯವರ ಮಹತ್ವದ ಕೃತಿಗಳ ಬಿಡುಗಡೆ

ಅನಗತ್ಯ ವಿಚಾರಗಳಿಗೆ ಮಾಧ್ಯಮಗಳ ವೈಭವೀಕರಣ



ಮೇಲ್ವರ್ಗದವರಿಂದ ಹಿಡಿದು ಎಲ್ಲಾ ಜಾತಿಗಳಲ್ಲಿಯೂ ಅನಕ್ಷರಸ್ಥರು ಇದ್ದೇ ಇರುತ್ತಾರೆ. ಹಾಗಂತ ಅವರೆಲ್ಲಾ ದಡ್ಡರೆಂದು ಭಾವಿಸುವುದು ಸರಿಯಲ್ಲ. ಅನಕ್ಷರಸ್ಥರ ನಾಡಿನಲ್ಲಿ ಜಾನಪದ ಕಥೆಗಳು ಜಾಸ್ತಿ ಸಿಗುತ್ತದೆ. ಜನಪದರಲ್ಲಿ ಮನದಾಳದ ಕನಸುಗಳಿವೆ. ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ/ಯುವತಿಯರಿಗೆ ಗ್ರಾಮೀಣ ಭಾಗದ ಔತಣವನ್ನು ನೀಡಬೇಕೆಂಬ ಚಿಂತನೆಯಿದೆ.

■ ಡಾ.ಕಾಳೇಗೌಡ ನಾಗವಾರ, ಸಾಹಿತಿಗಳು

ಚಿತ್ರದುರ್ಗ

ದೇಶಕ್ಕೆ ಅನ್ನ ನೀಡುವ ಅನ್ನದಾತ ರೈತನನ್ನೆ ಎಲ್ಲಾ ಸರ್ಕಾರಗಳು ಕಡೆಗಣಿಸುತ್ತಾ ಬರುತ್ತಿವೆ. ಇನ್ನು ಜಾನಪದ ಪರಂಪರೆ, ಬುಡಕಟ್ಟು ಸಂಸ್ಕೃತಿ ಉಳಿಯುವುದಾದರೂ ಹೇಗೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ವಿಶ್ರಾಂತಿ ಕುಲಪತಿ ಹಿ.ಚಿ.ಬೋರಲಿಂಗಯ್ಯ ಪ್ರಶ್ನಿಸಿದರು.

ದಾವಣಗೆರೆ ರಸ್ತೆಯಲ್ಲಿರುವ ಜಗಳೂರು ಮಹಲಿಂಗಪ್ಪ ಟಿಪರ್ಸರ್ ಫಾರ್ಚೂನ್ ಹಾಲ್‌ನಲ್ಲಿ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ ಹಾಗೂ ಸಿ.ವಿ.ಜಿ.ಪಬ್ಲಿಕೇಷನ್ ಸಹಯೋಗದಲ್ಲಿ ಭಾನುವಾರ ನಡೆದ ಜಾನಪದ ತಜ್ಞ ಡಾ.ಮೀರಾಸಾಬಿಹಳ್ಳಿ ಶಿವಣ್ಣನವರ ಕೃತಿ ಕನ್ನಡಿ, ನುಡಿ ಕನ್ನಡಿ, ಜಾನಪದ ಕಣಜ ಸಿರಿಯಜ್ಜಿ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಮನುಷ್ಯ ಸ್ವಾರ್ಥಿಯಾಗಿರುವುದರಿಂದ ಇಡೀ ವ್ಯವಸ್ಥೆ ಕಾರ್ಪೋರೇಟ್ ಹಿಂದೆ ಬಿದ್ದು ಜಾನಪದ ಸಂಸ್ಕೃತಿ ವಿನಾಶದತ್ತ ಸಾಗುತ್ತಿದೆ. ಆದರೂ ಜಾನಪದ ಮತ್ತು ಬುಡಕಟ್ಟು ಸಂಸ್ಕೃತಿಯಲ್ಲಿ ಇನ್ನು ಮೌಲ್ಯಗಳು ಉಳಿದುಕೊಂಡಿದೆ ಎಂದು ಗ್ರಾಮೀಣ ಪ್ರದೇಶದಿಂದ ಬಂದಿರುವ ಜಾನಪದ ಕಲೆಯ ಮಹತ್ವವನು ವಿವರಿಸಿದರು.

ಬಹುಸಂಖ್ಯಾತರನ್ನು ಓಲೈಸುವ ರಾಜಕಾರಣಿಗಳು ಕಡಿಮೆ ಸಂಖ್ಯೆಯಲ್ಲಿರುವ ಜಾನಪದ ಕಲಾವಿದರನ್ನು ಮತ್ತು ಕಲೆಗಳನ್ನು ತಿರಸ್ಕರಿಸುತ್ತಿರುವುದು ಸರಿಯಲ್ಲ. ಮಾಧ್ಯಮಗಳು ಹಳ್ಳಿಗಾಡಿನ ಸಂಸ್ಕೃತಿಯನ್ನು ಮರೆತು ಅನಗತ್ಯ ವಿಚಾರಗಳನ್ನು ವೈಭವೀಕರಿಸುತ್ತಿರುವುದು ನೋವಿನ ಸಂಗತಿ ಎಂದು ಬೇಸರದಿಂದ ನುಡಿದರು. ಮೀರಾಸಾಬಿಹಳ್ಳಿ ಶಿವಣ್ಣನವರ ಈ ಕೃತಿಗಳನ್ನು ಓದಿದರೆ ಒಮ್ಮೆ ಹಳ್ಳಿಗಾಡಿನ ಸಿರಿವಂತಿಕೆಯ ಬಣ್ಣ ಬಣ್ಣದ ಜಾತ್ರೆಯನ್ನು ಸುತ್ತಿ ಬಂದಂತಾಗುತ್ತದೆ ಎಂದು ಬಣ್ಣಿಸಿದರು.

ಡಾ.ಮೀರಾಸಾಬಿಹಳ್ಳಿ ಶಿವಣ್ಣನವರ ಮೂರು ಕೃತಿಗಳು ತಳವರ್ಗದ ನೋವು, ಸಂಕಟ, ಅಭಿಪ್ರಾಯಗಳಿಂದ ಆರಂಭಗೊಂಡಿರುವುದು ನಿಜಕ್ಕೂ ವಿಶೇಷ. ಕೆಲವರು ಮೀರಾಸಾಬಿಹಳ್ಳಿ ಶಿವಣ್ಣನವರನ್ನು ಜೋಗಿ, ಸಂತ, ಬಂಧು, ಒಡನಾಡಿ, ಆಧ್ಯಾತ್ಮಿ ಎಂದೆಲ್ಲಾ ಕರೆದಿದ್ದಾರೆ. ಮನುಷ್ಯ ಪ್ರೀತಿಗಾಗಿ ಹಂಬಲಿಸುವ ತುಡಿತ ಇವರ ಕೃತಿಗಳಲ್ಲಿ ಅಡಕವಾಗಿದೆ. ಗ್ರಾಮೀಣ ನೆಲಸ ಸೊಗಡಿನ ಜಾನಪದ ಪರಂಪರೆಯನ್ನು ರಕ್ಷಿಸಿಕೊಳ್ಳುವ ತವಕವನ್ನು ಡಾ.ಮೀರಾಸಾಬಿಹಳ್ಳಿ ಶಿವಣ್ಣ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜಾನಪದ ಕಲೆ ಮತ್ತು ಕಲಾವಿದರು, ಅನ್ನದಾತ ರೈತನನ್ನು ಉಳಿಸಿಕೊಳ್ಳುವತ್ತ ಗಮನ ಕೊಡಬೇಕು ಒತ್ತಾಯಿಸಿದರು.

ಸಾಹಿತಿ ಡಾ.ಕಾಳೆಗೌಡ ನಾಗವಾರ ಮಾತನಾಡಿ ಕಾಡುಗೊಲ್ಲರ ಮುಗ್ಧತೆ, ಸಮೃದ್ಧವಾದ ಸಾಂಸ್ಕೃತಿಕ ಸಂಗತಿ ಹಾಗೂ ಎಲ್ಲಾ ಬುಡಕಟ್ಟು ಜನಾಂಗಗಳ ಸಾಂಸ್ಕೃತಿಕ ಸಂಗತಿಗಳು ಡಾ.ಮೀರಾಸಾಬಿಹಳ್ಳಿ ಶಿವಣ್ಣನವರ ಮೂರು ಕೃತಿಗಳಲ್ಲಿ ಅಡಕವಾಗಿವೆ. ಜಾನಪದ ಕಲಾವಿದರೆಂದರೆ ಅನಕ್ಷರಸ್ಥರು. ಆದರೆ ಅವರೆಲ್ಲಾ ಜ್ಞಾನಿಗಳಾಗಿರುತ್ತಾರೆ. ಅನೇಕ ಪ್ರತಿಭಾವಂತರು ತಮ್ಮ ತೊಂದರೆ ಸಮಸ್ಯೆಗಳ ನಡುವೆಯೇ ಕಲೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ >>> 2ನೇ ಪುಟಕ್ಕೆ

ಅನಗತ್ಯ ವಿಚಾರಗಳಿಗೆ ಮಾಧ್ಯಮಗಳ ವೈಭವೀಕರಣ

>>> 1ನೇಪುಟದಿಂದ ಅಂತಹವರನ್ನು ಗುರುತಿಸಿ ಬೆಳಕಿಗೆ ತರುವ ಕೆಲಸವನ್ನು ಮಾಡಬೇಕಿದೆ ಎಂದು ಹೇಳಿದರು.

ಮೇಲ್ವರ್ಗದವರಿಂದ ಹಿಡಿದು ಎಲ್ಲಾ ಜಾತಿಗಳಲ್ಲಿಯೂ ಅನಕ್ಷರಸ್ಥರು ಇದ್ದೇ ಇರುತ್ತಾರೆ. ಹಾಗಂತ ಅವರೆಲ್ಲಾ ದಡ್ಡರೆಂದು ಭಾವಿಸುವುದು ಸರಿಯಲ್ಲ, ಅನಕ್ಷರಸ್ಥರ ನಾಡಿನಲ್ಲಿ ಜಾನಪದ ಕಥೆಗಳು ಜಾಸ್ತಿ ಸಿಗುತ್ತದೆ. ಗ್ರಾಮೀಣ ಭಾಗದ ಮಹಿಳೆಯರು ಮಕ್ಕಳು ವಿಶೇಷವಾಗಿ ಗರ್ಭಿಣಿ ಮಹಿಳೆಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಹಿಂದೆ ಬರಗಾಲದಲ್ಲಿ ಜನರು ಹುಳುಗಳಂತೆ ಸಾಯುತ್ತಿದ್ದರು. ಈಗ ಆಹಾರವಿದೆ. ಆದರೆ ಪೌಷ್ಟಿಕತೆಯ ಕೊರತೆಯಿದೆ ಎಂದರು.

ಜನಪದರಲ್ಲಿ ಮನದಾಳದ ಕನಸುಗಳಿವೆ. ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ/ಯುವತಿಯರಿಗೆ ಗ್ರಾಮೀಣ ಭಾಗದ ಔತಣವನ್ನು ನೀಡಬೇಕೆಂಬ ಚಿಂತನೆಯಿದೆ. ರಾಗಿ, ಸಜ್ಜೆ, ನವಣೆ ಹೀಗೆ ಅನೇಕ ಕಿರುಧಾನ್ಯಗಳಲ್ಲಿ ಔಷಧೀಯ ಗುಣಗಳ ಜೊತೆ ಪೌಷ್ಟಿಕತೆಯಿಂಧ. ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಇವೆಲ್ಲಾ ಕಣ್ಮರೆಯಾಗುತ್ತಿವೆ. ಅನಕ್ಷರಸ್ಥರ ಆತ್ಮಕಥೆಗಳು ಭಾರತದಲ್ಲಿ ಬರಬೇಕು ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೂಡೆ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಸಭೆ ಮಾಜಿ ಸದಸ್ಯ ಹೆಚ್.ಹನುಮಂತಪ್ಪ, ತೆಲುಗಿನ ಖ್ಯಾತ ಕಥೆಗಾರ ಕೇತುವಿಶ್ವನಾಥರೆಡ್ಡಿ, ಸಾಹಿತ್ಯ ಅಕಾಡೆಮಿ ವಿಶ್ರಾಂತ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ, ಸಂಶೋದಕ ಡಾ.ಬಿ.ರಾಜಶೇಖರಪ್ಪ, ನಿವೃತ್ತ ಐ.ಎ.ಎಸ್.ಅಧಿಕಾರಿ ಕೆ.ಅಮರನಾರಾಯಣ ವೇದಿಕೆಯಲ್ಲಿದ್ದರು.

ಜಾನಪದ ಗಾಯಕ ಬಾನಂದೂರು ಕೆಂಪಯ್ಯನವರ ಜನಪದ ಸಂಗೀತ, ಸೋಬಾನೆ ಹಾಡು, ಡೊಳ್ಳುಕುಣಿತ, ರಂಗಗೀತೆ, ಗಣೆಹಾಡು, ಛಾಯಾಗ್ರಾಹಕ ನಿಸರ್ಗಗೋವಿಂದರಾಜು ಅವರ ಬುಡಕಟ್ಟು ಸಂಸ್ಕೃತಿಯ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಚಿತ್ರದುರ್ಗ

ಪ್ರಜಾವಾಣಿ
ಸೋಮವಾರ ಡಿಸೆಂಬರ್ 19, 2016

ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ ಕೃತಿ ಬಿಡುಗಡೆ ಸಮಾರಂಭದಲ್ಲಿ ವಿಶ್ರಾಂತ ಕುಲಪತಿ ಹಿ.ಚಿ.ಬೋರಲಿಂಗಯ್ಯ

ಜನಪದ, ಬುಡಕಟ್ಟು ಸಂಸ್ಕೃತಿ ಉಳಿಸಿ, ಬೆಳೆಸಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ನಮ್ಮ ಜನಪದ ಪರಂಪರೆ, ಮೂಲ ಬುಡಕಟ್ಟು ಸಂಸ್ಕೃತಿ ಉಳಿಸಿ, ಬೆಳೆಸುವ ನಿಟ್ಟನಲ್ಲಿ ನಾವೆಲ್ಲರೂ ಶ್ರಮಿಸಬೇಕಿದೆ' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಿ.ಚಿ.ಬೋರಲಿಂಗಯ್ಯ ಹೇಳಿದರು.

ಜಗಳೂರು ಮಹಲಿಂಗಪ್ಪ ಟವರ್ಸ್ ಫಾರ್ಚೂನ್ ಸಭಾಂಗಣದಲ್ಲಿ ಭಾನುವಾರ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ ಹಾಗೂ ಸಿವಿಜಿ ಪಬ್ಲಿಕೇಷನ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಜನಪದ ತಜ್ಞ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ 'ನುಡಿ ಕನ್ನಡಿ', 'ಕೃತಿ ಕನ್ನಡ', 'ಸಿರಿಯಜ್ಜಿ ಸಂಸ್ಕೃತಿ ಕಥನ' ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ರೈತರ ಕಡೆಗಣನೆ: ದೇಶದಲ್ಲಿರುವ ಯಾವುದೇ ಪಕ್ಷಗಳಿಗೂ ರೈತರ ಬಗ್ಗೆ ಕಾಳಜಿ ಇಲ್ಲ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಕಡೆಗೂ ಗಮನ ಹರಿಸುತ್ತಿಲ್ಲ. ಬಹುಸಂಖ್ಯಾತರನ್ನು ಓಲೈಸುವ ರಾಜಕೀಯ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತರನ್ನು ಕಡೆಗಣಿಸಲಾಗುತ್ತಿದೆ. ಜತೆಗೆ ಮಾಧ್ಯಮಗಳು ಕೂಡ ಜನಪದ ಸಂಸ್ಕೃತಿಯ ಬದಲಿಗೆ ಅನಗತ್ಯ ವಿಚಾರಗಳನ್ನು ವೈಭವೀಕರಿಸುತ್ತಿವೆ. ಈ ಧೋರಣೆ ಮೊದಲು ಬದಲಾಗಬೇಕಿದೆ' ಎಂದರು.

ದೇಶ ಜನಪದ ಊರುಗಳ ತವರು: ಸಾಹಿತಿ ಮೈಸೂರಿನ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, 'ದೇಶ ಜನಪದ ಊರುಗಳ ತವರು. ಹೀಗಾಗಿ ಕಾಡುಗೊಲ್ಲರ ಮುಗ್ಧತೆ, ಸಮೃದ್ಧವಾದ ಸಾಂಸ್ಕೃತಿಕ ಸಂಗತಿ ಹಾಗೂ ಎಲ್ಲಾ ಬುಡಕಟ್ಟು ಸಮುದಾಯಗಳ ಕುರಿತ ಮಾಹಿತಿ ಮೀರಾಸಾಬಿಹಳ್ಳಿ ಶಿವಣ್ಣ ಅವರ ಮೂರು ಕೃತಿಗಳಲ್ಲಿ ಅಡಕವಾಗಿವೆ' ಎಂದರು.

'ಗ್ರಾಮೀಣ ಭಾಗದ ಬಹುತೇಕ ಯುವಕ, ಯುವತಿಯರು ನಿರುದ್ಯೋಗ ಸಮಸ್ಯೆ ಎದುರಿಸುತ್ತಿದ್ದಾರೆ. ಅಂತಹ ಪ್ರದೇಶಗಳಲ್ಲಿ ಕೂಡ ಉದ್ಯೋಗ ಸೃಷ್ಟಿಸುವ ಕೆಲಸ ಆಗಬೇಕಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಂತಹ ಸ್ಪರ್ಧಾತ್ಮಕ ಜಗತ್ತಿನಲ್ಲಿ ಜನಪದ ಸಂಸ್ಕೃತಿ ಕಣ್ಮರೆಯಾಗುತ್ತಿವೆ. ಅದನ್ನು ಪುನಃ ಉನ್ನತ ಶಿಖರಕ್ಕೆ ಕೊಂಡೊಯ್ಯುವ ಪ್ರಯತ್ನ ಸರ್ಕಾರ, ಸಂಘ ಸಂಸ್ಥೆಗಳು ಹಾಗೂ ನಾಗರಿಕರಿಂದ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಸಭೆ ಮಾಜಿ ಸದಸ್ಯ ಎಚ್.ಹನುಮಂತಪ್ಪ, ತೆಲುಗಿನ ಕಥೆಗಾರ, ಡಾ.ಕೇತು ವಿಶ್ವನಾಥರೆಡ್ಡಿ, ಕೇಂದ್ರ ಸಾಹಿತ್ಯ ಅಕಾಡೆಮಿ ವಿಶ್ರಾಂತ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ, ಇತಿಹಾಸ ಸಂಶೋಧಕ ಡಾ.ಬಿ. ರಾಜಶೇಖರಪ್ಪ, ನಿವೃತ್ತ ಐಎಎಸ್ ಅಧಿಕಾರಿ ಕೆ.ಅಮರನಾರಾಯಣ ಸೇರಿದಂತೆ ಇತರರು ಇದ್ದರು.

ಜಾನಪದ ಗಾಯಕ ಬಾನಂದೂರು ಕೆಂಪಯ್ಯ ಅವರಿಂದ ಜನಪದ ಸಂಗೀತ; ಸೋಬಾನೆ ಹಾಡು, ಡೊಳ್ಳು ಕುಣಿತ, ರಂಗ ಗೀತೆ, ಗಣಿ ಹಾಡು, ಛಾಯಾಗ್ರಾಹಕ ನಿಸರ್ಗ ಗೋವಿಂದರಾಜು ಅವರ ಬುಡಕಟ್ಟು ಸಂಸ್ಕೃತಿಯ ಛಾಯಾ ಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.



ಚಿತ್ರದುರ್ಗದಲ್ಲಿ ಭಾನುವಾರ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ 'ನುಡಿ ಕನ್ನಡಿ', 'ಕೃತಿ ಕನ್ನಡ', 'ಸಿರಿಯಜ್ಜಿ ಸಂಸ್ಕೃತಿ ಕಥನ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು

ಮುಖ್ಯಾಂಶಗಳು

- ಜನಪದರಲ್ಲಿ ಮನದಾಳದ ಕನಸುಗಳಿವೆ
- ಕೃತಿಗಳಲ್ಲಿ ಸಂಬಂಧಗಳ ಪ್ರೀತಿಸುವ ಅಂಶ
- ಜನಪದ ಸಂಸ್ಕೃತಿ ಬುಡಕಟ್ಟಿನವರ ಹೆಮ್ಮೆ



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಾಹಿತ್ಯಾಭಿಮಾನಿಗಳು

ವೈವಿಧ್ಯಮಯ ಜಾತ್ರೆ ಸುತ್ತಿದ ಅನುಭವ

'ಮೀರಾಸಾಬಿಹಳ್ಳಿ ಶಿವಣ್ಣ ಅವರ ಕೃತಿಗಳನ್ನು ಓದಿದರೆ, ಒಮ್ಮೆ ಹಳ್ಳಿಗಾಡಿನ ಸಿರಿವಂತಿಕೆಯ ಜತೆಗೆ ವೈವಿಧ್ಯಮಯ ಜಾತ್ರೆಯನ್ನು ಸುತ್ತಿ ಬಂದಂತಾಗುತ್ತದೆ' ಎಂದು ವಿಶ್ರಾಂತ ಕುಲಪತಿ ಹಿ.ಚಿ.ಬೋರಲಿಂಗಯ್ಯ ಶ್ಲಾಘಿಸಿದರು.

ಅವರ ಮೂರು ಕೃತಿಗಳು ತಳವರ್ಗದ ನೋವು, ಸಂಕಟ, ಅಭಿಪ್ರಾಯಗಳಿಂದ ಆರಂಭಗೊಂಡಿರುವುದು ನಿಜಕ್ಕೂ ವಿಶೇಷ. ಕೆಲವರು ಅವರನ್ನು ಜೋಗಿ, ಸಂತ, ಬಂಧು, ಒಡನಾಡಿ, ಆಧ್ಯಾತ್ಮಿಕ ಎಂದೆಲ್ಲಾ ಕರೆದಿದ್ದಾರೆ. ಮನುಷ್ಯ ಪ್ರೀತಿಗಾಗಿ ಹಂಬಲಿಸುವ ತುಡಿತ ಅವರ ಕೃತಿಗಳಲ್ಲಿ ಅಡಕವಾಗಿದೆ. ಗ್ರಾಮೀಣ ನೆಲದ ಸೊಗಡಿನ ಜನಪದ ಪರಂಪರೆಯನ್ನು ರಕ್ಷಿಸಿಕೊಳ್ಳುವ ತವಕವನ್ನು ಶಿವಣ್ಣ ಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜನಪದ ಕಲೆ ಮತ್ತು ಕಲಾವಿದರು, ಅನ್ನದಾತ ರೈತರನ್ನು ಉಳಿಸಿಕೊಳ್ಳುವತ್ತ ಹೆಚ್ಚಿನ ಗಮನ ನೀಡಬೇಕು ಎಂದು ಒತ್ತಾಯಿಸಿದರು.

ಜನಪದರ ಸಂಸ್ಕೃತಿ, ಬದುಕು ಶ್ರೀಮಂತ

ಪ್ರೊ.ಕಾಳೇಗೌಡ ನಾಗವಾರ ಅನಿಸಿಕೆ। ಮೀರಾಸಾಬಿಹಳ್ಳಿ ಶಿವಣ್ಣ ಅವರ ಕೃತಿಗಳ ಸಮರ್ಪಣಾ ಸಮಾರಂಭ

■ ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

ಜನಪದರ ಸಂಸ್ಕೃತಿ, ಬದುಕು ಅತ್ಯಂತ ಶ್ರೀಮಂತ ಎಂದು ಸಾಹಿತಿ ಪ್ರೊ. ಕಾಳೇಗೌಡ ನಾಗವಾರ ಅಭಿಪ್ರಾಯಪಟ್ಟರು.

ಇಲ್ಲಿನ ಜಗಳೂರು ಮಹಾಲಿಂಗಪ್ಪ ಟವರ್ಸ್‌ನ ಜೆ.ಎಂ. ಫಾರ್ಚ್ಯೂನ್ ಹಾಲ್‌ನಲ್ಲಿ ಭಾನುವಾರ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ ಹಾಗೂ ಸಿವಿಜಿ ಪಬ್ಲಿಕೇಷನ್ಸ್ ಆಯೋಜಿಸಿದ್ದ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರ ಬದುಕು-ಬರಹ ಕುರಿತ ನುಡಿ ಕನ್ನಡಿ, ಕೃತಿ ಕನ್ನಡಿ, ಸಿರಿಯಜ್ಜಿ ಸಂಸ್ಕೃತಿ ಕಥನ ಅಭಿನಂದನಾ ಸಂಪುಟಗಳ ಸಮರ್ಪಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಜನಪದರು ಬಡತನದ ಮಧ್ಯೆಯೂ ಬಹು ದೊಡ್ಡ ಕನಸುಗಳನ್ನು ಕಾಣುತ್ತಾ ತಮ್ಮ ಜೀವನಾನುಭವಗಳನ್ನೇ ಕಥೆ, ಹಾಡುಗಳನ್ನು ಕಟ್ಟಿದ್ದಾರೆ. ಬುಡಕಟ್ಟು ಮಹಿಳೆಯರು ಹೆತ್ತ ಕಂದನಿಗೆ ಹಾಲುಣಿಸಲು ಆಗದಷ್ಟು ಅಪೌಷ್ಟಿಕದಿಂದ ಬಳಲುತ್ತಿದ್ದರೂ ಮಕ್ಕಳಿಗೆ ರಾಜ, ಮಹರಾಜರ ಹೆಸರಿಡುತ್ತಾರೆ. ವೀರ, ಶೂರರ ಪರಾಕ್ರಮಗಳನ್ನು ಹೇಳಿ ಬೆಳೆಸುತ್ತಾರೆ. ಶ್ರೀಮಂತ ಕನಸುಗಳನ್ನೇ ಬಿತ್ತುತ್ತಾರೆ ಎಂದು ವಿಶ್ಲೇಷಿಸಿದರು.

ಭಾರತ ಜನಪದ ಕಲೆಗಳ ತವರು. ಜನಪದರ ಕಥೆ, ಕಲೆ, ಸಾಂಸ್ಕೃತಿಕ ಬದುಕಿನ ವೈಶಿಷ್ಟ್ಯಗಳ ಮೂಲಕವೇ ಅವರ ಸಮಸ್ಯೆಗಳನ್ನು ತಿಳಿಯಬಹುದು. ಮೀರಾಸಾಬಿಹಳ್ಳಿ ಶಿವಣ್ಣ ಚಿತ್ರದುರ್ಗವನ್ನೇ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಇಲ್ಲಿನ ಬುಡಕಟ್ಟು ಸಂಸ್ಕೃತಿ ಪರಿಚಯಿಸುವ, ದಾಖಲಿಸುವ ಮಹತ್ವದ ಕೆಲಸ ಮಾಡಿದ್ದಾರೆ ಎಂದರು.



ವಿಜಯವಾಣಿ

ಚಿತ್ರದುರ್ಗದಲ್ಲಿ ಭಾನುವಾರ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರ ನುಡಿ ಕನ್ನಡಿ, ಕೃತಿ ಕನ್ನಡಿ, ಸಿರಿಯಜ್ಜಿ ಸಂಸ್ಕೃತಿ ಕಥನ ಅಭಿನಂದನಾ ಸಂಪುಟಗಳನ್ನು ಸಮರ್ಪಿಸಲಾಯಿತು. ಕೆ. ಅಮರನಾರಾಯಣ, ಪ್ರೊ.ಹಿ.ಚಿ. ಬೋರಲಿಂಗಯ್ಯ, ಡಾ.ಬಿ. ರಾಜಶೇಖರಪ್ಪ, ಎಚ್. ಹನುಮಂತಪ್ಪ ಇತರರಿದ್ದರು.

> ನಮ್ಮ ನೆಲದ ಸಂಸ್ಕೃತಿ, ಸಾಂಸ್ಕೃತಿಕ ವೈವಿಧ್ಯಗಳಾದ ಊಟ, ಉಪಚಾರ, ಉಡುಗೆ, ತೊಡುಗೆಗಳಿಗೆ ಮನ್ನಣೆ ಸಿಗುವಂತಾಗಬೇಕು.
> । ಕೆ. ಅಮರನಾರಾಯಣ
> ನಿವೃತ್ತ ಐಎಎಸ್ ಅಧಿಕಾರಿ

> ಮೀರಾಸಾಬಿಹಳ್ಳಿ ಶಿವಣ್ಣ ಅವರು ಕನ್ನಡ, ತೆಲುಗು ಭಾಷೆಗಳ ಸಂಸ್ಕೃತಿ ಮಧ್ಯೆ ಬಾಂಧವ್ಯ ಸೃಷ್ಟಿಸಿದ್ದಾರೆ.
> । ಡಾ. ಕೇತು ವಿಶ್ವನಾಥರೆಡ್ಡಿ ಕಥೆಗಾರ

ಹಂಪಿ ವಿವಿಯ ಪ್ರೊ.ಹಿ.ಚಿ. ಬೋರಲಿಂಗಯ್ಯ ಮಾತನಾಡಿ, ಮೀರಾಸಾಬಿಹಳ್ಳಿ ಶಿವಣ್ಣ ಅವರ ನುಡಿಕೃತಿ ವಿವಿಧ ಸ್ತರಗಳ ಜನರ ಬದುಕನ್ನು ಕುರಿತು ಹೇಳುತ್ತದೆ. ಜನಪದ ಸಂಸ್ಕೃತಿ, ಸಾಮಾಜಿಕ ಮೌಲ್ಯಗಳ ಬಗ್ಗೆ ವಿವರಿಸುತ್ತದೆ. ಆಳವಾದ ಅಧ್ಯಯನ ಮಾಡಿರುವ ಅವರನ್ನು ಸಂತ, ಜೋಗಿ, ಆಧ್ಯಾತ್ಮ ಜೀವಿ ಎಂದು ಸಂಬೋಧಿಸಬಹುದು ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ವಿಶ್ರಾಂತ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, ಮೀರಾಸಾಬಿಹಳ್ಳಿ ಶಿವಣ್ಣ ಸೃಜನಶೀಲ ಬರಹಗಾರರು. ಕಥೆಗಳನ್ನು ಬರೆವ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ ಅವರು, ನಂತರ ಜನಪದ ಒಡನಾಡಿಗಳನ್ನೇ ಕಥಾವಸ್ತುವನ್ನಾಗಿ ಮಾಡಿಕೊಂಡು ಅವರ ಕಲೆ, ಬದುಕು, ವೈಶಿಷ್ಟ್ಯಗಳನ್ನು ಕೃತಿಗಳ ಚೌಕಟ್ಟಿಗೆ ತಂದಿದ್ದಾರೆ ಎಂದರು. ರಾಜ್ಯಸಭೆ ಮಾಜಿ ಸದಸ್ಯ ಎಚ್. ಹನುಮಂತಪ್ಪ, ತೆಲುಗು ಕಥೆಗಾರ ಡಾ. ತುಮ್ಮಲ ರಾಮಕೃಷ್ಣ, ಡಾ.ಬಿ. ರಾಜಶೇಖರಪ್ಪ ಮಾತನಾಡಿದರು. ಇದೇ ವೇಳೆ, ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿಯಿಂದ ಇದೇ ಮೊದಲ ಬಾರಿಗೆ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಪ್ರಶಸ್ತಿಗೆ ನುಡಿಕನ್ನಡಿ, ಕೃತಿ ಕನ್ನಡಿ ಸಂಪಾದಕ ಆನಂದಮೂರ್ತಿ ಅವರ ಹೆಸರನ್ನು ಪ್ರಕಟಿಸಲಾಯಿತು. ಸಿವಿಜಿ ಪಬ್ಲಿಕೇಷನ್‌ನಿಂದ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರಿಗೆ ಜನಪದರತ್ನ ಪ್ರಶಸ್ತಿ ನೀಡಲಾಯಿತು. ಡಾ. ವೂಡೇ ಪಿ. ಕೃಷ್ಣ ಅಧ್ಯಕ್ಷತೆವಹಿಸಿದ್ದರು. ಸ್ವಯಾನ್ ಕೃಷ್ಣಮೂರ್ತಿ, ಬಾನಂದೂರು ಕೆಂಪಯ್ಯ, ಡಿ.ಎಸ್. ಲಿಂಗರಾಜು ಮತ್ತಿತರ ನೂರು ಮಂದಿಯನ್ನು ಅಭಿನಂದಿಸಲಾಯಿತು.

ಪ್ರಜಾವಾಣಿ ಚಿತ್ರದುರ್ಗ ಭಾನುವಾರ, ಡಿಸೆಂಬರ್ 18, 2016

65ನೇ ವಸಂತಕ್ಕೆ ಕಾಲಿಟ್ಟ ಜನಪದ ತಜ್ಞ ಮೀರಾಸಾಬಿಹಳ್ಳಿ ಶಿವಣ್ಣ: ಗೆಳೆಯರ ಬಳಗದಿಂದ ವಿಶಿಷ್ಟ ಸಮಾರಂಭ


'ಷಷ್ಟ್ಯಬ್ದಿ ಸಂಭ್ರಮ'ಕ್ಕೆ ಮೂರು ಕೃತಿ ಬಿಡುಗಡೆ

• ಗಾಣಧಾಳು ಶ್ರೀಕಂಠ

ಚಿತ್ರದುರ್ಗ: ಜಿಲ್ಲೆಯಲ್ಲಿ ಅಜ್ಞಾತವಾಗಿದ್ದ ಜನಪದ ಆಚರಣೆ, ಕಲೆಗಳು, ಎಲೆಮರೆಯ ಕಾಯಿಯಂತಿದ್ದ ಜನಪದ ಕಲಾವಿದರನ್ನು ಗುರುತಿಸಿ-, ನಾಡಿಗೆ ಪರಿಚಯಿಸುವ ಮೂಲಕ ಬರದ ಜಿಲ್ಲೆಯ ಸಿರಿವಂತ ಸಾಂಸ್ಕೃತಿಕತೆಯನ್ನು ಅನಾವರಣಗೊಳಿಸಿದ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರಿಗೆ 65ರ ಸಂಭ್ರಮ.

ಜನಪದರ ನಡುವೆ ಬದುಕು: ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಮೀರಾಸಾಬಿಹಳ್ಳಿ ಗ್ರಾಮದ ರೈತ ಕುಟುಂಬದ ಪಟೇಲ್ ಬೊಮ್ಮೇಗೌಡ ಕರಿಯಮ್ಮ ಅವರ ಎರಡನೆಯ ಪುತ್ರ ಶಿವಣ್ಣ, ಅವರು ಜನಿಸಿದ್ದು 1952ರಲ್ಲಿ. ಮೀರಾಸಾಬಿಹಳ್ಳಿಯಲ್ಲಿ ಪ್ರಾಥಮಿಕ, ಚಳ್ಳಕೆರೆಯಲ್ಲಿ ಪ್ರೌಢ, ಮೈಸೂರಿನಲ್ಲಿ ಪಿಯು, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ 1972ರಲ್ಲಿ ಕನ್ನಡ ಬಿ.ಎ. (ಆನರ್ಸ್), 1974ರಲ್ಲಿ ಕನ್ನಡ ಎಂ.ಎ. ಪದವಿ ಪಡೆದರು.

ಮೈಸೂರು ವಿಶ್ವವಿದ್ಯಾಲಯದಿಂದ ಡಾ.ಕಾಳೇಗೌಡ ನಾಗವಾರ ಅವರ ಮಾರ್ಗದರ್ಶನದಲ್ಲಿ 'ಕಾಡುಗೊಲ್ಲರ ಇಬ್ಬರು ಸಾಂಸ್ಕೃತಿಕ ವೀರರು (ಎತ್ತಪ್ಪ-ಜುಂಜಪ್ಪ) ಒಂದು ಅಧ್ಯಯನ' ('ಕಾಡುಗೊಲ್ಲ ಬುಡಕಟ್ಟು ವೀರರು-' ಹೆಸರಿನಲ್ಲಿ ಪ್ರಕಟ) ಮಹಾಪ್ರಬಂಧಕ್ಕೆ 1996ರಲ್ಲಿ ಪಿಎಚ್.ಡಿ. ಪದವಿ ದೊರೆಯಿತು. 1975ರಿಂದ 2012ರ ವರೆಗೆ ಸತತವಾಗಿ 37 ವರ್ಷಗಳ ತನಕ ಚಳ್ಳಕೆರೆ, ಚಿತ್ರದುರ್ಗ, ದೊಡ್ಡಬಳ್ಳಾಪುರ, ಬೆಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನೆಚ್ಚಿನ ಕನ್ನಡ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಶಿವಣ್ಣ ಸೇವೆ ಸಲ್ಲಿಸಿದ್ದಾರೆ.



ಚಿತ್ರದುರ್ಗದಲ್ಲಿ ಡಿ.18ರಂದು ಬಿಡುಗಡೆಯಾಗಲಿರುವ ಜನಪದ ತಜ್ಞ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರ ಮೂರು ಕೃತಿಗಳ ಮುಖಪುಟಗಳು

ಚಳ್ಳಕೆರೆಯೇ ಸಾಂಸ್ಕೃತಿಕ ಕೇಂದ್ರ: ಜನಪದದ ಬಗ್ಗೆ ಇದ್ದ ತುಡಿತ, ಜನಪದರ ಬಗೆಗಿನ ಅಭಿಮಾನದಿಂದ, ಶಿವಣ್ಣ ಚಳ್ಳಕೆರೆಯನ್ನು ಸಾಂಸ್ಕೃತಿಕ ಕೇಂದ್ರವಾಗಿಸಿಕೊಂಡು ಮೂರೂವರೆ ದಶಕಗಳ ಕಾಲ ಅಧ್ಯಯನ ನಡೆಸಿದರು. ನಂತರ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ, ಇಡೀ ಜಿಲ್ಲೆಯಲ್ಲಿ ಸಂಚರಿಸುತ್ತಾ, ಇಲ್ಲಿನ ಪಶುಪಾಲಕ ಬುಡಕಟ್ಟು ಸಂಸ್ಕೃತಿಯ ನಾಯಕರಾದ ಕಾಡುಗೊಲ್ಲರು ಮತ್ತು ಮ್ಯಾಸಬೇಡರನ್ನು ಕುರಿತು ಅಧ್ಯಯನ ನಡೆಸಿದರು.

30ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದರು. ಇವು ಕೃತಿಗಳಷ್ಟೇ ಅಲ್ಲ, ಜಾನಪದ ಕ್ಷೇತ್ರಕ್ಕೆ ಅಡಿಯಿಡುವವರಿಗೆ ಆಕರ ಗ್ರಂಥಗಳು ಹಾಗೂ ಕರ್ನಾಟಕ ಜಾನಪದಕ್ಕೆ ನೀಡಿದ ಮೌಲಿಕ ಕೊಡುಗೆಗಳು.

'ಶಿವಣ್ಣ ಅವರ ಕೃತಿಗಳು ಚಿತ್ರದುರ್ಗ ಜಿಲ್ಲೆಯ ಪರಿಸರ, ಇತಿಹಾಸ, ಜನಪದ ಕಲೆ, ಕಲಾವಿದರು, ಜನಪದ ಆಚರಣೆಗಳನ್ನು ಕುರಿತ ವಿದ್ವತ್ ಪೂರ್ಣವಾದ ಒಳನೋಟಗಳುಳ್ಳ ಸಾಂಸ್ಕೃತಿಕ ಕೈಪಿಯತ್ತುಗಳಂತಿವೆ' ಎಂದು ಹೆಮ್ಮೆಯಿಂದ ವಿಶ್ಲೇಷಿಸುತ್ತಾರೆ ಅವರ ಮಿತ್ರ ಅಭಿನಂದನೆ ಪುಟಗಳ ಸಂಪಾದಕ ಲೇಖಕ ಜಿ.ವಿ.ಆನಂದಮೂರ್ತಿ.

'ಸಾಂಸ್ಕೃತಿಕ ಪರಂಪರೆಯ ಮುಖ್ಯ ವಾಹಿನಿಯಿಂದ ಹೊರದೂಡಿಸಿಕೊಂಡ ಮೌಖಿಕ ರೂಪಗಳಿಗೆ ಸಾಂಸ್ಕೃತಿಕ ಅನನ್ಯತೆ ತಂದುಕೊಟ್ಟಿದ್ದಾರೆ ಶಿವಣ್ಣ. ಚಿತ್ರದುರ್ಗದ ಲಿಖಿತ ಇತಿಹಾಸ ಪರಂಪರೆ ತನ್ನ ಒಡಲಲ್ಲಿ ಸೇರದೇ ಚರಿತ್ರೆಯ ಗುಟ್ಟುಗಳ ಬಗೆಗೆ ಜನಪದರು ತಮ್ಮದೇ ಕ್ರಮದಲ್ಲಿ ಜೋಡಿಸಿರುವ ಅನೇಕ ಸಾಂಸ್ಕೃತಿಕ ವಿವರಗಳನ್ನು ಹೊಳಹುಗಳನ್ನು ಇವರ ಜಾನಪದ ಅಧ್ಯಯನದ ಕೃತಿಗಳು ತೆರೆದಿಡುತ್ತವೆ' ಎಂದು ಶಿವಣ್ಣ ಅವರ ಕೃತಿಗಳನ್ನು ಓದಿದವರು ಹೇಳುತ್ತಾರೆ.

ಜನಪದ ತಜ್ಞರೊಂದಿಗೆ ಹೆಜ್ಜೆ: ಮೀರಾಸಾಬಿಹಳ್ಳಿ ಶಿವಣ್ಣ ಅವರು ಎರಡು ಅವಧಿಗೆ (1984-87 ಮತ್ತು 1998-2001) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಡಾ.ಎಚ್.ಎಲ್.ನಾಗೇಗೌಡ, ಡಾ.ಕಾಳೇಗೌಡ ನಾಗವಾರ ಅವರೊಂದಿಗೆ ಕಾರ್ಯನಿರ್ವಹಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಜನಪದ ಆಚರಣೆ, ಕಲೆ, ಕಲಾವಿದರನ್ನು ನಾಡಿಗೆ ಪರಿಚಯಿಸಿದ್ದಾರೆ. ಕಿರಿಯ ಲೇಖಕರನ್ನು ಗುರುತಿಸಿ ಅವರ ಕೃತಿಗಳನ್ನು ಪ್ರಕಟಿಸುವ ಪ್ರೀತಿ ತೋರಿದ್ದಾರೆ. ಇವರ ಮುಖ್ಯ ಕೃತಿಗಳಾದ ಎತ್ತಪ್ಪ, ಜುಂಜಪ್ಪ, ಕಾಡುಗೊಲ್ಲರ ಸಂಸ್ಕೃತಿ, ಪಶುಪಾಲಕ ವೀರರ ಕತೆಗಳು ಇಂಗ್ಲಿಷ್‌ಗೆ ಅನುವಾದಗೊಂಡಿವೆ. ತೆಲುಗಿನಿಂದ 60ಕ್ಕೂ ಹೆಚ್ಚು ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಶಿವಣ್ಣ ಅವರ ಮೂರೂವರೆ ದಶಕಗಳ ಜಾನಪದ ಲೋಕದ ಅನನ್ಯ ಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಅಕಾಡೆಮಿ 'ಜೀಶಂಪ ಜಾನಪದ ತಜ್ಞ' ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಶಸ್ತಿ ಸ್ವೀಕರಿಸಿರುವ ಮೀರಾಸಾಬಿಹಳ್ಳಿ ಶಿವಣ್ಣ, ಜೀಶಂಪ ಅವರ ಹಾದಿಯಲ್ಲೇ ಸಾಗುತ್ತಿದ್ದಾರೆ!.

ಮುಖ್ಯಾಂಶಗಳು

- ಸತತ 37 ವರ್ಷ ವಿವಿಧ ಹುದ್ದೆಗಳ ನಿರ್ವಹಣೆ
- 30ಕ್ಕೂ ಹೆಚ್ಚು ಕೃತಿಗಳ ಪ್ರಕಟಿಸಿದ ಶಿವಣ್ಣ
- ಕನ್ನಡಕ್ಕೆ 60ಕ್ಕೂ ಅಧಿಕ ಕತೆಗಳ ಅನುವಾದ

ಅಭಿನಂದನಾ ಸಮಾರಂಭ, ಕೃತಿಗಳ ಲೋಕಾರ್ಪಣೆ ಇಂದು

ಮೂರೂವರೆ ದಶಕಗಳ ಕಾಲ 'ಜನಪದ'ವನ್ನೇ ಅಧ್ಯಯನ, ಅಧ್ಯಾಪನವನ್ನಾಗಿಸಿಕೊಂಡ ಶಿವಣ್ಣ ಅವರನ್ನು ಅಭಿನಂದಿಸಲು ಗೆಳೆಯರ ಬಳಗವೊಂದು ಇದೇ 18ರಂದು ನಗರದ ಜಗಳೂರು ಮಹಲಿಂಗಪ್ಪ ಟವರ್ಸ್ ಫಾರ್ಚೂನ್ ಹಾಲ್‌ನಲ್ಲಿ ವಿಶಿಷ್ಟ ಸಮಾರಂಭ ಆಯೋಜಿಸಿದೆ.

ಅಂದು ಬೆಳಿಗ್ಗೆ 10.30ಕ್ಕೆ ಜನಪದ ತಜ್ಞ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಮಿತಿ ಮತ್ತು ಸಿವಿಜಿ ಪಬ್ಲಿಕೇಷನ್ ಸಹಯೋಗದಲ್ಲಿ ಅಭಿನಂದನಾ ಸಮಾರಂಭ ಹಾಗೂ ಮೂರು ಕೃತಿಗಳ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಲೇಖಕ ಜಿ.ವಿ.ಆನಂದಮೂರ್ತಿ ಸಂಪಾದನೆಯ ಡಾ.ಮೀರಸಾಬಿಹಳ್ಳಿ ಶಿವಣ್ಣ ಅಭಿನಂದನಾ ಸಂಪುಟ 'ನುಡಿ ಕನ್ನಡಿ', ಅವರ ಕೃತಿಗಳ ವಿಮರ್ಶಾ ಗ್ರಂಥ 'ಕೃತಿ ಕನ್ನಡ' ಹಾಗೂ ಶಿವಣ್ಣ ರಚನೆಯ 'ಸಿರಿಯಜ್ಜಿ ಸಂಸ್ಕೃತಿ ಕಥನ' ಕೃತಿಗಳು ಬಿಡುಗಡೆಯಾಗಲಿವೆ.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೂಡೆ ಪಿ.ಕೃಷ್ಣ ಅಧ್ಯಕ್ಷತೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಉದ್ಘಾಟಿಸಲಿದ್ದಾರೆ. ರಾಜ್ಯಸಭೆ ಮಾಜಿ ಸದಸ್ಯ ಎಚ್.ಹನುಮಂತಪ್ಪ, ಸಾಹಿತಿ ಡಾ.ಕಾಳೇಗೌಡ ನಾಗವಾರ, ಹಂಪಿ ವಿ.ವಿ.ಯ ವಿಶ್ರಾಂತ ಕುಲಪತಿ ಹಿ.ಚಿ.ಬೋರಲಿಂಗಯ್ಯ, ತೆಲುಗಿನ ಕಥೆಗಾರ ಡಾ.ಕೇತು ವಿಶ್ವನಾಥ ರೆಡ್ಡಿ, ಕೇಂದ್ರ ಸಾಹಿತ್ಯ ಅಕಾಡೆಮಿ ವಿಶ್ರಾಂತ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ ಅಭಿನಂದನಾ ಸಂಪುಟ ಲೋಕಾರ್ಪಣೆ ಮಾಡಲಿದ್ದಾರೆ.

ಜನಪದ ಗಾಯಕ ಬಾನಂದೂರು ಕೆಂಪಯ್ಯ ಅವರ ಜನಪದ ಸಂಗೀತ, ಸೋಬಾನೆ ಹಾಡು, ಡೊಳ್ಳು ಕುಣಿತ, ರಂಗ ಗೀತೆ, ಗಣೆಹಾಡು, ಛಾಯಾಗ್ರಾಹಕ ನಿಸರ್ಗ ಗೋವಿಂದರಾಜು ಅವರ 'ಬುಡಕಟ್ಟು ಸಂಸ್ಕೃತಿಯ ಛಾಯಾಚಿತ್ರ ಪ್ರದರ್ಶನ' ಏರ್ಪಡಿಸಲಾಗಿದೆ.

ಪ್ರಜಾವಾಣಿ ಭಾನುವಾರ ಡಿಸೆಂಬರ್ 11 2016

ಸ್ನೇಹ ಸಮ್ಮಿಲನ–ನಿವೃತ್ತ ಶಿಕ್ಷಕರಿಗೆ ಸನ್ಮಾನ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಕರ ಹುದ್ದೆಯು ಇತರೆ ಎಲ್ಲ ವೃತ್ತಿಗಳಿಗಿಂತ ಆದರ್ಶವಾದ ವೃತ್ತಿ. ಇದಕ್ಕನುಗುಣವಾಗಿ ನಡೆದುಕೊಳ್ಳ ...ಾದರೆ ಶಿಕ್ಷಕರು ತಮ್ಮ ಚಾರಿತ್ರ್ಯವನ್ನು ...ತ್ತಮ ಮಟ್ಟದಲ್ಲಿ ರೂಪಿಸಿಕೊಳ್ಳುವುದು ಅತಿಮುಖ್ಯ' ಎಂದು ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಹೇಳಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ 'ಸ್ನೇಹ ಸಮ್ಮಿಲನ', ನಿವೃತ್ತ ಶಿಕ್ಷಕರಿಗೆ ಸನ್ಮಾನ ಹಾಗೂ ಸೇವಾಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

'ವಿದ್ಯಾರ್ಥಿಗಳು ಶಿಕ್ಷಕರ ನಡೆ–ನುಡಿ ಎಲ್ಲವನ್ನೂ ಗಮನಿಸುವುದರಿಂದ ಕೇವಲ ಪಠ್ಯಕ್ರಮಗಳನ್ನು ಹೇಳಿಕೊಟ್ಟರೆ ಸಾಲದು; ಬೋಧನೆಯಲ್ಲಿ ಆಳವಾದ ಜ್ಞಾನ, ಹುದ್ದೆಯ ಬಗ್ಗೆ ಗೌರವ ಹಾಗೂ ಉತ್ತಮ ಚಾರಿತ್ರ್ಯ ಹೊಂದಿದಾಗ ಮಾತ್ರ ...ಪೂರ್ಣ ಶಿಕ್ಷಕರಾಗಿ ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ನೀಡಲು ಸಾಧ್ಯವಾಗುತ್ತದೆ' ಎಂದು ಸಲಹೆ ನೀಡಿದರು.

ಅಂಗ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ 10 ಮಂದಿಯನ್ನು ಸನ್ಮಾನಿಸಲಾಯಿತು.



ಶೇಷಾದ್ರಿಪುರ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಪ್ರೊ.ಟಿ.ಎಸ್.ಚಂಪಕ ಅವರನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ.ಕೃಷ್ಣ, ಗೌರವ ಸಹಾಯಕ ಕಾರ್ಯದರ್ಶಿ ಸರೋಜಾ ಕೆ.ಎಂ.ನಂಜಪ್ಪ ಚಿತ್ರದಲ್ಲಿದ್ದಾರೆ.

ವಿಜಯ ಕರ್ನಾಟಕ VK ಶುಕ್ರವಾರ,2 ಡಿಸೆಂಬರ್ 2016

ಉಚಿತ ಸಿಇಟಿ ತರಗತಿಗೆ ಚಾಲನೆ

ವಿಕ ಸುದ್ದಿಲೋಕ ಕೆಂಗೇರಿ ಉಪನಗರ

ಇಲ್ಲಿನ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಆರಂಭಗೊಂಡ ಉಚಿತ ಸಿಇಟಿ ತರಗತಿಗೆ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ. ಪಿ. ಗಿರಿಧರ್ ರೆಡ್ಡಿ ಜ್ಯೋತಿ ಬೆಳಗಿಸಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ''ಏಣಿ ಹತ್ತುವಷ್ಟು ಸುಲಭದಲ್ಲಿ ಪಿರಮಿಡ್ ಹತ್ತಲು ಸಾಧ್ಯವಾಗದು. ಅದಕ್ಕೆ ಕಠಿಣ ಪರಿಶ್ರಮ, ಸಾಧನೆ ಅಗತ್ಯ,'' ಎಂದರು.

ಎಸ್‌ಇಟಿ ಟ್ರಸ್ಟ್‌ನ ಗೌರವ ಪ್ರದಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದ ಮುಖ್ಯ ಅತಿಥಿ ಹಾಗೂ ಎಸ್‌ಇಟಿ ಟ್ರಸ್ಟ್‌ನ ಶೈಕ್ಷಣಿಕ ನಿರ್ದೇಶಕ ಡಾ. ಎಂ. ಪ್ರಕಾಶ್, ಉನ್ನತ ಶಿಕ್ಷಣದ ಸವಾಲುಗಳ ಬಗ್ಗೆ ಸೂಕ್ತವಾದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡಿದರು.ಪ್ರಾಂಶುಪಾಲ ಡಾ. ಆರ್. ಡಿ. ಸತೀಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.



ಕೆಂಗೇರಿ ಉಪನಗರದ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಉಚಿತ ಸಿಇಟಿ ತರಗತಿಗೆ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಟೆಕ್‌ನಾಲಜಿಯ ಪ್ರಾಂಶುಪಾಲ ಡಾ.ಪಿ,ಗಿರಿಧರ್ ರೆಡ್ಡಿ ಜ್ಯೋತಿ ಬೆಳಗಿಸಿ ಚಾಲನೆ ನೀಡಿದರು.

ವಿಜಯ ಕರ್ನಾಟಕ

ಎಚ್‌ಎಎಲ್ ಮುಖ್ಯಸ್ಥರಿಗೆ ಪ್ರಶಸ್ತಿ

:: ವಿಕ ಸುದ್ದಿಲೋಕ ಬೆಂಗಳೂರು

ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ (ಇಂಡಿಯಾ) ತನ್ನ ನಾಲ್ಕನೇ ಭಾರತೀಯ ತಂತ್ರಜ್ಞಾನ . ಸಮಾವೇಶದಲ್ಲಿ (ಐಟಿಸಿ-2016) ' ತಂತ್ರಜ್ಞಾನ ನಾಯಕತ್ವ ಪ್ರಶಸ್ತಿಯನ್ನು' ಎಚ್‌ಎಎಲ್‌ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ (ಸಿಎಂಡಿ) ಟಿ. ಸುವರ್ಣರಾಜು ಅವರಿಗೆ ನೀಡಿದೆ. ಬೆಂಗಳೂರಿನಲ್ಲಿ ನಡೆದ ಸಮಾವೇಶದಲ್ಲಿ ಉದ್ಯಮ, ಆರ್‌ಆ್ಯಂಡ್‌ಡಿ ಪ್ರಯೋಗಾಲಯಗಳು ಮತ್ತು ಶೈಕ್ಷಣಿಕ ವಲಯದಿಂದ 600ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಎಂಜಿನಿಯರಿಂಗ್‌ನಲ್ಲಿ ನವೀನ ಸಂಶೋಧನೆ ಮತ್ತು ವಿಧಾನಗಳ ಅಳವಡಿಕೆಯಲ್ಲಿ ಎಚ್‌ಎಎಲ್ ಮುಂಚೂಣಿಯಲ್ಲಿದೆ. ಹೀಗಾಗಿ ಉತ್ಪಾದನಾ ಕ್ಷೇತ್ರದಲ್ಲಿ ಸ್ಪರ್ಧಾತ್ಮಕವಾಗಿದೆ. 3ಡಿ ಉತ್ಪಾದನಾ ತಂತ್ರಜ್ಞಾನವನ್ನೂ ಎಚ್‌ಎಎಲ್ ಹೊಂದಿದೆ ಎಂದರು.



ಬೆಂಗಳೂರಿನಲ್ಲಿ ನಡೆದ ನಾಲ್ಕನೇ ಭಾರತೀಯ ತಂತ್ರಜ್ಞಾನ ಸಮಾವೇಶದಲ್ಲಿ ಎಚ್‌ಎಎಲ್ ಮುಖ್ಯಸ್ಥ ಟಿ. ಸುವರ್ಣರಾಜು ಅವರಿಗೆ ತಂತ್ರಜ್ಞಾನ ನಾಯಕತ್ವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಶ್ವವಾಣಿ
02.12.2016
ಶುಕ್ರವಾರ

ನಿವೃತ್ತ ನ್ಯಾ. ಡಾ.ಎಂ.ರಾಮಾ ಜೋಯಿಸ್ ಅಭಿಪ್ರಾಯ

ಸಾಧನೆಗೆ ಧರ್ಮ, ಅರ್ಥ ಪಾಲನೆ ಅಗತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಧರ್ಮ, ಅರ್ಥ, ಕಾಮ ಈ ತ್ರಿವರ್ಗದ ಮೇಲೆ ಇಡೀ ವಿಶ್ವವೇ ನಿಂತಿದೆ. ಈ ಮೂರನ್ನು ಪಾಲಿಸಿದಲ್ಲಿ ಎಂತಹ ಸಾಧನೆಯನ್ನಾದರು ಮಾಡಬಹುದು ಎಂದು ನಿವೃತ್ತ ನ್ಯಾ. ಡಾ.ಎಂ.ರಾಮಾ ಜೋಯಿಸ್ ಹೇಳಿದರು.

ನಗರದ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಆಯೋಜಿಸಿದ್ದ ಎಕ್ಸಲೆನ್ಸ್ ಇನ್ ಎಂಜಿನಿಯರಿಂಗ್ ಪ್ರಾಕ್ಟಿಸ್ ಹಾಗೂ ನೆಟ್‌ವರ್ಕಿಂಗ್ ಆ್ಯಂಡ್ ಕೊಲಾಬರೇಷನ್ ಕಾರ್ಯಕ್ರಮದಲ್ಲಿ ಮಾತನಾಡಿ, ವಿಜ್ಞಾನ, ತಂತ್ರಜ್ಞಾನ ಮಾತ್ರವಲ್ಲ ಇಡೀ ದೇಶವೇ ಧರ್ಮದ ಮೇಲೆ ನಿಂತಿದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಮೊದಲ ಮೂರು ಅಂಶಗಳು ಹೆಚ್ಚು ಪ್ರಾಮುಖ್ಯತೆಯನ್ನು ವಹಿಸುತ್ತವೆ ಎಂದರು.

ಸುಪ್ರೀಂ ಕೋರ್ಟ್ ಲಾಂಛನ ದಲ್ಲೂ ಧರ್ಮ ಇದ್ದಲ್ಲಿ ಜಯ ಇದ್ದೇ ಇರುತ್ತದೆ ಎಂಬ ವಾಕ್ಯವನ್ನು ಬರೆಯಲಾಗಿದೆ. ಹೀಗಾಗಿ ಪ್ರತಿಯೊಬ್ಬರೂ ಧರ್ಮ ಮಾರ್ಗದಲ್ಲೇ ನಡೆದು. ಸರ್ವರೂ ಸುಖ-ಶಾಂತಿಯಿಂದ ಜೀವಿಸಬೇಕು ಎಂದು ತಿಳಿಸಿದರು.

ಇಸ್ರೋದ ನಿವೃತ್ತ ಪ್ರಾಧ್ಯಪಕ ಡಾ.ವೈ.ಎಸ್. ರಾಜನ್ ಮಾತನಾಡಿ, ಪ್ರಧಾನ ಮಂತ್ರಿಯವರ 'ಮೇಕ್ ಇನ್ ಇಂಡಿಯಾ' ಯೋಜನೆಯೂ ಮಹತ್ವಪೂರ್ಣವಾಗಿದೆ. ರಕ್ಷಣಾ ಕ್ಷೇತ್ರದಲ್ಲಿ ಮೊದಲು ಶೇ.40 ಮಾತ್ರ ಆಮದು ಮಾಡಿಕೊಳ್ಳುತ್ತಿದ್ದೆವು. ಇದರ ಪ್ರಮಾಣ ಇದೀಗ ಶೇ.47ಕ್ಕೆ ತಲುಪಿದೆ. ಮುಂದೊಂದು ದಿನ ಶೇ.50ಕ್ಕೆ ತಲುಪುವುದಕ್ಕೂ ಮುನ್ನ ರಫ್ತಿನತ್ತ ಗಮನಹರಿಸುವುದು ಅಗತ್ಯವಾಗಿದೆ ಎಂದರು.



ನಗರದ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಆಯೋಜಿಸಿದ್ದ ಎಕ್ಸಲೆನ್ಸ್ ಇನ್ ಎಂಜಿನಿಯರಿಂಗ್ ಪ್ರಾಕ್ಟಿಸ್ ಹಾಗೂ ನೆಟ್‌ವರ್ಕಿಂಗ್ ಆ್ಯಂಡ್ ಕೊಲಾಬರೇಷನ್ ಕಾರ್ಯಕ್ರಮದಲ್ಲಿ ಗಣ್ಯರಿಗೆ ಸನ್ಮಾನಿಸಲಾಯಿತು.

> ತಂತ್ರಜ್ಞಾನದ ಮೂಲಕ ಇಂದಿನ ಎಂಜಿನಿಯರ್‌ಗಳು ಆಸಕ್ತಿ ವಹಿಸಿ ನೀರು ಮರುಬಳಕೆಯ ತಂತ್ರಜ್ಞಾನವನ್ನು ಹೆಚ್ಚು ಹೆಚ್ಚು ಆವಿಷ್ಕರಿಸುವ ಮೂಲಕ ಮಳೆ ನೀರು ಹಾಳಾಗುವುದನ್ನು ತಡೆಯಬೇಕಿದೆ.
> **- ಡಾ.ವೈ.ಎಸ್.ರಾಜನ್**, ನಿವೃತ್ತ ಪ್ರಾಧ್ಯಪಕ, ಇಸ್ರೋ

> ಹಾಲು ಉತ್ಪಾದನೆಯಲ್ಲಿ ಭಾರತ ಮೊದಲ ಸ್ಥಾನದಲ್ಲಿದ್ದು ಹೈನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ದೊರೆತಲ್ಲಿ ಪ್ರಗತಿ ಸಾಧಿಸಬಹುದಾಗಿದೆ.
> **- ಪ್ರೊ.ಆರ್.ಎಂ.ವಾಸಗಂ**, ಐಟಿಸಿ ಕಂಪನಿಯ ರಾಷ್ಟ್ರೀಯ ಸಲಹಾ ಸಮಿತಿ ಅಧ್ಯಕ್ಷ

ಸಮಾರಂಭದಲ್ಲಿ ಎಚ್‌ಎಎಲ್ ಸಿಎಂಡಿ ಟಿ. ಸುವರ್ಣ ರಾಜು, ನಿಟ್ಟೆ ವಿವಿ ಕುಲಪತಿ ಎನ್.ವಿನಯ್ ಹೆಗಡೆ, ಎನ್‌ಟಿಸಿಪಿಎಲ್ ಸಿಎಂಡಿ ಎಸ್.ಕೆ.ಶರ್ಮಾ ಅವರನ್ನು ಅಭಿನಂದಿಸಲಾಯಿತು. ಐಎನ್‌ಎಇ ಅಧ್ಯಕ್ಷ ಡಾ.ಬಿ.ಎನ್.ಸುರೇಶ್, ವಿಜ್ಞಾನಿ ಡಾ.ಕೋಟಾ ಹರಿನಾರಾಯಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ರೊಡಕ್ಷನ್ ಎಂಜಿನಿಯರ್ಸ್ ಅಧ್ಯಕ್ಷ ಡಾ.ವೂಡೆ ಪಿ. ಕೃಷ್ಣ, ಸದಸ್ಯ ಡಾ.ಕೆ.ಗೋಪಾಲಕೃಷ್ಣನ್ ಮತ್ತಿತತರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ

ಶುಕ್ರವಾರ, 2, ಡಿಸೆಂಬರ್, 2016,

ಧರ್ಮದಿಂದ ಸುಖ ಶಾಂತಿ: ರಾಮಜೋಯಿಸ್


ಬೆಂಗಳೂರು: ವಿಜ್ಞಾನ ಮತ್ತು ತಂತ್ರಜ್ಞಾನದ ಎಲ್ಲ ಸಮಸ್ಯೆಗಳಿಗೂ ಧರ್ಮದಲ್ಲಿ ಪರಿಹಾರ ಇದೆ ಎಂದು ನಿವೃತ್ತ ನ್ಯಾಯಮೂರ್ತಿ ಡಾ. ಎಂ. ರಾಮಾಜೋಯಿಸ್ ತಿಳಿಸಿದರು.

ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್‌ನ ಎರಡು ದಿನದ ಸಮ್ಮೇಳನದಲ್ಲಿ ಇಂಜಿನಿಯರಿಂಗ್ ಪ್ರಾಕ್ಟೀಸ್ ಹಾಗೂ ನೆಟ್‌ವರ್ಕ್ ಅಂಡ್ ಕೊಲಾಬ್ರೇಷನ್ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತಿದ್ದರು.

ವಿಜ್ಞಾನ-ತಂತ್ರಜ್ಞಾನ-ಧರ್ಮ ಕುರಿತಂತೆ ಜಾಗತಿಕ ನೀತಿಯೊಂದನ್ನು ನಿರೂಪಿಸುವ ಅಗತ್ಯ ಇದೆ. ಪ್ರತಿಯೊಬ್ಬರೂ ಧರ್ಮ ಮಾರ್ಗದಲ್ಲೇ ನಡೆಯಬೇಕು. ಎಲ್ಲರೂ ಸುಖ-ಶಾಂತಿಯಿಂದ ಜೀವನ ನಡೆಸಬೇಕು. ಬಹುತೇಕರು ತ್ರಿವರ್ಗ ಬಗ್ಗೆ ಕೇಳಿರುವುದೇ ಇಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳಲ್ಲಿ ಮೂರು ಅಂಶಗಳು ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿದೆ ಎಂದವರು ಧರ್ಮ ಗ್ರಂಥಗಳಲ್ಲಿ ಪ್ರಸ್ತಾಪವಾಗಿರುವುದನ್ನು ಉಲ್ಲೇಖಿಸಿದರು.

ಮಹಾಭಾರತದಲ್ಲಿ ಕೌರವರು ನಿರ್ನಾಮ ಗೊಂಡಾಗ ಶ್ರೀಕೃಷ್ಣನು ಗಾಂಧಾರಿಗೆ ನೀನು ಹೇಳಿದ್ದಂತೆಯೇ ಯಥೋ ಧರ್ಮ, ತತೋ ಜಯಹ ಎಂದು ಹೇಳಿದ್ದ. ಧರ್ಮ ಇದ್ದಲ್ಲಿ ಜಯ ಇದ್ದೇ ಇರುತ್ತದೆ ಎಂದು ಸುಪ್ರೀಂಕೋರ್ಟ್‌ನ ಧ್ಯೇಯವಾಕ್ಯದಲ್ಲೂ ಹೇಳಲಾಗಿದೆ ಎಂದವರು ಬೊಟ್ಟು ಮಾಡಿದರು.

ಇಸ್ರೋ ನಿವೃತ್ತ ಪ್ರೊ. ಡಾ.ವೈ.ಎಸ್. ರಾಜನ್ ಮಾತನಾಡಿ, ಪ್ರಧಾನ ಮಂತ್ರಿಗಳ 'ಮೇಕ್ ಇನ್ ಇಂಡಿಯಾ;' ಯೋಜನೆ ಉತ್ತಮವಾಗಿದೆ. ರಕ್ಷಣಾ ಕ್ಷೇತ್ರದಲ್ಲಿ ಮೊದಲು ಶೇ.40 ಮಾತ್ರ ಆಮದು ಮಾಡಿಕೊಳ್ಳಲು ಅವಕಾಶವಿತ್ತು. ಆ ಪ್ರಮಾಣವನ್ನೀಗ ಶೇ.75ಕ್ಕೆ ಏರಿಸಲಾಗಿದೆ. ಮುಂದೊಂದು ದಿನ ವಿಜ್ಞಾನ ತಂತ್ರಜ್ಞಾನ ಮತ್ತು ರಕ್ಷಣಾ ಕ್ಷೇತ್ರದಲ್ಲಿ ಭಾರತದಿಂದ ಹೆಚ್ಚು ರಫ್ತು ಮಾಡುವಂತಾಗಬೇಕು ಎಂದರು.



ನಗರದಲ್ಲಿ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಸಮ್ಮೇಳನವನ್ನು ನಿವೃತ್ತ ನ್ಯಾ. ಡಾ.ಎಂ. ರಾಮಜೋಯಿಸ್ ಉದ್ಘಾಟಿಸಿದ ವೇಳೆ ಟಿ.ಸುವರ್ಣ ರಾಜು, ಐಎಸ್‌ಎಇ ಅಧ್ಯಕ್ಷ ಡಾ.ಬಿ.ಎನ್.ಸುರೇಶ್, ವಿಜ್ಞಾನಿ ಡಾ.ಕೋಟಾ ಹರಿನಾರಾಯಣ, ಪ್ರೊ.ಆರ್.ಎಂ.ವಾಸಗಂ, ಡಾ.ವೂಡೇ ಪಿ.ಕೃಷ್ಣ, ಡಾ.ಕೆ. ಗೋಪಾಲಕೃಷ್ಣನ್ ನಿಟ್ಟೆ, ಎನ್.ವಿನಯ್ ಹೆಗಡೆ, ಎಸ್.ಕೆ.ಶರ್ಮಾ ಮತ್ತಿತರರು ಇದ್ದರು.

ಭ್ರಷ್ಟಾಚಾರ ಹಾಗೂ ಮಹಿಳೆಯರ ಮೇಲೆ ನಡೆಯುವ ಶೋಷಣೆಯನ್ನು ತ್ರಿವರ್ಗ ಮತ್ತು ಧರ್ಮದಿಂದ ತಡೆಯಬಹುದು. ಸ್ವಾಮಿ ವಿವೇಕಾನಂದರು ಜಾಗತಿಕ ನೀತಿ ಬಗ್ಗೆ ಮಾತನಾಡಿದ್ದರು. ನಾನು ಧರ್ಮವೇ ಜಾಗತಿಕ ನೀತಿಯಾಗಬೇಕು ಎಂದು ಹೇಳುತ್ತೇನೆ. ತಂತ್ರಜ್ಞಾನಕ್ಕೂ ಮತ್ತು ಜೀವನದಲ್ಲಿ ನ್ಯಾಯವಾದಿಯಾದ ನನಗೂ ಎತ್ತಣಿತ್ತಣ ಸಂಬಂಧ ಎಂದು ಪ್ರಶ್ನಿಸುವಂತಾಗಿದೆ. ಆದರೆ, ಧರ್ಮ ಎಲ್ಲರಿಗೂ ಸಂಬಂಧಪಡುತ್ತದೆ.


–ಡಾ. ಎಂ. ರಾಮಾಜೋಯಿಸ್, ನಿವೃತ್ತ ನ್ಯಾಯಮೂರ್ತಿ

ಈ ಸಂದರ್ಭದಲ್ಲಿ ಎಚ್‌ಎಎಲ್ ಸಿಎಂಡಿ ಟಿ.ಸುವರ್ಣ ರಾಜು, ಐಎಸ್‌ಎಇ ಅಧ್ಯಕ್ಷ ಡಾ.ಬಿ.ಎನ್.ಸುರೇಶ್, ವಿಜ್ಞಾನಿ ಡಾ.ಕೋಟಾ ಹರಿನಾರಾಯಣ, ಐಟಿಸಿ ಕಂಪನಿಯ ರಾಷ್ಟ್ರೀಯ ಸಲಹಾ ಸಮಿತಿ ಅಧ್ಯಕ್ಷ ಪ್ರೊ.ಆರ್.ಎಂ.ವಾಸಗಂ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ರೊಡಕ್ಷನ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಸದಸ್ಯ ಡಾ.ಕೆ. ಗೋಪಾಲಕೃಷ್ಣನ್ ನಿಟ್ಟೆ ವಿವಿ ಕುಲಪತಿ ಎನ್.ವಿನಯ್ ಹೆಗಡೆ, ಎನ್‌ಪಿಸಿಐಎಲ್ ಸಿಎಂಡಿ ಎಸ್.ಕೆ.ಶರ್ಮಾ ಮತ್ತಿತರರು ಇದ್ದರು.

ಈ ಸಂಜೆ

01-12-2016

ಧರ್ಮವಿಲ್ಲದ ಕ್ಷೇತ್ರವಿಲ್ಲ: ರಾಮಾಜೋಯಿಸ್




ಬೆಂಗಳೂರು, ಡಿ.1- ಧರ್ಮವಿಲ್ಲದ ಕ್ಷೇತ್ರವಿಲ್ಲ. ಎಲ್ಲ ಕ್ಷೇತ್ರಕ್ಕೂ ಧರ್ಮವೇ ಮೂಲ ಆಧಾರ ಎಂದು ಮಾಜಿ ರಾಜ್ಯಪಾಲ ಡಾ.ಎಂ.ರಾಮಾಜೋಯಿಸ್ ಅಭಿಪ್ರಾಯಪಟ್ಟರು.

ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಇಂದಿನಿಂದ ಎರಡು ದಿನಗಳ ಕಾಲ ಏರ್ಪಡಿಸಿರುವ ಭಾರತೀಯ ತಾಂತ್ರಿಕ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಧರ್ಮವಿಲ್ಲದ ಬದುಕಿಲ್ಲ. ಧರ್ಮ-ಬದುಕು ಒಂದಕ್ಕೊಂದು ಪೂರಕವಾಗಿವೆ ಎಂದು ಹೇಳಿದರು.

ಧರ್ಮಾತೀತರಾಗಿ ನಡೆದುಕೊಳ್ಳಬೇಕು. ಧರ್ಮ, ಅರ್ಥ, ಕಾಮ ಇವುಗಳನ್ನು ಹತೋಟಿಯಲ್ಲಿಟ್ಟುಕೊಂಡು ನಡೆದುಕೊಂಡರೆ ಎಲ್ಲ ಕ್ಷೇತ್ರದಲ್ಲೂ ಮುಂದೆ ಬರಲು ಸಾಧ್ಯ. ಧರ್ಮದ ಆಶಯದಂತೆ ನಡೆದರೆ ಎಲ್ಲವೂ ಸಾಧ್ಯವಾಗುತ್ತದೆ ಎಂದು ಅಭಿಮತ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಡಕ್ಷನ್ ಎಂಜಿನಿಯರ್ಸ್‌ನ ರಾಷ್ಟ್ರೀಯ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ, ಐಟಿಸಿ ಸಂಘಟನಾ ಸಮಿತಿ ಅಧ್ಯಕ್ಷ ಡಾ.ಎಲ್.ವಿ.ಮುರಳಿಕೃಷ್ಣರೆಡ್ಡಿ, ಪದ್ಮಶ್ರೀ ಪುರಸ್ಕೃತ ಡಾ.ಬಿ.ಎನ್.ಸುರೇಶ್ ಮತ್ತಿತರರು ಪಾಲ್ಗೊಂಡಿದ್ದರು.

ಸಂಜೆವಾಣಿ
ಗುರುವಾರ, ಡಿಸೆಂಬರ್ 1, 2016



ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ 'ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್' ಸಮ್ಮೇಳನದಲ್ಲಿ ನಿವೃತ್ತ ನ್ಯಾ. ಡಾ. ಎಂ. ರಾಮಜೋಯಿಸ್, ಎಚ್‌ಎಎಲ್‌ನ ಸಿಎಂಡಿ ಸುವರ್ಣ ರಾಜು, ನಿಟ್ಟೆ ಅಧ್ಯಕ್ಷ ಎನ್. ವಿನಯ್ ಹೆಗಡೆ ಮತ್ತಿತರರು ಇದ್ದಾರೆ.

ಧರ್ಮ ಜಾಗತಿಕ ನೀತಿ ಪ್ರತಿಪಾದಿಸಿದ ನ್ಯಾ. ಜೋಯಿಸ್

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಡಿ. 1– ವಿಜ್ಞಾನ ಮತ್ತು ತಂತ್ರಜ್ಞಾನದ ಎಲ್ಲ ಸಮಸ್ಯೆಗಳಿಗೂ ಪರಿಹಾರ ಒದಗಿಸುವ ಧರ್ಮ ಹಾಗೂ ಜಾಗತಿಕ ನೀತಿ ಆಗಬೇಕು ಎಂದು ನಿವೃತ್ತ ನ್ಯಾಯಮೂರ್ತಿ ಡಾ. ಎಂ. ರಾಮಜೋಯಿಸ್ ಇಂದಿಲ್ಲಿ ಅಭಿಪ್ರಾಯಪಟ್ಟರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ 2016 ಎರಡು ದಿನದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸ್ವಾಮಿ ವಿವೇಕಾನಂದರು ಜಾಗತಿಕ ನೀತಿ ಬಗ್ಗೆ ಮಾತನಾಡಿದ್ದರು. ನಾನು ಧರ್ಮ ಜಾಗತಿಕ ನೀತಿಯಾಗಬೇಕು ಎಂದು ಹೇಳುತ್ತೇನೆ ಎಂದವರು ಪ್ರತಿಪಾದಿಸಿದರು.

ಈ ತಂತ್ರಜ್ಞಾನಕ್ಕೂ ಮತ್ತು ಜೀವನದಲ್ಲಿ ವಕೀಲ ಹಾಗೂ ನ್ಯಾಯವಾದಿಯಾದ ನನಗೂ ಎಲ್ಲಿಯ ಸಂಬಂಧ ಎನ್ನುವುದೇ ಇತ್ತು. ಆದರೆ, ಧರ್ಮ ಎಲ್ಲರಿಗೂ ಸಂಬಂಧಪಡುವುದರಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ ಎಂದವರು ಹೇಳಿದರು.

ಮಹಾಭಾರತದಲ್ಲಿ ಶ್ರೀ ಕೃಷ್ಣ ಕೌರವರು ನಿರ್ನಾಮಗೊಂಡಾಗ ಗಾಂಧಾರಿಗೆ ನೀನು ಹೇಳಿದ್ದಂತೆಯೇ ಯಥೋ ಧರ್ಮ, ತತೋ ಜಯಹ...ಎಂದು ಹೇಳಿದಿದ್ದೆ. ಅದೇ ಯಥೋ ರಾಜ ತತೋ ಜಯ...ಇದನ್ನೆ ಎಮ್‌ಲಮ್ ಆಗಿ ಸುಪ್ರೀಂಕೋರ್ಟ್‌ನಲ್ಲಿ ಬಳಸಿರುವುದನ್ನು ಅವರು ಉಲ್ಲೇಖಿಸಿದರು.

ಧರ್ಮವೆನ್ನುವುದು ಎಲ್ಲ ಮಾನವ ವರ್ಗಕ್ಕೂ ಅನ್ವಯಿಸುವಂತಿದೆ ಎಂದವರು ಹೇಳುವ ಜೊತೆಗೆ ತ್ರಿವರ್ಗ ಎನ್ನುವುದನ್ನು ಶಿಕ್ಷಣದಲ್ಲಿ ಅಳವಡಿಸಬೇಕು ಎಂದು ಅಭಿಪ್ರಾಯಪಟ್ಟರು.

ತ್ರಿವರ್ಗ ಈ ಪದವನ್ನು ಬಹುತೇಕರು ಕೇಳಿರುವುದೇ ಇಲ್ಲ. ಇದರ ಅರ್ಥ ಧರ್ಮ, ಅರ್ಥ ಕಾಮ ಎನ್ನುವುದಾಗಿದೆ ಎಂದ ಅವರು, ಈ ಬಗ್ಗೆ ಧರ್ಮ ಗ್ರಂಥಗಳಲ್ಲಿ ಪ್ರಸ್ತಾಪವಾಗಿರುವುದನ್ನು ಉಲ್ಲೇಖಿಸಿದರು. ವಾಲ್ಮೀಕಿ ಮತ್ತು ವ್ಯಾಸರು ಕೂಡ ಬರೆದಿರುವುದನ್ನು ತಿಳಿಸಿದರು.

ತ್ರಿವರ್ಗ ಮತ್ತು ಧರ್ಮದಿಂದ ಭ್ರಷ್ಟಾಚಾರ ಸ್ತ್ರೀ ಮೇಲೆ ನಡೆಯುವ ಶೋಷಣೆ ಇವುಗಳನ್ನು ತಡೆಯಬಹುದು ಎನ್ನುವುದನ್ನು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಎಚ್‌ಎಎಲ್‌ನ ಸಿಎಂಡಿ ಸುವರ್ಣರಾಜು, ನಿಟ್ಟೆ ಅಧ್ಯಕ್ಷರಾದ ಎನ್. ವಿನಯ ಹೆಗಡೆ, ಎನ್.ಪಿ.ಸಿ.ಐ.ಎಲ್‌ನ ಸಿಎಂಡಿ ಎಸ್.ಕೆ ಶರ್ಮ ಅವರನ್ನು ಸನ್ಮಾನಿಸಲಾಯಿತು.

ಐಪಿಸಿ –2016 ಸಂಘಟನಾ ಸಮಿತಿ ಅಧ್ಯಕ್ಷ ಡಾ. ಎಲ್.ವಿ ಮುರುಳಿಕೃಷ್ಣ ರೆಡ್ಡಿ ಸ್ವಾಗತಿಸಿ ಇಂಡಿಯನ್ ಇನ್ಸಿಟಿಟ್ಯೂಷನ್ ಆಫ್ ಕನೆಕ್ಷನ್ ಇಂಜಿನಿಯರ್ಸ್‌ನ ಅಧ್ಯಕ್ಷ ಡಾ. ವುಡೇ ಪಿ ಕೃಷ್ಣ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು.

ಈ ಸಂಜೆ
ಸೋಮವಾರ, 28-11-2016




ಶ್ರೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ನಡೆದ 61ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಹಿರಿಯ ಸಾಹಿತಿ ಡಾ.ಎನ್.ಕೆ.ರಾಮಶೇಷನ್, ದತ್ತಿ ಸಮಿತಿ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌ.ಪ್ರ.ಕಾರ್ಯದರ್ಶಿ ವೂಡೆ. ಪಿ.ಕೃಷ್ಣ ಜಿ.ಪರಮಶಿವಯ್ಯ, ಪ್ರಾಂಶುಪಾಲ ಪ್ರೊ.ಆರ್.ಮಹಾಲಕ್ಷ್ಮಿ ಪಾಲ್ಗೊಂಡಿದ್ದರು.

ಇವತ್ತಿನ ಸಂಸ್ಕೃತಿ, ಪರಂಪರೆ ಗಾಂಧಿ ತತ್ವದಿಂದ ಹೊರಗಡೆ ಹೋಗಿದೆ: ಪ್ರೊ.ಡೇ.ಪಿ.ಕೃಷ್ಣ.

[illegible] ಪರಂಪರೆ ಗಾಂಧಿ [illegible] ಹೊರಗಡೆ ಹೋಗಿದೆ [illegible] ಸಂಸ್ಥೆಯ [illegible] ಪ್ರೊ.ಡೇ.ಪಿ.ಕೃಷ್ಣ [illegible] ಶೇಷಾದ್ರಿಪುರಂ [illegible]

[illegible] ಮಾತ್ರವೆಂದರು. [illegible] ನಮ್ಮ ಮುಂದಿನ [illegible] ಇಂತಹ [illegible] ಹೆಚ್ಚುಹೆಚ್ಚಾಗಿ ನಡೆಯಬೇಕು [illegible] ಸತ್ಯ, ತಾಳ್ಮೆ ಮತ್ತು



ಉತ್ತಮ ತತ್ವಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ಹೆಣ್ಣು ಅಬಲೆಯಲ್ಲ ಅವಳು ಸಬಲೆಯೆಂದು ಗಾಂಧಿಜಿಯವರು ಹೇಳುತ್ತಿದ್ದು ಸ್ತ್ರೀಸ್ವತಂತ್ರ್ಯಕ್ಕೆ ಅವರು ಒತ್ತಾಸೆಯಾಗಿದ್ದರು.

ಹಂಸ ಸಮ್ಮಾನ ವನ್ನು ಕೆನರಾಬ್ಯಾಂಕ್ ಪ್ರಯೋಜಿತ ಕೆ.ಪಿ.ಜೆ.ಪ್ರಭು ಕರಕುಶಲ ತರಬೇತಿ ಸಂಸ್ಥೆಯ ಸಮಾಜ ಸೇವಕಿ ಸರೋಜ.ಕೆ.ಎಂ.ನಂಜಪ್ಪ, ಯೋಗಶಿಕ್ಷಕಿ ಹಾಗೂ ಸಾಮಾಜಿಕ ಕಾರ್ಯಕರ್ತೆ ದುರ್ಗಾ ಶಂಕರ್, ದೃಶ್ಯ ತಾಂತ್ರಿಕ ತಜ್ಞರಾದ ಎನ್.ರಾಮಕೃಷ್ಣ, ಧ್ವನಿ ವಿಶೇಷ ತಜ್ಞರಾದ.ಎಂ.ನಂಜುಂಡಪ್ಪ ರವರಿಗೆ ಪ್ರದಾನ ಮಾಡಲಾಯಿತು ಇದೆ ಸಂದರ್ಭದಲ್ಲಿ ನಿವೃತ್ತ ಪ್ರಾಂಶುಪಾಲರಾದ ಹೆಚ್.ಎಸ್.ಮಾರಾಠೆ ಸೇರಿದಂತೆ ಮತ್ತಿತರರನ್ನು ಸಹ ಸನ್ಮಾನಿಸಲಾಯಿತು.

ಗಾಂಧಿಜಿಗೆ ಹಂಸ ನೃತ್ಯ ನಮನವನ್ನು ಶೇಷಾದ್ರಿಪುರಂ ಕಾಲೇಜಿನ ಆರು ತಂಡಗಳು ನಡೆಸಿಕೊಟ್ಟರೆ, ಗೀತನಮನವನ್ನು ಆರ್.ಮಹೇಂದ್ರಕುಮಾರ್, ಎಂ.ಎಸ್.ನಿತ್ಯಶ್ರೀ, ದಿಶಾ.ಎಸ್.ಜೈನ್, ಹಾಗೂ ಹೆಚ್.ಕೆ.ಚಂದ್ರಹಾಸ ಅವರು ನೆಡಸಿಕೊಟ್ಟರು. ಸಮೂಹ ಗಾಯನವನ್ನು ಸೃಜನ ಸಂಗೀತ ಶಾಲೆಯ ವಿದ್ಯಾರ್ಥಿಗಳು ನೆಡಸಿಕೊಟ್ಟರು.

ಅ.ನಾ.ಪ್ರಹ್ಲಾದರಾವ್ ರವರ ಸತ್ಯಮೇವ ಜಯತೆ ರೂಪ ನಾಟಕವನ್ನು ಮು.ಮುರಳೀಧರ ಅವರ ನಿರ್ದೇಶನದಲ್ಲಿ ಪ್ರಸ್ತುತ ಪಡಿಸಲಾಯಿತು.

ಸಮಾರಂಭದಲ್ಲಿ ಶಾಸಕ ಎಸ್.ಟಿ.ಸೋಮಶೇಖರ್,ಪಾಲಿಕೆ ಸದಸ್ಯ ಪಿ.ವಿ.ಸತ್ಯನಾರಾಯಣ,ಪ್ರಾಂಶುಪಾಲರಾದ ಪ್ರೋ.ಜಯರಾಮ್,ಡಾ.ಆರ್.ವಿ.ಸತೀಶ್, ಎಸ್ಇಟಿ ಟ್ರಸ್ಟ್‌ನ ರಾಜಗೋಪಾಲ್, ಎಮ್.ವಿ.ಶೇಷಾದ್ರಿ,ಹಂಸಜ್ಯೋತಿಯ ಸಂಸ್ಥಾಪಕ ಕಾರ್ಯದರ್ಶಿ ಮು.ಮುರಳೀಧರ,ಗೌ.ಅಧ್ಯಕ್ಷ ಮಾಜಿ ಶಾಸಕ ಬಾಲರಾಜ್,ಅಧ್ಯಕ್ಷ ಎ.ಶಿವರಾಂ,ಗಗನಶ್ರೀ ಮುರಳೀಧರ ಸೇರಿದಂತೆ ಅನೇಕ ಗಣ್ಯರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು,

ಕಾರ್ಯಕ್ರಮ ವನ್ನು ಜಯಶ್ರೀ ಸಾಗರ್ ನಿರೂಪಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ಕೆನರಾಬ್ಯಾಂಕ್,ಯುನಿಯನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಸಾಯಿಸೂರ್ಯ ಹೋಲ್ಡಿಂಗ್ಸ್ ಹಾಗೂ ಆ.ಕ.ವಿ.ಭಾ.ಸಂಘವು ಪ್ರಯೋಜಿಸಿತ್ತು.

ಹೊಸ ದಿಗಂತ

ಬೆಂಗಳೂರು
ಬುಧವಾರ, 16 ನವೆಂಬರ್ 2016

ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ಕೆ.ಜಯರಾಜ್ ವಿಷಾದ

ಸಾರ್ವಜನಿಕರ ಹಿತ ಕಾಪಾಡುವಲ್ಲಿ ಆಡಳಿತ ವ್ಯವಸ್ಥೆ ವಿಫಲ

ಬೆಂಗಳೂರು: ಇಂದಿನ ಆಡಳಿತ ವ್ಯವಸ್ಥೆ ಸಾರ್ವಜನಿಕರ ಹಿತ ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಗಾಂಧಿಜಿಯ ಸಾರ್ವಜನಿಕ ಹಿತದ ಪರಿಕಲ್ಪನೆ ಇಂದಿನ ದಿನಗಳಲ್ಲಿ ಮರೆಯಾಗಿದೆ ಎಂದು ಸರ್ಕಾರದ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ಕೆ.ಜಯರಾಜ್ ವಿಷಾದ ವ್ಯಕ್ತಪಡಿಸಿದರು.

ನಗರದ ಸಂಸ ಬಯಲು ರಂಗ ಮಂದಿರದಲ್ಲಿ ವಾರ್ತಾ ಮತ್ತು ಸ್ವಾರ್ವಜನಿಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಯಿಂದ ಆಯೋಜಿಸಿದ್ದ ಮಹಾತ್ಮ ಗಾಂಧಿ ಮತ್ತು ಸಿನಿಮಾ ಹಾಗೂ ಅ.ನ.ಪ್ರಹ್ಲಾದರಾವ್ ಅವರು ರಚಿಸಿರುವ ಬಿ.ಆರ್.ಪಂತುಲು ಕುರಿತ ದಣಿವಿಲ್ಲದ ಧಣಿ ಪುಸ್ತಕ ಮತ್ತು ಕನ್ನಡದ ಮೊದಲ ಮೇಸ್ಟ್ರು ಸಾಕ್ಷ್ಯಚಿತ್ರ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದಿನ ಕಾನೂನುಗಳು ಸಾರ್ವಜನಿಕ ಹಿತದೃಷ್ಟಿಯನ್ನು ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿವೆ. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಉಳುವವನಿಗೆ ಭೂ ಒಡೆಯ ಹಾಗೂ ಮಾಜಿ ಸಚಿವ ಬಸವಲಿಂಗಪ್ಪ ಅವರುಗಳ ಕಾಲದಲ್ಲಿ ಅನೇಕ ರೀತಿಯ ಜನಪರ ಯೋಜನೆ, ಕಾನೂನುಗಳನ್ನು ಜಾರಿ ಮಾಡಿ ಜನತೆಯ ಹಿತ ಕಾಯುತ್ತಿದ್ದರು, ಆದರೆ ಇಂದಿನ ಪರಿಸ್ಥಿತಿ ಬದಲಾಗಿದೆ ಎಂದು ಹೇಳಿದರು.



ಮಹಾತ್ಮ ಗಾಂಧಿ ಮತ್ತು ಸಿನಿಮಾ ಹಾಗೂ ಅ.ನ.ಪ್ರಹ್ಲಾದರಾವ್ ಅವರು ರಚಿಸಿರುವ ಬಿ.ಆರ್.ಪಂತುಲು ಕುರಿತ ದಣಿವಿಲ್ಲದ ಧಣಿ ಪುಸ್ತಕ ಮತ್ತು ಕನ್ನಡದ ಮೊದಲ ಮೇಸ್ಟ್ರು ಸಾಕ್ಷ್ಯಚಿತ್ರ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಗಣ್ಯರು.

ಕೆಲ ವರ್ಷಗಳ ಹಿಂದೆ ಜನಪ್ರತಿನಿಧಿಗಳು ಕಡಿಮೆ ಖರ್ಚಿನಲ್ಲಿ ಚುನಾವಣೆಯನ್ನು ಎದುರಿಸುತ್ತಿದ್ದರು. ಆದರೆ ಇಂದು ಚುನಾವಣೆಗೆ ಕೋಟ್ಯಾಂತರ ಹಣವನ್ನು ಸುರಿಯುತ್ತಾರೆ. ಈ ಸಂದರ್ಭದಲ್ಲಿ ಆಡಳಿತ ಯಂತ್ರ ಜನರ ಹಿತ ಕಾಯಲು ಸಾಧ್ಯವಾಗದು ಎಂದು ಹೇಳಿದರು.

ಪತ್ರಕರ್ತ ಜೋಗಿ ಮಾತನಾಡಿ, ಪಂತುಲು ಅವರು ತಮ್ಮ ಕಾಲದಲ್ಲಿ ಅನೇಕ ಸವಾಲುಗಳನ್ನು ಎದುರಿಸಿ ಗೆದ್ದಿದ್ದರು. ಆದರೆ ಇಂದಿನ ಚಲನಚಿತ್ರ ನಿರ್ದೇಶಕರು 3-4 ಸಿನೆಮಾಗಳನ್ನು ನಿರ್ದೇಶಿಸಿದ ನಂತರ ಸುಸ್ತಾಗಿ ಹೋಗುತ್ತಾರೆ. ಪಂತುಲು ಅವರು ಸವಾಲುಗಳನ್ನು ಸ್ವೀಕರಿಸುವ ಮೂಲಕ ಎಲ್ಲ ಕಾಲದಲ್ಲಿಯೂ ಹಸನ್ಮುಖಿಯಾಗಿ ಗುರುತಿಸಿಕೊಂಡ ವ್ಯಕ್ತಿಯಾಗಿದ್ದಾರೆ. ಪಂತಲು ಅವರು ಇಂದಿನ ನಿರ್ದೇಶಕರಿಗೆ ಮಾದರಿ. ಅವರ ಚಿತ್ರದ ಮೂಲಕ ಮಾನವೀಯ ಮೌಲ್ಯಗಳನ್ನು ಕಲಿಸಿದ್ದಾರೆ. ಸಂಬಂಧವನ್ನು ಗಟ್ಟಿಗೊಳಿಸುವ, ಸಾಹಿತ್ಯ ಮತ್ತು ಸಿನಿಮಾವನ್ನು ಜೊತೆಯಾಗಿ ನೋಡುವ ಚಲನಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ ಎಂದು ಹೊಗಳಿದರು.

ನಟಿ ಭಾರತಿ ವಿಷ್ಣುವರ್ಧನ್, ಕರ್ನಾಟಕ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಕೃಷ್ಣ ಎನ್.ಆರ್.ವಿಶುಕುಮಾರ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್.ವಿ.ರಾಜೇಂದ್ರಸಿಂಗ್ ಬಾಬು, ಲೇಖಕ ಅ.ನಾ.ಪ್ರಹ್ಲಾದರಾವ್ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಶುಕ್ರವಾರ
11 ನವೆಂಬರ್ 2016
11 NOVEMBER 2016

ಗಾಂಧೀಜಿಗೆ ಸಮಾಜವೇ ಕುಟುಂಬ

ವಿಮರ್ಶಕ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅಭಿಮತ » 'ಬೆಸುಗೆಯ ಬಂಧನದಲ್ಲಿ' ಕೃತಿ ಲೋಕಾರ್ಪಣೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಗಾಂಧೀಜಿ ಸಮಾಜವನ್ನೇ ಕುಟುಂಬ ಎಂದು ನಂಬಿದ್ದವರು. ಮಡದಿಯಲ್ಲಿ (ಕಸ್ತೂರ ಬಾ) ತಾಯಿಯನ್ನು, ಗೃಹಿಣಿಯನ್ನು, ಸಾಧನೆಗೆ ಪ್ರೇರೇಪಿಸುವ ಸ್ವತಂತ್ರ ವ್ಯಕ್ತಿತ್ವವನ್ನು ಅವರು ಕಂಡಿದ್ದರು ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ, ವಿಜಯವಾಣಿ ಅಂಕಣಕಾರ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದ್ದಾರೆ.

» **ಅಮರ ಬಾಪು ಚಿಂತನ, ಸೃಷ್ಟಿ ಕಲ್ಚರಲ್ ಫೌಂಡೇಷನ್ ಸಹಯೋಗದಲ್ಲಿ ಆಯೋಜನೆ**

ಅಮರ ಬಾಪು ಚಿಂತನ, ಸೃಷ್ಟಿ ಕಲ್ಚರಲ್ ಫೌಂಡೇಷನ್ ಸಹಯೋಗದಲ್ಲಿ ಕಸಾಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದೇಸಿ ಪುಸ್ತಕ ಪ್ರಕಟಿಸಿರುವ ಡಾ. ವಿಜಯಾ ಸುಬ್ಬರಾಜ್ ಬರೆದಿರುವ 'ಬೆಸುಗೆಯ ಬಂಧನದಲ್ಲಿ' ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು.

ಗಾಂಧೀಜಿ ಬಗ್ಗೆ ಹಲವು ಕೃತಿಗಳು ಬಂದಿದ್ದರೂ ಗಾಂಧೀಜಿ ಮತ್ತು ಕಸ್ತೂರಬಾ ಕುರಿತ ಬಂದ ಮೊದಲ ಕಾದಂಬರಿ 'ಬೆಸುಗೆಯ ಬಂಧನದಲ್ಲಿ' ಎಂದು ಗುರುತಿಸಬಹುದು. ಕನ್ನಡ ಸೇರಿ ತೆಲುಗು, ತಮಿಳು, ಮಲಯಾಳಂ, ಹಿಂದಿ ಯಾವ ಭಾಷೆಯಲ್ಲೂ ಇವರ ದಾಂಪತ್ಯದ ಕುರಿತು ವಿವರವಿರುವ ಕೃತಿ ಹೊರಬಂದಿಲ್ಲ. ಬಹುತೇಕ ಕಡೆ ಗಾಂಧೀಜಿಗೆ ಮಾತ್ರ ಆದ್ಯತೆ ನೀಡಲಾಗುತ್ತದೆ. ಆದರೆ, ಗಾಂಧಿ ಸಾಧನೆಗೆ ಸ್ಫೂರ್ತಿಯಾಗಿದ್ದ ಕಸ್ತೂರಬಾ ಮನಸ್ಥಿತಿ, ಪಟ್ಟ ಮಾನಸಿಕ ಹಿಂಸೆ, ತುಮುಲಗಳು ಬಹಳ ಜನರಿಗೆ ತಿಳಿದಿಲ್ಲ. ಅವರೊಳಗಿನ ತುಡಿತ ಕಟ್ಟಿಕೊಡುವಲ್ಲಿ ಡಾ. ವಿಜಯಾ ಸುಬ್ಬರಾಜ್ ಯಶಸ್ವಿಯಾಗಿದ್ದಾರೆ ಎಂದರು.



ವಿಜಯವಾಣಿ ಚಿತ್ರ

'ಬೆಸುಗೆಯ ಬಂಧನದಲ್ಲಿ' ಕೃತಿ ಲೋಕಾರ್ಪಣೆ ವೇಳೆ ಜಿ. ಸುಶೀಲಮ್ಮ, ಎಚ್.ಎಸ್. ದೊರೆಸ್ವಾಮಿ, ಡಾ. ವೂಡೇ ಪಿ. ಕೃಷ್ಣ, ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ವಿಜಯಾ ಸುಬ್ಬರಾಜ್ ಉಪಸ್ಥಿತರಿದ್ದರು.

> ಇದುವರೆಗೂ ಗಾಂಧೀಜಿ ವೈಯಕ್ತಿಕ ಹಾಗೂ ಕೌಟುಂಬಿಕ ಜೀವನದ ಕುರಿತಾಗಿಯೇ ಇರುವ ಪುಸ್ತಕ ಬಂದಿಲ್ಲದಿದ್ದರೂ ಕೆಲವು ಕೃತಿಗಳಲ್ಲಿ ಪ್ರಸ್ತಾಪಿಸಲಾಗಿತ್ತು. ಆ ತುಣುಕುಗಳನ್ನೆಲ್ಲ ಸೇರಿಸಿ ಜೀವನಚರಿತ್ರೆಯಾಗಿ ಹೊರತರಲಾಗಿದೆ.
>
> । ಎಚ್.ಎಸ್ ದೊರೆಸ್ವಾಮಿ ಸ್ವಾತಂತ್ರ್ಯ ಹೋರಾಟಗಾರ

ಲೋಕಧರ್ಮ ಮತ್ತು ಕುಟುಂಬ ಧರ್ಮ ಎರಡೂ ಮುಖಾಮುಖಿಯಾದಾಗ ಸಂಘರ್ಷಗಳು ಅನಿವಾರ್ಯವಾಗುತ್ತದೆ. ಅಂತಹ ಸಂಗತಿಗಳು ಗಾಂಧೀಜಿ ಮತ್ತು ಕಸ್ತೂರಬಾ ಮಧ್ಯೆ ನಡೆದಿಲ್ಲ. ಗಾಂಧೀಜಿ ಕೌಟುಂಬಿಕ ಸುಖಗಳನ್ನು ತ್ಯಜಿಸಿ ಲೋಕಧರ್ಮದೆಡೆಗೆ ಹೆಜ್ಜೆಹಾಕಿದ್ದರು. ಕಸ್ತೂರ ಬಾ ಅವರಿಗೆ ಒಂದೆಡೆ ಸಂಸಾರ ಮತ್ತು ಮಕ್ಕಳನ್ನು ತ್ಯಜಿಸಿರುವ ದುಃಖವಿದ್ದರೂ ಪತಿಯ ಜತೆಗೆ ಹೆಜ್ಜೆ ಹಾಕಿದವರು ಎಂದು ಹೇಳಿದರು.

ಗರ್ಭಗುಡಿಯ ದೇವತೆ: ಕೃತಿಯ ಲೇಖಕಿ ಡಾ. ವಿಜಯಾ ಸುಬ್ಬರಾಜ್ ಮಾತನಾಡಿ, ಗಾಂಧೀಜಿ ಉತ್ಸವ ಮೂರ್ತಿಯಾದರೆ, ಕಸ್ತೂರಬಾ ಗರ್ಭಗುಡಿಯಲ್ಲಿರುವ ದೇವತೆ. ಆದರೆ, ಆಲದ ಮರ ಹೇಗೆ ತನ್ನ ಕೆಳಗೆ ಬೇರೆ ಗಿಡಗಳನ್ನು ಬೆಳೆಯಲು ಬಿಡುವುದಿಲ್ಲವೋ ಹಾಗೇ, ಗಂಡನ ಪ್ರಭಾವದ ಮುಂದೆ ಕಸ್ತೂರಬಾ ಅವರ ವ್ಯಕ್ತಿತ್ವ ಕಳೆದುಹೋಯಿತು. ಮಗ- ಸೊಸೆ- ಗಂಡನ ನಡುವೆ ಸಿಕ್ಕಿಕೊಂಡು ಮಾನಸಿಕವಾಗಿ ಕುಗ್ಗಿಹೋಗಿದ್ದರು. ಗಾಂಧೀಜಿ ಕುರಿತು ನೂರಾರು ಕೃತಿ ಬಂದಿವೆ. ಅಲ್ಲೆಲ್ಲ ಕಸ್ತೂರಬಾ ನಗಣ್ಯರಾಗಿಯೇ ಉಳಿದರು. ಗಾಂಧೀಜಿ ಆತ್ಮಕಥೆಯಲ್ಲೂ ಪತ್ನಿಯ ಕುರಿತು ಹೆಚ್ಚು ಉಲ್ಲೇಖಿಸಿಲ್ಲ ಎಂದರು.

ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಜಿ. ಸುಶೀಲಮ್ಮ, ಶೇಷಾದ್ರಿಪುರ ಶಿಕ್ಷಣ ದತ್ತಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಇದ್ದರು.

ವಿಜಯ ಕರ್ನಾಟಕ

ಶುಕ್ರವಾರ, 11 ನವೆಂಬರ್ 2016

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅಭಿಮತ

ಗಾಂಧೀಜಿ ಎಂಬ ಐಕಾನ್‌ಗೆ ಕಸ್ತೂರಬಾ ಪ್ರೇರಣೆ

■ ವಿಕ ಸುದ್ದಿಲೋಕ ಬೆಂಗಳೂರು

ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ ಎಂಬ ಕಾರಣಕ್ಕೆ ಗಾಂಧೀಜಿಯವರು ಒಂದು ವಿಶೇಷ ಐಕಾನ್ ಆಗಿದ್ದಾರೆ. ಆದರೆ ಈ ಐಕಾನ್‌ಗೆ ಪ್ರೇರಣೆ ನೀಡಿದ್ದು ಕಸ್ತೂರ ಬಾ ಎಂದು ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಮರ ಬಾಪು ಚಿಂತನ ಸಂಸ್ಥೆ, ಸೃಷ್ಟಿ ಕಲ್ಚರಲ್ ಫೌಂಡೇಷನ್ ಸಹಯೋಗದೊಂದಿಗೆ' ಹೊರತಂದಿರುವ ಡಾ. ವಿಜಯಾ ಸುಬ್ಬರಾಜ್ ಅವರ 'ಬೆಸುಗೆಯ ಬಂಧನದಲ್ಲಿ ಬಾ ಮತ್ತು ಬಾಪು ದಾಂಪತ್ಯ ಕಥನ' ಪುಸ್ತಕ ಬಿಡುಗಡೆ ಮಾಡಿ ಬುಧವಾರ ಅವರು ಮಾತನಾಡಿದರು.

''ಕಸ್ತೂರ ಬಾ ಧರ್ಮವಾದರೆ, ಗಾಂಧಿ ಲೋಕಧರ್ಮವಾಗಿದ್ದರು. ಹೀಗಿದ್ದಾಗ ಸಂಘರ್ಷಗಳು ಅನಿವಾರ್ಯವಾಗುತ್ತವೆ. ಆದರೆ ಗಾಂಧೀಜಿ ಮತ್ತು ಕಸ್ತೂರಬಾರ ಜೀವನದಲ್ಲಿ ಅಂತಹ ಸಂಘರ್ಷಗಳು



ಅಮರ ಬಾಪು ಚಿಂತನ ಸಂಸ್ಥೆ, ಸೃಷ್ಟಿ ಕಲ್ಚರಲ್ ಫೌಂಡೇಷನ್ ಸಹಯೋಗದೊಂದಿಗೆ ಹೊರತಂದಿರುವ ಡಾ. ವಿಜಯಾ ಸುಬ್ಬರಾಜ್ ಅವರ 'ಬೆಸುಗೆಯ ಬಂಧನದಲ್ಲಿ ಬಾ ಮತ್ತು ಬಾಪು ದಾಂಪತ್ಯ ಕಥನ' ಪುಸ್ತಕವನ್ನು ಬುಧವಾರ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಬಿಡುಗಡೆ ಮಾಡಲಾಯಿತು.

ಇರಲಿಲ್ಲವಾದರೂ ಕಸ್ತೂರಬಾ ಉರಿಯುವ ಕೆಂಡದ ಮೇಲೆ ನಿಂತ ರೀತಿ ಕಷ್ಟಗಳನ್ನು ಅನುಭವಿಸಿದ್ದಾರೆ. ಇಂತಹ ಹತ್ತಾರು ವಿಚಾರಗಳನ್ನು ಲೇಖಕಿ ವಿಜಯಾ ಸುಬ್ಬರಾಜ್ ರವರು ಕಸ್ತೂರಬಾ-ಗಾಂಧೀಜಿಯವರ ದಾಂಪತ್ಯ ಜೀವನ ಕುರಿತ ಕೃತಿಯಲ್ಲಿ ಸಮಗ್ರವಾಗಿ ಓದುಗರಿಗೆ ಉಣಬಡಿಸಿದ್ದಾರೆ,''ಎಂದರು.

ಲೇಖಕಿ ವಿಜಯಾ ಸುಬ್ಬರಾಜ್ ಮಾತನಾಡಿ, 'ಗಾಂಧೀಜಿ ಉತ್ಸವ ಮೂರ್ತಿಯಾದರೆ, ಕಸ್ತೂರಬಾ ಗರ್ಭಗುಡಿಯಲ್ಲಿರುವ ದೇವರು. ಆದರೆ ಕಸ್ತೂರಬಾ ಅವರ ಕಷ್ಟ-ಕಾರ್ಪಣ್ಯಗಳು, ಆಕೆಯ ಶ್ರಮ, ತಾಳ್ಮೆ, ಗಾಂಧೀಜಿಯವರಿಗೆ ಬೆಂಬಲವಾಗಿ ನಿಂತ ರೀತಿ ಇದಾವುದೂ ಹೆಚ್ಚು ಪ್ರಚಲಿತಕ್ಕೆ ಬರಲಿಲ್ಲ, ಗಾಂಧೀಜಿಯವರ ಬಗ್ಗೆ ರಾಶಿ ರಾಶಿ ಪುಸ್ತಕಗಳು, ಲೇಖನಗಳು ಬಂದಿವೆ. ಆದರೆ ಕಸ್ತೂರಬಾ ಬಗ್ಗೆ ಮಾತ್ರ ಬರಲಿಲ್ಲ, ಅಷ್ಟೇ ಏಕೆ, ಗಾಂಧೀಜಿಯವರು ಬರೆದ ಆತ್ಮಕಥೆಯಲ್ಲೂ ಪತ್ನಿಯ ಕುರಿತಾದ ಹಲವು ವಿಚಾರಗಳು ಉಲ್ಲೇಖವಾಗಿಲ್ಲ, ಗಾಂಧಿಜಿಯವರು ಬೃಹತ್ ಆಲದ ಮರವಾಗಿದ್ದರು. ಆದರ ನೆರಳಲ್ಲಿ ಈಕೆ ಬೆಳೆಯಲು ಸಾಧ್ಯವಾಗಲಿಲ್ಲ, ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ರಾಜಕೀಯ ವಿಚಾರಗಳನ್ನು ಹೆಚ್ಚು ತಿಳಿಯಲಿಲ್ಲ. ಇವರ ಕುರಿತಾದ ಒಂದು ಕೃತಿಯನ್ನು ಹೊರತರಬೇಕು ಎಂಬ ಆಸೆಯಿಂದ ಇದೀಗ ಈ ಕೃತಿಯನ್ನು ಬರೆದಿದ್ದೇನೆ,''ಎಂದು ನುಡಿದರು.

ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಸುಮಂಗಲ ಸೇವಾಶ್ರಮದ ಅಧ್ಯಕ್ಷೆ ಜಿ. ಸುಶೀಲಮ್ಮ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ
ಶುಕ್ರವಾರ, 11, ನವೆಂಬರ್, 2016 ಬೆಂಗಳೂರು



ಲೇಖಕಿ ಡಾ.ವಿಜಯಾ ಸುಬ್ಬರಾವ್ ಅವರ "ಬೆಸುಗೆಯ ಬಂದನದಲ್ಲಿ" ಪುಸ್ತಕವನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್ ದೊರೆಸ್ವಾಮಿ ಲೋಕಾರ್ಪಣೆಗೊಳಿಸಿದರು. ಆ ವೇಳೆ ವಿಶ್ರಾಂತ ಕುಲಪತಿ ಪ್ರೊ.ಮಲ್ಲೆಪುರಂ ಮತ್ತಿತರರು ಉಪಸ್ಥಿತರಿದ್ದರು.

vishwavani.news
10.11.2016
ಗುರುವಾರ

ಗಾಂಧಿ ಮಹಾತ್ಮನಾಗಲು ಕಸ್ತೂರಬಾ ಪ್ರೇರಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



'ಬೆಸುಗೆಯ ಬಂಧನದಲ್ಲಿ ಬಾ ಮತ್ತು ಬಾಪು' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಎಚ್.ಎಸ್. ದೊರೆಸ್ವಾಮಿ, ಮಲ್ಲೇಪುರಂ ಜಿ.ವೆಂಕಟೇಶ್, ಜಿ.ಸುಶೀಲಮ್ಮ ಹಾಗೂ ಡಾ.ವೂಡೇ ಪಿ.ಕೃಷ್ಣ

ಗಾಂಧಿಜೀ ಆಶ್ರಮ ಹಾಗೂ ಸ್ವಾತಂತ್ರ್ಯ ಹೋರಾಟದ ಮೂಲಕ ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದರೆ, ಕುಟುಂಬದಲ್ಲಿ ಎಂತಹ ಘರ್ಷಣೆಗಳು ನಡೆದರೂ ಕಸ್ತೂರ ಬಾ ಗಾಂಧಿಜೀಯವರಿಗೆ ಪ್ರೇರಕ ಶಕ್ತಿಯಾಗಿದ್ದರು ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಹೇಳಿದರು.


ಬುಧವಾರ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಮರ ಬಾಪು ಚಿಂತನ ಸಂಸ್ಥೆ, ಸೃಷ್ಟಿ ಕಲ್ಚರಲ್ ಫೌಂಡೇಷನ್ ಸಹಯೋಗದೊಂದಿಗೆ ಹೊರತಂದಿರುವ ಡಾ.ವಿಜಯಾ ಸುಬ್ಬರಾಜ್ ಅವರ 'ಬೆಸುಗೆಯ ಬಂಧನದಲ್ಲಿ ಬಾ ಮತ್ತು ಬಾಪು ದಾಂಪತ್ಯ ಕಥನ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು. ಲೋಕದ ಹಿತಕ್ಕಾಗಿ ಗಾಂಧೀಜಿ ದುಡಿಯುತ್ತಿದ್ದರೆ, ಕಸ್ತೂರಬಾ ಕುಟುಂಬ ನಿಭಾಯಿಸುತ್ತ ಗಾಂಧೀಜಿಗೆ ಪ್ರೇರಕ ಶಕ್ತಿಯಾಗಿದ್ದರು ಎಂದರು.

ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿ, ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ ಎಂಬ ಕಾರಣಕ್ಕಾಗಿ ಗಾಂಧೀಜಿಯವರು ವಿಶೇಷ ಐಕಾನ್ ಆಗಿದ್ದಾರೆ. ಆದರೆ, ಈ ಐಕಾನ್‌ಗೆ ಪ್ರೇರಣೆ ನೀಡಿದ್ದು ಕಸ್ತೂರಬಾ.

ಕಸ್ತೂರಬಾ ಕುಟುಂಬ ಧರ್ಮವಾದರೆ, ಗಾಂಧಿ ಲೋಕಧರ್ಮವಾಗಿದ್ದರು. ಹೀಗಿದ್ದಾಗ ಸಂಘರ್ಷಗಳು ಅನಿವಾರ್ಯವಾಗುತ್ತವೆ. ಆದರೆ, ಗಾಂಧೀಜಿ ಮತ್ತು ಕಸ್ತೂರಬಾರ ಜೀವನದಲ್ಲಿ ಅಂತಹ ಸಂಘರ್ಷಗಳು ಇರಲಿಲ್ಲವಾದರೂ, ಕಸ್ತೂರಬಾ ಉರಿಯುವ ಕೆಂಡದ ಮೇಲೆ ನಿಂತ ರೀತಿಯಲ್ಲಿ ಕಷ್ಟಗಳನ್ನು ಅನುಭವಿಸಿದ್ದಾರೆ. ಇಂತಹ ಹತ್ತಾರು ವಿಚಾರಗಳನ್ನು ಲೇಖಕಿ ವಿಜಯಾ ಸುಬ್ಬರಾಜ್, ಕಸ್ತೂರಬಾ-ಗಾಂಧೀಜಿಯವರ ದಾಂಪತ್ಯ ಜೀವನದ ಕುರಿತ ಕೃತಿಯಲ್ಲಿ ಸಮಗ್ರವಾಗಿ ಓದುಗರಿಗೆ ಉಣಬಡಿಸಿದ್ದಾರೆ ಎಂದರು.

ಲೇಖಕಿ ವಿಜಯಾ ಸುಬ್ಬರಾಜ್ ಮಾತನಾಡಿ, 'ಗಾಂಧೀಜಿ ಉತ್ಸವ ಮೂರ್ತಿಯಾದರೆ, ಕಸ್ತೂರಬಾ ಗರ್ಭಗುಡಿಯಲ್ಲಿರುವ ದೇವರು. ಆದರೆ, ಕಸ್ತೂರಬಾ ಅವರ ಕಷ್ಟ-ಕಾರ್ಪಣ್ಯಗಳು, ಆಕೆಯಲ್ಲಿನ ಶ್ರಮ, ತಾಳ್ಮೆ, ಗಾಂಧೀಜಿಯವರಿಗೆ ಬೆಂಬಲವಾಗಿ ನಿಂತ ರೀತಿ ಇದಾವುದೂ ಹೆಚ್ಚು ಪ್ರಚಲಿತಕ್ಕೆ ಬರಲಿಲ್ಲ ಎಂದರು. ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಜಿ. ಸುಶೀಲಮ್ಮ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಇದ್ದರು.

ಈ ಸಂಜೆ
ಬುಧವಾರ, 19-10-2016



ಶೇಷಾದ್ರಿಪುರಂ ಕಾಲೇಜು ಹಾಗೂ ಬೆಂ.ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ಅಜ್ಞಾತ ವಚನಕಾರರ ಸಾಮಾಜಿಕ ಚಿಂತನೆ ಕುರಿತ ವಿಚಾರ ಸಂಕಿರಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಗೊ.ರು.ಚನ್ನಬಸಪ್ಪ ಅವರನ್ನು ಸಾಹಿತಿ ಜರಗನಹಳ್ಳಿ ಶಿವಶಂಕರ್, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಡಾ.ವೂಡೆ.ಪಿ.ಕೃಷ್ಣ ಸನ್ಮಾನಿಸಿದರು. ಬೆಂ.ನ.ಜಿ. ಪರಿಷತ್ ಅಧ್ಯಕ್ಷ ನಾಗರಾಜಮೂರ್ತಿ, ಪ್ರಾಚಾರ್ಯರಾದ ಅನುರಾಧ ರಾಯ್, ಡಾ.ನಾ.ಗೀತಾಚಾರ್ಯ, ಪ್ರೊ.ಸತೀಶ್ ಮತ್ತಿತರರಿದ್ದರು.

ಪ್ರಜಾವಾಣಿ | ಶನಿವಾರ, 15 ಅಕ್ಟೋಬರ್ 2016



ಭಾರತೀಯ ಎಂಜಿನಿಯರ್‌ಗಳ ಸಂಸ್ಥೆಯಲ್ಲಿ (ಐಇಐ) ಶುಕ್ರವಾರ ಆಯೋಜಿಸಿದ್ದ '49ನೇ ಎಂಜಿನಿಯರ್‌ಗಳ ದಿನಾಚರಣೆ' ಸಮಾರಂಭದಲ್ಲಿ ಅಮೃತ ಸ್ಕೂಲ್ ಆಫ್ ಎಂಜಿನಿಯರಿಂಗ್‌ನ ಸಹ ಡೀನ್ ಡಾ.ಎಸ್.ಜಿ.ರಾಕೇಶ್, ಮದ್ರಾಸ್ ಐಐಟಿಯ ನಿವೃತ್ತ ಪ್ರಾಧ್ಯಾಪಕ ಎಂ.ಆರ್.ಪ್ರಾಣೇಶ್, ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಮುಖ್ಯಸ್ಥ ಡಾ.ಮಂಜುನಾಥ್ ಭಂಡಾರಿ, ನ್ಯೂ ಹಾರಿಜಾನ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಮಂಜುನಾಥ್, ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಮೂರುಕಣ್ಣಪ್ಪ ಅವರಿಗೆ 'ಶ್ರೇಷ್ಠ ಎಂಜಿನಿಯರ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಐಇಐ ಗೌರವ ಕಾರ್ಯದರ್ಶಿ. ಡಾ.ವೂಡೇ ಪಿ.ಕೃಷ್ಣ, ಅಧ್ಯಕ್ಷ ಆರ್.ಎಂ.ವಾಸಗಂ, ನಿಕಟಪೂರ್ವ ಅಧ್ಯಕ್ಷ ಡಾ.ಎಲ್.ವಿ.ಮುರಳಿಕೃಷ್ಣ ರೆಡ್ಡಿ, ಜಂಟಿ ಕಾರ್ಯದರ್ಶಿ ಡಾ.ರಂಗಾರೆಡ್ಡಿ ಇದ್ದಾರೆ — ಪ್ರಜಾವಾಣಿ ಚಿತ್ರ

ರಾಜ್ಯ / STATE

ಕಾವೇರಿ ವಿವಾದ ಪರಿಹಾರಕ್ಕೆ ಗಾಂಧಿ ಮಾರ್ಗದಲ್ಲಿ ಹೋರಾಟ: ಸಿಎಂ

■ ವಿಕ ಸುದ್ದಿಲೋಕ ಬೆಂಗಳೂರು

ಕಾವೇರಿ ನೀರು ಹಂಚಿಕೆ ವಿವಾದದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ವಿಲನ್ ಎಂಬಂತೆ ಬಿಂಬಿತವಾಗಿದ್ದು, ರಾಜ್ಯಕ್ಕೆ ನ್ಯಾಯ ದೊರೆಯುವವರೆಗೆ ಗಾಂಧಿ ಮಾರ್ಗದಲ್ಲಿ ಹೋರಾಟ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ವಿಶ್ವ ಅಹಿಂಸಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ''ಕರ್ನಾಟಕ ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟಿಲ್ಲ ಎಂಬ ಕಾರಣಕ್ಕೆ ವಿಲನ್ ಎಂಬಂತೆ ನೋಡಲಾಗಿದೆ. ಆದರೆ, ವಾಸ್ತವವಾಗಿ ನಾವು ವಿಲನ್ ಅಲ್ಲ. ಮೇಲಿನ ರಾಜ್ಯ ಎಂದು ನಮಗೆ ಅನ್ಯಾಯ ಮಾಡಲಾಗಿದೆ. ಸುಪ್ರೀಂಕೋರ್ಟ್ ಬಗ್ಗೆ ರಾಜ್ಯ ಸರಕಾರಕ್ಕೆ ಅಪಾರ ಗೌರವವಿದ್ದು, ನ್ಯಾಯಾಂಗ ನೀಡುವ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸಿದ್ಧರಿದ್ದೇವೆ. ಆದರೆ, ನೀರೇ ಇಲ್ಲದಿರುವಾಗ ಅನಿವಾರ್ಯವಾಗಿ ಆದೇಶ ಪಾಲಿಸದೆ ಸುಮ್ಮನಿರಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಗಾಂಧಿ ಮಾರ್ಗವಾದ ಅಹಿಂಸಾ ಹೋರಾಟವೇ ಜನರಿಗೆ ಹಾಗೂ ಸರಕಾರಕ್ಕೆ ಸ್ಫೂರ್ತಿಯಾಗಿದೆ. ಇದೇ ಹಾದಿಯ ಹೋರಾಟವನ್ನು ಸರಕಾರ ಮುಂದುವರಿಸುತ್ತದೆ'' ಎಂದರು.



ಬೆಂಗಳೂರಿನ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ವಿಶ್ವ ಅಹಿಂಸಾ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಚ್ಕೆ ಪಾಟೀಲ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ.ಶ್ರೀನಿವಾಸಯ್ಯ ಭಾಗವಹಿಸಿದ್ದರು.

''1892 ಹಾಗೂ 1924ರಲ್ಲಿ ಮದ್ರಾಸ್‌ನಲ್ಲಿ ಬ್ರಿಟಿಷ್ ಆಡಳಿತ ಹಾಗೂ ಮೈಸೂರು ರಾಜ್ಯದಲ್ಲಿ ಒಡೆಯರ್ ಆಡಳಿತವಿತ್ತು. ಆಗ ನೀರು ಹಂಚಿಕೆ ವಿವಾದ ಉದ್ಭವಿಸಿದಾಗ ಬ್ರಿಟಿಷರ ಪರ ತೀರ್ಪು ನೀಡಲಾಗಿತ್ತು. ಮೇಲಿನ ರಾಜ್ಯವಾಗಿರುವುದರಿಂದ ನೀರು ಬಿಡಲೇಬೇಕಾಯಿತು. ಅಂದಿನಿಂದ ಇಂದಿನವರೆಗೂ ಸಮಸ್ಯೆ ಮುಂದುವರಿದಿದೆ,'' ಎಂದು ಬೇಸರ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ. ಶ್ರೀನಿವಾಸಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಉಮಾಶಂಕರ್, ವಾರ್ತಾ ಇಲಾಖೆ ನಿರ್ದೇಶಕ ವಿಶುಕುಮಾರ್, ಎಸ್‌ಎಸ್ಎಸ್ ಸಂಪರ್ಕಾಧಿಕಾರಿ ಗಣನಾಥ ಶೆಟ್ಟಿ ಎಕ್ಕಾರ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಹಾಜರಿದ್ದರು.

ಹೊಸ ದಿಗಂತ

ಬೆಂಗಳೂರು
ಸೋಮವಾರ, 3 ಅಕ್ಟೋಬರ್ 2016

ತಮಿಳುನಾಡಿನೊಂದಿಗೆ ಶಾಂತಿಯುತವಾಗಿ ಸಮಸ್ಯೆ ಪರಿಹಾರಕ್ಕೆ ಯತ್ನ: ಸಿಎಂ ಸಿದ್ದರಾಮಯ್ಯ

ಗಾಂಧಿ ತತ್ವ ಪಾಲಿಸಿ ಕಾವೇರಿ ವಿವಾದ ಪರಿಹಾರ

ಬೆಂಗಳೂರು: ಕಾವೇರಿ ಜಲ ವಿವಾದವನ್ನು ನಾವು ಮಹಾತ್ಮ ಗಾಂಧೀಜಿಯವರ ತತ್ವ ಸಿದ್ಧಾಂತಗಳನ್ನು ಪಾಲನೆ ಮಾಡುವ ಮೂಲಕವೇ 'ಪರಿಹರಿಸಿಕೊಳ್ಳೋಣ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಗಾಂಧಿ ಜಯಂತಿ ಅಂಗವಾಗಿ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಅಹಿಂಸಾ ದಿನಾಚರಣೆ, ಸದ್ಭಾವನಾ ಯಾತ್ರೆ, ಜಯ ಶ್ರೀ ಟ್ರಸ್ಟ್ ಪುರಸ್ಕಾರ ಹಾಗೂ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾವೇರಿ ವಿಚಾರದಲ್ಲಿ ರಾಜ್ಯವನ್ನು ವಿಲನ್ ಆಗಿ ಬಿಂಬಿಸುವ ಪ್ರಯತ್ನವನ್ನು ತಮಿಳುನಾಡು ಮಾಡುತ್ತಿದೆ. ನಾವು ಗಾಂಧೀಜಿ ಅವರ ತತ್ವ ಸಿದ್ಧಾಂತಗಳ ಮೂಲಕವೇ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹಾರ ಮಾಡಿಕೊಳ್ಳುವುದಕ್ಕೆ ಬಯಸುತ್ತೇವೆ ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ಬಗ್ಗೆ ನಮಗೆ ಅಪಾರ ಗೌರವವಿದೆ. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಪಾಲನೆ ಮಾಡುವುದಕ್ಕೆ ಸಾಧ್ಯವಾಗದ ಆದೇಶಗಳು ಬಂದಿದ್ದರಿಂದ ಪಾಲನೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈಗಾಗಲೇ ತಮಿಳುನಾಡಿಗೆ 53 ಟಿಎಂಸಿ ನೀರನ್ನು ಹರಿಬಿಟ್ಟಿದ್ದೇವೆ. ಆದರೆ, ತಮಿಳುನಾಡು ಸರ್ಕಾರ ಇನ್ನೂ (ನೀರು) ಬಿಡಬೇಕು ಎಂದು ಸುಪ್ರೀಂ ಕೋರ್ಟ್ ಮುಂದೆ ಹೋಗುತ್ತಿದೆ. ವಾಸ್ತವವಾಗಿ ಇನ್ನುಳಿದ ನೀರು ಬೆಂಗಳೂರು, ಮೈಸೂರು, ಮಂಡ್ಯ ಜಿಲ್ಲೆಯಲ್ಲಿರುವ ನೂರಾರು ಗ್ರಾಮಗಳಿಗೆ ಕುಡಿಯಲು ಬೇಕಿದೆ. ಈ ಸಂಗತಿ ಸುಪ್ರೀಂಕೋರ್ಟ್‌ಗೆ ಅರ್ಥವಾಗುತ್ತಿಲ್ಲ ಎಂದು ಹೇಳಿದರು.

ತ.ನಾಡು ಡ್ಯಾಂಗಳಲ್ಲಿ ಉತ್ತಮ ನೀರು

ರಾಜ್ಯಕ್ಕೆ ಹೋಲಿಕೆ ಮಾಡಿದರೇ ತಮಿಳುನಾಡಿನಲ್ಲಿ ಉತ್ತಮ ಮಳೆಯಾಗಿದೆ. ಜಲಾಶಯಗಳಲ್ಲಿ ನೀರಿನ ಸಂಗ್ರಹ ಚೆನ್ನಾಗಿದೆ. ಆದರೆ, ರಾಜ್ಯದಲ್ಲಿ ಮಳೆಯಿಲ್ಲದೇ, ಕಬಿನಿ, ಹಾರಂಗಿ, ಹೇಮಾವತಿ ಜಲಾಶಯಗಳು ಬರಿದಾಗುತ್ತಿವೆ. ಈ ಸಂದರ್ಭದಲ್ಲಿ ನಮಗಾಗಿ ನೀರನ್ನು ಸಂಗ್ರಹಿಸಿಕೊಳ್ಳುವುದು ಅವಶ್ಯಕವಾಗಿದೆ ಎಂದು ಸ್ಪಷ್ಟಪಡಿಸಿದರು.



ಗಾಂಧಿ ಜಯಂತಿ ಅಂಗವಾಗಿ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಅಹಿಂಸಾ ದಿನಾಚರಣೆಯಲ್ಲಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯ ಪುಸ್ತಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಿದರು.

ಸ್ವಾತಂತ್ರ್ಯ ಪೂರ್ವದಿಂದಲೂ ಅನ್ಯಾಯ

ತಮಿಳುನಾಡಿಗೂ, ರಾಜ್ಯಕ್ಕೂ ಕಾವೇರಿ ಸಮಸ್ಯೆ ಇಂದು ನಿನ್ನೆಯದಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಚಿನ್ನವನ್ನು ಅಡವಿಟ್ಟು ಕೆಆರ್‌ಎಸ್ ಅಣೆಕಟ್ಟು ನಿರ್ಮಾಣ ಮಾಡಿದರು. ರಾಜ್ಯದ ಜನತೆ ಕಷ್ಟಪಟ್ಟು ಸಂಗ್ರಹಿಸಿಟ್ಟ ನೀರನ್ನು ಮತ್ತೊಬ್ಬರಿಗೆ ನೀಡಬೇಕು ಎಂದರೆ ಯಾವ ನ್ಯಾಯ ಎಂದು ಪ್ರಶ್ನಿಸಿದರು.

ವಿಶ್ವದ ನಾಯಕ ಗಾಂಧೀ

ಮಹಾತ್ಮ ಗಾಂಧೀಜಿ ಕೇವಲ ಭಾರತದ ನಾಯಕರಲ್ಲ ವಿಶ್ವದ ನಾಯಕ. ಮಾರ್ಟಿನ್ ಲೂಥರ್, ಅಮೆರಿಕಾ ಅಧ್ಯಕ್ಷ ಬರಾಕ್ ಒಬಾಮಾ ಕೂಡ ಗಾಂಧೀಜಿ ವಿಶ್ವಮಾನವರು. ಅವರು ಹಾಕಿಕೊಟ್ಟ ಮಾರ್ಗದರ್ಶನ ಎಲ್ಲರಿಗೂ ಅವಶ್ಯಕ ಎನ್ನುತ್ತಾರೆ. ಹಾಗಾಗಿ ಮಹಾತ್ಮ ಗಾಂಧೀಜಿ ಅವರು ವಿಶ್ವ ಕಂಡ ಮಹಾನ್ ನಾಯಕ ಎಂದರು.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಹೆಚ್.ಕೆ.ಪಾಟೀಲ್ ಮಾತನಾಡಿ, ದೆಹಲಿ ಹಾಗೂ ಜಲಗಾಂವ್‌ಗಳಲ್ಲಿ ಗಾಂಧಿ ಮ್ಯೂಜಿಯಂಗಳಿವೆ. ಆದರೆ, ಆ ಮ್ಯೂಜಿಯಂಗಿಂತ ಉತ್ತಮವಾದ ಇ-ಗಾಂಧೀ ಮ್ಯೂಜಿಯಂ ಮಾಡುವ ಯೋಜನೆಯನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಂಕರ ಅವರ ಅನುವಾದದ ಹಿಂದ್ ಸ್ವರಾಜ್, ಹೆಗ್ಗೋಡು ಪ್ರಸನ್ನ ಅವರ ಜನಪದ ಹಾಗೂ ಮಾರ್ಚ್ ಆಫ್ ಕರ್ನಾಟಕ ವಿಶೇಷ ಸಂಚಿಕೆಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಸಮಾರಂಭದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ.ಶ್ರೀನಿವಾಸಯ್ಯ, ಡಾ.ವೂಡೆ ಪಿ.ಕೃಷ್ಣ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಉಮಾಶಂಕರ್, ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ನಿರ್ದೇಶಕ ಎನ್.ಆರ್.ವಿಶುಕುಮಾರ್ ಮತ್ತಿತರರು ಇದ್ದರು.

ಜಿಲ್ಲೆಗೊಂದು ಗಾಂಧಿ ಭವನ

ಗಾಂಧೀ ಸಿದ್ಧಾಂತಗಳ ಬಗ್ಗೆ ಇಂದಿನ ಯುವಜನರಿಗೆ ತಿಳಿಸಿಕೊಡುವುದು ನಮ್ಮ ಜವಾಬ್ದಾರಿಯಾಗಿರುವುದರಿಂದ ಜಿಲ್ಲೆಗೊಂದು ಗಾಂಧೀ ಭವನ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದು, ಅದಕ್ಕೆ ಸರ್ಕಾರ ಬಜೆಟ್‌ನಲ್ಲಿ 90 ಕೋಟಿ ರೂ. ಬಿಡುಗಡೆ ಮಾಡಿದೆ. 3 ಕೋಟಿ ವೆಚ್ಚದಲ್ಲಿ ಗಾಂಧೀ ಭವನ ನಿರ್ಮಿಸಿ, ಶೈಕ್ಷಣಿಕ, ಆಧ್ಯಾತ್ಮಿಕ ಕೇಂದ್ರವಾಗಿಸಿ ಗಾಂಧೀ ವಿಚಾರವನ್ನು ಜನರಿಗೆ ಮುಟ್ಟಿಸುವಂತಹ ಕಾರ್ಯ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಸೋಮವಾರ
3 ಅಕ್ಟೋಬರ್ 2016
3 OCTOBER 2016

ಅಹಿಂಸಾ ಮಾರ್ಗದಲ್ಲಿ ಕಾವೇರಿ ಹೋರಾಟ

ಕೋರ್ಟ್ ತೀರ್ಪು ಪಾಲಿಸಲಾಗದ ಅನಿವಾರ್ಯತೆ | ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರೈತರ ಕೃಷಿಗೆ ಹಾಗೂ ನಾಗರಿಕರಿಗೆ ಕುಡಿಯಲು ನೀರಿಲ್ಲದೆ ತೊಂದರೆ ಅನುಭವಿಸುತ್ತಿದ್ದೇವೆ. ಹೀಗಿದ್ದರೂ ತನಗೆ ನೀರು ಹರಿಸುತ್ತಿಲ್ಲ ಎಂದು ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕವನ್ನು ಖಳನಾಯಕನಂತೆ ಬಿಂಬಿಸಲು ತಮಿಳುನಾಡು ಯತ್ನಿಸುತ್ತಿದೆ. ಇಂಥ ಪ್ರಯತ್ನಗಳನ್ನು ವಿಫಲಗೊಳಿಸಿ ನ್ಯಾಯ ಪಡೆಯಲು ಗಾಂಧೀಜಿ ಅವರ ಸತ್ಯ ಹಾಗೂ ಅಹಿಂಸಾ ಮಾರ್ಗದಲ್ಲೇ ನಡೆಯುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಧಿ ಭವನದಲ್ಲಿ ರಾಷ್ಟ್ರಪಿತನ ಜಯಂತಿ

» 'ಬಾಪು ಪ್ರಪಂಚ' ವಿಶೇಷ ಸಂಚಿಕೆ ಲೋಕಾರ್ಪಣೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತಿತರ ಸಂಸ್ಥೆಗಳ ಸಹಯೋಗದಲ್ಲಿ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಗಾಂಧಿ , ಜಯಂತಿಯಲ್ಲಿ ಮಾತನಾಡಿದರು.

1892 ಮತ್ತು 1924ರಲ್ಲಿ ಕಾವೇರಿ ವಿಚಾರದಲ್ಲಿ ಒಪ್ಪಂದಗಳಾಗಿವೆ. ಅಂದು ಮದ್ರಾಸ್ ಪ್ರಾಂತ್ಯದಲ್ಲಿ ಬ್ರಿಟಿಷರ ಆಳ್ವಿಕೆಯಿತ್ತು. ಸಹಜವಾಗಿ ಅವರ ಕೈ ಮೇಲಾಗಿ ರಾಜ್ಯಕ್ಕೆ ಅನ್ಯಾಯವಾಗಿತ್ತು. ಅದೇ ಪರಿಸ್ಥಿತಿ ಇಂದಿಗೂ ಮುಂದುವರಿದಿದೆ. ಮುಂಬರುವ ಭತ್ತದ ಬೆಳೆಗಾಗಿ ತಮಿಳುನಾಡಿನವರು ನೀರು ಸಂಗ್ರಹಿಸಿ ಇಟ್ಟುಕೊಳ್ಳುತ್ತಿದ್ದಾರೆ ಎಂಬ ನಮ್ಮ ಮಾತನ್ನು ಸುಪ್ರೀಂಕೋರ್ಟ್ ಪರಿಗಣಿಸುತ್ತಿಲ್ಲ. ಸುಪ್ರೀಂಕೋರ್ಟ್ ಹಾಗೂ ಒಕ್ಕೂಟ ವ್ಯವಸ್ಥೆ ಬಗ್ಗೆ ಗೌರವವಿದೆ. ಆದೇಶ ಪಾಲಿಸಲು ಸಾಧ್ಯವಾಗದ ಅನಿವಾರ್ಯ ಸ್ಥಿತಿ ನಮ್ಮದಾಗಿದೆ ಎಂದರು.

ಗಾಂಧಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಕೃತಿ, ಜನಪದ ಮತ್ತು ಮಾರ್ಚ್ ಆಫ್ ಕರ್ನಾಟಕ ನಿಯತಕಾಲಿಕೆ, ಬಾಪು ಪ್ರಪಂಚ ವಿಶೇಷ ಸಂಚಿಕೆ ಲೋಕಾರ್ಪಣೆ ಮಾಡಲಾಯಿತು. ಸಚಿವ ಎಚ್.ಕೆ. ಪಾಟೀಲ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ, ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಉಮಾಶಂಕರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ಮತ್ತಿತರರಿದ್ದರು. ಭಾವೈಕ್ಯತಾ ವೇದಿಕೆ ಮಕ್ಕಳು 'ನಾನು ಗಾಂಧಿ ಅಗ್ರೇನ್' ನಾಟಕ ಪ್ರದರ್ಶಿಸಿದರು. ಕಾರ್ಯಕ್ರಮಕ್ಕೂ ಮುನ್ನ ಸದ್ಭಾವನಾ ಯಾತ್ರೆ ನಡೆಯಿತು.



ಗಾಂಧಿಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚರಕದಿಂದ ನೂಲು ತೆಗೆದರು. ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಹೊ. ಶ್ರೀನಿವಾಸಯ್ಯ ಉಪಸ್ಥಿತರಿದ್ದರು.

ಇ-ಗಾಂಧಿ ಯೋಜನೆ

ಯುವಕರು, ಮಕ್ಕಳು, ಸಂಶೋಧಕರಿಗೆ ಮಲ್ಟಿಮೀಡಿಯಾ ಮೂಲಕ ಗಾಂಧೀಜಿ ಅವರ ವಿಚಾರಗಳನ್ನು ಪ್ರಸ್ತುತಪಡಿಸುವ ಇ-ಗಾಂಧಿ ಮ್ಯೂಸಿಯಂಗೆ ಸಚಿವ ಎಚ್.ಕೆ. ಪಾಟೀಲ್ ಚಾಲನೆ ನೀಡಿದರು. ಮಹಾರಾಷ್ಟ್ರದ ಜಲಗಾಂವ್ ಹಾಗೂ ದೆಹಲಿಯಲ್ಲಿರುವ ಗಾಂಧಿ ಮ್ಯೂಸಿಯಂ ಪರಿಕಲ್ಪನೆಯಲ್ಲಿ ಗಾಂಧಿ ಭವನದಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಯೋಜನೆಯ 2 ಕೋಟಿ ರೂ. ವೆಚ್ಚವನ್ನು ಭರಿಸುವುದಾಗಿ ಸರ್ಕಾರ ಭರವಸೆ ನೀಡಿದೆ ಎಂದು ಗಾಂಧಿ ಸ್ಮಾರಕ ನಿಧಿ ಟ್ರಸ್ಟಿ ವಿ.ಎನ್. ತಿಪ್ಪಣ್ಣಗೌಡ ತಿಳಿಸಿದ್ದಾರೆ.



ಪುಷ್ಪ ನಮನ

ಗಾಂಧಿ ಜಯಂತಿ ದಿನವಾದ ಭಾನುವಾರ ಮಹಾತ್ಮ ಗಾಂಧಿ ರಸ್ತೆಯಲ್ಲಿನ ಗಾಂಧಿ ಪ್ರತಿಮೆಗೆ ವಿವಿಧ ಶಾಲೆಗಳ ವಿದ್ಯಾರ್ಥಿನಿಯರು ಪುಷ್ಪ ನಮನ ಸಲ್ಲಿಸಿದರು.

ಸಂಯುಕ್ತ ಕರ್ನಾಟಕ

ಶುಕ್ರವಾರ, 30, ಸೆಪ್ಟೆಂಬರ್, 2016, ಬೆಂಗಳೂರು



ಅ.ನ.ಕೃ ಕನ್ನಡ ಸಂಘದ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ "ರಾಜಾರಾಮ್‌ಮೋಹನ್‌ರಾಯ್ ಅವರ ಪುಣ್ಯ ಸ್ಮರಣೆ" ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಬಿ.ಟಿ ಲಲಿತಾ ನಾಯಕ್, ಶಿಕ್ಷಣ ತಜ್ಞಡಾ. ವೂಡೇ ಪಿ.ಕೃಷ್ಣಮೂರ್ತಿ, ಬ್ರಹ್ಮ ಸಮಾಜದ ಅಧ್ಯಕ್ಷ ಡಾ. ಅಶೋಕ್ ಗುರುದಾಸ್ ಮತ್ತಿತರರು ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ನಮಸ್ತೆ ಬೆಂಗಳೂರು
ಗುರುವಾರ 29 ಸೆಪ್ಟೆಂಬರ್ 2016
VIJAYAVANI » 29 SEPTEMBER 2016

ಮೂರ್ತಿ ಪೂಜೆ ವ್ಯಾಪಾರೀಕರಣವಾಗಿದೆ

ಮಾಜಿ ಸಚಿವೆ ಲಲಿತಾ ನಾಯಕ್ ಅಭಿಮತ » ರಾಜಾರಾಮ್ ಮೋಹನ್ ರಾಯ್ ಸ್ಮರಣೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಭಾರತದಂಥ ಸರ್ವಧರ್ಮ ದೇಶದಲ್ಲಿ ಮೂರ್ತಿ ಪೂಜೆ ಬಿಟ್ಟು ಮಾನವೀಯತೆಯಿಂದ ಎಲ್ಲ ಧರ್ಮಗಳೂ ಒಂದಾಗಿರಬೇಕು ಎಂಬ ದೃಷ್ಟಿಯಿಂದಲೇ ರಾಜಾರಾಮ್ ಮೋಹನ್ ರಾಯ್ ಬ್ರಹ್ಮ ಸಮಾಜ ಸ್ಥಾಪಿಸಿದ್ದರು. ಪ್ರಸ್ತುತ ಸಂದರ್ಭದಲ್ಲಿ ಮೂರ್ತಿ ಪೂಜೆ ವ್ಯಾಪಾರೀಕರಣವಾಗಿದೆ. ಹಾದಿಬೀದಿಗಳಲ್ಲಿ ಎಲ್ಲ ಸಮುದಾಯದ ಮೂರ್ತಿಗಳ ಪೂಜೆ ನಡೆಯುತ್ತಿದೆ ಎಂದು ಮಾಜಿ ಸಚಿವೆ ಡಾ. ಬಿ.ಟಿ. ಲಲಿತಾ ನಾಯಕ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಸಾಪದಲ್ಲಿ ಬ್ರಹ್ಮ ಸಮಾಜ ಹಾಗೂ ಅ.ನ.ಕೃ. ಕನ್ನಡ ಸಂಘ ಏರ್ಪಡಿಸಿದ್ದ ರಾಜಾರಾಮ್ ಮೋಹನ್ ರಾಯ್ ಪುಣ್ಯಸ್ಮರಣೆ ಉದ್ಘಾಟಿಸಿ ಮಾತನಾಡಿದರು.

ಸತಿ ಪದ್ಧತಿ ಹಾಗೂ ಮೂರ್ತಿ ಪೂಜೆ ವಿರೋಧಿಸಿದವರು ರಾಜಾರಾಮ್ ಮೋಹನ್ ರಾಯ್. ಆದರೆ, ಇಂದಿನ ಸಮಾಜದಲ್ಲಿ ನರಬಲಿ ಸೇರಿ ಇನ್ನಿತರ ಮೌಢ್ಯಗಳು ಜೀವಂತವಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ರಾಜಾರಾಮ್ ಮೋಹನ್ ರಾಯ್ ದೇಶದಲ್ಲಿ ಇಂಗ್ಲಿಷ್ ಶಿಕ್ಷಣ ಬೆಳೆಯಲು ಶ್ರಮಿಸಿದರು. ದೇಶದ ಅಭಿವೃದ್ಧಿಗೆ ವಿಜ್ಞಾನ ಶಿಕ್ಷಣದ ಅಗತ್ಯ ಮನಗಂಡು ಇಂಗ್ಲಿಷ್ ಶಿಕ್ಷಣ ಜಾರಿಗೆ ತಂದರು. ಅವರಿಂದ ಈ ಪ್ರಯತ್ನವಾಗದಿದ್ದರೆ ಭಾರತ ಇಷ್ಟೊಂದು ಅಭಿವೃದ್ಧಿ ಕಾಣುತ್ತಿರಲಿಲ್ಲ. ಜಾತ್ಯತೀತ ವೇದಿಕೆಯಾಗಿದ್ದ ಬ್ರಹ್ಮ ಸಮಾಜದ ತತ್ವವನ್ನು ಸ್ವಾಮಿ ವಿವೇಕಾನಂದರೂ ಅನುಸರಿಸಿದರು. ಮಹಿಳೆಯರಿಗೆ ಪ್ರಸಕ್ತ ಸಮಾಜದಲ್ಲಿ ಸ್ಥಾನಮಾನ ಸಿಕ್ಕಿದ್ದರೆ ಅದಕ್ಕೆ ಮೂಲ ಕಾರಣ ರಾಯ್ ಎಂದು ಅಭಿಪ್ರಾಯಪಟ್ಟರು.

ಬ್ರಹ್ಮ ಸಮಾಜದ ಅಧ್ಯಕ್ಷ ಡಾ. ಅಶೋಕ್ ಗುರುದಾಸ್, ಹಿರಿಯ ಲೇಖಕಿ ರಾಣಿ ಗೋವಿಂದರಾಜು ಮತ್ತಿತರರು ಉಪಸ್ಥಿತರಿದ್ದರು.



ರಾಜಾರಾಮ್ ಮೋಹನ್ ರಾಯ್ ಮೋಹನ್ ರಾಯ್ ಭಾವಚಿತ್ರಕ್ಕೆ ಮಾಜಿ ಸಚಿವೆ ಲಲಿತಾ ನಾಯಕ್, ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಮತ್ತಿತರರು ಪುಷ್ಪನಮನ ಸಲ್ಲಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ನಮ್ಮ ಬೆಂಗಳೂರು
ಗುರುವಾರ 29 ಸೆಪ್ಟೆಂಬರ್ 2016
VIJAYAVANI » 29 SEPTEMBER 2016

ಮೂರ್ತಿ ಪೂಜೆ ವ್ಯಾಪಾರೀಕರಣವಾಗಿದೆ

ಮಾಜಿ ಸಚಿವೆ ಲಲಿತಾ ನಾಯಕ್ ಅಭಿಮತ » ರಾಜಾರಾಮ್ ಮೋಹನ್ ರಾಯ್ ಸ್ಮರಣೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು


ಭಾರತದಂಥ ಸರ್ವಧರ್ಮ ದೇಶದಲ್ಲಿ ಮೂರ್ತಿ ಪೂಜೆ ಬಿಟ್ಟು ಮಾನವೀಯತೆಯಿಂದ ಎಲ್ಲ ಧರ್ಮಗಳೂ ಒಂದಾಗಿರಬೇಕು ಎಂಬ ದೃಷ್ಟಿಯಿಂದಲೇ ರಾಜಾರಾಮ್ ಮೋಹನ್ ರಾಯ್ ಬ್ರಹ್ಮ ಸಮಾಜ ಸ್ಥಾಪಿಸಿದ್ದರು. ಪ್ರಸ್ತುತ ಸಂದರ್ಭದಲ್ಲಿ ಮೂರ್ತಿ ಪೂಜೆ ವ್ಯಾಪಾರೀಕರಣವಾಗಿದೆ. ಹಾದಿಬೀದಿಗಳಲ್ಲಿ ಎಲ್ಲ ಸಮುದಾಯದ ಮೂರ್ತಿಗಳ ಪೂಜೆ ನಡೆಯುತ್ತಿದೆ ಎಂದು ಮಾಜಿ ಸಚಿವೆ ಡಾ. ಬಿ.ಟಿ. ಲಲಿತಾ ನಾಯಕ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಸಾಪದಲ್ಲಿ ಬ್ರಹ್ಮ ಸಮಾಜ ಹಾಗೂ ಅ.ನ.ಕೃ. ಕನ್ನಡ ಸಂಘ ಏರ್ಪಡಿಸಿದ್ದ ರಾಜಾರಾಮ್ ಮೋಹನ್ ರಾಯ್ ಪುಣ್ಯಸ್ಮರಣೆ ಉದ್ಘಾಟಿಸಿ ಮಾತನಾಡಿದರು.

ಸತಿ ಪದ್ಧತಿ ಹಾಗೂ ಮೂರ್ತಿ ಪೂಜೆ ವಿರೋಧಿಸಿದವರು ರಾಜಾರಾಮ್ ಮೋಹನ್ ರಾಯ್. ಆದರೆ, ಇಂದಿನ ಸಮಾಜದಲ್ಲಿ ನರಬಲಿ ಸೇರಿ ಇನ್ನಿತರ ಮೌಢ್ಯಗಳು ಜೀವಂತವಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ರಾಜಾರಾಮ್ ಮೋಹನ್ ರಾಯ್ ದೇಶದಲ್ಲಿ ಇಂಗ್ಲಿಷ್ ಶಿಕ್ಷಣ ಬೆಳೆಯಲು ಶ್ರಮಿಸಿದರು. ದೇಶದ ಅಭಿವೃದ್ಧಿಗೆ ವಿಜ್ಞಾನ ಶಿಕ್ಷಣದ ಅಗತ್ಯ ಮನಗಂಡು ಇಂಗ್ಲಿಷ್ ಶಿಕ್ಷಣ ಜಾರಿಗೆ ತಂದರು. ಅವರಿಂದ ಈ ಪ್ರಯತ್ನವಾಗದಿದ್ದರೆ ಭಾರತ ಇಷ್ಟೊಂದು ಅಭಿವೃದ್ಧಿ ಕಾಣುತ್ತಿರಲಿಲ್ಲ. ಜಾತ್ಯತೀತ ವೇದಿಕೆಯಾಗಿದ್ದ ಬ್ರಹ್ಮ ಸಮಾಜದ ತತ್ವವನ್ನು ಸ್ವಾಮಿ ವಿವೇಕಾನಂದರೂ ಅನುಸರಿಸಿದರು. ಮಹಿಳೆಯರಿಗೆ ಪ್ರಸಕ್ತ ಸಮಾಜದಲ್ಲಿ ಸ್ಥಾನಮಾನ ಸಿಕ್ಕಿದ್ದರೆ ಅದಕ್ಕೆ ಮೂಲ ಕಾರಣ ರಾಯ್ ಎಂದು ಅಭಿಪ್ರಾಯಪಟ್ಟರು.

ಬ್ರಹ್ಮ ಸಮಾಜದ ಅಧ್ಯಕ್ಷ ಡಾ. ಅಶೋಕ್ ಗುರುದಾಸ್, ಹಿರಿಯ ಲೇಖಕಿ ರಾಣಿ ಗೋವಿಂದರಾಜು ಮತ್ತಿತರರು ಉಪಸ್ಥಿತರಿದ್ದರು.



ರಾಜಾರಾಮ್ ಮೋಹನ್ ರಾಯ್ ಮೋಹನ್ ರಾಯ್ ಭಾವಚಿತ್ರಕ್ಕೆ ಮಾಜಿ ಸಚಿವೆ ಲಲಿತಾ ನಾಯಕ್, ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಮತ್ತಿತರರು ಪುಷ್ಪನಮನ ಸಲ್ಲಿಸಿದರು.

ಉದಯವಾಣಿ ಬೆಂಗಳೂರು
ಬುಧವಾರ | ಸೆಪ್ಟೆಂಬರ್ | 28 | 2016

ಮೌಢ್ಯ ವಿರೋಧಿ ಕಾನೂನು ಜಾರಿಗೊಳಿಸಿ: ಲಲಿತಾ ನಾಯಕ್



ರಾಜಾರಾಮ ಮೋಹನ್‌ರಾಯ್ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಗಣ್ಯರು ಪುಷ್ಪನಮನ ಸಲ್ಲಿಸಿದರು.

ಬೆಂಗಳೂರು: ಸಮಾಜದಲ್ಲಿ ಮೌಢ್ಯತೆ ಹೆಚ್ಚಾಗುತ್ತಿದ್ದಂತೆ ಮೂರ್ತಿ ಪೂಜೆ ಹೆಸರಲ್ಲಿ ವ್ಯಾಪಾರೀಕರಣದ ಅಬ್ಬರ ವಿಪರೀತವಾಗಿದೆ ಎಂದು ಮಾಜಿ ಸಚಿವೆ ಡಾ. ಬಿ.ಟಿ. ಲಲಿತಾ ನಾಯಕ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಬೆಂಗಳೂರು ಬ್ರಹ್ಮ ಸಮಾಜ ಮತ್ತು ಅನಕ್ಯ ಕನ್ನಡ ಸಂಘ ಜಂಟಿಯಾಗಿ ಮಂಗಳವಾರ ಹಮ್ಮಿಕೊಂಡಿದ್ದ 'ಮಹಿಳಾ ವಿಮೋಚನಾ ಚಳವಳಿ ರೂವಾರಿ ರಾಜಾರಾಮ ಮೋಹನ್‌ರಾಯ್' ಪುಣ್ಯಸ್ಮರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಸತಿ ಪದ್ಧತಿ' ವಿರುದ್ಧ ಹೋರಾಟ ನಡೆಸಿದ ಮಹಾನ್ ವ್ಯಕ್ತಿ ರಾಜಾರಾಮ್ ಮೋಹನ್‌ರಾಯ್ ಅವರಾಗಿದ್ದಾರೆ. ಆಗಿನ ಕಾಲದಲ್ಲಿಯೇ ಅವರು ಮೂರ್ತಿ ಪೂಜೆಗಳನ್ನು ಕಟುವಾಗಿ ವಿರೋಧಿಸಿದ್ದರು. ಆದರೆ, ಇತ್ತೀಚೆಗೆ ಸಮಾಜದಲ್ಲಿ ಮೌಢ್ಯತೆ ಹೆಚ್ಚಾಗುತ್ತಿದ್ದು, ಮೂರ್ತಿ ಪೂಜೆ ಹೆಸರಲ್ಲಿ ದೇವಾಲಯಗಳು ವ್ಯಾಪಾರೀಕರಣ ಮಾಡುತ್ತಿವೆ. ಹೀಗಾಗಿ ಮೌಢ್ಯ ವಿರೋಧಿ ಕಾನೂನು ಜಾರಿಗೊಳಿಸಬೇಕು ಎಂದು ಹೇಳಿದರು.

ಬುದ್ಧ, ಬಸವಣ್ಣ, ಮಹಾತ್ಮ ಗಾಂಧೀಜಿ ಅವರಂತಹ ಮಹಾನ್ ವ್ಯಕ್ತಿಗಳ ತತ್ವ-ಸಿದ್ಧಾಂತಗಳನ್ನು ಯಾರು ಅನುಸರಿಸುತ್ತಿಲ್ಲ. ಜಾತ್ಯಾತೀತತೆ ಬಗ್ಗೆ ಮಾತನಾಡುವವರ ಒಳಮನಸ್ಸಿನಲ್ಲಿ ಜಾತಿ, ಅಸಮಾನತೆ ಬೇಕಾದಷ್ಟಿದೆ. ಜಾತಿ-ಧರ್ಮದ ನಡುವೆ ಸಮಾಜದಲ್ಲಿ ಸಮಾನತೆ ಕಾಣಬೇಕು ಎಂಬ ಮಹಾನ್ ವ್ಯಕ್ತಿಗಳ ಕನಸು ಈಡೇರಿಸುವತ್ತ ಯಾರು ದಿಟ್ಟ ಹೆಜ್ಜೆ ಇಡುತ್ತಿಲ್ಲ. ಕೇವಲ ಸ್ವಾರ್ಥ ಜೀವನಕ್ಕಾಗಿ ಮಹಾನ್ ವ್ಯಕ್ತಿಗಳ ಹೆಸರನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದು ನಮ್ಮ ದೇಶದ ದುರಂತವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶಿಕ್ಷಣ ತಜ್ಞ ಡಾ.ವೂಡೇ ಪಿ. ಕೃಷ್ಣ ಮಾತನಾಡಿ, ರಾಜಾರಾಮ್ ಮೋಹನ್ ರಾಯ್ ಬಂಗಾಳಿಯವರಾಗಿದ್ದರೂ 19 ಭಾಷೆಗಳ ಮೇಲೆ ಹಿಡಿತ ಸಾಧಿಸಿದ್ದರು. ದೇಶವು ಅಭಿವೃದ್ಧಿ ಆಗಬೇಕಾದರೆ ಸರ್ವಧರ್ಮ ಸಮನ್ವಯತೆ ಕಾಯ್ದುಕೊಳ್ಳಬೇಕಾದ ಅಗತ್ಯತೆ ಇದೆ ಎಂಬುದನ್ನು ಪ್ರತಿಪಾದಿಸಿದ್ದರು. ಅನಿಷ್ಟ ಮೌಢ್ಯಗಳ ವಿರುದ್ಧ ದನಿ ಎತ್ತಿದ್ದ ಅವರು, ಇಂಗ್ಲಿಷ್ ಶಿಕ್ಷಣದ ಮಹತ್ವವನ್ನು ಸಾರಿ ಹೇಳಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಲೇಖಕಿ ರಾಣಿ ಗೋವಿಂದರಾಜು, ಬೆಂಗಳೂರು ಬ್ರಹ್ಮ ಸಮಾಜ ಅಧ್ಯಕ್ಷ ಡಾ.ಅಶೋಕ್ ಗುರುದಾಸ್ ಇತರರು ಉಪಸ್ಥಿತರಿದ್ದರು.

ಪ್ರಜಾವಾಣಿ
ಬುಧವಾರ, ಸೆಪ್ಟೆಂಬರ್ 28, 2016

ಲೇಖಕಿ ಬಿ.ಟಿ.ಲಲಿತಾ ನಾಯಕ್ ಅಭಿಪ್ರಾಯ

'ಮೋಹನ ರಾಯ್ ತತ್ವಗಳು ಇಂದಿಗೂ ಪ್ರಸ್ತುತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜ ಸುಧಾರಕ ರಾಜಾರಾಮ್ ಮೋಹನ ರಾಯ್ ಅವರು 250 ವರ್ಷಗಳ ಹಿಂದೆ ಹೇಳಿದ ಮಾತುಗಳನ್ನು ಸೇರಿಸಿಕೊಂಡು ಇಂದು ಮೌಢ್ಯ ವಿರೋಧಿ ಕಾಯ್ದೆ ಜಾರಿಗೆ ತರಬಹುದು' ಎಂದು ಲೇಖಕಿ ಬಿ.ಟಿ. ಲಲಿತಾ ನಾಯಕ್ ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರು ಬ್ರಹ್ಮ ಸಮಾಜ ಹಾಗೂ ಅ.ನ.ಕೃ ಕನ್ನಡ ಸಂಘವು ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ರಾಜಾರಾಮ್ ಮೋಹನ ರಾಯ್ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಯಾವ ಧರ್ಮದಲ್ಲಿ ಸಮಾನತೆ ಇದೆ ಎಂಬುದನ್ನು ಅಧ್ಯಯನ ಮಾಡಿ, ಹಿಂದೂ ಧರ್ಮದಲ್ಲಿನ ಕಳಂಕಿತ ಭಾಗವನ್ನು ತೊಡೆದುಹಾಕಿ, ಬ್ರಹ್ಮ ಸಮಾಜ ಎಂಬ ಮಾನವೀಯ ಧರ್ಮ ಹುಟ್ಟು ಹಾಕಿದವರು ರಾಜಾರಾಮ್ ಮೋಹನ ರಾಯ್' ಎಂದರು.



ಮೋಹನ ರಾಯ್ ಅವರ ಭಾವಚಿತ್ರಕ್ಕೆ ಬಿ.ಟಿ.ಲಲಿತಾ ನಾಯಕ್ ಪುಷ್ಪನಮನ ಸಲ್ಲಿಸಿದರು. ರಾಣಿ ಗೋವಿಂದರಾಜು, ಬೆಂಗಳೂರು ಬ್ರಹ್ಮಸಮಾಜದ ಅಧ್ಯಕ್ಷ ಅಶೋಕ ಗುರುದಾಸ್, ಗೌರವ ಕಾರ್ಯದರ್ಶಿ ಡಬ್ಲ್ಯೂ.ಎಚ್.ದೇವಕುಮಾರ್ ಇದ್ದರು.
-ಪ್ರಜಾವಾಣಿ ಚಿತ್ರ

'ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದ ಬಸವಣ್ಣನವರಿಗಿಂತ ಹೆಚ್ಚು ಗಟ್ಟಿ ದನಿಯಲ್ಲಿ ಮೋಹನ ರಾಯ್ ಅವರು ಮಾತನಾಡಿದ್ದಾರೆ. ಇಂಥ ಮಹನೀಯರ ತತ್ವ ಸಿದ್ಧಾಂತಗಳನ್ನು ಮರೆಯುತ್ತಿರುವುದು ದೊಡ್ಡ ದುರಂತ' ಎಂದರು.

ವೂಡೇ ಪಿ.ಕೃಷ್ಣ ಮಾತನಾಡಿ, 'ಫ್ರಾನ್ಸ್‌ಗೆ ಸ್ವಾತಂತ್ರ್ಯ ಸಿಕ್ಕಾಗ ಇಲ್ಲಿ ಪಾರ್ಟಿ ಮಾಡಿ ಖುಷಿಪಟ್ಟವರು ಮೋಹನ ರಾಯ್ ಅವರು. ಮಾನವನ ವಿಕಾಸಕ್ಕೆ ಶ್ರಮಿಸಿದರು' ಎಂದು ಸ್ಮರಿಸಿಕೊಂಡರು.

'ದೇಶ ಉದ್ಧಾರವಾಗಲು ಸರ್ವ ಧರ್ಮ ಸಮನ್ವಯ ಸಾಧಿಸಬೇಕು. ಎಲ್ಲ ಧರ್ಮದವರೂ ಒಂದೇ ಎಂಬ ಭಾವನೆ ವ್ಯಕ್ತಪಡಿಸಿದರು. ಬ್ರಿಟೀಷರ ಕಾಲದಲ್ಲಿ ಮೋಹನರಾಯ್ ಅವರು ಮಾಡಿದ ಸಮಾಜ ಸುಧಾರಣೆ ಸ್ವತಂತ್ ಭಾರತದಲ್ಲಿ ಮಾಡಲು ಸಾಧ್ಯವಿಲ್ಲ' ಎಂದು ಹೇಳಿದರು.

ಲೇಖಕಿ ರಾಣಿ ಗೋವಿಂದರಾಜು ಮಾತನಾಡಿದರು.

ಪ್ರಜಾವಾಣಿ ಮಂಗಳವಾರ ಜೂನ್ 7, 2016



ಸೃಜನ್ ಪಾಲ್‌ಸಿಂಗ್ (ಎಡದಿಂದ ಎರಡನೆಯವರು) ಅವರು 'ಕಲಾಂ ಗ್ರಂಥಾಲಯ'ದಲ್ಲಿ ಪುಸ್ತಕಗಳನ್ನು ವೀಕ್ಷಿಸಿದರು. ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೆ.ಪಿ.ಕೃಷ್ಣ, ಡಿಯಾಗಿಯೊ ಕಂಪೆನಿಯ ವ್ಯವಸ್ಥಾಪಕಿ ಮಹಾಲಕ್ಷ್ಮಿ ರವಿಶಂಕರ್, ಅಜಯ್ ಬಿ.ಬಾಳಿಗ ಇದ್ದಾರೆ.

ಯಲಹಂಕದಲ್ಲಿ ಕಲಾಂ ಗ್ರಂಥಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸ್ಮರಣಾರ್ಥ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. ಕಲಾಂ ಅವರಿಗೆ ಆಪ್ತ ಸಲಹೆಗಾರರಾಗಿದ್ದ ಸೃಜನ್ ಪಾಲ್‌ಸಿಂಗ್ ಅವರು ಗ್ರಂಥಾಲಯವನ್ನು ಸೋಮವಾರ ಉದ್ಘಾಟಿಸಿದರು.


'ಎಲ್ಲ ವಿದ್ಯಾರ್ಥಿಗಳಿಗೂ ಗ್ರಂಥಾಲಯ ಸೌಲಭ್ಯ ದೊರೆಯಬೇಕೆಂಬುದು ಕಲಾಂ ಅವರ ಕನಸಾಗಿತ್ತು. ಅವರ ಕನಸನ್ನು ನನಸು ಮಾಡುವ ಸಲುವಾಗಿ ದೇಶಾದ್ಯಂತ ಗ್ರಾಮೀಣ ಮತ್ತು ಕೊಳಚೆ ಪ್ರದೇಶಗಳಲ್ಲಿ ಅವರ ಹೆಸರಿನಲ್ಲಿ ಗ್ರಂಥಾಲಯವನ್ನು ಸ್ಥಾಪಿಸಲಾಗುತ್ತಿದೆ' ಎಂದು ಸಿಂಗ್ ಹೇಳಿದರು.

ಡಿಯಾಗಿಯೊ ಕಂಪೆನಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಅಜಯ್ ಬಿ.ಬಾಳಿಗ ಮಾತನಾಡಿ, 'ವಿದ್ಯಾರ್ಥಿಗಳು ಸೃಜನಾತ್ಮಕವಾಗಿ ಚಿಂತನೆಮಾಡಬೇಕು.

ಒಳ್ಳೆಯ ಪುಸ್ತಕಗಳನ್ನು ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು' ಎಂದರು.'

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ ಸೋಮವಾರ 30 ಮೇ 2016
VIJAYAVANI » 30 MAY 2016

ಅರಿವಿನ ಮನೆ ಚಿತ್ರ ಪ್ರದರ್ಶನ




ನಾಗತಿಹಳ್ಳಿ ಚಂದ್ರಶೇಖರ್, ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ 'ಅರಿವಿನ ಮನೆ' ಚಿತ್ರ ವೀಕ್ಷಿಸಿದರು.

ಬೆಂಗಳೂರು: ಕರ್ನಾಟಕ ಚಲನಚಿತ್ರ ಅಕಾಡೆಮಿ ಆಯೋಜಿಸಿದ್ದ 'ಬೆಳ್ಳಿ ಸಿನಿಮಾ ಬೆಳ್ಳಿ ಮಾತು' ಪ್ರತಿ ವಾರಾಂತ್ಯ ಕಾರ್ಯಕ್ರಮದಲ್ಲಿ ಶನಿವಾರ ಶಿವಾನಂದ್ ಸೋಮಪ್ಪ ನಿರ್ದೇಶನದ 'ಅರಿವಿನ ಮನೆ' ಚಲನಚಿತ್ರವನ್ನು ನಗರದ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಪ್ರದರ್ಶಿಸಲಾಯಿತು. 12ನೇ ಶತಮಾನದ ಅನುಭವ ಮಂಟಪ ಹಾಗೂ ಶರಣರ ಕಾಯಕ ಕಥೆ ಮೇಲೆ ರೂಪುಗೊಂಡಿದ್ದ 'ಅರಿವಿನ ಮನೆ' ಚಿತ್ರ ವೀಕ್ಷಣೆ ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ದೇಶಕ ಮತ್ತು ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್, ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಹಾಗೂ ಚಿತ್ರತಂಡದವರು ಹಾಜರಿದ್ದರು.

» ಬೆಳ್ಳಿ ಸಿನಿಮಾ, ಬೆಳ್ಳಿ ಮಾತು ಕಾರ್ಯಕ್ರಮ

ಶನಿವಾರ, 21, ಮೇ, 2016, ಬೆಂಗಳೂರು, ಸಂಯುಕ್ತ ಕರ್ನಾಟಕ



ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಪದವಿ ಪುರಸ್ಕೃತ ವಿದ್ಯಾರ್ಥಿಗಳೊಂದಿಗೆ ಕಾಲೇಜಿನ ಪ್ರಧಾನ ಕಾರ್ಯದರ್ಶಿ ಡಾ.ವೂಡೇ.ಪಿ ಕೃಷ್ಣ, ಸಹಾಯಕ ಕಾರ್ಯದರ್ಶಿ ಸರೋಜ ಕೆ.ಎಂ.ನಂಜಪ್ಪ, ನಿರ್ದೇಶಕರಾದ ಎಂ.ಪ್ರಕಾಶ್, ಟ್ರಸ್ಟಿಗಳಾದ ಕೃಷ್ಣಸ್ವಾಮಿ ಮತ್ತು ಐಸಿಎಆರ್ ಇನ ಅಧ್ಯಕ್ಷರಾದ ಕಾರ್ತಿಕ್ ಶ್ರೀಧರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.


ಸಂಜೆವಾಣಿ
9 ಗುರುವಾರ ಮೇ 12, 2016



ನಗರದ ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿದ್ದ ರಾಷ್ಟ್ರೀಯ ಹಿಮಾಲಯ ಪ್ರಕೃತಿ ಅಧ್ಯಯನ ಮತ್ತು ಕಾಲ್ನಡಿಗೆ ಸಾಹಸ ಕಾರ್ಯಕ್ರಮದಲ್ಲಿ ಯುವ ಯಾತ್ರಾರ್ಥಿಗಳನ್ನು ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಅವರು ಬೀಳ್ಕೊಟ್ಟರು. ಡಾ.ಸಿ.ಎನ್.ಎನ್. ರಾಜು, ಎಸ್.ಕೆ. ಮೆಹ್ತಾ, ಕೆ. ಕವಿತಾ ಇದ್ದಾರೆ.

ಈ ಸಂಜೆ

ಭಾನುವಾರ, 08-05-2016



ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿದ್ದ ರಾಷ್ಟ್ರೀಯ ಹಿಮಾಲಯ ಪ್ರಕೃತಿ ಅಧ್ಯಯನ ಮತ್ತು ಕಾಲ್ನಡಿಗೆ ಸಾಹಸ ಕಾರ್ಯಕ್ರಮದ 30 ಯುವ ಯಾತ್ರಾರ್ಥಿಗಳನ್ನು ಶಿಕ್ಷಣ ತಜ್ಞ ಡಾ. ಪ್ರೊ. ಪಿ. ಕೃಷ್ಣ ಬೀಳ್ಕೊಟ್ಟರು. ಡಾ. ಸಿ. ಎನ್. ಎನ್. ರಾಜು, ಎಸ್. ಕೆ. ಮೆಹ್ತಾ, ಶೇಷಾದ್ರಿಪುರಂ ಪ್ರೌಢಶಾಲೆ ಪ್ರಾಂಶುಪಾಲೆ ಕೆ. ಕವಿತಾ, ಸೇರಿದಂತೆ ಮತ್ತಿತರರಿದ್ದರು.

'ಉತ್ಪಾದನಾ ರಾಜಧಾನಿ' ರಾಷ್ಟ್ರೀಯ ಸಮಾವೇಶ

ಭಾರತೀಯ ಇಂಜಿನಿಯರ್‌ಗಳ ಸಂಸ್ಥೆ ಆಯೋಜನೆ



ಸಮಾವೇಶದ ಬಗ್ಗೆ ವೂಡೇ ಪಿ. ಕೃಷ್ಣ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

» ಮೇ 5 ರಿಂದ 7ರ ವರೆಗೆ ಸಮಾವೇಶ

» ಉತ್ಪಾದನಾ ವಲಯ ಸುಧಾರಣೆ ಉದ್ದೇಶ

ಬೆಂಗಳೂರು: ಭಾರತೀಯ ಇಂಜಿನಿಯರ್‌ಗಳ ಸಂಸ್ಥೆಯ ರಾಜ್ಯ ಘಟಕ ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮೇ 5ರಿಂದ 7ರವರೆಗೆ 2020 ರ ವೇಳೆಗೆ ಭಾರತ ವಿಶ್ವದ ಉತ್ಪಾದನಾ ರಾಜಧಾನಿ-ಭವಿಷ್ಯ ಮತ್ತು ಮಾರ್ಗಗಳು ಕುರಿತ ರಾಷ್ಟ್ರೀಯ ಸಮಾವೇಶ ಆಯೋಜಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಆಟೋಮೋಟಿವ್ ಕ್ಷೇತ್ರದ ತಂತ್ರಜ್ಞಾನ, ಉತ್ಪಾದನಾ ವಲಯದಲ್ಲಿ ರೋಬಾಟಿಕ್ ತಂತ್ರಜ್ಞಾನ, ರೈಲ್ವೆ ಮತ್ತು ಹಡಗು ಕ್ಷೇತ್ರದ ಆಧುನೀಕರಣ, ಎಲೆಕ್ಟ್ರಾನಿಕ್ ಮತ್ತು ಸಂಪರ್ಕ ಕ್ಷೇತ್ರದಲ್ಲಿ ತಂತ್ರಜ್ಞಾನ ಉತ್ಪಾದನೆ, ಉತ್ತಮ ಗುಣಮಟ್ಟದ ಖಾತರಿ, ಕೈಗಾರಿಕೆಗಳ ಸುರಕ್ಷತೆ, ವಾಯುಯಾನ ಅಳವಡಿಕೆ, ಕೌಶಲಾಭಿವೃದ್ಧಿ ಕ್ರಮಗಳು ಸೇರಿ ಉತ್ಪಾದನಾ ವಲಯ ಸುಧಾರಣೆ ಕುರಿತು ತಾಂತ್ರಿಕ ವಿಚಾರಸಂಕಿರಣಗಳು ನಡೆಯಲಿವೆ ಎಂದರು.

ಸಮಾವೇಶವನ್ನು ರಾಜ್ಯ ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಸಚಿವ ರೋಷನ್ ಬೇಗ್ ಉದ್ಘಾಟಿಸಲಿದ್ದಾರೆ. ಭಾರತೀಯ ಇಂಜಿನಿಯರ್‌ಗಳ ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಡಾ. ಎಲ್.ವಿ. ಮುರಳೀಕೃಷ್ಣ ರೆಡ್ಡಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಸಮಾವೇಶದಲ್ಲಿ ಹೀರೋ ಮೋಟೋಕಾರ್ಪ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಪವನ್ ಮುಂಜಾಲ್, ಇಂಡಿಯನ್ ಆಸ್ಟ್ರೋನಾಟ್ ಅಂಡ್ ಡೈನಾಮ್ಯಾಟಿಕ್ಸ್ ಟೆಕ್ನಾಲಜೀಸ್‌ನ ನಿರ್ದೇಶಕ ರವೀಶ್ ಮಲ್ಹೋತ್ರ, ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಎಂಎಸ್ಎಂಇ(ಐಐಎಸ್‌ಸಿ)ಯ ನಿರ್ದೇಶಕ ಶ್ರೀನಿವಾಸ ಜಮಖಂಡಿ, ಕಿರ್ಲೋಸ್ಕರ್ ಮೋಟಾರ್ಸ್, ಟಿವಿಎಸ್ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕೈಗಾರಿಕಾ ಕ್ಷೇತ್ರದಲ್ಲಿ ಸುಧಾರಿತ ತಂತ್ರಜ್ಞಾನ, 3-ಡಿ ಪ್ರಿಂಟಿಂಗ್, ನ್ಯಾನೋ ಉತ್ಪನ್ನಗಳ ತಯಾರಿಕೆ, ಎಫ್ಎಂಸಿಜಿ ಉತ್ಪನ್ನ ತಯಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನಗಳ ಕುರಿತು ಮಾಹಿತಿ ನೀಡಲಿದ್ದಾರೆ ಎಂದರು.

ಸಂಸ್ಥೆಯ ಸಂಯೋಜಕ ಕಾರ್ಯದರ್ಶಿ ರಂಗರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ

ಗುರುವಾರ 5.5.2016

ಬೆಂಗಳೂರು

ಅರವತ್ತೇ ಅರವತ್ತು ಪದಗಳು

ಪ್ರೊಡಕ್ಷನ್ ಎಂಜಿನಿಯರ್‌ಗಳ ಸಮ್ಮೇಳನ ಇಂದಿನಿಂದ

ಬೆಂಗಳೂರು: ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ ಕರ್ನಾಟಕ ಘಟಕವು '2020ರ ವೇಳೆಗೆ ಭಾರತ ವಿಶ್ವದ ಉತ್ಪಾದನಾ ರಾಜಧಾನಿ-ಭವಿಷ್ಯ ಮತ್ತು ಮಾರ್ಗಗಳು' ವಿಷಯದೊಂದಿಗೆ 31ನೇ ಪ್ರೊಡಕ್ಷನ್ ಎಂಜಿನಿಯರ್‌ಗಳ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದೆ ಎಂದು ಐಇಐನ ಕಾರ್ಯದರ್ಶಿ ಪ್ರೊ. ಪಿ.ಕೃಷ್ಣ ತಿಳಿಸಿದ್ದಾರೆ. ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನವು ನಗರದ ಡಾ. ಬಿ.ಆರ್. ಅಂಬೇಡ್ಕರ್ ರಸ್ತೆಯ ಸರ್ ಎಂ.ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಮೇ 5ರಿಂದ 7ರವರೆಗೆ ನಡೆಯಲಿದೆ. ವಿದ್ಯಾರ್ಥಿಗಳು ಎಂಜಿನಿಯರಿಂಗ್ ಮುಗಿದ ನಂತರ ಉತ್ಪಾದನಾ ಕ್ಷೇತ್ರ ಬಿಟ್ಟು ಐಟಿ ಕ್ಷೇತ್ರ ಆರಿಸಿಕೊಳ್ಳುತ್ತಿದ್ದಾರೆ, ಆದರೆ ಉತ್ಪಾದನಾ ಕ್ಷೇತ್ರದಲ್ಲೂ ಅವಕಾಶಗಳಿವೆ ಎಂದು ತಿಳಿಸುವ ನಿಟ್ಟಿನಲ್ಲಿ ಸಮ್ಮೇಳನ ಆಯೋಜಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಹಬ್ಬಗಳ ಆಚರಣೆಯಿಂದ ಭಾರತೀಯ ಸಂಸ್ಕೃತಿ ಉಳಿವು

ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಅಭಿಮತ » ಮೈತ್ರೀ ಸಂಸ್ಕೃತ-ಸಂಸ್ಕೃತಿ ಪ್ರತಿಷ್ಠಾನದಿಂದ ಯುಗಾದಿ ಉತ್ಸವ » ಇ-ಪತ್ರಿಕೆ ಲೋಕಾರ್ಪಣೆ

ಮಲ್ಲೇಶ್ವರ: ಹಬ್ಬಗಳ ಆಚರಣೆಯಿಂದಲೇ ಪ್ರಾಚೀನ ಸಂಸ್ಕೃತಿ ಈವರೆಗೆ ಬೆಳೆದು ಬಂದಿದೆ ಎಂದು ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಹೇಳಿದ್ದಾರೆ.

ಮೈತ್ರೀ ಸಂಸ್ಕೃತ-ಸಂಸ್ಕೃತಿ ಪ್ರತಿಷ್ಠಾನಮ್ ನಗರದಲ್ಲಿ ಆಯೋಜಿಸಿದ್ದ ಯುಗಾದಿ ಉತ್ಸವ ಹಾಗೂ 'ಮೈತ್ರೀ' ಇ-ಪತ್ರಿಕೆ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಹಬ್ಬಗಳ ಅರ್ಥಪೂರ್ಣ ಆಚರಣೆ ಮರೆಯಾಗಿರುವುದರಿಂದ ಸಂಸ್ಕೃತಿ ಮಾಸುತ್ತಿದೆ. ಆಧುನಿಕತೆಯ ಶರವೇಗ ಗಮನಿಸಿದಾಗ, ನಮ್ಮತನ ಉಳಿಸಿಕೊಂಡಿದ್ದೇವೆಯೇ ಎಂಬ ಪ್ರಶ್ನೆ ಉದ್ಭವಿಸದೇ ಇರದು. ಆದ್ದರಿಂದ ನಮ್ಮತನವೆಂದರೇನು ಎಂಬುದನ್ನು ಇಂದಿನ ಪೀಳಿಗೆಗೆ ತಿಳಿಸಬೇಕಾಗಿದೆ ಎಂದರು.

ಆಶೀರ್ವಚನ ನೀಡಿದ ಸಿದ್ಧಾರೂಢ ಮಿಷನ್ ಆಶ್ರಮದ ಶ್ರೀ ಆರೂಢ ಭಾರತೀ ಸ್ವಾಮೀಜಿ, ಸಂಸ್ಕಾರ ಮತ್ತು ಸಂಸ್ಕೃತಿ ಎಲ್ಲ ಮತ ಹಾಗೂ ಎಲ್ಲ ಕಾಲಕ್ಕೂ ಪ್ರಸ್ತುತ ಎಂದು ಹೇಳಿದರು.



ಮೈತ್ರೀ ಸಂಸ್ಕೃತ-ಸಂಸ್ಕೃತಿ ಪ್ರತಿಷ್ಠಾನದ ಯುಗಾದಿ ಉತ್ಸವದಲ್ಲಿ 'ವಿಜಯವಾಣಿ' ಸಂಪಾದಕ ಹರಿಪ್ರಕಾಶ್ ಕೋಣೆಮನೆ, ನಟ ಸುಚೇಂದ್ರಪ್ರಸಾದ್, ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ನಟ ಸುಚೇಂದ್ರಪ್ರಸಾದ್ ಮಾತನಾಡಿ, ತಂತ್ರಜ್ಞಾನ ಬಳಕೆಯಾಗದ ಯಾವ ಕ್ಷೇತ್ರವೂ ಬಹುಶಃ ಇಂದು ಉಳಿದಿಲ್ಲ. ಗಣಕಯಂತ್ರದ ಯುಗದಲ್ಲಿ ಅಂತರ್ಜಾಲ ಮಾಡಿದ ಮೋಡಿ ಮಾತಿಗೆ ನಿಲುಕದ್ದು. ದಿನಬಳಕೆಯ ವಸ್ತುವಿನಿಂದ ಹಿಡಿದು ಬೌದ್ಧಿಕ ಕಸರತ್ತಿನವರೆಗೆ ಪ್ರತಿ ಕಾರ್ಯಕ್ಕೂ ಮಾನವ ಅಂತರ್ಜಾಲದ ಮೊರೆ ಹೋಗಿದ್ದಾನೆ ಎಂದರು.

'ವಿಜಯವಾಣಿ' ಪತ್ರಿಕೆಯ ಸಂಪಾದಕ ಹರಿಪ್ರಕಾಶ್ ಕೋಣೆಮನೆ 'ಮೈತ್ರೀ' ಇ- ಪತ್ರಿಕೆ ಲೋಕಾರ್ಪಣೆಗೊಳಿಸಿದರು. ಅಂತರ್ಜಾಲ ಮಾಧ್ಯಮ ವ್ಯಾಪಕವಾಗುತ್ತಿದ್ದಂತೆ ದೇಶ-ದೇಶಗಳ ನಡುವೆ ಅಂತರ ಕಡಿಮೆಯಾಗಿದೆ, ಮನಸ್ಸು-ಮನಸ್ಸುಗಳ ನಡುವೆ ಸಂಪರ್ಕಸೇತುವೆ ನಿರ್ಮಾಣಗೊಂಡಿದೆ. ಪ್ರತಿಯೊಬ್ಬರ ಪ್ರತಿಯೊಂದು ಅನಿಸಿಕೆಗೂ-ಅಭಿಪ್ರಾಯಕ್ಕೂ ವೇದಿಕೆ ಒದಗಿದೆ ಎಂದರು.

ಅಂಕಣಕಾರ ಎಸ್.ಷಡಕ್ಷರಿ, ಹಾಸ್ಯಶೈಲಿಯಲ್ಲಿ ಗಂಭೀರ ಚಿಂತನೆಗಳನ್ನು ಹರಿಯಬಿಟ್ಟರು.

ಚಿಂತಕ ಡಾ. ವಿನಯಚಂದ್ರ ಬನವತಿ, ವಕೀಲ ಕೆ.ಜಿ. ಕಾಮತ್, ವಿದ್ವಾಂಸರಾದ ವಿ.ಎನ್. ಭಟ್, ಕೃಷ್ಣಮೂರ್ತಿ ಮಯ್ಯ, ಮುರಳೀಧರ ಶರ್ಮಾ, ಲೇಖಕಿ ಮನೋಹರಿ ಪಾರ್ಥಸಾರಥಿ, ವೀಣಾ ನಾಗರಾಜ್ ಮತ್ತಿತರರಿದ್ದರು. ಕಲಾವಿದೆ ಭವಾನಿ ಹೆಗಡೆ, ಕುಮಾರಿ ಓಹಿಲೇಶ್ವರಿ ಮತ್ತು ಕುಮಾರ ಸುಧಾಂಶು ಹೆಗಡೆ ತಂಡ ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಿತು.

> ಭವ್ಯ ಪರಂಪರೆಯೊಂದು ನಮ್ಮ ಬೆನ್ನಿಗಿದೆ. ಅದನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಮಹತ್ತರ ಜವಾಬ್ದಾರಿ ನಮ್ಮ ಮೇಲಿದೆ.
> । ಟಿ. ವೆಂಕಟೇಶ್ ಅಭಿಮಾನಿ ಪ್ರಕಾಶನ


ಹಲವು ವೈಶಿಷ್ಟ್ಯಗಳ ಇ-ಪತ್ರಿಕೆ ಮೈತ್ರೀ

ಸಂಸ್ಕೃತ-ಸಂಸ್ಕೃತಿ-ಸಂಸ್ಕಾರ ಮತ್ತು ವೈಚಾರಿಕ ಚಿಂತನೆಗಳಿಗೆಂದೇ ರೂಪಿಸಲಾಗಿರುವುದೇ ಮೈತ್ರೀ ಇ-ಪತ್ರಿಕೆ. ತಿಂಗಳಿಗೊಮ್ಮೆ ಹೊಸಹೊಸ ವಿಚಾರಗಳು, ಚಿಂತನ-ಮಂಥನಗಳು 'ಮೈತ್ರೀ'ಯಲ್ಲಿ ಪ್ರಕಟಗೊಳ್ಳಲಿವೆ. ಅನೇಕ ಗಣ್ಯರ ಅಂಕಣಗಳೂ ಇದರಲ್ಲಿರಲಿವೆ. ಓದುಗರಿಗೆ ತಮ್ಮ ಅನಿಸಿಕೆ-ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಕೂಡ ಇದು ಮುಕ್ತ ವೇದಿಕೆಯಾಗಲಿದೆ. ಪ್ರತಿ ತಿಂಗಳ ಮೊದಲ ದಿನ ಅಂದರೆ ಚೈತ್ರ ಪ್ರಥಮಾ, ವೈಶಾಖ ಪ್ರಥಮಾ, ಜ್ಯೇಷ್ಠ ಪ್ರಥಮಾ.. ಹೀಗೆ ನಮ್ಮ ಭಾರತೀಯ ಪಂಚಾಂಗ ಪದ್ಧತಿಯಂತೆ ಈ ಪತ್ರಿಕೆ ಪ್ರಕಟವಾಗಲಿದೆ. ನಮ್ಮ ದೈನಂದಿನ ಆಚರಣೆಗಳಲ್ಲಿನ ವೈಜ್ಞಾನಿಕತೆ, ಆಚಾರ-ವಿಚಾರ, ಸಂಪ್ರದಾಯ, ಸಂಸ್ಕಾರ, ಸಂಸ್ಕೃತಿ, ಸಂಸ್ಕೃತದ ವೈಶಿಷ್ಟ್ಯ, ದೇಶ-ವಿದೇಶಗಳಲ್ಲಿ ಸಂಸ್ಕೃತದ ಪ್ರಭಾವ, ಸಾಂಸ್ಕೃತಿಕ ಪರಂಪರೆ ಹೀಗೆ ಹತ್ತಾರು ವಿಚಾರಗಳು ಈ ಪತ್ರಿಕೆ ಮೂಲಕ ಪ್ರಕಟವಾಗಲಿ, ಮುಖ್ಯ ಸಂಪಾದಕರಾಗಿ ಡಾ. ಗಣಪತಿ ಭಟ್, ಕಿರಣ್ ಬೈರುಂಬೆ ಕಾರ್ಯನಿರ್ವಹಿಸಿದರೆ ಶ್ರೀಧರ್ ಭಟ್, ಸ್ವರೂಪ್ ಹಾಗೂ ವಿಜೇತ್ ತಾಂತ್ರಿಕ ಸಹಕಾರ ನೀಡಲಿದ್ದಾರೆ.

ಸಮಾಜದ ಮೌಢ್ಯ ಕಂದಾಚಾರಗಳನ್ನು ತೊಲಗಿಸಿ ವೈಚಾರಿಕತೆಯನ್ನು ಮೂಡಿಸಿ: ಡಾ.ಸಿದ್ದಲಿಂಗಯ್ಯ

ಸಮಾಜದ ಮೌಢ್ಯ ಕಂದಾಚಾರಗಳನ್ನುತೊಲಗಿಸಿ ವೈಚಾರಿಕ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೆಕು ಎಂದು ಸಾಹಿತಿ ಅಂಬೆಡ್ಕರ್ ಅಧ್ಯಯನಕೇಂದ್ರದ ನಿರ್ದೇಶಕ ಡಾ.ಸಿದ್ದಲಿಂಗಯ್ಯ, ಕರೆ ನೀಡಿದರು,

ಅವರು ಇಲ್ಲಿನ ಶೇಷಾದ್ರಿಪುರಂ ಅಕಾಡೆಮಿ ಆಪ್ ಬಿಸಿನೆಸ್ ಸ್ಟಡೀಸ್‌ನ 11ನೇ ಕಾಲೇಜು ವಾರ್ಷಿಕೋತ್ಸವದ ಮುಖ್ಯ ಅತಿಥಿಗಳಾಗಿ ಮಾತನಾಡಿ ಶ್ರಮ ಸಂಸ್ಕೃತಿಯ ಬಗ್ಗೆ ತಿಳಿಸುತ್ತ ತಮ್ಮ ಒರಿಸ್ಸಾದ ಅನುಭವವನ್ನು ಹೇಳಿದ್ದು ಹೀಗೆ;-ಅಲ್ಲಿನ ದೇವರುಗಳ ಕೈಯಲ್ಲಿ ಪೊರಕೆ,ಚನಿಕೆ,ಗುದ್ದಲಿ,ಮತ್ತಿತರ ಸಲಕರಣೆಗಳು ಇದ್ದವು ಈಬಗ್ಗೆ ವಿಚಾರಿಸಿದಾಗ ಸ್ಥಳೀಯರು ದೇವತೆಗಳಾದಬಗ್ಗೆ ತಿಳಿಯಿತು,ಅವರು ತಮ್ಮ ಕಾಯಕದ ಮೂಲಕವೆ ಅಸ್ತಿತ್ವ ಉಳಿಸಿಕೊಂಡುರು ಎಂಬುದನ್ನು ತಿಳಿಸಿ ಶ್ರಮ ಸಂಸ್ಕೃತಿಯ ಪ್ರಾದಾನ್ಯತೆಯನ್ನು ತಿಳಿಸಿದರು,ಇದಿಷ್ಟೆ ಅಲ್ಲದೆ ವಿದ್ಯಾರ್ಥಿಗಳು ಸ್ಥಳೀಯ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಕಷ್ಟಗಳನ್ನು ಬಗೆಹರಿಸಲು ಪ್ರಯತ್ನಿಸಬಹುದು ಎಂದರು, ಮೌಢ್ಯ,ಕಂದಾಚಾರಗಳನ್ನುಬಿತ್ತುವಲ್ಲಿ ಮಾದ್ಯಮಗಳು ಸಹ ಮೂಂಚುಣಿಯಲ್ಲಿದೆ,ಇನ್ನು ದೂರದರ್ಶನದಲ್ಲಿ(ಟಿವಿ) ಪ್ರತಿದಿನ ಬೆಳಿಗ್ಗೆ ಜ್ಯೋತಿಷಿಗಳೆ ರಾರಾಜಿಸುತ್ತಾರೆ ,ಇದರಿಂದ ಸಮಾಜದ ವೈಚಾರಿಕಸ್ವಾಸ್ಥ್ಯ ಹದಗೆಡುವುದರ ಮೂಲಕ ಬಲಾಡ್ಯವಾಗುತ್ತದೆ,ಆದ್ದರಿಂದ ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವನೆ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು,



ಸಮಾರಂಭದ ಮುಖ್ಯ ಅತಿಥಿ ಎಸ್ ಇಟಿ ಶಿಕ್ಷಣ ದತ್ತಿಯ ಗೌ,ಕಾರ್ಯದರ್ಶಿ ಡಾ,ವೂಡೇ,ಪಿ,ಕೃಷ್ಣ ಮಾತನಾಡಿ ರಾಷ್ಟ್ರೀಯ ಸೇವಾ ಯೋಜನೆಯಂತಹ ರಾಷ್ಟ್ರೀಯ ಕಾರ್ಯಕ್ರಮಗಳನ್ನು ನಮ್ಮ ಸಂಸ್ಥೆಯು ಬಹುವಿಧದ ಸಾಧನೆ ಮಾಡಿದ್ದು ಇಂದಿರಾಗಾಂದಿ ರಾಷ್ಟ್ರ ಪ್ರಶಸ್ತಿ ಹಾಗೂ ರಾಜ್ಯಪ್ರಶಸ್ತಿ ಪಡೆದುಕೊಂಡು ಸೇವಾಮನೋಭಾವನೆಯನ್ನುರೂಡಿಕೊಂಡಿದೆ,ವಿದ್ಯಾರ್ಥಿಗಳಊ ಸೇವೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ತಮ್ಮ ಭವಿಷ್ಯದಲ್ಲಿ ಶೈಕ್ಷಣಿಕ ಪ್ರಗತಿಯಷ್ಟೆ ಅಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲು ಭಾಗವಹಿಸಿ ಸರ್ವಾಂಗೀಣ ಪ್ರಗತಿಯನ್ನು ಸಾದಿಸಬೇಕು ವಿವೇಕಾನಂದರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು,

ಸಮಾರಂಭದ ಅದ್ಯಕ್ಷತೆಯನ್ನು ಎಸ್ ಇಟಿ ಶಿಕ್ಷಣ ದತ್ತಿಯ ಗೌ,ಕೋಶಾದ್ಯಕ್ಷರಾದ ಬಿ,ಎಂ,ಪಾರ್ಥಸಾರಥಿ ವಹಿಸಿ ಮಾತನಾಡಿ ವಿದ್ಯಾರ್ಥಿಗಳು ವಿದ್ಯೆಯನ್ನು ಪಡೆದುಉತ್ತಮ ವಿದ್ಯಾವಂತ ನೆನಸಿದರೆ ಸಾಲದು ವಿದ್ಯೆಯ ಜೋತೆಗೆ ಮಾನವೀಯತೆಯನ್ನು ರೂಡಿಸಿಕೊಳ್ಳಬೇಕೆಂದರು.

ಕನ್ನಡಬಾಷೆಯಲ್ಲಿ ನೂರಕ್ಕೆ ನೂರು ಅಂಕ ಪಡೆದ ವಿದ್ಯಾರ್ಥಿನಿಯರಾದ ಇಂದೂಶ್ರೀ,ಬಿಂದೂಶ್ರೀ ಮತ್ತು ನಿಖಿಲ್ ರವರನ್ನು ಪ್ರಶಸ್ತಿಪತ್ರ ನೀಡಿ ಗೌರವಿಸಲಾಯಿತು.

ಈಸಂದರ್ಭದಲ್ಲಿ ಪ್ರಾಂಶುಪಾಲರಾದ ಪ್ರೊ.ಇ,ಜಯರಾಮ್,ಡಾ,ಆರ್,ಡಿ,ಸತೀಶ್,ದರ್ಮದರ್ಶಿಗಳಾದ ಗೋಪಾಲ್,ಲೋಕನಾಥ್,ಸಾಂಸ್ಕೃತಿಕ ಸಮಿತಿಯ ಸಂಚಾಲಕ ಪಿ,ಪ್ರಬಾಕರ್,ಸದಸ್ಯರಾದ ನಾಗರತ್ನ,ಎಂ,ಮಾಳಗಿ,ಶ್ರೀಧರ್,ಕೆವಿ, ಲಕ್ಷ್ಮೀನಾರಾಯಣ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಪೋಷಕರು ಹಾಜರಿದ್ದರು.

ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ವಿಜಯ ಕರ್ನಾಟಕ

ಶುಕ್ರವಾರ,16 ಸೆಪ್ಟೆಂಬರ್ 2016

ಲೇಖಕ ಪ್ರೊ.ಎಚ್ ಟಿ ಪೋತೆ ಅಭಿಮತ

ಗಾಂಧಿ, ಅಂಬೇಡ್ಕರ್ ಅಪ್ರತಿಮ ಮಾನವತಾವಾದಿಗಳು

ವಿಕ ಸುದ್ದಿಲೋಕ ಬೆಂಗಳೂರು

ಮಹಾತ್ಮ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ದೇಶ ಕಂಡ ಅಪ್ರತಿಮ ಮಾನವತಾವಾದಿಗಳಾಗಿದ್ದಾರೆ. ಇಬ್ಬರೂ ಸ್ವಾತಂತ್ರ್ಯ, ಸ್ವಾಭಿಮಾನ, ಅಸ್ಪೃಶ್ಯತೆ ನಿವಾರಣೆ ಮತ್ತು ಸ್ತ್ರೀ ಸಬಲೀಕರಣಕ್ಕಾಗಿ ಅಂತಃಕರಣಪೂರ್ವಕವಾಗಿ ಹೋರಾಡಿದವರು ಎಂದು ಲೇಖಕ ಪ್ರೊ.ಎಚ್ ಟಿ ಪೋತೆ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಏರ್ಪಡಿಸಿದ್ದ ದತ್ತಿ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು 'ಗಾಂಧೀಜಿ ಮತ್ತು ಅಂಬೇಡ್ಕರ್ ಸಾಮಾಜಿಕ ಚಿಂತನೆಗಳು' ಕುರಿತು ಗುರುವಾರ ಮಾತನಾಡಿದರು.


''ಅಂಥ ಮಹಾನ್ ವ್ಯಕ್ತಿಗಳು ಅಸ್ಪೃಶ್ಯತೆ ವಿರುದ್ಧ ಅಷ್ಟೊಂದು ಹೋರಾಡಿದರೂ ಆ ಸಮಸ್ಯೆ 21ನೇ ಶತಮಾನದಲ್ಲಿ ಇನ್ನಷ್ಟು ಉಗ್ರವಾಗಿ ಆಚರಣೆಯಾಗುತ್ತಿರುವುದು ನಿಜಕ್ಕೂ ದುರಂತ. ಗಾಂಧೀಜಿ ಹಿಂದೂ ಧರ್ಮದ ಒಳಗಿನ ಕೊಳೆಯನ್ನು ತೊಳೆಯಲು ಹೋರಾಡಿದರೆ, ಅಂಬೇಡ್ಕರ್ ತಮ್ಮ ಸಮುದಾಯಕ್ಕೆ ಯಾರೋ ಅಂಟಿಸಿದ ಕೊಳೆಯನ್ನು ತೊಳೆಯುವ ಕೈಂಕರ್ಯ ಕೈಗೆತ್ತಿಕೊಂಡರು'' ಎಂದು ಅವರು ಹೇಳಿದರು.

''ಅವರಿಬ್ಬರೂ ಹೆಣ್ಣು ಮಕ್ಕಳ ಸ್ವಾತಂತ್ರ್ಯಕ್ಕಾಗಿ ದಣಿವರಿಯದಂತೆ ದನಿಯೆತ್ತಿದರು. ನಮ್ಮ ದೇಶದ ಶಾಸ್ತ್ರಗಳು, ಮಹಾಕಾವ್ಯಗಳು ಮತ್ತು ಪುರಾಣಗಳು ಸ್ತ್ರೀಯನ್ನು ಕಂಡಿರುವ ದೃಷ್ಟಿಕೋನದ ಮೇಲೆ ಅವರು ಬೆಳಕು ಚೆಲ್ಲಿದರು. ಇಂದಿನ ಮಹಿಳಾ ಹೋರಾಟಗಾರರು ಈ ಸತ್ಯಗಳನ್ನು ಅರ್ಥ ಮಾಡಿಕೊಳ್ಳಬೇಕು'' ಎಂದು ಅವರು ಸೂಚಿಸಿದರು.

''ಗಾಂಧೀಜಿಯವರು ಬ್ರಿಟೀಷರ ವಿರುದ್ಧ ನಡೆಸಿದ ಹೋರಾಟಕ್ಕೆ ಎಲ್ಲರಿಂದಲೂ ಬೆಂಬಲ ಸಿಕ್ಕಿದರೆ, ಅಂಬೇಡ್ಕರ್ ದಲಿತರ ವಿಮೋಚನೆಗೆ ನಡೆಸಿದ ಹೋರಾಟಕ್ಕೆ ಮೇಲ್ಜಾತಿಗಳು ಅಷ್ಟಾಗಿ ಸ್ಪಂದಿಸಲಿಲ್ಲ, ಜತೆಗೆ ಅಂಬೇಡ್ಕರ್ ಕೂಡ ಗಾಂಧಿಯಷ್ಟೇ ಅಹಿಂಸಾವಾದಿಯಾಗಿದ್ದರು ಎನ್ನುವುದು ಎಲ್ಲೂ ದಾಖಲಾಗಿಲ್ಲ. ಮಹಾಡ್ ಕೆರೆ ಘಟನೆಯ ಹೋರಾಟದಲ್ಲಿ ತಮ್ಮ ದಲಿತ ಅನುಯಾಯಿಗಳು ಪ್ರತಿ ದಾಳಿಗೆ ಮುಂದಾದಾಗ ಅದನ್ನು ಅವರು ತಡೆಯದಿದ್ದರೆ ರಕ್ತಪಾತವಾಗುತ್ತಿತ್ತು'' ಎಂದು ಅವರು ಹೇಳಿದರು.

''ಪೂನಾ ಒಪ್ಪಂದಕ್ಕೆ ಅನುಮೋದನೆ ನೀಡುವ ಮೂಲಕ ಅಂಬೇಡ್ಕರ್ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಿದರು. ಅವರಲ್ಲಿರುವ ಲೇಖಕನನ್ನು ಗಾಂಧೀಜಿ ಗುರುತಿಸಿ, ಸಂವಿಧಾನ ರಚನೆಯ ಕೆಲಸವನ್ನು ಅವರಿಗೆ ವಹಿಸಿದರು. ಅಂಥ ಅಂಬೇಡ್ಕರ್ ನಿಧನರಾದಾಗ ಅವರ ಬ್ಯಾಂಕ್ ಖಾತೆಯಲ್ಲಿ ಕೇವಲ 3-4 ರೂ.ಗಳಷ್ಟೇ ಇತ್ತು. ಇಂದಿನ ಪೀಳಿಗೆಯವರು ಅಂಬೇಡ್ಕರ್ ಮತ್ತು ಗಾಂಧೀಜಿಯ ಬದುಕಿನಿಂದ ಸಾಕಷ್ಟು ಕಲಿಯಬೇಕು'' ಎಂದರು.

ಕಾರ್ಯಕ್ರಮದಲ್ಲಿ ಇಂದಿರಾ ಕೃಷ್ಣಪ್ಪ , ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೆ ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಮಲ್ಲೇಪುರಂ ಜಿ. ವೆಂಕಟೇಶ್ ಉಪಸ್ಥಿತರಿದ್ದರು.



ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ನಗರದ ಗಾಂಧಿ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ದತ್ತಿ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೊ.ಎಚ್ ಟಿ ಪೋತೆ, ಡಾ. ವೂಡೆ ಪಿ. ಕೃಷ್ಣ ಹಾಗೂ ಇತರರು ಇದ್ದರು.

ಸಂಯುಕ್ತ ಕರ್ನಾಟಕ ಶುಕ್ರವಾರ, 16, ಸೆಪ್ಟೆಂಬರ್, 2016, ಬೆಂಗಳೂರು

ತಾಂಡವವಾಡುತ್ತಿರುವ ಅಸಮಾನತೆ–ವಿಷಾದ

ಬೆಂಗಳೂರು: ಮಹಾತ್ಮ ಗಾಂಧೀ ಮತ್ತು ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳು ವಿಭಿನ್ನವಾಗಿದ್ದರೂ ಸ್ತ್ರೀ ಸಬಲೀಕರಣ ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಇಬ್ಬರ ಪಾತ್ರ ಗಣನೀಯವಾಗಿತ್ತು ಎಂದು ಗುಲ್ಬರ್ಗ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಚ್.ಟಿ.ಪೋತೆ ಅಭಿಮತಪಟ್ಟರು.


ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗುರುವಾರ ಗಾಂಧೀ ಭವನದಲ್ಲಿ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧೀ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸಾಮಾಜಿಕ ಚಿಂತನೆಗಳು ಕುರಿತ ವಿಚಾರ ಸಂಕೀರಣದಲ್ಲಿ ಮಾತನಾಡಿದರು.

ದೇಶ ಕಂಡ ಅಪರೂಪದ ಮುತ್ಸದ್ಧಿಗಳಾದ ಗಾಂಧೀ ಮತ್ತು ಅಂಬೇಡ್ಕರ್ ಸಮಾಜದಲ್ಲಿ ಸಾಕಷ್ಟು ಅವಮಾನ ಎದುರಿಸಿದ್ದರು. ಅದೇ ಕಾರಣಕ್ಕೆ ಅಸ್ಪೃಶ್ಯತೆ ಅಸಮಾನತೆ ಹೋಗಲಾಡಿಸಲು ಮಹತ್ತರ ಹೋರಾಟವನ್ನೇ ಮಾಡಿದ್ದರು ಆದರೆ ಇಂದಿಗೂ ಸಮಾಜದಲ್ಲಿ ಅಸಮಾನತೆ ಆಚರಣೆ ಜೀವಂತವಾಗಿರುವುದು ನಿಜಕ್ಕೂ ದುರಾದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

ಮಹಾತ್ಮ ಗಾಂಧೀಜಿ ದೇಶದ ಜನತೆಗಾಗಿ ಅವರ ಒಳಿತಿಗಾಗಿ ಅರೆಬೆತ್ತಲೆಯಾಗಿ ಇಡೀ ಜೀವನ ಕಳೆದರು. ಅಸ್ಪೃಶ್ಯತೆಯನ್ನು ಬುಡಸಹಿತ ಕಿತ್ತೊಗೆಯಬೇಕೆಂಬ ಮಹತ್ತರ ಉದ್ದೇಶವನ್ನು ಹೊಂದಿದ್ದರು. ಒಮ್ಮೆ ಅಂಬೇಡ್ಕರ್‌ರೊಂದಿಗೆ ನಡೆದ ಸಂವಾದದ ವೇಳೆ ಮುಂದಿನ ಜನ್ಮ ಇದ್ದರೆ ನಾನು ಅಸ್ಪೃಶ್ಯನಾಗಿ ಹುಟ್ಟಲು ಬಯಸುತ್ತೇನೆ ಎಂದು ಹೇಳಿದ್ದರು. ಈ ಮಾತನ್ನು ಅವರು ಸದಾ ಹೇಳುತ್ತಿದ್ದರು ಎಂದು ತಿಳಿಸಿದರು.

ದೇಶದಲ್ಲಿನ ಶಾಸನ, ಪುರಾಣಗಳು ಸಮಾಜದಲ್ಲಿ ಸ್ತ್ರೀಯರನ್ನು ಕಾಣುತ್ತಿದ್ದ ರೀತಿಗೆ ಇಬ್ಬರಲ್ಲೂ ಬೇಸರವಿತ್ತು. ಹೆಣ್ಣು ಮಕ್ಕಳು ಸರ್ವಸ್ವತಂತ್ರದಿಂದ ಜೀವಿಸಬೇಕು ಎಂಬ ಕನಸು ಕಂಡಿದ್ದವರು. ಆದರೆ ಇಂದಿಗೂ ಈ ಅಸಮಾನತೆ ಸಂಪೂರ್ಣವಾಗಿ ತೊಡೆದು ಹೋಗಿಲ್ಲ. ನೆಹರು ಮಂತ್ರಿ ಮಂಡಲದಲ್ಲಿ ಕಾನೂನು ಮಂತ್ರಿಯಾಗಿದ್ದ ಅಂಬೇಡ್ಕರ್ ಮಹಿಳೆಯರಿಗೆ ಸಮಾಜ ಆಸ್ತಿ ಹಕ್ಕು ನೀಡಲು ಮಸೂದೆ ರೂಪಿಸಿದ್ದರು. ಆದರೆ ಪಾರ್ಲಿಮೆಂಟ್‌ನಲ್ಲಿ ಅಂಗೀಕಾರವಾಗದ ಹಿನ್ನೆಲೆಯಲ್ಲಿ ತೀವ್ರ ಬೇಸರಿಂದ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು ಎಂದು ನೆನಪು ಮಾಡಿಕೊಂಡರು.

ಬ್ರಿಟಿಷ್ ಗುಲಾಮಗಿರಿ ವಿರುದ್ಧ ಹೋರಾಟ ನಡೆಸಿದ ಗಾಂಧೀಜಿಗೆ ಸಿಕ್ಕ ಬೆಂಬಲ, ಸಾಮಾಜಿಕ ಗುಲಾಮಗಿರಿ ವಿರುದ್ಧ ಹೋರಾಡಿದ ಅಂಬೇಡ್ಕರ್ ಅವರಿಗೆ ಮೇಲ್ವರ್ಗದಿಂದ ಬೆಂಬಲ ಸಿಗಲಿಲ್ಲ. ಇದು ನಿಜಕ್ಕೂ ವಿಪರ್ಯಾಸ. ವಿದ್ಯಾರ್ಥಿಗಳು, ಯುವಪೀಳಿಗೆ ಸಮಾಜದ ಅಸಮಾನತೆ ವಿರುದ್ಧ ದನಿ ಎತ್ತಬೇಕು ಎಂದು ಕರೆ ನೀಡಿದರು.



ಮಹಾತ್ಮ ಗಾಂಧೀ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸಾಮಾಜಿಕ ಚಿಂತನೆಗಳು ಕುರಿತ ವಿಚಾರ ಸಂಕೀರಣದಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಚ್.ಟಿ.ಪೋತೆ ಉಪನ್ಯಾಸ ನೀಡಿದರು. ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಮತ್ತು ಡಾ.ವೂಡೆ ಪಿ.ಕೃಷ್ಣ ಉಪಸ್ಥಿತರಿದ್ದರು.

ಯುವಕರಿಗೆ ಮಾದರಿ

ಮಹಾತ್ಮ ಗಾಂಧೀ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ದೇಶದ ಮಹಾನ್ ಮಾನವತಾವಾದಿಗಳು; ಶ್ರೇಷ್ಠ ಚಿಂತಕರು. ಯುವಪೀಳಿಗೆಗೆ ಇಂಥ ಮಹನೀಯ ತತ್ವಾದರ್ಶ ಮಾರ್ಗದರ್ಶಕವಾಗಬೇಕು ಎಂದು ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್ ಅಧ್ಯಕ್ಷೆ ಇಂದಿರಾ ಕೃಷ್ಣಪ್ಪ ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ಪ್ರಾಮಾಣಿಕತೆ, ಶ್ರದ್ಧೆ ಹಾಗೂ ಶ್ರಮದಿಂದ ಮಾತ್ರ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ. ಇಂತಹ ಮಹಾನ್ ಚಿಂತಕರ ವಿಚಾರಗಳನ್ನು ಚಿಂತನೆ ಮಾಡಿ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು ಸಲಹೆ ನೀಡಿದರು. ಗಾಂಧೀಜಿ ರಾಷ್ಟ್ರಪಿತರಾದರೆ ಅಂಬೇಡ್ಕರ್ ರಾಷ್ಟ್ರಮಾತೆ ಇದ್ದಂತೆ ಇಬ್ಬರು ದೇಶ ಕಂಡ ಮಹಾನ್ ಚೇತನಗಳು ಎಂದು ಹೇಳಿದರು. ಗಾಂಧೀ ಶಾಂತಿ ಪ್ರತಿಷ್ಠಾನ ಗೌರವ ಕಾರ್ಯದರ್ಶಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ನಮಸ್ತೆ ಬೆಂಗಳೂರು
ಶುಕ್ರವಾರ 16 ಸೆಪ್ಟೆಂಬರ್ 2016

ಅಸಮಾನತೆ ವಿರುದ್ಧ ಯುವಜನತೆ ದನಿಯೆತ್ತಿ



'ಗಾಂಧಿ-ಅಂಬೇಡ್ಕರ್ ಚಿಂತನೆ' ವಿಚಾರಸಂಕಿರಣದಲ್ಲಿ ಡಾ.ಎಚ್.ಟಿ. ಪೋತೆ, ಇಂದಿರಾ ಕೃಷ್ಣಪ್ಪ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

» ಡಾ.ಎಚ್.ಟಿ. ಪೋತೆ ಸಲಹೆ

» ಗಾಂಧಿ ಮತ್ತು ಅಂಬೇಡ್ಕರ್ ಸಾಮಾಜಿಕ ಚಿಂತನೆ ವಿಚಾರ ಸಂಕಿರಣ

ಸಮಾಜದಲ್ಲಿ ಅಸ್ಪೃಶ್ಯತೆ ನಿವಾರಣೆ, ಸ್ತ್ರೀ ಸಬಲೀಕರಣ ಹಾಗೂ ಮಾನವೀಯ ಮೌಲ್ಯ ಎತ್ತಿಹಿಡಿಯುವಲ್ಲಿ ಮಹಾತ್ಮಾ ಗಾಂಧಿ ಹಾಗೂ ಅಂಬೇಡ್ಕರ್ ಅನುಸರಿಸಿದ ಮಾರ್ಗಗಳು ವಿಭಿನ್ನವಾಗಿದ್ದರೂ ಇಬ್ಬರ ಉದ್ದೇಶ ಏಕರೂಪವಾಗಿತ್ತು ಎಂದು ಕಲಬುರಗಿ ವಿವಿ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಚ್.ಟಿ. ಪೋತೆ ಹೇಳಿದ್ದಾರೆ.

ನಗರದ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ 'ಮಹಾತ್ಮಾ ಗಾಂಧಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಸಾಮಾಜಿಕ ಚಿಂತನೆ' ಕುರಿತ ವಿಚಾರಸಂಕಿರಣದಲ್ಲಿ ಮಾತನಾಡಿದರು.

ಮಹಾನ್ ಚೇತನಗಳಾದ ಗಾಂಧಿ-ಅಂಬೇಡ್ಕರ್ ಸಾಕಷ್ಟು ಅವಮಾನ ಎದುರಿಸಿದ್ದರು. ಈ ನಿಟ್ಟಿನಲ್ಲಿ ಅಸ್ಪೃಶ್ಯತೆ ಹೋಗಲಾಡಿಸಲು ಜೀವನಪೂರ್ಣ ಹೋರಾಟವನ್ನೇ ಮಾಡಿದ್ದರು. ಆದರೆ ಇಂದಿಗೂ ಅಸಮಾನತೆ ಜೀವಂತವಾಗಿರುವುದು ಬೇಸರದ ಸಂಗತಿ ಎಂದರು.

ಬ್ರಿಟಿಷ್ ಗುಲಾಮಗಿರಿ ವಿರುದ್ಧ ಹೋರಾಟ ನಡೆಸಿದ ಗಾಂಧೀಜಿಗೆ ಸಿಕ್ಕ ಬೆಂಬಲ, ಸಾಮಾಜಿಕ ಗುಲಾಮಗಿರಿ ವಿರುದ್ಧ ಹೋರಾಡಿದ ಅಂಬೇಡ್ಕರ್ ಅವರಿಗೆ ಸಿಗಲಿಲ್ಲ. ಇದು ನಿಜಕ್ಕೂ ವಿಪರ್ಯಾಸ. ವಿದ್ಯಾರ್ಥಿಗಳು, ಯುವಪೀಳಿಗೆ ಸಮಾಜದ ಅಸಮಾನತೆ ವಿರುದ್ಧ ದನಿ ಎತ್ತಬೇಕು ಎಂದು ಪೋತೆ ಸಲಹೆ ನೀಡಿದರು.

ಭವಿಷ್ಯ ರೂಪಿಸಿಕೊಳ್ಳಿ: ಗಾಂಧಿ ಹಾಗೂ ಅಂಬೇಡ್ಕರ್ ದೇಶದ ಮಹಾನ್ ಮಾನವತಾವಾದಿಗಳು. ಯುವಪೀಳಿಗೆಗೆ ಇಂಥ ಮಹನೀಯ ತತ್ವಾದರ್ಶ ಮಾರ್ಗದರ್ಶಕವಾಗಬೇಕು ಎಂದು ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್ ಅಧ್ಯಕ್ಷೆ ಇಂದಿರಾ ಕೃಷ್ಣಪ್ಪ ಹೇಳಿದರು.

> **ಸಮಾಜದ ಮೇಲ್ವರ್ಗದಲ್ಲಿನ ಗಾಂಧೀಜಿ ಸಮಾಜದ ಒಳಿತಿಗಾಗಿ ಕೆಳವರ್ಗಕ್ಕೆ ಇಳಿದರು. ಅಂಬೇಡ್ಕರ್ ಕೆಳವರ್ಗದಲ್ಲಿ ಜನಿಸಿ ಮೇಲ್ಪಂಕ್ತಿಗೆ ಬಂದರು. ಇಬ್ಬರೂ ಸಮಾಜದ ಓರೆಕೋರೆ ತಿದ್ದುವ, ಅಸ್ಪೃಶ್ಯತೆ ತೊಡೆದುಹಾಕುವ ಮಹಾನ್ ಕೈಂಕರ್ಯಕ್ಕೆ ಮುಂದಾದವರು.**
>
> । ಡಾ.ವೂಡೇ ಪಿ. ಕೃಷ್ಣ ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ

ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಮೀಸಲಾತಿ, ಅಸ್ಪೃಶ್ಯತೆ ನಿವಾರಣೆ ಹೇಗೆ, ಪ್ರಸ್ತುತ ಸಮಾಜದಲ್ಲಿ ಅಸ್ಪೃಶ್ಯತೆ ಪಡೆದಿರುವ ರೂಪವೇನು ಮತ್ತಿತರ ವಿಷಯಗಳ ಬಗ್ಗೆ ವಿಚಾರ ವಿನಿಮಯ ನಡೆಸಿದರು.

ಗಾಂಧಿ ಶಾಂತಿ ಪ್ರತಿಷ್ಠಾನ ಗೌರವ ಕಾರ್ಯದರ್ಶಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಮತ್ತಿತರರು ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ಕನ್ನಡಪ್ರಭ
ಸೋಮವಾರ 12.9.2016
ಬೆಂಗಳೂರು

ತತ್ವಶಾಸ್ತ್ರ ಎಂದರೆ ಏನೆಂಬುದೇ ಪ್ರಶ್ನೆ

ಭಾರತೀಯ ತತ್ವಶಾಸ್ತ್ರ ಮೌಲ್ಯಯುತ | ಎಸ್‌ಎಲ್ ಭೈರಪ್ಪ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪಾಶ್ಚಿಮಾತ್ಯ ತತ್ವಶಾಸ್ತ್ರಕ್ಕಿಂತ ಮೌಲ್ಯಯುತ, ಉನ್ನತವಾದ ಚಿಂತನೆಗಳು ಭಾರತೀಯ ಪರಂಪರೆಯಲ್ಲಿ ಮೂಡಿಬಂದಿವೆ. ಆದರೆ, ಅದರ ವಸ್ತು ವಿಷಯ ಮೂಡಿಸಿರುವ ಗೊಂದಲ ಇನ್ನೂ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ ಎಂದು ಸಾಹಿತಿ ಎಸ್.ಎಲ್. ಭೈರಪ್ಪ ಅಭಿಪ್ರಾಯಪಟ್ಟರು.

ನಗರದ ಶೇಷಾದ್ರಿಪುರ ಕಾಲೇಜು ಭಾರತ ತತ್ವಶಾಸ್ತ್ರ ಸಂಶೋಧನಾ ಮಂಡಳಿ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ 'ಆಧುನಿಕ ಕಾಲದಲ್ಲಿ ಭಾರತದ ಚಿಂತನೆಗಳ ಅಭಿವೃದ್ಧಿ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

''ತತ್ವಶಾಸ್ತ್ರ ಜ್ಞಾನದ ವಿವಿಧ ಮಜಲುಗಳನ್ನು ಒಳಗೊಂಡಿದ್ದು, ಅವು ಬೇರೆ ಬೇರೆ ವಿಭಾಗಗಳಾಗಿ ಪರಿವರ್ತನೆಗೊಂಡಿವೆ. ಅದನ್ನು ಪ್ರತಿಯೊಬ್ಬರೂ ಒಂದೊಂದು ವಿಚಾರವಾಗಿ ಪ್ರಸ್ತುತಪಡಿಸುವುದರಿಂದ ಅದರ ನೈಜ ಅರ್ಥದಲ್ಲಿ ಇನ್ನೂ ಗೊಂದಲವಿದೆ. ಈಗಲೂ ನನ್ನನ್ನು ತತ್ವಶಾಸ್ತ್ರ ಎಂದರೇನು ಎಂಬ ಪ್ರಶ್ನೆ ಕಾಡುತ್ತದೆ'' ಎಂದರು.

''ಸಾಹಿತ್ಯದ ನೆಲೆಯಿದ್ದರೆ ಮಾತ್ರ ತತ್ವಶಾಸ್ತ್ರ ಓದಲು ಸಾಧ್ಯ. ತತ್ವಶಾಸ್ತ್ರ ಹಾಗೂ ಸಾಹಿತ್ಯ ಪರಸ್ಪರ ಒಂದಕ್ಕೊಂದು ಪೂರಕವಾಗಿವೆ. ಸಾಹಿತ್ಯದಲ್ಲಿ ಒಂದು ಪಾತ್ರ ಸೃಷ್ಟಿಸಿ ಅದರ ಮೂಲಕ ಇತರ ಅರಿವಿಗೆ ಬರುವಂತೆ ಅನುಭವದ ಮೌಲ್ಯಗಳನ್ನು ಕಟ್ಟಿಕೊಡಬೇಕು. ಇದು ವ್ಯಕ್ತಿಯಲ್ಲಿ ದೊಡ್ಡಮಟ್ಟದ ಪರಿಕಲ್ಪನೆಯ ಹುಟ್ಟಿಗೆ ಕಾರಣವಾಗುತ್ತದೆ ಎಂದು ಹೇಳಿದರು.

ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ. ಕೃಷ್ಣ, ಎಂ.ಎಸ್.ನಟರಾಜ್, ಡಾ.ಪ್ರಕಾಶ್, ಡಾ. ಅನುರಾಧಾ ರಾಯ್, ಎಸ್. ಆರ್. ಲೀಲಾ ಇದ್ದರು.



ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಸಾಹಿತಿ ಎಸ್.ಎಲ್.ಭೈರಪ್ಪ, ಡಾ.ವೂಡೆ ಪಿ. ಕೃಷ್ಣ, ಎಸ್.ಆರ್.ಲೀಲಾ ಇದ್ದರು

ಪ್ರಜಾವಾಣಿ ಭಾನುವಾರ • ಸೆಪ್ಟೆಂಬರ್ 11, 2016

ಹೊಸ ತಲೆಮಾರಿನ ಸಾಹಿತಿಗಳಿಗೆ ತತ್ವಶಾಸ್ತ್ರದ ಗಂಧವೇ ಗೊತ್ತಿಲ್ಲ: ಭೈರಪ್ಪ

ಪ್ರಜಾವಾಣಿ ವಾರ್ತೆ



ಎಸ್‌.ಎಲ್‌.ಭೈರಪ್ಪ ಮಾತನಾಡಿದರು. ಐಸಿಪಿಆರ್ ಸದಸ್ಯೆ ಎಸ್‌.ಆರ್‌.ಲೀಲಾ, ಪ್ರಾಂಶುಪಾಲರಾದ ಅನುರಾಧಾ ರಾಯ್ ಇದ್ದಾರೆ

ಬೆಂಗಳೂರು: 'ಈಗಿನ ಸಾಹಿತಿಗಳಿಗೆ ತತ್ವಶಾಸ್ತ್ರದ ಗಂಧವೇ ಗೊತ್ತಿಲ್ಲ. ಅವರ ಜೊತೆ ಮಾತನಾಡಲು ಬೇಸರವಾಗುತ್ತದೆ' ಎಂದು ಸಾಹಿತಿ ಎಸ್.ಎಲ್.ಭೈರಪ್ಪ ಹೇಳಿದರು.

ನಗರದ ಶೇಷಾದ್ರಿಪುರ ಕಾಲೇಜು ಹಾಗೂ ಭಾರತೀಯ ತತ್ವಶಾಸ್ತ್ರ ಸಂಶೋಧನಾ ಮಂಡಳಿ (ಐಸಿಪಿಆರ್) ಆಶ್ರಯದಲ್ಲಿ ಶನಿವಾರ ಏರ್ಪಡಿಸಿದ್ದ ಆಧುನಿಕ ಕಾಲಘಟ್ಟಕ್ಕೆ ತಕ್ಕಂತೆ ಭಾರತೀಯ ಚಿಂತನೆ ರೂಪಿಸುವ ಕುರಿತ ರಾಷ್ಟ್ರೀಯ ವಿಚಾರಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಪು.ತಿ.ನ ಅವರಿಗೆ ಸಾಹಿತ್ಯ ಮತ್ತು ತತ್ವಶಾಸ್ತ್ರಗಳೆರಡೂ ಗೊತ್ತಿತ್ತು. ಹಾಗಾಗಿ ಅವರ ಜೊತೆ ಹರಟೆ ಹೊಡೆದಾಗಲೆಲ್ಲ ಸಾಕಷ್ಟು ಒಳನೋಟಗಳು ಸಿಗುತ್ತಿದ್ದವು' ಎಂದರು.

'ತತ್ವಶಾಸ್ತ್ರಕ್ಕೆ ಸಾಹಿತ್ಯ ಹೇಗೆ ಮುಖ್ಯವೋ, ಸಾಹಿತ್ಯಕ್ಕೂ ತತ್ವಶಾಸ್ತ್ರ ಅಷ್ಟೇ ಮುಖ್ಯ. ಸಾಹಿತ್ಯ ಹೊರತುಪಡಿಸಿ ತತ್ವಶಾಸ್ತ್ರ ಇಲ್ಲ. ಸಾಹಿತ್ಯದ ಪಾತ್ರಗಳ ಮೂಲಕ ಜೀವನ ಮೌಲ್ಯಗಳನ್ನು ಮನಸ್ಸಿಗೆ ಅರ್ಥವಾಗುವಂತೆ ವ್ಯಕ್ತಪಡಿಸಲು ಸಾಧ್ಯ. ನಿಜವಾದ ತತ್ವಶಾಸ್ತ್ರ ಹುಟ್ಟಿದ್ದು ಸಾಹಿತ್ಯದ ಮೂಲಕ' ಎಂದರು.

'ಭಗವದ್ಗೀತೆ ದೊಡ್ಡ ತತ್ವಶಾಸ್ತ್ರ. ಗುರುಗಳು, ಬಂಧುಗಳ ಜೊತೆಗೆ ಯುದ್ಧ ಮಾಡಬೇಕೇ ಎಂದು ಅರ್ಜುನನಿಗೆ ಅನುಮಾನ ಮೂಡಿದಾಗ, ಅದು ತಪ್ಪು ಎಂದು ಶ್ರೀಕೃಷ್ಣ ವಿವರಿಸುವ ಸನ್ನಿವೇಶ ಅತ್ಯಂತ ಶಕ್ತಿಯುತವಾದುದು. ಇಂತಹ ಸಂದರ್ಭದ ಮೂಲಕವೇ ಭಗವದ್ಗೀತೆಯಂತಹ ದೊಡ್ಡ ತತ್ವದ ಸೃಷ್ಟಿ ಸಾಧ್ಯವಾಯಿತು' ಎಂದರು.

'ಭಗವದ್ಗೀತೆಯೂ ಅಹಿಂಸೆಯನ್ನು ಪ್ರತಿಪಾದಿಸುತ್ತದೆ. ಇದನ್ನು ಗಾಂಧೀಜಿಯವರೂ ಹೇಳಿದ್ದಾರೆ. ಯಾರಾದರೂ ಮಾನಭಂಗ ಮಾಡಲು ಬಂದಾಗ ಏನು ಮಾಡಬೇಕು ಎಂದು ಯಾರೋ ಒಬ್ಬರು ಗಾಂಧೀಜಿಯನ್ನೊಮ್ಮೆ ಕೇಳಿದ್ದರಂತೆ. ಅದಕ್ಕವರು, ಅದು ಮಾನಭಂಗವೇ ಅಲ್ಲ ಎಂದು ಭಾವಿಸಿ ಅಂತ ಮುಗುಳ್ನಗುತ್ತ ಎಂದು ಉತ್ತರಿಸಿದ್ದರಂತೆ. ಪ್ರಾಯೋಗಿಕವಾಗಿ ಇದು ಎಷ್ಟರ ಮಟ್ಟಿಗೆ ಸಾಧ್ಯ' ಎಂದು ಅವರು ಪ್ರಶ್ನಿಸಿದರು.

'ಕೋಪಕ್ಕೆ ಬಿದ್ದು ಯುದ್ಧ ಮಾಡಬೇಡ. ವಾಸ್ತವಿಕವಾಗಿ ಯೋಚಿಸಿ, ಯುದ್ಧವೂ ಒಂದು ಕರ್ತವ್ಯ ಎಂದು ಭಾವಿಸಿ ಯುದ್ಧ ಮಾಡು. ಇಲ್ಲದಿದ್ದರೆ ಹೇಡಿಯಾಗುತ್ತೀಯ ಎಂದಷ್ಟೇ ಭಗವದ್ಗೀತೆ ಹೇಳಿದೆ' ಎಂದರು.

'ಸಾಹಿತ್ಯದ ಸಂದರ್ಭ ಇಲ್ಲದಿದ್ದರೆ ದೊಡ್ಡ ತತ್ವ ಹುಟ್ಟದು. ರಾಮಾಯಣ ಮಹಾಭಾರತ ಹುಟ್ಟಿದ್ದು ಇದೇ ರೀತಿ. ಭಾರತೀಯ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರಗಳ ನಡುವೆ ವ್ಯತ್ಯಾಸ ಇದೆ. ಪಾಶ್ಚಾತ್ಯರ ಆಧುನಿಕ ತತ್ವಶಾಸ್ತ್ರ ಎಲ್ಲವನ್ನೂ ಪ್ರಬಂಧ ರೂಪದಲ್ಲಿ ಹೇಳುತ್ತದೆ. ಅದರಲ್ಲಿ ಸ್ವಾರಸ್ಯವೇ ಇಲ್ಲ' ಎಂದರು.

'ಇತ್ತೀಚೆಗೆ ಪದವಿ ತರಗತಿಗಳಲ್ಲಿ ತತ್ವಶಾಸ್ತ್ರ ಬೋಧನೆ ನಿಂತು ಹೋಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ.ಕೃಷ್ಣ, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎಂ.ಎಸ್.ನಟರಾಜ್, ಅಧ್ಯಯನ ನಿರ್ದೇಶಕ ಎಂ.ಪ್ರಕಾಶ್ ಉಪಸ್ಥಿತರಿದ್ದರು.

ಹೊಸ ದಿಗಂತ

ಬೆಂಗಳೂರು
ಭಾನುವಾರ, 11 ಸೆಪ್ಟೆಂಬರ್ 2016

ಯಾವ ಕಾಲೇಜಿನಲ್ಲಿಯೂ ತತ್ವಶಾಸ್ತ್ರ ವಿಷಯವಿಲ್ಲ: ಎಸ್.ಎಲ್. ಭೈರಪ್ಪ ವಿಷಾದ

ಈಗಿನ ಸಾಹಿತಿಗಳಿಗಿಲ್ಲ ತತ್ವಶಾಸ್ತ್ರದ ಗಂಧಗಾಳಿ

ಬೆಂಗಳೂರು: ಈಗಿನ ಸಾಹಿತಿಗಳಿಗೆ ತತ್ವಶಾಸ್ತ್ರದ ಗಂಧಗಾಳಿ ತಿಳಿದಿಲ್ಲ, ಈಗ ಯಾವ ಕಾಲೇಜಿನಲ್ಲಿಯೂ ತತ್ವಶಾಸ್ತ್ರ ವಿಷಯವಿಲ್ಲ, ಹೀಗಾಗಿ ತತ್ವಶಾಸ್ತ್ರ ಎಂದರೆ ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ ಎಂದು ಪದ್ಮಶ್ರೀ ಪುರಸ್ಕೃತ ಡಾ.ಎಸ್.ಎಲ್ ಭೈರಪ್ಪ ಅಭಿಪ್ರಾಯಪಟ್ಟರು.

ಶನಿವಾರ ಶೇಷಾದ್ರಿಪುರ ಕಾಲೇಜು ಹಾಗೂ ಇಂಡಿಯನ್ ಕೌನ್ಸಿಲ್ ಆಫ್ ಫಿಲಾಸೊಫಿಕಲ್ ರಿಸರ್ಚ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಡೆವಲಪ್‌ಮೆಂಟ್ ಆಫ್ ಇಂಡಿಯನ್ ಥಾಟ್ ಅಪ್ ಟೂ ಮಾಡರ್ನ್ ಟೈಮ್ಸ್ ವಿಷಯ ಕುರಿತು ಎರಡು ದಿನ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯದ ನೆಲೆ ಇದ್ದರೆ ಮಾತ್ರ ತತ್ವಶಾಸ್ತ್ರ ಓದಲು ಸಾಧ್ಯ. ತತ್ವಶಾಸ್ತ್ರ ಓದಲು ಸೃಜನಶೀಲತೆಬೇಕು, ಇನ್ನೊಂದು ಕಲ್ಪನೆಯ ಅಗತ್ಯವಿರುತ್ತದೆ. ಪಾಶ್ಚಿಮಾತ್ಯರು ತಿಳಿಸಿರುವಂತೆ ಸಾಹಿತ್ಯ ಮತ್ತು ತತ್ವಶಾಸ್ತ್ರ ಬೇರೆ ಬೇರೆಯಲ್ಲ, ಪರಸ್ಪರ ಪೂರಕವಾಗಿರುವಂತಹದ್ದು.

ಈಗಿನ ಸಾಹಿತಿಗಳಿಗೆ ತತ್ವಶಾಸ್ತ್ರದ ಗಂಧ ಗಾಳಿಯೂ ತಿಳಿದಿಲ್ಲ, ತತ್ವಶಾಸ್ತ್ರದ ಹೊರತಾಗಿ ಸಾಹಿತ್ಯವಿಲ್ಲ, ಸಾಹಿತ್ಯ ಬಿಟ್ಟು ತತ್ವಶಾಸ್ತ್ರವಿಲ್ಲ ಎಂದರು. ತತ್ವಶಾಸ್ತ್ರ ಬೋಧಿಸುವವರು ಅದನ್ನು ಸ್ವಾರಸ್ಯವಾಗಿ ಹೇಳಬೇಕು. ಈಗ ಯಾವ ಕಾಲೇಜಿನಲ್ಲಿಯೂ ತತ್ವಶಾಸ್ತ್ರದ ವಿಷಯವೇ ಇಲ್ಲ, ಹೀಗಾಗಿ ತತ್ವಶಾಸ್ತ್ರ ಎಂದರೆ ಬಾಯಿಗೆ ಬಂದ ಹಾಗೇ ಮಾತನಾಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತತ್ವಶಾಸ್ತ್ರ ಎಂದರೆ ಸಿದ್ಧಾಂತವಲ್ಲ

ನನ್ನ ವೈಯಕ್ತಿಕ ಅನುಭವದಲ್ಲಿ ಮೌಲ್ಯಗಳ ಅಧ್ಯಯನವೇ ತತ್ವಶಾಸ್ತ್ರವಾಗಿದೆ. ತತ್ವಶಾಸ್ತ್ರ ಎಂದರೆ ಸಿದ್ಧಾಂತವಲ್ಲ, ತತ್ವಶಾಸ್ತ್ರ ಓದಿದಾಗ ನಮ್ಮಲ್ಲಿ ಹೊಸ ಹೊಳಹುಗಳು ಮೂಡಬೇಕು. ನಮ್ಮ ತತ್ವಶಾಸ್ತ್ರಗಳಲ್ಲಿನ ಅಂಶಗಳನ್ನು ಕದ್ದಂತಹ ಪಾಶ್ಚಿಮಾತ್ಯರು ಅದಕ್ಕೆ ಸಲ್ಲಸಬೇಕಾದ ಗೌರವ ನೀಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಭಗವದ್ಗೀತೆಗಾಗಿ ಮಹಾಭಾರತದ ಸೃಷ್ಟಿ

ತತ್ವಶಾಸ್ತ್ರ ವಿಷಯವನ್ನು ಪಾಶ್ಚಿಮಾತ್ಯರು ಬೇಸರದ ವಿಷಯವನ್ನಾಗಿ ಮಾಡಿ ಹಾಕಿದ್ದಾರೆ. ಭಾರತೀಯ ತತ್ವಶಾಸ್ತ್ರ ಸಾಹಿತ್ಯ ಸೃಜನಶೀಲತೆಯೊಂದಿಗೆ ಹೇಳುವಂತಹದು. ಭಗವದ್ಗೀತೆ ತಿಳಿಸುವುದಕ್ಕಾಗಿಯೇ ಮಹಾಭಾರತದ ಕಥೆ ಸೃಷ್ಟಿಯಾಗಿದ್ದು.

ತತ್ವಶಾಸ್ತ್ರವನ್ನು ಆಸಕ್ತಿದಾಯವಾಗಿ ಹೇಳುವ ಪದ್ಧತಿ ಭಾರತದಲ್ಲಿತ್ತು. ಅದನ್ನು ಪಾಶ್ಚಿಮಾತ್ಯರು ಬೇಸರ ಮೂಡಿಸುವ ರೀತಿಯಲ್ಲಿ ಮಾಡಿದರು ಎಂದು ಹೇಳಿದರು.



ವಿವಿಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಡೆದ ಡೆವಲಪ್‌ಮೆಂಟ್ ಆಫ್ ಇಂಡಿಯನ್ ಥಾಟ್ ಅಪ್ ಟೂ ಮಾಡರ್ನ್ ಟೈಮ್ಸ್ ವಿಷಯ ವಿಚಾರ ಸಂಕಿರಣವನ್ನು ಸಾಹಿತಿ ಡಾ.ಎಸ್.ಎಲ್ ಭೈರಪ್ಪ ಉದ್ಘಾಟಿಸಿದರು.

ಸಾಹಿತ್ಯದೆಡೆಗೆ ಸಾಗಲು ಕಾರಣ

ಪಾಶ್ಚಿಮಾತ್ಯರು ಭಾರತ ಬಿಟ್ಟು ತೆರಳಿದ ನಂತರ ಇಲ್ಲಿನ ಉಪನ್ಯಾಸಕರು ಹಾಗೂ ಅಧ್ಯಾಪಕರಿಗೆ ವಿದ್ಯಾರ್ಥಿವೇತನ ಹಾಗೂ ಅಧ್ಯಯನ ನಡೆಸಲು ಅವಕಾಶ ನೀಡಿ ಅಲ್ಲಿನ ತತ್ವಶಾಸ್ತ್ರವನ್ನು ಭಾರತೀಯ ಅಧ್ಯಾಪಕ, ಉಪನ್ಯಾಸಕರ ತಲೆಗೆ ತುಂಬುತ್ತಿದ್ದರು. ಅವರು ಅಲ್ಲಿ ಕಲಿತಿರುವುದನ್ನೆ ಇಲ್ಲಿ ಬಂದು ಹೇಳುತ್ತಿದ್ದರು. ಅದು ನಮ್ಮಲ್ಲಿ ಬೇಸರ ಮೂಡಿಸುತ್ತಿತ್ತು. ಈ ಕಾರಣದಿಂದಲೇ ತತ್ವಶಾಸ್ತ್ರದ ಪಾಠ ಮಾಡುತ್ತಿದ್ದ ನಾನು ಸಾಹಿತ್ಯದ ಕಡೆ ಹೊರಳಿದೆ ಎಂದು ತಿಳಿಸಿದರು.

ತತ್ವಶಾಸ್ತ್ರದಿಂದ ಗೊಂದಲ ನಿವಾರಣೆ

ತತ್ವಶಾಸ್ತ್ರ ಬೇಸರ ಎಂದು ಸಾಹಿತ್ಯದ ಕಡೆ ತಿರುಗಿದ ನನ್ನಲ್ಲಿ ಸಾಹಿತ್ಯ ಎಂದರೆ ಹೀಗೆ ಇರಬೇಕು ಎಂಬ ರೂಪಿತ ಸಿದ್ಧಾಂತದಿಂದ ಅದು ಕೂಡ ಬೇಸರ ಮೂಡಿಸಿತ್ತು. ಸಾಹಿತಿ ಆಗಬೇಕೆಂದರೆ ಮಾರ್ಕ್ಸ್‌ವಾದ ತಿಳಿದಿರಬೇಕು, ಅಸ್ತಿತ್ವವಾದ ಬಲ್ಲವನಾಗಿರಬೇಕು ಎಂಬ ಸಿದ್ಧಾಂತ ಪು.ತಿ.ನ ಅವರಲ್ಲೂ ಕಾವ್ಯ, ಸಾಹಿತ್ಯದ ಬಗ್ಗೆ ಗೊಂದಲ ಮೂಡಿಸುತ್ತಿತ್ತು. ನಾನು ಓದಿದ ತತ್ವಶಾಸ್ತ್ರ ಈ ರೀತಿಯ ಗೊಂದಲಗಳಿಂದ ನನಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿದವು ಎಂದು ನುಡಿದರು.

ವೇದ ನಿರಂತರವಾದುದು

ತತ್ವಶಾಸ್ತ್ರ ಎಂದರೆ ಎಲ್ಲ ಜ್ಞಾನದ ಶಾಖೆಗಳನ್ನು ಒಳಗೊಂಡಿರುವಂತಹದು. ವಿಜ್ಞಾನ ಬೆಳೆದಂತೆಲ್ಲಾ ಒಂದೊಂದು ಶಾಸ್ತ್ರ, ವಿಷಯ ತತ್ವಶಾಸ್ತ್ರದಿಂದ ಪ್ರತ್ಯೇಕವಾಗುತ್ತ ಬಂದು ಈಗ ತತ್ವಶಾಸ್ತ್ರ ಎಂದರೇನು ಎಂಬ ಗೊಂದಲ ಮೂಡುವಂತಹ ಸ್ಥಿತಿ ತಲುಪಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಬುದ್ಧ ಹಾಗೂ ಮಹಾವೀರ ಅವರನ್ನು ರಾಜಕೀಯದ ಕಾರಣದಿಂದಾಗಿ ಭಾರತೀಯ ಜ್ಞಾನ ಪರಂಪರೆಯಿಂದ ಬೇರೆ ಮಾಡುತ್ತಿದ್ದಾರೆ. ಆದರೆ, ಇವರೆಲ್ಲರೂ ಸಹ ವೇದಯುಗದ ಮುಂದುವರೆದ ಭಾಗ. ವೇದ ನಿರಂತವಾಗಿರುವುದು. ವೇದಗಳನ್ನು ಒಂದು ಕಾಲಘಟ್ಟದಲ್ಲಿ ಯಾರೋ ರಚಿಸಿ, ನಂತರ ನಿಂತದ್ದಲ್ಲ, ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿ, ಅರವಿಂದರು ಉಪನಿಷತ್ ಪರಂಪರೆಯ ಋಷಿಗಳು. ಮಾನವ ಕೇಂದ್ರಿತ ತತ್ವಶಾಸ್ತ್ರ ಪಾಶ್ಚಿಮಾತ್ಯರದ್ದು, ಮಾನವ ಉಳಿಯಲು ಪ್ರಾಣ - ಪರಿಸರ ರಕ್ಷಣೆ ಮಾಡಬೇಕೆಂದು ಹೇಳುವುದು ತತ್ವಶಾಸ್ತ್ರವಲ್ಲ, ಭಾರತೀಯ ಪರಂಪರೆಯಲ್ಲಿ ಅದಕ್ಕಿಂತ ಉನ್ನತ ಚಿಂತನೆಗಳು ಮೂಡಿಬಂದಿವೆ ಎಂದು ಹೇಳಿದರು.

ಪಾಶ್ಚಿಮಾತ್ಯರ ತಪ್ಪು ವಿಶ್ಲೇಷಣೆ

ವಿಧಾನಪರಿಷತ್ ಮಾಜಿ ಸದಸ್ಯೆ ಡಾ.ಎಸ್.ಆರ್.ಲೀಲಾ ಮಾತನಾಡಿ, ಭಾರತೀಯ ಶಾಸ್ತ್ರಗಳು ನಿರಂತರವಾಗಿ ದಾಳಿಗೆ ಒಳಗಾಗುತ್ತಿವೆ. ಐರೋಪ್ಯ ರಾಷ್ಟ್ರದ ವಿದ್ವಾಂಸರು ಭಾರತೀಯ ಶಾಸ್ತ್ರಗಳ ಬಗ್ಗೆ ತಪ್ಪು ವಿಶ್ಲೇಷಣೆ ಮಾಡುತ್ತಿದ್ದಾರೆ. ಇದಕ್ಕೆ ಅರವಿಂದರು, ಕಾವ್ಯಕಂಠ ಗಣಪತಿ ಮುನಿಗಳು, ಕಪಾಲಿ ಶಾಸ್ತ್ರಿಗಳು ಎಲ್ಲರು ಇಂತಹ ವಿಶ್ಲೇಷಣೆಗೆ ಉತ್ತರ ನೀಡುವ ಪ್ರಯತ್ನ ಮಾಡಿದ್ದಾರೆ. ಪಾಶ್ಚಿಮಾತ್ಯರ ವಾದವನ್ನು ನಮ್ಮ ವಿದ್ವಾಂಸರಾದ ಎಸ್.ರಾಧಾಕೃಷ್ಣ, ಗಾಂಧೀಜಿ ಒಪ್ಪಿದ್ದು ದುರ್ದೈವದ ಸಂಗತಿ. ಭಾರತೀಯ ಶಾಸ್ತ್ರಗಳ ಬಗ್ಗೆ ಪಾಶ್ಚಿಮಾತ್ಯರಿಗೆ ಇರುವ ತಪ್ಪು ಕಲ್ಪನೆ ಹೋಗಲಾಡಿಸುವುದರೊಂದಿಗೆ ಅವರ ವಿಶ್ಲೇಷಣೆಗೆ ತಕ್ಕ ಉತ್ತರ ನೀಡುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಎಜುಕೇಷನ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಶೇಷಾದ್ರಿಪುರ ಟ್ರಸ್ಟ್‌ನ ಕೆ.ಕೃಷ್ಣಸ್ವಾಮಿ, ಪ್ರಾಂಶುಪಾಲೆ ಅನುರಾಧ ರಾಯ್ ಮತ್ತಿತರರು ಉಪಸ್ಥಿತರಿದ್ದರು.

ತತ್ವಶಾಸ್ತ್ರಕ್ಕೆ ಕನ್ನಡವೇ ಒಳಿತು

ಸಾಹಿತಿ ಡಾ.ಎಸ್.ಎಲ್.ಭೈರಪ್ಪ ತಮ್ಮ ಭಾಷಣದ ಪ್ರಾರಂಭದಲ್ಲಿ ತತ್ವಶಾಸ್ತ್ರ ಎಂಬ ವಿಚಾರವೇ ಬಹಳ ಸಂಕೀರ್ಣವಾದುದು. ಇಂಗ್ಲೀಷ್ ಭಾಷೆ ಮತ್ತಷ್ಟು ಸಂಕೀರ್ಣವಾದುದು. ಕಾರ್ಯಕ್ರಮದಲ್ಲಿ ಹೆಚ್ಚಿನ ಮಂದಿ ಕನ್ನಡ ಬಲ್ಲವರಿದ್ದಾರೆ. ತೆಲುಗು ತಿಳಿದ ಮಂದಿಯೂ ಇದ್ದಾರೆ. ಅವರಿಗೂ ಸಹ ಸ್ವಲ್ಪ ಮಟ್ಟಿನ ಕನ್ನಡ ಅರ್ಥವಾಗುತ್ತದೆ. ತತ್ವಶಾಸ್ತ್ರ ಎಂದರೆ ಬೇಸರದ ವಿಷಯ. ಬೇಸರದ ವಿಷಯವನ್ನು ಮತ್ತಷ್ಟು ಸಂಕೀರ್ಣಗೊಂಡ ಭಾಷೆಯಲ್ಲಿ ಹೇಳಿದರೆ ಅರ್ಥವಾಗುವುದು ಕಷ್ಟವಾದಿತು. ಹೀಗಾಗಿ ತಾವು ಕಾರ್ಯಕ್ರಮದಲ್ಲಿ ಕನ್ನಡದಲ್ಲಿ ಮಾತನಾಡುವುದಾಗಿ ತಿಳಿಸಿದರು. ವಿಚಾರ ಸಂಕಿರಣದಲ್ಲಿ ಉಪನ್ಯಾಸ ವಿಷಯ ಮಂಡಿಸಲು ಬಂದ ವಿದ್ವಾಂಸರಿಗೆ ಭೈರಪ್ಪ ಕನ್ನಡದಲ್ಲಿ ವಿಷಯ ತಿಳಿಸಿ ಇಂಗ್ಲಿಷ್‌ನಲ್ಲಿ ವರದಿ ಬರೆಯಿರಿ ಎಂದು ತಿಳಿ ಹಾಸ್ಯದಲ್ಲಿ ಹೇಳಿದರು.

ಸಂಯುಕ್ತ ಕರ್ನಾಟಕ
ಭಾನುವಾರ, 11, ಸೆಪ್ಟೆಂಬರ್ 2016, ಬೆಂಗಳೂರು

ತತ್ತ್ವವಿಲ್ಲದ ಸಾಹಿತ್ಯಶಾಸ್ತ್ರವಿಲ್ಲ: ಭೈರಪ್ಪ

ಬೆಂಗಳೂರು: ನವೋದಯದ ನಂತರದಲ್ಲಿನ ನವ್ಯ ಸಾಹಿತಿಗಳು ಭಾರತೀಯ ತತ್ವಶಾಸ್ತ್ರವನ್ನು ತಳಕ್ಕೆ ಒತ್ತಿದ್ದರು. ಸಾಹಿತ್ಯಕ್ಕೆ ತತ್ವಶಾಸ್ತ್ರದ ಅವಶ್ಯಕತೆಯೇ ಇಲ್ಲ ಎಂದು ಪ್ರತಿಪಾದಿಸಿದ್ದರು. ಅಸ್ತಿತ್ವವಾದ, ಮಾರ್ಕ್ಸಿಸಂ ಗೊತ್ತಿಲ್ಲವಾದರೆ ಅವರು ಸಾಹಿತಿಯೇ ಅಲ್ಲ ಎನ್ನುವ ವಾತಾವರಣ ಸೃಷ್ಟಿ ಮಾಡಿದ್ದರು. ಇದರಿಂದಾಗಿ ಪು.ತಿ.ನ ಅವರಂತಹ ಕವಿಗಳೂ ಸಹ ಗೊಂದಲಕ್ಕೀಡಾಗಿದ್ದರು ಎಂದು ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಹೇಳಿದರು.

ಭಾರತೀಯ ತತ್ವಶಾಸ್ತ್ರ ಸಂಶೋಧನಾ ಮಂಡಳಿ(ಐಸಿಪಿಆರ್) ಸಹಯೋಗದಲ್ಲಿ ಶೇಷಾದ್ರಿಪುರಂ ಕಾಲೇಜಿನಲ್ಲಿ ಆರಂಭವಾದ ಆಧುನಿಕ ಕಾಲದವರೆಗೆ ಭಾರತೀಯ ಚಿಂತನಾ ಕ್ರಮ ಬೆಳೆದು ಬಂದ ದಾರಿ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು ತತ್ವಶಾಸ್ತ್ರವಿಲ್ಲದೆ ಸಾಹಿತ್ಯವಿಲ್ಲ, ಸಾಹಿತ್ಯವಿಲ್ಲದೆ ತತ್ವಶಾಸ್ತ್ರವಿಲ್ಲ. ಆದರೆ ಈಗಿನ ಸಾಹಿತಿಗಳಿಗೆ ತತ್ವಶಾಸ್ತ್ರದ ಗಂಧಗಾಳಿಯೂ ಗೊತ್ತಿಲ್ಲ ಎಂದು ಅವರು ಪ್ರತಿಪಾದಿಸಿದರು.

ತತ್ವಶಾಸ್ತ್ರ ಪ್ರತಿಪಾದಿಸುವ ಸತ್ಯ ಅಂತಿಮವಾದುದು. ಆದರೆ, ನಮ್ಮ ಹೆಚ್ಚಿನ ಲೇಖಕರು ಯಾವುದೋ ಸಾಮಾಜಿಕ ಸಮಸ್ಯೆಗಳನ್ನು ತಲೆಯಲ್ಲಿ ಇಟ್ಟುಕೊಂಡು ತತ್ವಶಾಸ್ತ್ರವನ್ನು ಅರಿತುಕೊಳ್ಳಲು ನೋಡುತ್ತಿರುವುದು ಸರಿಯಾದ ಕ್ರಮವಲ್ಲ. ಏಕೆಂದರೆ, ಸಾಮಾಜಿಕ ಸಮಸ್ಯೆಗಳಿಗೂ ಉಪನಿಷತ್ತುಗಳ ಅನುಸಂಧಾನಕ್ಕೂ ಯಾವ ಸಂಬಂಧವೂ ಇಲ್ಲ" ಎಂದು ಅವರು ವಿವರಿಸಿದರು.

ನಮ್ಮಲ್ಲಿ ಶತಮಾನಗಳ ಕಾಲ ತತ್ವಶಾಸ್ತ್ರವನ್ನು ಕೂಡ ಮನಸ್ಸಿಗೆ ಹಿತವಾಗುವಂತೆ ಕಾವ್ಯದಂತೆ ಹೇಳಿ, ಮನದಟ್ಟು ಮಾಡಿಕೊಡುವ ಕ್ರಮವಿತ್ತು. ಆದರೆ, ಪಾಶ್ಚಾತ್ಯರು ಇದನ್ನು ವ್ಯವಸ್ಥಿತವಾಗಿ ನಾಶ ಮಾಡಿ, ತಮ್ಮ ಶುಷ್ಕ ಪದ್ಧತಿಯನ್ನೇ ಮುಂದಕ್ಕೆ ತಂದರು. ಹೀಗಾಗಿ ನಮ್ಮ ದೇಶದಲ್ಲಿ ತತ್ವಶಾಸ್ತ್ರದ ಅಧ್ಯಯನವು ಅವನತಿಯ ಹಾದಿಯನ್ನು ಹಿಡಿಯಿತು ಎಂದು ಅವರು ಹೇಳಿದರು.



'ಆಧುನಿಕ ಕಾಲದವರೆಗೆ ಭಾರತೀಯ ಚಿಂತನಾ ಕ್ರಮ ಬೆಳೆದು ಬಂದ ದಾರಿ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಹಿರಿಯರಾದ ಡಾ. ಎಸ್.ಆರ್. ಲೀಲಾ, ಡಾ. ವೂಡೆ ಪಿ ಕೃಷ್ಣ, ಎಸ್.ಎಂ. ನಟರಾಜ್, ಡಾ. ಎಂ. ಪ್ರಕಾಶ್, ಡಾ. ಅನುರಾಧಾರಾಯ್ ಉಪಸ್ಥಿತರಿದ್ದರು.

ಭಗವದ್ಗೀತೆಯನ್ನು ಕುರಿತು ಇಂದು ಸಾಕಷ್ಟು ಜನ ಸಮಗ್ರ ಅರಿವಿಲ್ಲದೆ ಅರ್ಥಹೀನವಾಗಿ ಮಾತನಾಡುತ್ತಿದ್ದಾರೆ. ಗೀತೆ ಅರ್ಥವಾಗಬೇಕಾದರೆ ನಮಗೆ ವೇದ, ವೇದಾಂತ, ಉಪನಿಷತ್ತಿನ ಆಳವಾದ ಅಧ್ಯಯನವಿರಬೇಕು. ನಮ್ಮ ಪರಂಪರೆಯಲ್ಲಿ ಬಂದ ಬುದ್ಧ ಮತ್ತು ಮಹಾವೀರ ಕೂಡ ಭಾರತೀಯ ಪರಂಪರೆಯ ಜ್ಞಾನದ ಪ್ರತಿನಿಧಿಗಳೇ ಆಗಿದ್ದಾರೆ. ಆದರೆ, ಈಗ ಎಲ್ಲರನ್ನೂ ರಾಜಕೀಯ ಕಾರಣಗಳಿಗಾಗಿ ಒಡೆಯಲಾಗುತ್ತಿದೆ" ಎಂದು ಅವರು ಭಗವದ್ಗೀತೆಯಂಥ ಉತ್ಕೃಷ್ಟ ತತ್ವಶಾಸ್ತ್ರ ಮತ್ತೊಂದಿಲ್ಲ. ಅದರ ಮಂಡನೆಗಾಗಿಯೇ ವ್ಯಾಸರು ಮಹಾಭಾರತವನ್ನು ಪ್ರತಿಪಾದಿಸಿದರು.

"ಆಧುನಿಕ ಯುಗದಲ್ಲಿ ಮೂಡಿಬಂದ ರಮಣ ಮಹರ್ಷಿಗಳು, ಅರವಿಂದರು ಮತ್ತು ರಾಮಕೃಷ್ಣ ಪರಮಹಂಸರು ಕೂಡ ನಮ್ಮ ದೇಶದ ಉಪನಿಷತ್ ಪರಂಪರೆಯ ಕೊಡುಗೆಗಳೇ ಆಗಿದ್ದಾರೆ.

ತತ್ವಶಾಸ್ತ್ರವನ್ನು ಅರಿಯಲು ಸಾಹಿತ್ಯದ ನಂಟಿರಬೇಕು. ಈ ತುಡಿತದಲ್ಲೇ ನಾನು ತತ್ವಶಾಸ್ತ್ರವನ್ನು ಓದಿಕೊಂಡು, ಸಾಹಿತ್ಯ ರಚನೆಗೆ ಹೊರಳಿದೆ. ಆದರೆ ಅಲ್ಲೂ ಕೂಡ ಸಾಹಿತ್ಯವೆಂದರೆ ಹೀಗೆಯೇ ಇರಬೇಕು ಎನ್ನುವ ನಿಯಮಗಳಿದ್ದವು. ತತ್ವಶಾಸ್ತ್ರವೆಂದರೆ ಎಲ್ಲ ಜ್ಞಾನಶಾಖೆಗಳನ್ನೂ ತನ್ನಲ್ಲಿ ಒಳಗೊಂಡಿರುವಂಥದ್ದು. ಆದರೆ, ಆಧುನಿಕ ವಿಜ್ಞಾನವು ಇಂಥ ಸಮಗ್ರತೆಯನ್ನು ಬಲಿ ತೆಗೆದುಕೊಂಡು, ಎಲ್ಲವನ್ನೂ ಸೀಳುತ್ತ ಬಂದಿತು. ಹೀಗಾಗಿ ಈಗ ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲೆಡೆ ಮೂಲೆಗುಂಪಾಗಿದೆ ಎಂದರು.

ಕನ್ನಡದಲಿರಲಿ

ಇದು ರಾಷ್ಟ್ರೀಯ ವಿಚಾರಸಂಕಿರಣವಾದರೂ ಇಲ್ಲಿನ ಪ್ರೇಕ್ಷಕರು ಕನ್ನಡಿಗರು ಇರುವ ಕಾರಣ ಕನ್ನಡದಲ್ಲಿ ಮಾತನಾಡಿದರೆ ಅರ್ಥವಾಗುತ್ತದೆ ಎಂದು ಹೇಳಿದ ಎಸ್.ಎಲ್. ಭೈರಪ್ಪ ಅವರು, ತತ್ವಶಾಸ್ತ್ರವನ್ನು ಇಂಗ್ಲಿಷಿನಲ್ಲಿ ಮಾತನಾಡಿದರೆ ಸರಿಯಾಗಿರುವುದಿಲ್ಲ ಎಂದು ಹೇಳಿ ಕನ್ನಡದಲ್ಲಿಯೇ ಮಾತನಾಡಿದರು. ಪಾಶ್ಚಾತ್ಯ ವಿದ್ವಾಂಸರು ಭಾರತೀಯ ತತ್ವಶಾಸ್ತ್ರವನ್ನು ಕಡೆಗಣಿಸಿದ್ದಾರೆಂದು ವಿವರಿಸಿದ್ದ ಅವರು ಪ್ರಾರಂಭದಲ್ಲಿ ತತ್ವಶಾಸ್ತ್ರದ ಕುರಿತು ಆಸಕ್ತಿಯಿತ್ತು. ತತ್ವಶಾಸ್ತ್ರದಲ್ಲೇ ಕೃತಿ ರಚಿಸಬೇಕೆಂಬ ಇಚ್ಛೆ ಇತ್ತು ಎಂದು ತಿಳಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಡಾ. ಎಸ್.ಆರ್. ಲೀಲಾ ಮಾತನಾಡಿ, ಭಾರತೀಯ ತತ್ವಶಾಸ್ತ್ರಗಳ ಮೇಲೆ ನಿರಂತರ ಆರೋಪಗಳ ದಾಳಿ ಮುಂದುವರೆದಿದೆ. ಇವೆಲ್ಲವುಗಳಿಗೆ ಕಪಾಲಿಶಾಸ್ತ್ರಿ, ಕಾವ್ಯಕಂಠ ಗಣಪತಿ ಮುನಿ, ಅರವಿಂದರು ಸೇರಿದಂತೆ ಅನೇಕರು ಉತ್ತರಿಸುತ್ತ ಬಂದಿದ್ದಾರೆಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ ಕೃಷ್ಣ, ಎಸ್.ಎಂ. ನಟರಾಜ್, ಡಾ. ಎಂ. ಪ್ರಕಾಶ್, ಪ್ರಾಂಶುಪಾಲರಾದ ಡಾ. ಅನುರಾಧರಾಯ್ ಮುಂತಾದವರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ VK
ಭಾನುವಾರ, 11 ಸೆಪ್ಟೆಂಬರ್ 2016

ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಎಸ್.ಎಲ್.ಭೈರಪ್ಪ ಅಭಿಮತ

ಗೀತೆಯಂಥ ಉತ್ಕೃಷ್ಟ ತಾತ್ವಿಕ ಗ್ರಂಥ ಮತ್ತೊಂದಿಲ್ಲ

■ ವಿಕ ಸುದ್ದಿಲೋಕ ಬೆಂಗಳೂರು

ಭಗವದ್ಗೀತೆಯಂಥ ಉತ್ಕೃಷ್ಟ ತತ್ವಶಾಸ್ತ್ರ ಮತ್ತೊಂದಿಲ್ಲ. ಅದರ ಮಂಡನೆಗಾಗಿಯೇ ವ್ಯಾಸರು ಮಹಾಭಾರತ ಕಥೆಯನ್ನು ಸೃಷ್ಟಿಸಿದರು. ಹೀಗಾಗಿ, ಭಾರತೀಯ ಪರಂಪರೆಯ ಆಧಾರಗ್ರಂಥಗಳಲ್ಲಿ ಗೀತೆಗೆ ಬಹುಎತ್ತರದ ಸ್ಥಾನವಿದ್ದು, ಅದು ಇಲ್ಲಿನ ಯುಗಯುಗಗಳ ಬದುಕನ್ನು ಸಮರ್ಥವಾಗಿ ನಿರ್ದೇಶಿಸಿದೆ ಎಂದು ಖ್ಯಾತ ಕಾದಂಬರಿಕಾರ, ಪದ್ಮಶ್ರೀ ಪುರಸ್ಕೃತ ಡಾ.ಎಸ್ ಎಲ್ ಭೈರಪ್ಪ ಹೇಳಿದರು.

ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಆಧುನಿಕ ಕಾಲದವರೆಗೆ ಭಾರತೀಯ ಚಿಂತನಾ ಕ್ರಮ ಬೆಳೆದು ಬಂದ ದಾರಿ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಅವರು ಆಶಯ ಭಾಷಣ ಮಾಡಿ, ಶನಿವಾರ ಮಾತನಾಡಿದರು. ಈ ಕಾರ್ಯಕ್ರಮಕ್ಕೆ ಕೇಂದ್ರ ಸರಕಾರದ ಭಾರತೀಯ ತತ್ವಶಾಸ್ತ್ರ ಸಂಶೋಧನಾ ಮಂಡಳಿ (ಐಸಿಪಿಆರ್) ಸಹಯೋಗ ನೀಡಿದೆ.

''ಭಗವದ್ಗೀತೆ ಕುರಿತು ಇಂದು ಸಾಕಷ್ಟು ಜನ ಸಮಗ್ರ ಅರಿವಿಲ್ಲದೆ ಅರ್ಥಹೀನವಾಗಿ ಮಾತನಾಡುತ್ತಿದ್ದಾರೆ. ಗೀತೆ ಅರ್ಥವಾಗಬೇಕಾದರೆ ನಮಗೆ ವೇದ, ವೇದಾಂತ, ಉಪನಿಷತ್ತಿನ ಆಳವಾದ ಅಧ್ಯಯನವಿರಬೇಕು. ನಮ್ಮ ಪರಂಪರೆಯಲ್ಲಿ ಬಂದ ಬುದ್ಧ ಮತ್ತು ಮಹಾವೀರ ಕೂಡ ಭಾರತೀಯ ಪರಂಪರೆಯ ಜ್ಞಾನದ ಪ್ರತಿನಿಧಿಗಳೇ ಆಗಿದ್ದಾರೆ. ಆದರೆ, ಈಗ ಎಲ್ಲರನ್ನೂ ರಾಜಕೀಯ ಕಾರಣಗಳಿಗಾಗಿ ಒಡೆಯಲಾಗುತ್ತಿದೆ,'' ಎಂದು ಪ್ರತಿಪಾದಿಸಿದರು.

''ಆಧುನಿಕ ಯುಗದಲ್ಲಿ ಮೂಡಿಬಂದ ರಮಣ ಮಹರ್ಷಿಗಳು, ಅರವಿಂದರು ಮತ್ತು ರಾಮಕೃಷ್ಣ ಪರಮಹಂಸರು ಕೂಡ ನಮ್ಮ ದೇಶದ ಉಪನಿಷತ್ ಪರಂಪರೆಯ ಕೊಡುಗೆಗಳೇ ಆಗಿದ್ದಾರೆ. ತತ್ವಶಾಸ್ತ್ರ ಪ್ರತಿಪಾದಿಸುವ ಸತ್ಯ ಅಂತಿಮವಾದುದು. ಆದರೆ, ನಮ್ಮ ಹೆಚ್ಚಿನ ಲೇಖಕರು ಯಾವುದೋ ಸಾಮಾಜಿಕ ಸಮಸ್ಯೆಗಳನ್ನು ತಲೆಯಲ್ಲಿ ಇಟ್ಟುಕೊಂಡು ತತ್ವಶಾಸ್ತ್ರವನ್ನು ಅರಿತುಕೊಳ್ಳಲು ನೋಡುತ್ತಿರುವುದು ಸರಿಯಾದ ಕ್ರಮವಲ್ಲ. ಏಕೆಂದರೆ, ಸಾಮಾಜಿಕ ಸಮಸ್ಯೆಗಳಿಗೂ ಉಪನಿಷತ್ತುಗಳ ಅನುಸಂಧಾನಕ್ಕೂ ಯಾವ ಸಂಬಂಧವೂ ಇಲ್ಲ'' ಎಂದು ವಿವರಿಸಿದರು.

''ತತ್ವಶಾಸ್ತ್ರವನ್ನು ಅರಿಯಲು ಸಾಹಿತ್ಯದ ನಂಟಿರಬೇಕು. ಈ ತುಡಿತದಲ್ಲೇ ನಾನು ತತ್ವಶಾಸ್ತ್ರವನ್ನು ಓದಿಕೊಂಡು, ಸಾಹಿತ್ಯ ರಚನೆಗೆ ಹೊರಳಿದೆ. ಆದರೆ ಅಲ್ಲೂ ಕೂಡ ಸಾಹಿತ್ಯವೆಂದರೆ ಹೀಗೆಯೇ ಇರಬೇಕು ಎನ್ನುವ ನಿಯಮಗಳಿದ್ದವು. ಜತೆಗೆ ಸಾಹಿತಿ ಎನಿಸಿಕೊಳ್ಳಬೇಕಾದರೆ ಮಾರ್ಕ್ಸ್ ವಾದ, ಅಸ್ತಿತ್ವವಾದಗಳೆಲ್ಲ ಗೊತ್ತಿರಬೇಕೆನ್ನುವ ಭ್ರಮೆಯನ್ನು ಬಿತ್ತಲಾಗಿತ್ತು. ನಾನು, ನನ್ನ ತತ್ವಶಾಸ್ತ್ರದ ಅಧ್ಯಯನದಿಂದ ಈ ಅಪಾಯಗಳಿಂದ ನನ್ನನ್ನು ಬಿಡಿಸಿಕೊಂಡೆ,'' ಎಂದು ಭೈರಪ್ಪ ತಮ್ಮ ಯಶಸ್ಸಿನ ಗುಟ್ಟನ್ನು ಹಂಚಿಕೊಂಡರು.



ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಆಶಯ ಭಾಷಣ ಮಾಡಿದ ಡಾ.ಎಸ್ ಎಲ್ ಭೈರಪ್ಪ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಡಾ.ಎಸ್ ಆರ್ ಭಟ್, ವೂಡೆ ಕೃಷ್ಣ, ಮಾಜಿ ಎಂಎಲ್‌ಸಿ ಎಸ್ ಆರ್ ಲೀಲಾ, ಡಾ.ಅನುರಾಧಾ ರಾಯ್ ಉಪಸ್ಥಿತರಿದ್ದರು.

> ತತ್ವಶಾಸ್ತ್ರವಿಲ್ಲದೆ ಸಾಹಿತ್ಯವಿಲ್ಲ; ಸಾಹಿತ್ಯವಿಲ್ಲದೆ ತತ್ವಶಾಸ್ತ್ರವಿಲ್ಲ. ಆದರೆ ಈಗಿನ ಸಾಹಿತಿಗಳಿಗೆ ತತ್ವಶಾಸ್ತ್ರದ ಗಂಧಗಾಳಿಯೂ ಗೊತ್ತಿಲ್ಲ. ಈಗಿನ ಸಾಹಿತ್ಯಲೋಕದಲ್ಲಿ ತುಂಬಿರುವ ಅರ್ಥಹೀನ ಸಂಗತಿಗಳಿಂದ ಪುತಿನ ಅವರಂಥ ಕವಿ ಕೂಡ ಗೊಂದಲಕ್ಕೊಳಗಾಗಿದ್ದರು.
> -ಎಸ್ ಎಲ್ ಭೈರಪ್ಪ

''ತತ್ವಶಾಸ್ತ್ರವೆಂದರೆ ಎಲ್ಲ ಜ್ಞಾನಶಾಖೆಗಳನ್ನೂ ತನ್ನಲ್ಲಿ ಒಳಗೊಂಡಿರುವಂಥದ್ದು. ಆದರೆ, ಆಧುನಿಕ ವಿಜ್ಞಾನವು ಇಂಥ ಸಮಗ್ರತೆಯನ್ನು ಬಲಿ ತೆಗೆದುಕೊಂಡು, ಎಲ್ಲವನ್ನೂ ಸೀಳುತ್ತ ಬಂದಿತು. ಹೀಗಾಗಿ ಈಗ ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲೆಡೆ ಮೂಲೆಗುಂಪಾಗಿದೆ. ತುಂಬಾ ಜನರು ತತ್ವಶಾಸ್ತ್ರವನ್ನು ಒಂದು ಸಿದ್ಧಾಂತ ಎಂದುಕೊಂಡಿದ್ದಾರೆ. ನಿಜವಾಗಿಯೂ ಅದು ಸಾರ್ವಕಾಲಿಕ ಮೌಲ್ಯಗಳ ಅಧ್ಯಯನವಾಗಿದೆ,'' ಎಂದು ಅವರು ನುಡಿದರು.

ಐಸಿಪಿಆರ್ ಅಧ್ಯಕ್ಷ ಡಾ.ಎಸ್ ಆರ್ ಭಟ್, ಕಾಲೇಜಿನ ಅಧ್ಯಕ್ಷ ವೂಡೆ ಪಿ ಕೃಷ್ಣ ಉಪಸ್ಥಿತರಿದ್ದರು. ಉದ್ಘಾಟನೆಯ ನಂತರ ಎರಡು ಗೋಷ್ಠಿಗಳು ನಡೆದವು. ಇದರಲ್ಲಿ, ಶತಾವಧಾನಿ ಗಣೇಶ್, ಎಸ್ ಸುಂದರರಾಜನ್, ಡಾ.ಅಹಲ್ಯಾ ಶರ್ಮಾ, ಸಂದೀಪ್ ಬಾಲಕೃಷ್ಣನ್, ಕೆ ಎಸ್ ಕಣ್ಣನ್ ಮುಂತಾದವರು ವಿಚಾರಗಳನ್ನು ಮಂಡಿಸಿದರು.

ವಿಶ್ವವಾಣಿ

11.9.2016
ಭಾನುವಾರ

ಸಾಹಿತ್ಯದಿಂದ ಮಾತ್ರ ತತ್ವಶಾಸ್ತ್ರ ಅಭ್ಯಾಸ ಸಾಧ್ಯ

ಹಿರಿಯ ಸಾಹಿತಿ ಎಸ್. ಎಲ್ ಭೈರಪ್ಪ ಅಭಿಪ್ರಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಾಹಿತ್ಯದ ಹಿನ್ನೆಲೆಯಿದ್ದರೆ ಮಾತ್ರ ತತ್ವ ಶಾಸ್ತ್ರ ಅಭ್ಯಾಸ ಮಾಡಲು ಸಾಧ್ಯ ಎಂದು ಹಿರಿಯ ಸಾಹಿತಿ ಎಸ್. ಎಲ್ ಭೈರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಶೇಷಾದ್ರಿಪುರ ಕಾಲೇಜು ಹಾಗೂ ಇಂಡಿಯನ್ ಕೌನ್ಸಿಲ್ ಆಫ್ ಫಿಲಾಸಫಿಕಲ್ ರಿಸರ್ಚ್ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಡೆವಲಪ್‌ಮೆಂಟ್ ಆಫ್ ಇಂಡಿಯನ್ ಥಾಟ್ ಅಪ್ ಟೂ ಮಾಡರ್ನ್ ಟೈಮ್ಸ್' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ತತ್ವಶಾಸ್ತ್ರ ಅಭ್ಯಾಸ ಮಾಡಲು ಸೃಜನಶೀಲತೆ ಹಾಗೂ ಕಲ್ಪನೆ ಅಗತ್ಯ. ಈ ಎರಡು ಬರುವುದಕ್ಕೆ ಸಾಹಿತ್ಯದ ಅಭ್ಯಾಸ ಅಗತ್ಯವಾಗಿದೆ. ಆದ ಕಾರಣ ಪಾಶ್ಚಿಮಾತ್ಯ ದೇಶದವರು ಹೇಳುವಂತೆ ಸಾಹಿತ್ಯ ಮತ್ತು ತತ್ವಶಾಸ್ತ್ರ ಬೇರೆಯಲ್ಲ. ಈ ಎರಡು ವಿಷಯಗಳು ಪರಸ್ಪರ ಪೂರಕವಾಗಿವೆ. ಆದರೆ ಇಂದಿನ ಬಹುತೇಕ ಸಾಹಿತಿಗಳಿಗೆ ತತ್ವಶಾಸ್ತ್ರದ ಗಂಧ ಗಾಳಿಯೂ ತಿಳಿದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ತತ್ವಶಾಸ್ತ್ರ ಎನ್ನುವುದು ಸಿದ್ಧಾಂತವಲ್ಲ, ಅದು ಮೌಲ್ಯಗಳ ಅಧ್ಯಯನ. ತತ್ವ ಶಾಸ್ತ್ರ ಓದುತ್ತ ಹೋದಂತೆ ನಮ್ಮಲ್ಲಿ ನೂತನ ಆಲೋಚನೆಗಳು ಚಿಗುರುತ್ತವೆ. ಭಾರತ ದೇಶ ತತ್ವಶಾಸ್ತ್ರ ಅಂಶಗಳನ್ನು ಪಡೆದ ಪಾಶ್ಚಿಮಾತ್ಯ ದೇಶದ ವಿದ್ವಾಂಸರು, ನಮಗೆ ಶ್ರೇಯ ನೀಡದೇ, ಅವರದ್ದೇ ಎನ್ನುವಂತೆ ಬಿಂಬಿಸಿದ್ದಾರೆ ಎಂದು ಹೇಳಿದರು.

ಪಾಶ್ಚಿಮಾತ್ಯರು ತತ್ವಶಾಸ್ತ್ರ ವಿಷಯದ ಬಗ್ಗೆ ಬೇಸರ ಬರುವಂತೆ ವಿಷಯ ಮಂಡನೆ ಮಾಡಿದ್ದಾರೆ. ಆದರೆ ನಮ್ಮಲ್ಲಿ ಆ ವಿಷಯದಲ್ಲಿ ಆಸಕ್ತಿ ಮೂಡುವಂತೆ ಹೇಳುವ ಪದ್ಧತಿಯಿದೆ. ಭಗವದ್ಗೀತೆಯಲ್ಲಿರುವುದನ್ನು ಹೇಳುವುದಕ್ಕಾಗಿಯೇ, ಮಹಾಭಾರತದ ಕಥೆ ಸೃಷ್ಟಿಯಾಗಿದೆ ಎಂದರು.

> ಪಾಶ್ಚಿಮಾತ್ಯದವರದ್ದು ಮನುಷ್ಯ ಕೇಂದ್ರಿತ ತತ್ವ ಶಾಸ್ತ್ರ, ಆದರೆ ಭಾರತೀಯರು, ಮಾನವ ಉಳಿಯಲು ಪ್ರಾಣಿ ಪರಿಸರ ರಕ್ಷಣೆ ಅಗತ್ಯವೆಂದು ಸಾರಿದೆ. ವಿದೇಶಿಗರಿಗೆ ಹೋಲಿಸಿದರೆ ಭಾರತೀಯ ಪರಂಪರೆಯಲ್ಲಿ ಉನ್ನತ ಚಿಂತನೆಗಳು ಮೂಡಿಬಂದಿವೆ.
>
> – ಎಸ್.ಎಲ್ ಭೈರಪ್ಪ ಸಾಹಿತಿ

ಕಾರ್ಯಕ್ರಮದಲ್ಲಿ ಮಾತನಾಡಿದ ವಿಧಾನಪರಿಷತ್ ಮಾಜಿ ಸದಸ್ಯೆ ಡಾ.ಎಸ್.ಆರ್.ಲೀಲಾ, ಭಾರತೀಯ ಶಾಸ್ತ್ರಗಳು ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿವೆ. ಭಾರತೀಯ ಶಾಸ್ತ್ರಗಳನ್ನು ವಿದೇಶಿ ವಿದ್ವಾಂಸರು ತಪ್ಪಾಗಿ ವಿಶ್ಲೇಷಣೆ ಮಾಡುತ್ತಿದ್ದಾರೆ. ಪಾಶ್ಚಿಮಾತ್ಯರಿಗೆ ಇರುವ ತಪ್ಪು ಕಲ್ಪನೆ ಹೋಗಲಾಡಿಸಲು ಸರಿಯಾದ ವಿಶ್ಲೇಷಣೆ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಪಾಶ್ಚಿಮಾತ್ಯರಿಗೆ ಭಾರತ ಶಾಸ್ತ್ರಗಳ ಬಗ್ಗೆ ತಿಳಿಸಲು ಅರಬಿಂದೊ, ಕಾವ್ಯಕಂಠ ಗಣಪತಿ ಮುನಿ, ಕಪಾಲಿ ಶಾಸ್ತ್ರಿ ಸೇರಿದಂತೆ ಅನೇಕರು ಸಕಾರಾತ್ಮಕ ವಿಶ್ಲೇಷಣೆಗಳ ಮೂಲಕ ಉತ್ತರ ನೀಡಲು ಪ್ರಯತ್ನ ಮಾಡಿದ್ದರು. ಆದರೆ ವಿದ್ವಾಂಸರಾದ ಎಸ್. ರಾಧಕೃಷ್ಣ ಅವರು, ಪಾಶ್ಚಿಮಾತ್ಯರ ವಾದ ಒಪ್ಪಿದ್ದೂ ದುರಾದೃಷ್ಟಕರ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ, ಪ್ರಾಂಶುಪಾಲರಾದ ರಾಧಾ ರಾಯ್ ಇದ್ದರು.



'ಡೆವಲಪ್‌ಮೆಂಟ್ ಆಫ್ ಇಂಡಿಯನ್ ಥಾಟ್ ಅಪ್ ಟೂ ಮಾಡರ್ನ್ ಟೈಮ್ಸ್' ವಿಚಾರ ಸಂಕಿರಣದಲ್ಲಿ ಹಿರಿಯ ಸಾಹಿತಿ ಎಸ್. ಎಲ್ ಭೈರಪ್ಪ ಉಪಸ್ಥಿತರಿದ್ದರು. ಈ ವೇಳೆ ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಪ್ರಾಂಶುಪಾಲರಾದ ರಾಧಾ ರಾಯ್ ಇದ್ದರು.

ಉದಯವಾಣಿ | ಭಾನುವಾರ | ಸೆಪ್ಟೆಂಬರ್ | 11 | 2016

ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ

ಸಾಹಿತ್ಯ ಮತ್ತು ತರ್ಕಶಾಸ್ತ್ರ ಮಧ್ಯೆ ಗೊಂದಲ: ಭೈರಪ್ಪ



ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ನಡೆದ 'ಆಧುನಿಕ ಭಾರತದ ಚಿಂತನೆಗಳ ಅಭಿವೃದ್ಧಿ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸಾಹಿತಿ ಎಸ್.ಎಲ್. ಭೈರಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ಬೆಂಗಳೂರು: ಸಾಹಿತ್ಯ ಮತ್ತು ತರ್ಕ ಶಾಸ್ತ್ರದ ನಡುವೆ ಅವಿನಾಭಾವ ಸಂಬಂಧ ವಿದ್ದರೂ ವಸ್ತು ವಿಷಯ ತೂಗುಯ್ಯಾಲೆ ಯಲ್ಲಿರುವುದರಿಂದ. ಗೊಂದಲ ಉಂಟಾಗಿದೆ ಎಂದು ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಹೇಳಿದ್ದಾರೆ.

ನಗರದ ಶೇಷಾದ್ರಿಪುರ ಕಾಲೇಜು ಮತ್ತು ಭಾರತ ತರ್ಕಶಾಸ್ತ್ರ ಸಂಶೋಧನಾ ಸಮಿತಿ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ 'ಆಧುನಿಕ ಭಾರತದ ಚಿಂತನೆಗಳ ಅಭಿವೃದ್ಧಿ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ತರ್ಕಶಾಸ್ತ್ರ ಜ್ಞಾನದ ಎಲ್ಲ ಶಾಖೆಗಳನ್ನು ಒಳಗೊಂಡಿದ್ದರೂ ಬೇರೆ ಬೇರೆ ವಿಭಾಗಗಳಲ್ಲಿ ಪರಿವರ್ತನೆಗೊಂಡಿದೆ. ಸುಲಭವಾಗಿ ವ್ಯಾಖ್ಯಾನಿಸುವುದಾದರೆ ಅವುಗಳು ಒಡೆದು ಹೋಗಿವೆ ಎಂದು ಅರ್ಥೈಸಬಹುದು. ಬುದ್ಧಿವಂತಿಕೆ ಯಿಂದ ಮಂಡಿಸಲ್ಪಡುವ ವಾದವನ್ನು ತರ್ಕವೆನ್ನಬಹುದು. ಆದರೆ, ಇದರಲ್ಲಿ ರುವ ಗೊಂದಲಗಳು ಇಂದಿಗೂ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ ಎಂದು ಹೇಳಿದರು.

ನಿಜವಾದ ತರ್ಕಶಾಸ್ತ್ರ ಸಾಹಿತ್ಯದಿಂದ ಜನ್ಮ ತಾಳಿದ್ದು, ವೇದ, ಉಪನಿಷತ್ ಗಳಲ್ಲಿ ವಿಲೀನಗೊಂಡಿದೆ. ತರ್ಕಶಾಸ್ತ್ರದ ನಿಜವಾದ ಅರ್ಥ ಕಂಡುಕೊಳ್ಳಲು ಇನ್ನೂ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ತರ್ಕಶಾಸ್ತ್ರದಲ್ಲಿ ವಸ್ತು ವಿಷಯ ಏನು ಎನ್ನುವುದನ್ನು ಅರಿತುಕೊಳ್ಳಲು ಭಾರತೀಯ ತರ್ಕಶಾಸ್ತ್ರ ಹಾಗೂ ಪಾಶ್ಚಿಮಾತ್ಯ ತರ್ಕಶಾಸ್ತ್ರ ಬೇರೆ ಬೇರೆ ದೃಷ್ಟಿಕೋನಗಳಲ್ಲಿ ಚಿಂತಿಸುತ್ತಿವೆ ಎಂದರು.

ಈ ಹಿಂದೆ ತರ್ಕಶಾಸ್ತ್ರ ಎಂಬುದು ಅಮೆರಿಕ ವಿಶ್ವವಿದ್ಯಾಲಯ ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ಮಾತ್ರ ಕಾಣಸಿಗುತ್ತಿತ್ತು. ಅದನ್ನೇ ನಿಜವಾದ ತರ್ಕಶಾಸ್ತ್ರವೆಂದು ನಂಬಲಾಗಿತ್ತು. ಆದರೆ, ತರ್ಕಶಾಸ್ತ್ರ ಬಹುದೊಡ್ಡ ವಸ್ತು ವಿಷಯವನ್ನೊಳಗೊಂಡಿದೆ. ತರ್ಕಶಾಸ್ತ್ರವನ್ನು ಓದಿ ಮರೆತುಬಿಡಬೇಕು. ನಂತರ ಅದರಿಂದ ದೊರೆಯುವ ಬೌದ್ಧಿಕ ತರಬೇತಿ ಹಾಗೂ ಜ್ಞಾನದಿಂದ ಚಿಂತನಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್‌ನ ಡಾ. ವೂಡೇ ಪಿ. ಕೃಷ್ಣ, ಡಾ. ಪ್ರಕಾಶ್, ಎಂ.ಎಸ್. ನಟರಾಜ್, ಕಾಲೇಜಿನ ಪ್ರಾಚಾರ್ಯರಾದ ಡಾ. ಅನುರಾಧ ರಾಯ್ ಮತ್ತಿತರರು ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಭಾನುವಾರ
11 ಸೆಪ್ಟೆಂಬರ್ 2016
11 SEPTEMBER 2016

ಸಾಹಿತ್ಯವಿಲ್ಲದೆ ತತ್ವಶಾಸ್ತ್ರಕ್ಕೆ ಅಸ್ತಿತ್ವವಿಲ್ಲ

ತತ್ವಶಾಸ್ತ್ರ ಬೋರು ಹೊಡೆಸುವ ಸಿದ್ಧಾಂತವಲ್ಲ | ಡಾ.ಎಸ್.ಎಲ್. ಭೈರಪ್ಪ ಅಭಿಮತ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಿಜವಾದ ತತ್ವಶಾಸ್ತ್ರ ಹುಟ್ಟಿದ್ದೇ ಸಾಹಿತ್ಯದಿಂದ. ಸಾಹಿತ್ಯವಿಲ್ಲದೆ ತತ್ವಶಾಸ್ತ್ರಕ್ಕೆ ಅಸ್ತಿತ್ವವಿಲ್ಲ. ಹಾಗಾಗಿ ಸಾಹಿತ್ಯ ಮತ್ತು ತತ್ವಶಾಸ್ತ್ರ ಪ[illegible] ವಿರೋಧಿಗಳು ಎಂಬುದು ತಪ್ಪು ಗ್ರಹಿಕೆ ಎಂದು ಸರಸ್ವ[illegible] ಸ್ಮಾನ್ ಪುರಸ್ಕೃತ ಕಾದಂಬರಿಕಾರ ಡಾ. ಎಸ್. ಎಲ್. ಭೈರಪ್ಪ ಹೇಳಿದ್ದಾರೆ.


ಭಾರತೀಯ ತತ್ವಶಾಸ್ತ್ರ ಸಂಶೋಧನಾ ಮಂಡಳಿ (ಐಸಿಪಿಆರ್) ಸಹಯೋಗದಲ್ಲಿ ಶೇಷಾದ್ರಿಪುರಂ ಕಾಲೇಜಿನಲ್ಲಿ ಶನಿವಾರ ಆರಂಭವಾದ 'ಆಧುನಿಕ ಕಾಲದವರೆಗೆ ಭಾರತೀಯ ತತ್ವಶಾಸ್ತ್ರದ ಬೆಳವಣಿಗೆ' ಕುರಿತು 2 ದಿನಗಳ ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಡಾ. ಎಸ್. ಎಲ್. ಭೈರಪ್ಪ ಅಭಿಮತ

ಶೇಷಾದ್ರಿಪುರಂ ಕಾಲೇಜಿನಲ್ಲಿ ವಿಚಾರಸಂಕಿರಣ

ಸಾಹಿತ್ಯ ಹಾಗೂ ತತ್ವಶಾಸ್ತ್ರಕ್ಕೂ ಇರುವ ಸಂಬಂಧಗಳ ಕುರಿತು ಸಾಕಷ್ಟು ಚರ್ಚೆಗಳಾಗಿವೆ. ಪಾಶ್ಚಾತ್ಯ ವಿದ್ವಾಂಸರು ತತ್ವಶಾಸ್ತ್ರವನ್ನು ನಿರ್ದಿಷ್ಟ ಚೌಕಟ್ಟಿಗೆ ಒಳಪಡಿಸಿದ್ದಾರೆ. ತತ್ವಶಾಸ್ತ್ರ ಎಂದರೆ ಸಿದ್ಧಾಂತವಲ್ಲ. ಓದಿದ ನಂತರ ನಮ್ಮ ಮನಸ್ಸಿನಲ್ಲಿ ಹೊಸ ಒಳನೋಟಗಳನ್ನು ಮೂಡಿಸುವುದೇ ತತ್ವಶಾಸ್ತ್ರ. ಕಥೆ, ದೃಷ್ಟಾಂತ, ಸಂದರ್ಭ ಬಳಸಿ ತತ್ವಶಾಸ್ತ್ರ ಬೋಧಿಸಬೇಕು. ಸಾಹಿತ್ಯದ ಸೃಜನಶೀಲತೆಯ ಮೂಲಕ ತತ್ವಶಾಸ್ತ್ರ ಬೋಧಿಸುವುದಕ್ಕೆ ಮಹಾಭಾರತ, ರಾಮಾಯಣ, ಉಪ[illegible]ತ್ತುಗಳು ಉತ್ತಮ ಉದಾಹರಣೆ ಎಂದರು.

[illegible]ದಯದ ನಂತರ ಕರ್ನಾಟಕದಲ್ಲಿ ಆರಂಭವಾದ ನವ್ಯ [illegible]ತಿಗಳು ಭಾರತೀಯ ತತ್ವಶಾಸ್ತ್ರವನ್ನು ಬದಿಗೊತ್ತಿದರು. ಸಾಹಿತ್ಯಕ್ಕೆ ತತ್ವಶಾಸ್ತ್ರದ ಅವಶ್ಯಕತೆಯಿಲ್ಲ ಎಂದರು. ಮಾರ್ಕ್ಸ್‌ವಾದ ಹಾಗೂ ಅಸ್ತಿತ್ವವಾದ ಗೊತ್ತಿಲ್ಲದಿದ್ದರೆ ಸಾಹಿತಿಯೇ ಅಲ್ಲ ಎಂಬಂತಹ ವಾತಾವರಣ ಸೃಷ್ಟಿಯಾಗಿತ್ತು. ಇದೆಲ್ಲದರಿಂದ ಎಷ್ಟು ಕೀಳರಿಮೆ ಮೂಡಿತ್ತೆಂದರೆ, ಸ್ವತಃ ಪು.ತಿ. ನರಸಿಂಹಾಚಾರ್ ಅವರಿಗೂ ತಾವು ಸಾಹಿತಿ ಅಲ್ಲವೇ ಎಂಬ ಅನುಮಾನ ಕಾಡಲಾರಂಭಿಸಿತ್ತು. ಈಗಿನ ಸಾಹಿತಿಗಳಿಗೆ ತತ್ವಶಾಸ್ತ್ರ ಗೊತ್ತಿಲ್ಲ. ತತ್ವಶಾಸ್ತ್ರಜ್ಞರಿಗೆ ಸಾಹಿತ್ಯ ಅರಿವಿಲ್ಲ. ಸಾಹಿತ್ಯದ ಸಂದರ್ಭವಿಲ್ಲದೆ ತತ್ವಶಾಸ್ತ್ರ ಜನಿಸಲು ಸಾಧ್ಯವಿಲ್ಲ ಎಂಬ ಅರಿವಿರಬೇಕು ಎಂದು ಹೇಳಿದರು.



ಶೇಷಾದ್ರಿಪುರಂ ಕಾಲೇಜ್‌ನಲ್ಲಿ ಆಯೋಜಿಸಿರುವ ವಿಚಾರಸಂಕಿರಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಎಸ್.ಎಲ್. ಭೈರಪ್ಪ ಅವರನ್ನು ಗೌರವಿಸಲಾಯಿತು. ಡಾ. ವೂಡೇ ಪಿ. ಕೃಷ್ಣ, ಡಾ. ಎಸ್. ಆರ್. ಲೀಲಾ ಮತ್ತಿತರರು ಉಪಸ್ಥಿತರಿದ್ದರು.

ವಿಧಾನಪರಿಷತ್. ಮಾಜಿ ಸದಸ್ಯೆ ಹಾಗೂ 'ವಿಜಯವಾಣಿ' ಅಂಕಣಕಾರರಾದ ಡಾ. ಎಸ್. ಆರ್. ಲೀಲಾ ಮಾತನಾಡಿ, ಭಾರತೀಯ ತತ್ವಶಾಸ್ತ್ರಗಳ ಮೇಲೆ ಆರೋಪಗಳ ದಾಳಿ ನಿರಂತರವಾಗಿ ಮುಂದುವರಿದಿದೆ. ಆರೋಪಗಳಿಗೆ ಅರವಿಂದರು, ಕಪಾಲಿಶಾಸ್ತ್ರಿ, ಕಾವ್ಯಕಂಠ ಗಣಪತಿ ಮುನಿ ಅಂತಹವರು ಉತ್ತರಿಸುತ್ತಲೇ ಬಂದಿದ್ದಾರೆ. ಐರೋಪ್ಯ ವಿದ್ವಾಂಸರ ತಪ್ಪು ವಿಶ್ಲೇಷಣೆಗಳನ್ನು ಡಾ. ಎಸ್. ರಾಧಾಕೃಷ್ಣನ್ ಅವರಂಥವರೂ ಒಪ್ಪಿದ್ದು ದುರ್ದೈವದ ಸಂಗತಿ. ಆರೋಪಗಳಿಗೆ ಉತ್ತರ ನೀಡುವ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಗವರ್ನಿಂಗ್ ಕೌನ್ಸಿಲ್‌ನ ಎಂ.ಎಸ್. ನಟರಾಜ್, ಡಾ. ಎಂ. ಪ್ರಕಾಶ್, ಪ್ರಾಂಶುಪಾಲೆ ಡಾ. ಅನುರಾಧಾ ರಾಯ್ ಮತ್ತಿತರರು ಉಪಸ್ಥಿತರಿದ್ದರು.

ವಿಚಾರ ಸಂಕಿರಣ ಕನ್ನಡದಲ್ಲಿರಲಿ

ಇದು ರಾಷ್ಟ್ರೀಯ ವಿಚಾರಸಂಕಿರಣವಾಗಿದೆ. ಆದರೂ ಪ್ರೇಕ್ಷಕರು ಕನ್ನಡಿಗರೇ ಆಗಿರುವ ಕಾರಣ ಇದು ಕನ್ನಡದಲ್ಲೇ ನಡೆಯಲಿ ಎಂದು ಭೈರಪ್ಪ ಆಶಯ ವ್ಯಕ್ತಪಡಿಸಿದರು. ಮಾತನಾಡಲು ಆರಂಭಿಸುವ ಮುನ್ನ ವಿಷಯ ಪ್ರಸ್ತಾಪಿಸಿ, ಕೆಲವು ವಿದ್ವಾಂಸರು ಆಂಧ್ರಪ್ರದೇಶದಿಂದ ಬಂದಿದ್ದಾರೆ. ತೆಲುಗು ಹಾಗೂ ಕನ್ನಡ ಪರಸ್ಪರ ಅರ್ಥವಾಗುತ್ತವೆ. ಮೊದಲೇ ತತ್ವಶಾಸ್ತ್ರ ಸಂಕೀರ್ಣವಾದ ವಿಚಾರ. ಅತ್ಯಂತ ಸಂಕೀರ್ಣವಾದ ಇಂಗ್ಲಿಷ್ ಭಾಷೆಯಲ್ಲಿ ಅದನ್ನು ಬೋಧಿಸಿದರೆ ಯಾರಿಗೂ ಅರ್ಥವಾಗುವುದಿಲ್ಲ ಎಂದು ಹೇಳಿ ಕನ್ನಡದಲ್ಲೇ ಭಾಷಣ ಮುಂದುವರಿಸಿದರು.

> ರಾಜಕೀಯ ಕಾರಣಗಳಿಗಾಗಿ ಬುದ್ಧ ಹಾಗೂ ಮಹಾವೀರನನ್ನು ಭಾರತೀಯ ತತ್ವಶಾಸ್ತ್ರ ಪರಂಪರೆಯಿಂದ ಬೇರ್ಪಡಿಸಲಾಗುತ್ತಿದೆ. ಅವರಿಬ್ಬರೂ ಉಪನಿಷತ್ ಯುಗದ ಋಷಿಗಳು. ವೇದಕಾಲ ಎಂಬುದು ಮುಕ್ತಾಯವಾಗಿಲ್ಲ. ಬುದ್ಧ, ಮಹಾವೀರರ ನಂತರ ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿ, ಯೋಗಿ ಅರವಿಂದರೂ ಅದೇ ಋಷಿ ಪರಂಪರೆಯ ಮುಂದುವರಿದ ಭಾಗ.
>
> | ಡಾ. ಎಸ್.ಎಲ್. ಭೈರಪ್ಪ ಕಾದಂಬರಿಕಾರ

ತತ್ವಶಾಸ್ತ್ರ ಕೃತಿ ಬರೆಯುವ ಆಸೆಯಿತ್ತು

ಪಾಶ್ಚಾತ್ಯ ವಿದ್ವಾಂಸರು ಭಾರತೀಯ ತತ್ವಶಾಸ್ತ್ರವನ್ನು ಕಡೆಗಣಿಸಿದ ಬಗೆಯನ್ನು ಭೈರಪ್ಪ ವಿವರಿಸಿದರು. ಪ್ರಾರಂಭದಲ್ಲಿ ತತ್ವಶಾಸ್ತ್ರದ ಕುರಿತು ಆಸಕ್ತಿಯಿತ್ತು. ತತ್ವಶಾಸ್ತ್ರದಲ್ಲೇ ಕೃತಿ ರಚಿಸುವ ಇರಾದೆಯಿತ್ತು. ಆದರೆ ಪಾಶ್ಚಾತ್ಯ ಸಂಸ್ಥೆಗಳ ಸ್ಕಾಲರ್‌ಷಿಪ್ ಪಡೆದು ಅಧ್ಯಯನ ನಡೆಸಿ ಬಂದಿದ್ದ ಭಾರತೀಯ ವಿದ್ವಾಂಸರು ಭಾರತೀಯ ತತ್ವಶಾಸ್ತ್ರವನ್ನು ಕಡೆಗಣಿಸಿದ್ದಲ್ಲದೆ ತತ್ವಶಾಸ್ತ್ರ ಬೋಧನೆಯನ್ನು ನೀರಸಗೊಳಿಸಿದರು. ಅದರ ಗೊಡವೆ ಬೇಡ ಎಂದು ಆನಂತರದಲ್ಲಿ ಕಾದಂಬರಿ ರಚನೆಯತ್ತ ಹೊರಳಿದೆ ಎಂದು ಹೇಳಿದರು.

ಸಂಜೆವಾಣಿ
ಶನಿವಾರ, ಸೆಪ್ಟೆಂಬರ್ 10, 2016

ಬಗೆಹರಿಯದ ತರ್ಕಶಾಸ್ತ್ರದ ಗೊಂದಲ

ಬೆಂಗಳೂರು, ಸೆ. 10- ಬುದ್ಧಿವಂತಿಕೆಯಿಂದ ಮಾಡುವ ವಾದ ಮಂಡನೆಯೇ ತರ್ಕಶಾಸ್ತ್ರ ಎನಿಸಿಕೊಂಡಿದ್ದರೂ,ತರ್ಕಶಾಸ್ತ್ರದ ವಸ್ತು ವಿಷಯ ಮೂಡಿಸಿರುವ ಗೊಂದಲ ಇದುವರೆಗೂ ಸಮರ್ಪಕವಾಗಿ ನಿವಾರಣೆಯಾಗಿಲ್ಲ ಎಂದು ತರ್ಕಶಾಸ್ತ್ರಜ್ಞರು ಹಾಗೂ ಹಿರಿಯ ಸಾಹಿತಿ ಪದ್ಮಶ್ರೀ,ಎಸ್.ಎಲ್. ಬೈರಪ್ಪ ಅಭಿಪ್ರಾಯಪಟ್ಟರು.

ಅವರಿಂದು ನಗರದ ಶೇಷಾದ್ರಿಪುರಂ ಕಾಲೇಜಿನ ವತಿಯಿಂದ ಭಾರತ ತರ್ಕಶಾಸ್ತ್ರ ಸಂಶೋಧನಾ ಸಮಿತಿ ಸಹಯೋಗದೊಂದಿಗೆ ಏರ್ಪಡಿಸಿದ್ದ ಆಧುನಿಕ ಕಾಲದಲ್ಲಿ ಭಾರತದ ಚಿಂತನೆಗಳ ಅಭಿವೃದ್ಧಿ ಕುರಿತು ಏರ್ಪಡಿಸಿದ್ದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಿಜವಾದ ತರ್ಕಶಾಸ್ತ್ರ ಸಾಹಿತ್ಯದಿಂದ ಜನ್ಮ ತಳೆದಿದೆ. ವೇದ ಉಪನಿಷತ್‌ಗಳಲ್ಲಿ ತರ್ಕಶಾಸ್ತ್ರ ವಿಲೀನಗೊಂಡಿದೆ.

ಸಾಹಿತ್ಯ-ತರ್ಕಶಾಸ್ತ್ರದ ನಡುವೆ ಅವಿನಾಭಾವ ಸಂಬಂಧ ಹೊಂದಿದ್ದರೂ, ವಸ್ತು ವಿಷಯ ತೂಗುಯ್ಯಾಲೆಯ ಪರಿಸ್ಥಿತಿಯಲ್ಲಿದೆ.

ತರ್ಕಶಾಸ್ತ್ರದ ನಿಜವಾದ ಅರ್ಥ ಕಂಡುಕೊಳ್ಳಲು ಇನ್ನೂ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ.

ತರ್ಕಶಾಸ್ತ್ರ ಎಂದರೆ,ಜ್ಞಾನದ ಎಲ್ಲಾ ಶಾಖೆಗಳನ್ನು ಒಳಗೊಂಡಿದೆಯಾದರೂ ಸಹ, ನಂತರ ಅವು ಬೇರೆ ಬೇರೆ ವಿಭಾಗಗಳಾಗಿ ಪರಿವರ್ತನೆಗೊಂಡಿವೆ. ಒಂದು ಅರ್ಥದಲ್ಲಿ ಅವುಗಳು ಒಡೆದು ಹೋಗಿದೆಂತೆಂದೇ ಅರ್ಥೈಸಿಕೊಳ್ಳಬಹುದು ಎಂದರು.

ತರ್ಕಶಾಸ್ತ್ರದಲ್ಲಿ ವಸ್ತು ವಿಷಯ ಏನು ಎನ್ನುವುದನ್ನು ಅರಿತುಕೊಳ್ಳಲು ಭಾರತೀಯ ತರ್ಕಶಾಸ್ತ್ರ ಹಾಗೂ ಪಾಶ್ಚಿಮಾತ್ಯ ತರ್ಕಶಾಸ್ತ್ರ ಬೇರೆ ಬೇರೆ ಕೋನಗಳಲ್ಲಿ ಚಿಂತಿಸುತ್ತಿವೆ.

ಈ ಹಿಂದೆ ತರ್ಕಶಾಸ್ತ್ರ ಎಂಬುದು ಅಮೆರಿಕ ವಿಶ್ವವಿದ್ಯಾಲಯ ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ಮಾತ್ರ ಕಾಣಸಿಗುತ್ತಿದ್ದು, ಹಾಗೂ ಅದನ್ನೇ ನಿಜವಾದ ತರ್ಕಶಾಸ್ತ್ರವೆಂದು ನಂಬಲಾಗಿತ್ತು. ಆದರೆ ತರ್ಕಶಾಸ್ತ್ರ ಬಹುದೊಡ್ಡ ವಸ್ತು ವಿಷಯವನ್ನೊಳಗೊಂಡಿದೆ ಎಂದರು.

ಒಂದು ಕೋನದಲ್ಲಿ ಭಗವದ್ಗೀತೆಯಲ್ಲಿ ಬಹುದೊಡ್ಡ ತರ್ಕಶಾಸ್ತ್ರ ಅಡಗಿದೆ. ಸಾಹಿತ್ಯವಿಲ್ಲದಿದ್ದರೆ, ತರ್ಕಶಾಸ್ತ್ರವು ಹುಟ್ಟಲು ಸಾಧ್ಯವಾಗುತ್ತಿರಲಿಲ್ಲ. ಸಾಹಿತ್ಯದಲ್ಲಿ ಸೃಷ್ಟಿಸುವ ಪಾತ್ರಗಳ ಮೂಲಕ ಜೀವನದ ಮೌಲ್ಯಗಳನ್ನು ಹುಡುಕಲು ಸಾಧ್ಯವಾಗುತ್ತದೆ.

ತರ್ಕಶಾಸ್ತ್ರದ ಮೂಲಕ ಅನುಭವಕ್ಕೆ ಬರುವ ಮೌಲ್ಯಗಳನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸಬಹುದಾಗಿದೆ.

ನಿಜವಾಗಲೂ ಹೇಳುವುದಾದರೆ, ತರ್ಕಶಾಸ್ತ್ರವನ್ನು ಓದಿ ಮರೆತುಬಿಡಬೇಕು. ನಂತರ ಅದರಿಂದ ದೊರೆಯುವ ಬೌದ್ಧಿಕ ತರಬೇತಿ ಹಾಗೂ ಜ್ಞಾನದಿಂದ ಚಿಂತನಾಶಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

ವೇದಿಕೆಯಲ್ಲಿ ಡಾ. ಪ್ರಕಾಶ್, ಎಂ.ಎಸ್. ನಟರಾಜ್, ಡಿ. ಕೃಷ್ಣ, ಕಾಲೇಜಿನ ಪ್ರಾಂಶುಪಾಲರಾದ ಡಾ. ಅನುರಾಧ ರಾಯ್, ಶ್ರೀಲೀಲಾ ಉತಸ್ಥಿತರಿದ್ದರು.



ಶೇಷಾದ್ರಿಪುರಂ ಕಾಲೇಜಿನಲ್ಲಿ ಇಂದು ಆಧುನಿಕ ಕಾಲದವರೆಗಿನ ಭಾರತೀಯ ಚಿಂತನೆ ಕುರಿತು ನಡೆದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರದಲ್ಲಿ ಹಿರಿಯ ಕಾದಂಬರಿಕಾರ ಪದ್ಮಶ್ರೀ ಡಾ. ಎಸ್.ಎಲ್. ಬೈರಪ್ಪ, ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಇದ್ದಾರೆ.

ಈ ಸಂಜೆ
ಶನಿವಾರ, 10-09-2016



ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ವತಿಯಿಂದ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ಡೆವಲಪ್‌ಮೆಂಟ್ ಆಫ್ ಇಂಡಿಯನ್ ಥಾಟ್ ಆಫ್ ಟು ಮಾಡ್ರನ್ ಟೈಮ್ಸ್ ಕುರಿತ ವಿಚಾರ ಸಂಕಿರಣವನ್ನು ಸರಸ್ವತಿ ಸಮ್ಮಾನ್ ಪುರಸ್ಕೃತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಉದ್ಘಾಟಿಸಿದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೆ.ಪಿ.ಕೃಷ್ಣ, ಪ್ರಾಂಶುಪಾಲರಾದ ಡಾ.ಅನುರಾಧ ರಾಯ್, ಎಸ್.ಆರ್.ಲೀಲಾ ಮತ್ತಿತರರು ಇದ್ದರು.

ವಿಜಯ ಕರ್ನಾಟಕ VK

ಗುರುವಾರ,1 ಸೆಪ್ಟೆಂಬರ್ 2016

ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಭರತ್‌ಲಾಲ್ ಮೀನಾ ಹೇಳಿಕೆ

'ಕ್ಲಾಸ್ ಅಸೆಂಬ್ಲಿ' ಕಡ್ಡಾಯಕ್ಕೆ ಶೀಘ್ರ ಆದೇಶ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ಕಾಲೇಜುಗಳಲ್ಲಿ ಇನ್ನುಮುಂದೆ 'ಕ್ಲಾಸ್ ಅಸೆಂಬ್ಲಿ' ಯನ್ನು ಕಡ್ಡಾಯ ಮಾಡಿ, ಸದ್ಯದಲ್ಲೇ ಸರಕಾರ ಆದೇಶವನ್ನು ಹೊರಡಿಸಲಿದೆ ಎಂದು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಭರತ್‌ಲಾಲ್ ಮೀನಾ ಹೇಳಿದ್ದಾರೆ.

ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಉನ್ನತ ಶಿಕ್ಷಣ: ವಿದ್ಯಾರ್ಥಿಗಳ ದೃಷ್ಟಿಕೋನ' ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಬುಧವಾರ ಮಾತನಾಡಿದರು.

''ಕ್ಲಾಸ್ ಅಸೆಂಬ್ಲಿ ವ್ಯವಸ್ಥೆಯನ್ನು ಕಡ್ಡಾಯ ಮಾಡಲಾಗುತ್ತಿದೆ. ಇದರ ಪ್ರಕಾರ, ಪ್ರತಿದಿನ ತರಗತಿಗಳು ಪ್ರಾರಂಭವಾದ ಕೂಡಲೇ ಒಂದೆಡೆ ಸೇರಬೇಕು. ಇಲ್ಲಿ ಯಾವುದಾದರೂ ಒಂದು ಉಪಯುಕ್ತವಾದ ವಿಚಾರದ ಬಗ್ಗೆ ವಿದ್ಯಾರ್ಥಿಗಳು, ಉಪನ್ಯಾಸಕರು ಅಥವಾ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಕೆಲಹೊತ್ತು ಮಾತನಾಡಬೇಕು. ಇದಕ್ಕಾಗಿ ಉನ್ನತ ಶಿಕ್ಷಣ ಇಲಾಖೆಯು 200 ವಿಷಯಗಳನ್ನು ಆಯ್ಕೆ ಮಾಡಿ, ಅಂತಿಮಗೊಳಿಸಿದೆ,'' ಎಂದು ಅವರು ವಿವರಿಸಿದರು.

''ಕಾಲೇಜಿನೊಳಕ್ಕೆ ಬರುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಕಲ್ಪನೆ ಸಿಗಬೇಕೆನ್ನುವುದು ಸರಕಾರ ಹೊರಡಿಸಲು ಉದ್ದೇಶಿಸಿರುವ ಆಶಯದ ಹಿಂದಿನ ತರ್ಕವಾಗಿದೆ. ಕ್ಲಾಸ್ ಅಸೆಂಬ್ಲಿ ಮೂಲಕ ವಿಚಾರಗಳ ಮಂಡನೆಯಾಗುವುದರಿಂದ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಸಿಗುತ್ತದೆ. ಈಗಿನಂತೆ ಸುಮ್ಮನೆ ಯಾಂತ್ರಿಕವಾಗಿ ಕಾಲೇಜಿಗೆ ಬರುವುದರಿಂದ ವಿದ್ಯಾರ್ಥಿಗಳಿಗಾಗಲಿ, ಸಮಾಜಕ್ಕಾಗಲಿ ಯಾವ ಉಪಯೋಗವೂ ಇಲ್ಲ'' ಎಂದು ಅವರು ಹೇಳಿದರು.

''ನಮ್ಮದು ಈಗ ತಂತ್ರಜ್ಞಾನದ ಯುಗವಾಗಿದೆ. ನಾವು ಇದನ್ನು ಗುಣಮಟ್ಟದ ಶಿಕ್ಷಣದ ಪೂರೈಕೆಗೆ ಒಂದು ಸಾಧನವನ್ನಾಗಿ ಬಳಸಿಕೊಳ್ಳಬೇಕು. ಸ್ಮಾರ್ಟ್ ತರಗತಿಗಳು, ಆನ್‌ಲೈನ್ ಬೋಧನೆ, ಡಿಜಿಟಲ್ ಲೈಬ್ರರಿ ಇತ್ಯಾದಿಗಳ ಕಡೆಗೆ ನಾವು ಹೆಚ್ಚುಹೆಚ್ಚು ಗಮನ ಹರಿಸಬೇಕು. ಈ ಮೂಲಕ ನಾವು ವಿದ್ಯಾರ್ಥಿಗಳಲ್ಲಿ ಜ್ಞಾನ ಮತ್ತು ಕೌಶಲ ಎರಡನ್ನೂ ಬೆಳೆಸಬೇಕು. ಇಲ್ಲದಿದ್ದರೆ, ಉನ್ನತ ಶಿಕ್ಷಣವು ಅಪ್ರಸ್ತುತವಾಗಲಿದೆ,'' ಎಂದು ಅವರು ಸೂಚಿಸಿದರು.



ಶೇಷಾದ್ರಿಪುರ ಕಾಲೇಜಿನಲ್ಲಿ ಬುಧವಾರ ಉನ್ನತ ಶಿಕ್ಷಣ ಕುರಿತು ರಾಷ್ಟ್ರೀಯ ವಿಚಾರಸಂಕಿರಣ ಏರ್ಪಡಿಸಲಾಗಿತ್ತು. ಪ್ರೊ.ಆರ್ ಎಂ ವಾಸಗಂ, ಭರತ್‌ಲಾಲ್ ಮೀನಾ, ವೂಡೆ ಪಿ ಕೃಷ್ಣ, ಡಾ.ಎಂ ಪ್ರಕಾಶ್ ಉಪಸ್ಥಿತರಿದ್ದರು.

ಸಮಾಜದ ಋಣ ತೀರಿಸಿ: ಇದೇ ಸಂದರ್ಭದಲ್ಲಿ ಪ್ರಧಾನ ಭಾಷಣ ಮಾಡಿದ ಚೆನ್ನೈನ ಎಂಜಿಆರ್ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಪ್ರೊ.ಆರ್ ಎಂ ವಾಸಗಂ ''ವಿದ್ಯಾರ್ಥಿಗಳು ಕೇವಲ ಪದವೀಧರರಾದರೆ ಸಾಲದು. ಓದಿದ ನಂತರ ಅವರು ಈ ಸಮಾಜದ ಋಣವನ್ನು ತೀರಿಸಬೇಕು. ಕಾರ್ಪೊರೇಟ್ ಉದ್ಯಮಗಳು ಹೇಗೆ ಸಾಮಾಜಿಕ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕು ಎನ್ನುತ್ತೇವೋ ಹಾಗೆಯೇ ವಿದ್ಯಾರ್ಥಿಗಳೂ ಇದನ್ನು ಅರಿತುಕೊಳ್ಳಬೇಕು,'' ಎಂದರು.

''ಹಿಂದೆಲ್ಲ ನಮ್ಮ ದೇಶದಲ್ಲಿ ಪ್ರತಿಯೊಬ್ಬರೂ ಈ ಸಮಾಜದ ಜತೆ ಬಾಂಧವ್ಯವನ್ನು ಹೊಂದಲು ಇಷ್ಟಪಡುತ್ತಿದ್ದರು. ಆದರೆ, ಇತ್ತೀಚೆಗೆ ವಿದ್ಯಾರ್ಥಿಗಳು ಸ್ವಕೇಂದ್ರಿತರಾಗುತ್ತಿದ್ದಾರೆ. ಇಂಥ ವಿದ್ಯಾಭ್ಯಾಸದಿಂದ ಸಮಾಜಕ್ಕೆ ಹಾನಿಯೇ ಹೆಚ್ಚು'' ಎಂದು ಅವರು ಎಚ್ಚರಿಸಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಅಧ್ಯಕ್ಷ ವೂಡೆ ಪಿ ಕೃಷ್ಣ ಮಾತನಾಡಿ ''ನಮ್ಮ ದೇಶದಲ್ಲಿ ಶಿಕ್ಷಣ ವ್ಯವಸ್ಥೆ ಚೆನ್ನಾಗಿದೆ. ಆದರೆ, ನಾವು ಈ ಬಗ್ಗೆ ಸರಿಯಾಗಿ ಎಲ್ಲೂ ಮಾಹಿತಿಯನ್ನು ದಾಖಲಿಸುತ್ತಿಲ್ಲ. ಹೀಗಾಗಿ ನಾವೆಲ್ಲರೂ ಶಿಕ್ಷಣ ವ್ಯವಸ್ಥೆಯಲ್ಲಿ ಹಿಂದುಳಿದಿದ್ದೇವೆ ಎನ್ನುವ ಭಾವನೆ ಇದೆ,'' ಎಂದರು. ಸಮಾರಂಭದಲ್ಲಿ ಡಾ.ಅನುರಾಧಾ ರಾಯ್, ಎಂ ಎಸ್ ನಟರಾಜ್, ಚಿತ್ರಾ ಶಶಿಧರ್, ಡಾ.ಎಂ ಪ್ರಕಾಶ್, ಡಾ. ಸಂತೋಷ್ ನೋಟ್ಕರ್ ಮುಂತಾದವರು ಉಪಸ್ಥಿತರಿದ್ದರು.

ವಿಶ್ವವಾಣಿ 31.08.2016 ಬುಧವಾರ

ಪ್ರೊ.ಎಂ.ವಿ.ನರಸಿಂಹಯ್ಯ ಅಭಿಪ್ರಾಯ

ಅರಸು ಶೋಷಿತರ ಧ್ವನಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಶೋಷಿತ ಸಮುದಾಯಕ್ಕೆ ಪ್ರಬಲ ರಾಜಕೀಯ ಧ್ವನಿ ಸಿಕ್ಕಿದ್ದು ದೇವರಾಜ ಅರಸು ಅವರಿಂದಾಗಿ ಎಂದು ಪ್ರೊ.ಎಂ.ವಿ.ನರಸಿಂಹಯ್ಯ ಅಭಿಪ್ರಾಯಪಟ್ಟರು.



ಗಾಂಧೀಜಿಯವರ ಅಹಿಂಸಾ ತತ್ವ, ವಿನೋಬಾ ಅವರ ಭೂದಾನ ತತ್ವ ಮತ್ತು ಅಂಬೇಡ್ಕರ್ ಅವರ ದಲಿತ ವಿಮೋಚನೆಯ ಪ್ರತಿಪಾದನೆಗಳೇ ಅರಸು ಅವರ ವಿಚಾರಧಾರೆಯಲ್ಲಿ ಅಡಗಿವೆ. ಇವನ್ನೆಲ್ಲ ಅವರು ಅಧಿಕಾರ ಸಿಕ್ಕಾಗ ಅಕ್ಷರಶಃ ಜಾರಿಗೆ ತಂದರು.

-ವೂಡೆ ಕೃಷ್ಣ, ಸಮಾಜಸೇವಕ


ಅರಸು ಪ್ರತಿಷ್ಠಾನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ಟಿ.ಪಿ. ಪ್ರಸನ್ನಕುಮಾರ್ ಅವರಿಗೆ 'ಅರಸು ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಮಂಗಳವಾರ ಮಾತನಾಡಿ, ದೇವರಾಜ ಅರಸು ಅವರಿಂದಲೇ ರಾಜ್ಯದ ಅಸಂಖ್ಯಾತ ಶೋಷಿತರಿಗೆ ರಾಜಕೀಯ ಧ್ವನಿ ಸಿಕ್ಕಿತು. ಅಷ್ಟೇ ಅಲ್ಲ, ಸಂಖ್ಯಾ ಪ್ರಾಬಲ್ಯವಿಲ್ಲದ ಜಾತಿಗಳಲ್ಲಿಯೂ ಸ್ವಾಭಿಮಾನ ಮೂಡಿಸಿದರು ಎಂದು ಹೇಳಿದರು. ಅರಸು ಅವರು ಅತಿ ಕಡಿಮೆ ಜನಸಂಖ್ಯೆ ಹೊಂದಿದ ಕ್ಷತ್ರಿಯ ಸಮುದಾಯದಿಂದ ಬಂದವರು. ಆದರೆ, ರಾಜಕೀಯ ಅಧಿಕಾರ ದಕ್ಕಿಸಿಕೊಳ್ಳಲು ಸಂಖ್ಯಾಬಲಕ್ಕಿಂತ ವಿಚಾರ ಬಲವೇ ಮುಖ್ಯ ಎಂದು ನಂಬಿದ್ದರು ಎಂದರು.

ಸ್ವತಃ ಹಳೆ ಮೈಸೂರು ಭಾಗದವರಾಗಿದ್ದರೂ ರಾಜ್ಯಕ್ಕೆ ಇದ್ದ ಮೈಸೂರು ಎಂಬ ಹೆಸರನ್ನು ಐತಿಹಾಸಿಕ ಆಧಾರಗಳ ಮೇಲೆ ಕರ್ನಾಟಕ ಎಂದು ಬದಲಾಯಿಸಿದ ಅರಸು ಅವರು, ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಮಾಡಿದರು ಎಂದು ಹೇಳಿದರು.

ಸಮಾಜಸೇವಕ ವೂಡೆ ಕೃಷ್ಣ ಮಾತನಾಡಿ, ಅರಸು ಅಧಿಕಾರಾವಧಿಯಲ್ಲಿ ಜೀತಪದ್ಧತಿ ನಿವಾರಣೆ, ನಿರುದ್ಯೋಗ ಭತ್ಯೆ ಜಾರಿ, ವಿಧವಾ ವೇತನ, ಮಲ ಹೊರುವ ಪದ್ಧತಿ ನಿಷೇಧ, ಬಡವರ ಸಾಲ ವಿಮೋಚನೆ ಇತ್ಯಾದಿ ಮಹತ್ವದ ಕಾಯ್ದೆಗಳು ಜಾರಿಯಾದವು ಎಂದು ಅಭಿಪ್ರಾಯಪಟ್ಟರು. ಟಿ.ಪಿ.ಪ್ರಸನ್ನ ಕುಮಾರ್ ಅವರಿಗೆ 'ಅರಸು ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ಎಂ.ತಿಮ್ಮಯ್ಯ, ವಾಟಾಳ್ ನಾಗರಾಜ್, ರು.ಬಸಪ್ಪ, ಜರಗನಹಳ್ಳಿ ಸದಾಶಿವಯ್ಯ ಇದ್ದರು.

ಅರಸು ಸಾಧನೆಗಳ ಪ್ರಚಾರ ಅಗತ್ಯ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಸಾಧನೆಗಳನ್ನು ಸಾರ್ವಜನಿಕರಿಗೆ ತಿಳಿಸುವ ಕಾರ್ಯ ನಡೆಯಬೇಕಿದೆ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಅಭಿಪ್ರಾಯಿಸಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಕುವೆಂಪು ಸಭಾಂಗಣದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸ್ 101ನೇ ಜನ್ಮದಿನೋತ್ಸವದ ಅಂಗವಾಗಿ ಹಿಂದುಳಿದ ವರ್ಗಗಳ ಜಾಗೃತಿ ದಿನಾಚರಣೆ ಹಾಗೂ ಅರಸುಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು ಯುವಜನತೆ ಸಮಾಜದ ಪರಿಜ್ಞಾನವಿಲ್ಲದೆ ನಡೆಯುತ್ತಿರುವ ಈ ಸಮಯದಲ್ಲಿ ಈ ಸಮುದಾಯಕ್ಕೆ ದೇವರಾಜ ಅರಸು ಅವರ ಸಾಧನೆಗಳನ್ನು ಪರಿಚಯ ಮಾಡಿಕೊಡುವ ಕೆಲಸ ನಡೆಯಬೇಕಿದೆ ಎಂದು ತಿಳಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ವೂಡೆ ಪಿ.ಕೃಷ್ಣ ಸಮಾಜದಲ್ಲಿ ಸಮಾನತೆ ಸಿಗುವವರೆಗೆ ಬದಲಾವಣೆ ಸಾಧ್ಯವಿಲ್ಲ ಎಂದು ಅರಸು ಅವರು ಅರಿತಿದ್ದರು. ಎಲೆಕ್ಟ್ರಾನಿಕ್ ಸಿಟಿಗೆ ಐಟಿ ಬಿಟಿ ಕ್ಷೇತ್ರ ಎಂದು ಕಾಯಕಲ್ಪ ನೀಡಿದ ಕೀರ್ತಿ ದೇವರಾಜ್ ಅರಸರಿಗೆ ಸಲ್ಲುತ್ತದೆ. ಸಮಾಜದ ದೊಡ್ಡ ಪಿಡುಗಾಗಿದ್ದ ಭೂಸುಧಾರಣಾ ಕಾಯ್ದೆ ಮತ್ತು ಮಲಹೊರುವ ಪದ್ಧತಿಯನ್ನು ನಿಷೇಧಿಸಿ ಕ್ರಾಂತಿಕಾರಿ ಹೆಜ್ಜೆಯನ್ನಿಟ್ಟರು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಹಿರಿಯ ಪತ್ರಕರ್ತ ಟಿ.ಪಿ.ಪ್ರಸನ್ನಕುಮಾರ್‌ಗೆ 10 ಸಾವಿರ ನಗದನ್ನೊಳಗೊಂಡ ಅರಸುಶ್ರೀ ಪ್ರಶಸ್ತಿ ನೀಡಿ ಗೌರವಿಸಿದರು.

“ ಕನ್ನಡ ಆಡಳಿತ ಭಾಷೆ

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿ, ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣ ಮಾಡಿದ ಕೀರ್ತಿ ಅರಸರಿಗೆ ಸಲ್ಲುತ್ತದೆ. ಅಂಬೇಡ್ಕರ್ ಹಾಗೂ ವಿನೋಭಾ ಭಾವೆ ಅವರ ಚಿಂತನೆಗಳನ್ನು ತನ್ನ ಆಡಳಿತದಲ್ಲಿ ಬಳಸುತ್ತಿದ್ದರು. ಮುಖ್ಯಮಂತ್ರಿಯಾಲು ಬಲಾಢ್ಯ ಜನಾಂಗವೇ ಆಗಬೇಕಿಲ್ಲ ಎಂದು ಸಮಾಜಕ್ಕೆ ಸಾರಿದ ವ್ಯಕ್ತಿಗಳಲ್ಲಿ ದೇವರಾಜ ಅರಸು ಕೂಡ ಒಬ್ಬರು

■ ಪ್ರೊ. ಎನ್.ವಿ.ನರಸಿಂಹಯ್ಯ

ಹೊಸ ದಿಗಂತ

ಬೆಂಗಳೂರು
ಬುಧವಾರ, 31 ಆಗಸ್ಟ್ 2016

ಮುಂದಿನ ಶೈಕ್ಷಣಿಕ ವರ್ಷದಿಂದ ಖಾದಿ ಸಮವಸ್ತ್ರಕ್ಕೆ ಚಿಂತನೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಅ.2ಕ್ಕೆ ಗಾಂಧಿ ಭವನ ನಿರ್ಮಾಣಕ್ಕೆ ಶಿಲಾನ್ಯಾಸ


ಬೆಂಗಳೂರು: ನಿವೇಶನ ಲಭ್ಯವಿರುವ ಜಿಲ್ಲೆಗಳಲ್ಲಿ ಅಕ್ಟೋಬರ್ 2 ರಂದು ಗಾಂಧಿ ಭವನಗಳ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಜಿಲ್ಲಾ ಕೇಂದ್ರಗಳಲ್ಲಿ ಗಾಂಧಿ ಭವನಗಳ ನಿರ್ಮಾಣ ಕುರಿತು ಚರ್ಚಿಸಲು ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಕರೆದಿದ್ದ ಸಭೆಯಲ್ಲಿ ಮಾತನಾಡಿದ ಅವರು, ಗಾಂಧಿ ಭವನ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಅನುದಾನ ನಿಗದಿ ಮಾಡಲಾಗಿದೆ. ಹೀಗಾಗಿ ಭವನಗಳ



ನಿರ್ಮಾಣ ಕಾರ್ಯಕ್ಕೆ ಯಾವುದೇ ತೊಂದರೆ ಇಲ್ಲ. ನಿರ್ಮಾಣವಾಗುವ ಗಾಂಧಿ ಭವನಗಳ ನಿರ್ವಹಣೆ ಮತ್ತು ಆ ಭವನಗಳು ಚಟುವಟಿಕೆಯಿಂದ ಕೂಡಿರುವಂತೆ ನೋಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುವುದು. ಗಾಂಧಿವಾದಿಗಳು ಸಮಿತಿಯ ಕಾರ್ಯಾಧ್ಯಕ್ಷರಾಗಲಿದ್ದಾರೆ ಎಂದು ತಿಳಿಸಿದ್ದಾರೆ.

ಗಾಂಧಿ ತತ್ವಗಳಿಂದ ವಿದ್ಯಾರ್ಥಿಗಳು, ಯುವಕರು ಮತ್ತು ರಾಜಕಾರಣಿಗಳು ವಿಮುಖರಾಗುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಮಹಾತ್ಮಾ ಗಾಂಧಿ ಅವರ ತತ್ತ್ವಾದರ್ಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಈ ಕುರಿತು ಅರಿವು ಮೂಡಿಸಬೇಕು. ಈ ಕಾರಣಕ್ಕಾಗಿ ಜಿಲ್ಲಾ ಕೇಂದ್ರಗಳಲ್ಲಿ ಗಾಂಧಿ ಭವನಗಳನ್ನು ನಿರ್ಮಿಸುವ ಪರಿಕಲ್ಪನೆಯನ್ನು ರೂಪಿಸಲಾಗಿದೆ ಎಂದು ವಿವರಿಸಿದರು.



ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಸಿಎಂ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಪಾಟೀಲ್ ಪುಟ್ಟಪ್ಪ, ಸೇರಿದಂತೆ ಹಲವು ಹಿರಿಯ ನಾಗರಿಕರು ಭಾಗವಹಿಸಿದ್ದರು.

ಶಾಲಾ ಮಕ್ಕಳಿಗೆ ಖಾದಿ ಸಮವಸ್ತ್ರ ವಿತರಿಸಬೇಕು ಎಂಬ ಸ್ವಾತಂತ್ರ್ಯ ಹೋರಾಟಗಾರರ ಮನವಿಗೆ ಸ್ಪಂದಿಸಿದ ಸಿಎಂ ಈ ವರ್ಷ ಮಕ್ಕಳಿಗೆ ಸಮವಸ್ತ್ರ ವಿತರಣೆಯಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಖಾದಿ ಸಮವಸ್ತ್ರ ವಿತರಿಸುವ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.

ಜಿಲ್ಲಾ ಕೇಂದ್ರಗಳಲ್ಲಿ ನಿರ್ಮಿಸುವ ಗಾಂಧಿ ಭವನಗಳು ಚಟುವಟಿಕೆ ರಹಿತ ಆಗಬಾರದು. ಈ ಸಂಬಂಧ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿ ರಚಿಸುವುದಾಗಿ ತಿಳಿಸಿದರು.

ಸಭೆಯ ಬಳಿಕ ಸುದ್ದಿಗಾರೊಂದಿಗೆ ಮಾತನಾಡಿದ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಎಲ್ಲಾ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಿಸುತ್ತಿರುವುದು ಒಳ್ಳೆಯ ತೀರ್ಮಾನ. ಇಂದಿನ ಯುವಕರಲ್ಲಿ ಹಾಗೂ ಜನ ಸಾಮಾನ್ಯರಲ್ಲಿ ಗಾಂಧಿ ತತ್ವಗಳ ಬಗ್ಗೆ ಚರ್ಚೆ ಮಾಡುವುದು ಹಾಗೂ ಅನುಷ್ಠಾನ ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಹಾಗಾಗಿ ಗ್ರಾಮೀಣ ಪ್ರದೇಶದಲ್ಲಿ ನಗರಕ್ಕೆ ಹತ್ತಿರವಿರುವಂತೆ ಎರಡು ಪ್ರದೇಶ ಜನರಿಗೂ ಅನುಕೂಲವಾಗುವಂತೆ ಜಿಲ್ಲಾ ಕೇಂದ್ರಗಳಲ್ಲಿ ಗಾಂಧಿ ಭವನ ನಿರ್ಮಾಣ ಮಾಡವುದಕ್ಕೆ ಮುಖ್ಯಮಂತ್ರಿಗಳಿಗೆ ಸಲಹೆ ನೀಡಲಾಗಿದೆ ಎಂದು ತಿಳಿಸಿದರು.

ಇದರಿಂದ ರೈರಿಗೆ ಸರ್ಕಾರಿ ನೌಕರರಿಗೆ, ಬ್ಯಾಂಕ್ ಉದ್ಯೋಗಿಗಳಿಗೆ ಎಲ್ಲಾ ವರ್ಗದ ಜನರಿಗೂ ಗಾಂಧಿ ತತ್ವಗಳನ್ನು ತಿಳಿಸುವುದಕ್ಕೆ ಸಹಕಾರಿಯಾಗುವುದು. ಅವರ ತತ್ವಗಳನ್ನು ಜೀವಂತವಾಗಿಸುವುದಕ್ಕೆ ಅನುಕೂಲವಾಗುವುದು. ಗ್ರಾಮಪಂಚಾಯಿತಿ ಸದಸ್ಯರಿಗೆ ಅರಿವು ಮೂಡಿಸುವುದು. ಗಾಂಧೀಜಿ ಬಗ್ಗೆ ಅಧ್ಯಯನ ಹಾಗೂ ಸಂಶೋಧನೆ ಕೈಗೊಳ್ಳುವವರಿಗೆ ಇನ್ನಷ್ಟು ಅನುಕೂಲವಾಗುವುದು ಎಂದು ವಿವರಿಸಿದರು.

ಸಭೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಹೊ. ಶ್ರೀನಿವಾಸಯ್ಯ, ಪಾಟೀಲ ಪುಟ್ಟಪ್ಪ, ಸುಶೀಲಮ್ಮ, ಪ್ರಸನ್ನ, ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಪ್ರೊ. ಸಿದ್ದರಾಮಯ್ಯ, ವಾರ್ತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಲಕ್ಷ್ಮಿನಾರಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಉಮಾಶಂಕರ್, ವಾರ್ತಾ ಇಲಾಖೆ ನಿರ್ದೇಶಕ ವಿಶುಕುಮಾರ್ ಉಪಸ್ಥಿತರಿದ್ದರು.

ಗಾಂಧಿ ತತ್ವ ಅರಿವು ಮೂಡಿಸಿ

ಗಾಂಧಿ ತತ್ವಗಳಿಂದ ವಿದ್ಯಾರ್ಥಿಗಳು, ಯುವಕರು ಮತ್ತು ರಾಜಕಾರಣಿಗಳು ವಿಮುಖರಾಗುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಮಹಾತ್ಮಾ ಗಾಂಧಿ ಅವರ ತತ್ತ್ವಾದರ್ಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಈ ಕುರಿತು ಅರಿವು ಮೂಡಿಸಬೇಕು.

■ ಸಿದ್ದರಾಮಯ್ಯ, ಸಿಎಂ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಬುಧವಾರ
31 ಆಗಸ್ಟ್ 2016
31 AUGUST 2016

ಯುವಜನತೆಗೆ ಅರಸು ಸಾಧನೆ ಪರಿಚಯ ಅಗತ್ಯ

ಡಾ. ವೂಡೇ ಪಿ. ಕೃಷ್ಣ ಅಭಿಮತ | ದೇವರಾಜ ಅರಸು ಜನ್ಮಶತಮಾನೋತ್ಸವ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಯುವಜನತೆಗೆ ಸಮಾಜದ ಪರಿಜ್ಞಾನ ಇಲ್ಲ ಎಂಬ ಪರಿಸ್ಥಿತಿ ಎದುರಾಗಿದ್ದು, ಇಂತಹ ಸಂದರ್ಭದಲ್ಲಿ ಅವರಿಗೆ ದೇವರಾಜ ಅರಸು ಸಾಧನೆಗಳನ್ನು ಪರಿಚಯಿಸುವ ಕೆಲಸವಾಗಬೇಕಿದೆ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು 101ನೇ ಜನ್ಮದಿನೋತ್ಸವದ ಅಂಗವಾಗಿ ಹಿಂದುಳಿದ ವರ್ಗಗಳ ಜಾಗೃತಿ ದಿನಾಚರಣೆ ಹಾಗೂ ಅರಸುಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಅರಸು ಅನುಸರಿಸಿದ ಮಾರ್ಗಗಳನ್ನು ಸಾರ್ವಜನಿಕರಿಗೆ ತಿಳಿಸುವುದೂ ಒಂದು ಸಾಧನೆ. ಇಂದು ಐಟಿ-ಬಿಟಿ ಹಬ್ ಎಂದು ಕರೆಯಲ್ಪಡುವ ಎಲೆಕ್ಟ್ರಾನಿಕ್ಸ್ ಸಿಟಿಗೆ ತಳಹದಿ ಹಾಕಿದವರೇ ದೇವರಾಜ್ ಅರಸು ಎಂದರು.

ಅಂಬೇಡ್ಕರ್ ಹಾಗೂ ವಿನೋಬಾ ಭಾವೆ ಚಿಂತನೆಗಳಿಗೆ ಅರಸು ಮಾರುಹೋಗಿದ್ದರು. ಸಮಾನತೆ ಸಿಗುವವರೆಗೂ ಸಮಾಜದಲ್ಲಿ ಬದಲಾವಣೆ ಸಾಧ್ಯವಿಲ್ಲ ಎಂದು ಅರಿತಿದ್ದ ಅವರು, ಭೂ ಸುಧಾರಣಾ ಕಾಯ್ದೆ ಹಾಗೂ ಮಲಹೊರುವ ಪದ್ಧತಿ ನಿಷೇಧಿಸಿ ಕ್ರಾಂತಿ ಮಾಡಿದರು ಎಂದು ಹೇಳಿದರು.



ಟಿ.ಪಿ. ಪ್ರಸನ್ನಕುಮಾರ್‌ಗೆ ಅರಸುಶ್ರೀ ಪ್ರಶಸ್ತಿಯನ್ನು ವಾಟಾಳ್ ನಾಗರಾಜ್ ಪ್ರದಾನ ಮಾಡಿದರು. ವೂಡೇ ಪಿ. ಕೃಷ್ಣ ಇತರರಿದ್ದರು.

ಹಿರಿಯ ಪತ್ರಕರ್ತ ಟಿ.ಪಿ. ಪ್ರಸನ್ನಕುಮಾರ್ ಅವರಿಗೆ ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ 10 ಸಾವಿರ ನಗದನ್ನೊಳಗೊಂಡ 'ಅರಸುಶ್ರೀ ಪ್ರಶಸ್ತಿ' ನೀಡಿ ಗೌರವಿಸಿದರು.

> ಬಲಾಢ್ಯ ಜನಾಂಗದಿಂದ ಹೆಚ್ಚು ಶಾಸಕರಿದ್ದರೆ ಮುಖ್ಯಮಂತ್ರಿ ಆಗಬಹುದು ಎಂಬ ಪರಿಸ್ಥಿತಿ ಇದ್ದ ಸಂದರ್ಭದಲ್ಲಿ ಕೇವಲ 60 ಸಾವಿರ ಜನಸಂಖ್ಯೆ ಇದ್ದ ಜನಾಂಗದಿಂದ ಮುಖ್ಯಮಂತ್ರಿಯಾದವರು ಅರಸು. ಕನ್ನಡವನ್ನು ಆಡಳಿತ ಭಾಷೆಯನ್ನಾಗಿಸಿ, ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣ ಮಾಡಿ ಅಂಬೇಡ್ಕರ್ ಚಿಂತನೆಗಳನ್ನು ಅನುಸರಿಸಿದವರು.
>
> ಪ್ರೊ.ಎನ್.ವಿ. ನರಸಿಂಹಯ್ಯ ಮಾಜಿ ಶಾಸಕ

ಹೊಸ ದಿಗಂತ
ಬೆಂಗಳೂರು
ಬುಧವಾರ, 31 ಆಗಸ್ಟ್ 2016

ಅರಸು ಸಾಧನೆಗಳ ಪ್ರಚಾರ ಅಗತ್ಯ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಸಾಧನೆಗಳನ್ನು ಸಾರ್ವಜನಿಕರಿಗೆ ತಿಳಿಸುವ ಕಾರ್ಯ ನಡೆಯಬೇಕಿದೆ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಅಭಿಪ್ರಾಯಿಸಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಕುವೆಂಪು ಸಭಾಂಗಣದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸ್ 101ನೇ ಜನ್ಮದಿನೋತ್ಸವದ ಅಂಗವಾಗಿ ಹಿಂದುಳಿದ ವರ್ಗಗಳ ಜಾಗೃತಿ ದಿನಾಚರಣೆ ಹಾಗೂ ಅರಸುಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು ಯುವಜನತೆ ಸಮಾಜದ ಪರಿಜ್ಞಾನವಿಲ್ಲದೆ ನಡೆಯುತ್ತಿರುವ ಈ ಸಮಯದಲ್ಲಿ ಈ ಸಮುದಾಯಕ್ಕೆ ದೇವರಾಜ ಅರಸು ಅವರ ಸಾಧನೆಗಳನ್ನು ಪರಿಚಯ ಮಾಡಿಕೊಡುವ ಕೆಲಸ ನಡೆಯಬೇಕಿದೆ ಎಂದು ತಿಳಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ವೂಡೆ ಪಿ.ಕೃಷ್ಣ ಸಮಾಜದಲ್ಲಿ ಸಮಾನತೆ ಸಿಗುವವರೆಗೆ ಬದಲಾವಣೆ ಸಾಧ್ಯವಿಲ್ಲ ಎಂದು ಅರಸು ಅವರು ಅರಿತಿದ್ದರು. ಎಲೆಕ್ಟ್ರಾನಿಕ್ ಸಿಟಿಗೆ ಐಟಿ ಬಿಟಿ ಕ್ಷೇತ್ರ ಎಂದು ಕಾಯಕಲ್ಪ ನೀಡಿದ ಕೀರ್ತಿ ದೇವರಾಜ್ ಅರಸರಿಗೆ ಸಲ್ಲುತ್ತದೆ. ಸಮಾಜದ ದೊಡ್ಡ ಪಿಡುಗಾಗಿದ್ದ ಭೂಸುಧಾರಣ ಕಾಯ್ದೆ ಮತ್ತು ಮಲಹೊರುವ ಪದ್ಧತಿಯನ್ನು ನಿಷೇಧಿಸಿ ಕ್ರಾಂತಿಕಾರಿ ಹೆಜ್ಜೆಯನ್ನಿಟ್ಟರು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಹಿರಿಯ ಪತ್ರಕರ್ತ ಟಿ.ಪಿ.ಪ್ರಸನ್ನಕುಮಾರ್‌ಗೆ 10 ಸಾವಿರ ನಗದನ್ನೊಳಗೊಂಡ ಅರಸುಶ್ರೀ ಪ್ರಶಸ್ತಿ ನೀಡಿ ಗೌರವಿಸಿದರು.

ಕನ್ನಡ ಆಡಳಿತ ಭಾಷೆ

"ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿ, ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣ ಮಾಡಿದ ಕೀರ್ತಿ ಅರಸರಿಗೆ ಸಲ್ಲುತ್ತದೆ. ಅಂಬೇಡ್ಕರ್ ಹಾಗೂ ವಿನೋಬಾ ಭಾವೆ ಅವರ ಚಿಂತನೆಗಳನ್ನು ತನ್ನ ಆಡಳಿತದಲ್ಲಿ ಬಳಸುತ್ತಿದ್ದರು. ಮುಖ್ಯಮಂತ್ರಿಯಾಲು ಬಲಾಢ್ಯ ಜನಾಂಗವೇ ಆಗಬೇಕಿಲ್ಲ ಎಂದು ಸಮಾಜಕ್ಕೆ ಸಾರಿದ ವ್ಯಕ್ತಿಗಳಲ್ಲಿ ದೇವರಾಜ ಅರಸು ಕೂಡ ಒಬ್ಬರು

■ ಪ್ರೊ. ಎನ್.ವಿ.ನರಸಿಂಹಯ್ಯ

ವಿಜಯ ಕರ್ನಾಟಕ
ಬುಧವಾರ,31 ಆಗಸ್ಟ್ 2016

'ದಮನಿತರಿಗೆ ದನಿ ಕೊಟ್ಟ ಧೀಮಂತ ವ್ಯಕ್ತಿ ದೇವರಾಜು ಅರಸು'

ವಿಕ ಸುದ್ದಿಲೋಕ ಬೆಂಗಳೂರು

ದೇವರಾಜು ಅರಸು ಅವರಿಂದಾಗಿ ಈ ರಾಜ್ಯದ ಲೆಕ್ಕವಿಲ್ಲದಷ್ಟು ದಮನಿತ ಸಮುದಾಯಗಳಿಗೆ ರಾಜಕೀಯದ ನಿಜವಾದ ದನಿ ಸಿಕ್ಕಿತು. ಅವರಿಂದಾಗಿ ಸಂಖ್ಯಾಪ್ರಾಬಲ್ಯವಿಲ್ಲದ ಜಾತಿಗಳು ಕೂಡ ಸ್ವಾಭಿಮಾನವನ್ನು ಪಡೆದುಕೊಂಡವು ಎಂದು ಪ್ರೊ. ಎಂ ವಿ ನರಸಿಂಹಯ್ಯ ಹೇಳಿದರು.

ಅರಸು ಪ್ರತಿಷ್ಠಾನ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಟಿ ಪಿ ಪ್ರಸನ್ನಕುಮಾರ್ ಅವರಿಗೆ 'ಅರಸುಶ್ರೀ ಪ್ರಶಸ್ತಿ' ಪ್ರದಾನ ಮಾಡಿ, ಅವರು ಮಂಗಳವಾರದಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಾತನಾಡಿದರು.

''ಅರಸು ಅವರು ಕೇವಲ 60-70 ಸಾವಿರ ಜನಸಂಖ್ಯೆಯುಳ್ಳ ಕ್ಷತ್ರಿಯ ಸಮುದಾಯದಿಂದ ಬಂದವರು. ಆದರೆ, ರಾಜಕೀಯ ಅಧಿಕಾರವನ್ನು ದಕ್ಕಿಸಿಕೊಳ್ಳಲು ಸಂಖ್ಯಾಬಲಕ್ಕಿಂತ ವಿಚಾರಬಲವೇ ಮುಖ್ಯ ಎಂದು ಅವರು ನಂಬಿದ್ದರು. ಹೀಗಾಗಿಯೇ ಅವರು ಬಲಾಢ್ಯ ಸಮುದಾಯಗಳ ನಾಯಕರಾದ ಕೆಂಗಲ್ ಹನುಮಂತಯ್ಯ ಮುಂತಾದವರಿಗೆ ಸೆಡ್ಡು ಹೊಡೆಯುವುದು ಸಾಧ್ಯವಾಯಿತು, '' ಎಂದು ಅವರು ಹೇಳಿದರು.

''ಎಂಟು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಅವರನ್ನು ಶೂದ್ರ ಮತ್ತು ದಲಿತ ಸಮುದಾಯಗಳ ಜಾತಿಗಳ ಜನರೆಲ್ಲ ದಿನವೂ ನೆನಪಿಸಿಕೊಳ್ಳಬೇಕು. ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮತ್ತು ಆರ್ಥಿಕ ರಂಗಗಳಲ್ಲಿ ಅವರು ನೀಡಿದ ಕೊಡುಗೆಗೆ ಬೆಲೆ ಕಟ್ಟುವುದು ಸಾಧ್ಯವಿಲ್ಲ. ಅವರು ಜಾರಿಗೆ ತಂದ ಭೂಸುಧಾರಣೆ ನೀತಿಯಿಂದಾಗಿ ರಾಜ್ಯದ 3 ಲಕ್ಷ ಭೂರಹಿತರಿಗೆ 42 ಲಕ್ಷ ಎಕರೆ ಜಮೀನು ಉಚಿತವಾಗಿ ಸಿಕ್ಕಿತು,'' ಎಂದು ಅವರು ವಿವರಿಸಿದರು.

''ಹಳೆಯ ಮೈಸೂರು ಭಾಗದವರಾದರೂ ಅವರು ಈ ರಾಜ್ಯಕ್ಕೆ ಇದ್ದ ಮೈಸೂರು ಎಂಬ ಹೆಸರನ್ನು ಅವರು ಐತಿಹಾಸಿಕ ಆಧಾರಗಳ ಮೇಲೆ ಕರ್ನಾಟಕ ಎಂದು ಬದಲಾಯಿಸಿದರು. ಜತೆಗೆ, ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಮಾಡಿದರು. ಅರಸು ಅವರಿಂದಾಗಿ ದೇವಾಡಿಗ ಸಮುದಾಯದ ವೀರಪ್ಪ ಮೊಯ್ಲಿ, ಈಡಿಗ ಸಮುದಾಯದ ಬಂಗಾರಪ್ಪನವರಂಥವರೆಲ್ಲ ಮುಖ್ಯಮಂತ್ರಿಗಳಾಗುವುದು ಸಾಧ್ಯವಾಯಿತು,'' ಎಂದು ನರಸಿಂಹಯ್ಯ ವಿಶ್ಲೇಷಿಸಿದರು.

''ಅವರಿಂದಾಗಿ ರಾಜ್ಯದಲ್ಲಿ ಜೀತಪದ್ಧತಿ ನಿವಾರಣೆ, ನಿರುದ್ಯೋಗ ಭತ್ಯೆ ಜಾರಿ, ವಿಧವಾ ವೇತನ ಪದ್ಧತಿ, ತಲೆಯ ಮೇಲೆ ಮಲ ಹೊರುವ ಪದ್ಧತಿ ನಿಷೇಧ, ಬಡವರ ಸಾಲ ವಿಮೋಚನೆ ಮುಂತಾದವು ಸಾಧ್ಯವಾದವು. ಇಂದಿರಾ ಗಾಂಧಿಯವರಿಗೆ ರಾಜಕೀಯ ಪುನರ್ಜನ್ಮ ಸಿಗಲು ಕೂಡ ಅವರೇ ಕಾರಣಕರ್ತರು'' ಎಂದು ಅವರು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಮಾತನಾಡಿದ ಸಮಾಜಸೇವಕ ವೂಡೆ ಕೃಷ್ಣ ''ಗಾಂಧೀಜಿಯವರ ಅಹಿಂಸಾ ತತ್ವ, ವಿನೋಬಾ ಅವರ ಭೂದಾನ ತತ್ವ ಮತ್ತು ಅಂಬೇಡ್ಕರ್ ಅವರ ದಲಿತ ವಿಮೋಚನೆಯ ಪ್ರತಿಪಾದನೆಗಳೇ ಅರಸು ಅವರ ವಿಚಾರಧಾರೆಯಲ್ಲಿ ಅಡಗಿವೆ. ಇವನ್ನೆಲ್ಲ ಅವರು ಅಧಿಕಾರ ಸಿಕ್ಕಾಗ ಅಕ್ಷರಶಃ ಜಾರಿಗೆ ತಂದರು'' ಎಂದರು.

ಸಮಾರಂಭದಲ್ಲಿ ಎಂ ತಿಮ್ಮಯ್ಯ, ವಾಟಾಳ್ ನಾಗರಾಜ್, ರು ಬಸಪ್ಪ, ಜರಗನಹಳ್ಳಿ ಸದಾಶಿವಯ್ಯ ಮುಂತಾದವರು ಉಪಸ್ಥಿತರಿದ್ದರು.

ಯುವಜನತೆಗೆ ಅರಸು ಸಾಧನೆ ಪರಿಚಯ ಅಗತ್ಯ

ಡಾ. ವೂಡೇ ಪಿ. ಕೃಷ್ಣ ಅಭಿಮತ | ದೇವರಾಜ ಅರಸು ಜನ್ಮಶತಮಾನೋತ್ಸವ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಯುವಜನತೆಗೆ ಸಮಾಜದ ಪರಿಜ್ಞಾನ ಇಲ್ಲ ಎಂಬ ಪರಿಸ್ಥಿತಿ ಎದುರಾಗಿದ್ದು, ಇಂತಹ ಸಂದರ್ಭದಲ್ಲಿ ಅವರಿಗೆ ದೇವರಾಜ ಅರಸು ಸಾಧನೆಗಳನ್ನು ಪರಿಚಯಿಸುವ ಕೆಲಸವಾಗಬೇಕಿದೆ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು 101ನೇ ಜನ್ಮದಿನೋತ್ಸವದ ಅಂಗವಾಗಿ ಹಿಂದುಳಿದ ವರ್ಗಗಳ ಜಾಗೃತಿ ದಿನಾಚರಣೆ ಹಾಗೂ ಅರಸುಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಅರಸು ಅನುಸರಿಸಿದ ಮಾರ್ಗಗಳನ್ನು ಸಾರ್ವಜನಿಕರಿಗೆ ತಿಳಿಸುವುದೂ ಒಂದು ಸಾಧನೆ. ಇಂದು ಐಟಿ-ಬಿಟಿ ಹಬ್ ಎಂದು ಕರೆಯಲ್ಪಡುವ ಎಲೆಕ್ಟ್ರಾನಿಕ್ಸ್ ಸಿಟಿಗೆ ತಳಹದಿ ಹಾಕಿದವರೇ ದೇವರಾಜ್ ಅರಸು ಎಂದರು.

ಅಂಬೇಡ್ಕರ್ ಹಾಗೂ ವಿನೋಬಾ ಭಾವೆ ಚಿಂತನೆಗಳಿಗೆ ಅರಸು ಮಾರುಹೋಗಿದ್ದರು. ಸಮಾನತೆ ಸಿಗುವವರೆಗೂ ಸಮಾಜದಲ್ಲಿ ಬದಲಾವಣೆ ಸಾಧ್ಯವಿಲ್ಲ ಎಂದು ಅರಿತಿದ್ದ ಅವರು, ಭೂ ಸುಧಾರಣಾ ಕಾಯ್ದೆ ಹಾಗೂ ಮಲಹೊರುವ ಪದ್ಧತಿ ನಿಷೇಧಿಸಿ ಕ್ರಾಂತಿ ಮಾಡಿದರು ಎಂದು ಹೇಳಿದರು.



ಟಿ.ಪಿ. ಪ್ರಸನ್ನಕುಮಾರ್‌ಗೆ ಅರಸುಶ್ರೀ ಪ್ರಶಸ್ತಿಯನ್ನು ವಾಟಾಳ್ ನಾಗರಾಜ್ ಪ್ರದಾನ ಮಾಡಿದರು. ವೂಡೇ ಪಿ. ಕೃಷ್ಣ ಇತರರಿದ್ದರು.

ಹಿರಿಯ ಪತ್ರಕರ್ತ ಟಿ.ಪಿ. ಪ್ರಸನ್ನಕುಮಾರ್ ಅವರಿಗೆ ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ 10 ಸಾವಿರ ನಗದನ್ನೊಳಗೊಂಡ 'ಅರಸುಶ್ರೀ ಪ್ರಶಸ್ತಿ' ನೀಡಿ ಗೌರವಿಸಿದರು.

ಬಲಾಢ್ಯ ಜನಾಂಗದಿಂದ ಹೆಚ್ಚು ಶಾಸಕರಿದ್ದರೆ ಮುಖ್ಯಮಂತ್ರಿ ಆಗಬಹುದು ಎಂಬ ಪರಿಸ್ಥಿತಿ ಇದ್ದ ಸಂದರ್ಭದಲ್ಲಿ ಕೇವಲ 60 ಸಾವಿರ ಜನಸಂಖ್ಯೆ ಇದ್ದ ಜನಾಂಗದಿಂದ ಮುಖ್ಯಮಂತ್ರಿಯಾದವರು ಅರಸು. ಕನ್ನಡವನ್ನು ಆಡಳಿತ ಭಾಷೆಯನ್ನಾಗಿಸಿ, ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣ ಮಾಡಿ ಅಂಬೇಡ್ಕರ್ ಚಿಂತನೆಗಳನ್ನು ಅನುಸರಿಸಿದವರು.

|ಪ್ರೊ. ಎನ್.ವಿ. ನರಸಿಂಹಯ್ಯ ಮಾಜಿ ಶಾಸಕ


ಈ ಸಂಜೆ

ಬುಧವಾರ,
31 ಆಗಸ್ಟ್ 2016



ಶೇಷಾದ್ರಿಪುರಂ ಕಾಲೇಜಿನಲ್ಲಿಂದು ಹಮ್ಮಿಕೊಂಡಿದ್ದ 'ಉನ್ನತ ಶಿಕ್ಷಣ:ವಿದ್ಯಾರ್ಥಿ ದೃಷ್ಟಿಕೋನ' ಕುರಿತ ರಾಷ್ಟ್ರಮಟ್ಟದ ವಿದ್ಯಾರ್ಥಿ ಸಂಶೋಧನಾ ಸಮಾವೇಶದಲ್ಲಿ ಉನ್ನತ ಶಿಕ್ಷಣ ಇಲಾಖೆ ಮುಖ್ಯ ಕಾರ್ಯದರ್ಶಿ ಭರತ್ ಲಾಲ್ ಮೀನಾ, ಕೊಯಮತ್ತೂರಿನ ಕರ್ಪಗಂ, ವಿವಿ ಉಪಕುಲಪತಿ ಪ್ರೊ.ಆರ್.ಎಂ. ವಾಸಗಂ, ಡಾ.ವೂಡಿ ಪಿ.ಕೃಷ್ಣ ಮತ್ತಿತರರು ಭಾಗವಹಿಸಿದ್ದರು.

ಈ ಸಂಜೆ ಮಂಗಳವಾರ,30-08-2016



ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗಾಂಧಿಭವನ ಸ್ಥಾಪಿಸುವ ಕುರಿತಂತೆ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ, ನಾಡೋಜ ಪಾಟೀಲ್ ಪುಟ್ಟಪ್ಪ, ಗಾಂಧಿವಾದಿ ಹೊ ಶ್ರೀನಿವಾಸಯ್ಯ ಸೇರಿದಂತೆ ಹಿರಿಯ ಅಧಿಕಾರಿಗಳ ಜತೆ ಸಿಎಂ ಸಿದ್ದರಾಮಯ್ಯ ಚರ್ಚೆ ನಡೆಸಿದರು.

ಈಡೇರದ ಗಾಂಧಿಭವನ ನಿರ್ಮಾಣ ಘೋಷಣೆ

ಗಾಂಧಿವಾದಿಗಳ ಅಸಮಾಧಾನ

ಬೆಂಗಳೂರು, ಆ.30- ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಗಾಂಧಿಭವನ ನಿರ್ಮಾಣ ಮಾಡಬೇಕೆಂದು ಕಳೆದ ಬಜೆಟ್‌ನಲ್ಲಿ ಸರ್ಕಾರ ಘೋಷಣೆ ಮಾಡಿತ್ತು ಈವರೆಗೂ ಕಾರ್ಯಗತವಾಗದಿರುವ ಬಗ್ಗೆ ಹಿರಿಯ ಗಾಂಧಿವಾದಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಕೇಂದ್ರಗಳಲ್ಲಿ ಗಾಂಧಿಭವನ ನಿರ್ಮಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಬಜೆಟ್‌ನಲ್ಲಿ ಘೋಷಿಸಿ ಅನುದಾನವನ್ನೂ ನಿಗದಿ ಮಾಡಿದ್ದಾರೆ. 6 ತಿಂಗಳು ಕಳೆದರೂ ಈ ಬಗ್ಗೆ ಯಾವುದೇ ಪ್ರಕ್ರಿಯೆಗಳು ನಡೆದಿಲ್ಲ.

ಆಯಾ ವರ್ಷದ ಬಜೆಟ್ ಯೋಜನೆಗಳು ಅದೇ ವರ್ಷಕ್ಕೆ ಅನುಷ್ಠಾನಗೊಳಿಸಬೇಕು. ಅದನ್ನು ಮುಂದಿನ ವರ್ಷ ಜಾರಿಗೆ ತರುವುದಾಗಿ ಕಾಲ ಹರಣ ಮಾಡುವುದು ಸರಿಯಲ್ಲ. ಆಡಳಿತ ಯಂತ್ರ ಈ ವಿಷಯದಲ್ಲಿ ಎಚ್ಚೆತ್ತುಕೊಳ್ಳಬೇಕೆಂದು ಗಾಂಧಿ ವಾದಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಗಾಂಧಿಭವನ ನಿರ್ಮಾಣದ ಬಗ್ಗೆ ವಿಶೇಷ ಸಭೆ ನಡೆಸಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್ .ದೊರೆಸ್ವಾಮಿ, ಗಾಂಧಿಸ್ಮಾರಕ ನಿಧಿಯ ಹೋ.ಶ್ರೀನಿವಾಸಯ್ಯ, ವೂಡೆ ಪಿ.ಕೃಷ್ಣ ಹಿರಿಯ ಪತ್ರಕರ್ತ ಪಾಟೀಲ್‌ಪುಟ್ಟಪ್ಪ, ಸುಮಂಗಲಿ ಸೇವಾಶರ್ಮದ ಪಿ.ಸುಶೀಲಮ್ಮ, ರಂಗಕರ್ಮಿ ಪ್ರಸನ್ನ, ಪರಿಸರವಾದಿ ಯಲ್ಲಪ್ಪ, ಬರಗೂರು ರಾಮಚಂದ್ರಪ್ಪ, ಎಸ್.ಜಿ.ಸಿದ್ದರಾಮಯ್ಯ, ಹಿರಿಯ ಅಧಿಕಾರಿಗಳಾದ ಲಕ್ಷ್ಮೀನಾರಾಯಣ್, ಉಮಾಶಂಕರ್, ವಿಶುಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಗಾಂಧಿಭವನಗಳನ್ನು ಯಾವ ಸ್ವರೂಪ ಮತ್ತು ಆಕಾರದಲ್ಲಿ ನಿರ್ಮಿಸಬೇಕು. ಅಲ್ಲಿ ಏನೇಲ್ಲಾ ಸೌಲಭ್ಯಗಳಿರಬೇಕು. ಯಾವ ಉದ್ದೇಶಗಳಿಗೆ ಬಳಕೆ ಮಾಡುವಂತಿರಬೇಕು ಎಂಬೆಲ್ಲಾ ಮಾಹಿತಿಗಳನ್ನು ಮುಖ್ಯಮಂತ್ರಿ ಹಿರಿಯರಿಂದ ಪಡೆದುಕೊಂಡರು.

ಅನುದಾನ ಹಂಚಿಕೆ ಕಾಮಗಾರಿಯ ಆರಂಭದ ಬಗ್ಗೆಯೂ ಚರ್ಚೆ ನಡೆದು ಶೀಘ್ರವೇ ಎಲ್ಲಾ ಜಿಲ್ಲೆಗಳಲ್ಲೂ ಶಂಕುಸ್ಥಾಪನೆ ನೆರವೇರಿಸುವಂತೆ ಮುಖ್ಯಮಂತ್ರಿ ಆದೇಶಿಸಿದರು.

ನಗರದಲ್ಲಿ ಇಂದಿನ ಕಾರ್ಯಕ್ರಮಗಳು

ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ

ಉದಯವಾಣಿ

ಸೋಮವಾರ | ಆಗಸ್ಟ್ | 15 | 2016

■ ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್: ಸ್ವಾತಂತ್ರ್ಯ ದಿನಾಚರಣೆ. ಅತಿಥಿಗಳು: ಎಸ್.ಪಿ.ಶಂಕರ್, ಡಾ.ವೂಡೇ ಪಿ.ಕೃಷ್ಣ. ಅಧ್ಯಕ್ಷತೆ: ಎನ್.ಆರ್.ಪಂಡಿತಾರಾಧ್ಯ. ಸ್ಥಳ: ಶೇಷಾದ್ರಿಪುರ ಕಾಲೇಜು ಆವರಣ. ಬೆಳಗ್ಗೆ 7.30.

ವಿಜಯ ಕರ್ನಾಟಕ

ಸೋಮವಾರ,15 ಆಗಸ್ಟ್ 2016

ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳು: ಧ್ವಜಾರೋಹಣ. ಅತಿಥಿಗಳು: ಹಿರಿಯ ನ್ಯಾಯವಾದಿ ಎಸ್.ಪಿ. ಶಂಕರ್, ಡಾ. ವೂಡೆ ಪಿ. ಕೃಷ್ಣ. ಅಧ್ಯಕ್ಷತೆ: ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ. ಸ್ಥಳ: ಶೇಷಾದ್ರಿಪುರಂ ಕಾಲೇಜು ಆವರಣ, ಶೇಷಾದ್ರಿಪುರಂ. 7.30

ವಿಜಯವಾಣಿ

ಸೋಮವಾರ : 15 ಆಗಸ್ಟ್ 2016

15 AUGUST 2016

» **ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆ:** ಅಧ್ಯಕ್ಷತೆ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ. ಮುಖ್ಯ ಅತಿಥಿ: ಶೇಷಾದ್ರಿಪುರಂ ಹಿರಿಯ ವಕೀಲ ಎಸ್.ಪಿ. ಶಂಕರ್. ಗೌರವ ಉಪಸ್ಥಿತಿ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ. ಸ್ಥಳ: ಶೇಷಾದ್ರಿಪುರಂ ಕಾಲೇಜು ಆವರಣ, ಶೇಷಾದ್ರಿಪುರ. ಬೆಳಗ್ಗೆ 7.30ಕ್ಕೆ.

ಕನ್ನಡಪ್ರಭ

ಸೋಮವಾರ 15.8.2016

ಬೆಂಗಳೂರು

- **ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳು:** ಅಧ್ಯಕ್ಷತೆ- ಶೇಷಾದ್ರಿಪುರ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಅತಿಥಿ- ನ್ಯಾಯವಾದಿ ಎಸ್.ಪಿ. ಶಂಕರ್, ಶೇಷಾದ್ರಿಪುರ ಕಾಲೇಜು ಆವರಣ. ಬೆ.7.30.

ಪ್ರಜಾವಾಣಿ

ಸೋಮವಾರ, ಆಗಸ್ಟ್ • 15, 2016

ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳು: ಅತಿಥಿ- ಎಸ್.ಪಿ.ಶಂಕರ್, ವೂಡೇ ಪಿ.ಕೃಷ್ಣ, ಅಧ್ಯಕ್ಷತೆ- ಎನ್.ಆರ್.ಪಂಡಿತಾರಾಧ್ಯ, ಸ್ಥಳ- ಶೇಷಾದ್ರಿಪುರಂ ಕಾಲೇಜಿನ ಆವರಣ, ಬೆಳಿಗ್ಗೆ 7.30.

ಕನ್ನಡಪ್ರಭ ಸೋಮವಾರ 15.8.2016

ಅಂಕಕ್ಕಾಗಿ ಮಕ್ಕಳನ್ನು ಹುಚ್ಚರನ್ನಾಗಿಸಬೇಡಿ

ವಿದ್ಯಾರ್ಥಿ ಪೋಷಕರಿಗೆ ನ್ಯಾ ಗೋಪಾಲಗೌಡ ಕಿವಿಮಾತು

KP



ಶೇಷಾದ್ರಿಪುರ ಕಾಲೇಜಿನಲ್ಲಿ ಸುಪ್ರೀಂ ಕೋರ್ಟ್ ನ್ಯಾಯ ಮೂರ್ತಿ ವಿ. ಗೋಪಾಲ ಗೌಡ ಅವರು, ಕನ್ನಡ ವಿಷಯದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಸೌರಭ ಪುರಸ್ಕಾರ ನೀಡಿ ಗೌರವಿಸಿದರು

- ಅಂಕದ ಒತ್ತಡದಿಂದ ವಿದ್ಯಾರ್ಥಿಗಳು ಮಾನಸಿಕ ಒತ್ತಡಕ್ಕೆ
- ಜಗತ್ತಿನ ವಾಸ್ತವ ತಿಳಿಸುವಂತೆ ಕಾರ್ಯಕ್ರಮದಲ್ಲಿ ಸಲಹೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಧಿಕ ಅಂಕ ಪಡೆಯುವಂತೆ ಮಕ್ಕಳಿಗೆ ಪೋಷಕರು ಮಾನಸಿಕ ಒತ್ತಡ ಹೇರಿ ಅವರನ್ನು ಹುಚ್ಚರಾಗಿಸಬಾರದು ಎಂದು ಸುಪ್ರೀಂ ಕೋರ್ಟ್ ನ್ಯಾಯಾಧೀಶ ವಿ. ಗೋಪಾಲಗೌಡ ಕಿವಿಮಾತು ಹೇಳಿದರು.

ಶೇಷಾದ್ರಿಪುರ ಕಾಲೇಜಿನಲ್ಲಿ ಕನ್ನಡ ಕ್ರಿಯಾ ಸಮಿತಿ ಭಾನುವಾರ ಆಯೋಜಿಸಿದ್ದ 'ಎಂ.ಎಚ್. ಮರಿಗೌಡ ಶತಮಾನೋತ್ಸವ ಹಾಗೂ ಪ್ರತಿಭಾ ಸೌರಭ ಪುರಸ್ಕಾರ' ಕಾರ್ಯಕ್ರಮದಲ್ಲಿ ಮಾತನಾಡಿ, ''ಮಕ್ಕಳು ಉತ್ತಮ ಶಿಕ್ಷಣ ಪಡೆಯಲಿ ಎಂಬ ಕನಸು ಎಲ್ಲ ಪೋಷಕರಿರೂ ಇರುತ್ತದೆ. ಆದರೆ, ಅದಕ್ಕಾಗಿ ಮಕ್ಕಳ ಮೇಲೆ ಒತ್ತಡ ಹೇರಿ ಅವರನ್ನು ಮಾನಸಿಕ ಖಿನ್ನತೆಗೆ ದೂಡಬಾರದು ಎಂದರು.

ಹೈಕೋರ್ಟ್ ನಿವೃತ್ತ ನ್ಯಾ ಎಚ್. ಎನ್.ನಾಗಮೋಹನ್ ದಾಸ್ ಮಾತನಾಡಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕಿನ ಅರ್ಥ ತಿಳಿಸಿಕೊಡುವ ಶ್ರಮಜೀವನ, ದಲಿತರು, ಮಹಿಳೆಯರು, ಕಾರ್ಮಿಕರ ಸಂಕಷ್ಟಗಳ ಕುರಿತು ಬೆಳಕು ಚೆಲ್ಲುವ ಶಿಕ್ಷಣದ ಅಗತ್ಯವಿದೆ. ದೇಶ ಅಭಿವೃದ್ಧಿ ಹಾದಿಯಲ್ಲಿದ್ದರೂ ಹಸಿವು, ಬಡತನ, ಹಿಂಸೆ, ತಾರತಮ್ಯ ತೊಲಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಸಿರು ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ.ಆರ್.ವೆಂಕಟೇಶ್ ಶೇಷಾದ್ರಿಪುರ ಶಿಕ್ಷಣ ದತ್ತಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಜಿ. ಕುಮಾರ್, ಕುವೆಂಪು ಕೋ. ಸೊಸೈಟಿ ಅಧ್ಯಕ್ಷ ಆರ್. ವೆಂಕಟೇಶ್ ಇದ್ದರು.

ಭಾನುವಾರ, 14 ಆಗಸ್ಟ್ 2016

ವಿಜಯ ಕರ್ನಾಟಕ

'ದೇವರು ಎಲ್ಲೆಲ್ಲೂ ಅಸ್ತಿತ್ವ ಹೊಂದಿದ್ದಾನೆ'

ಕೆಂಗೇರಿ ಉಪನಗರ: ದೇವರು ಸ್ವರ್ಗದಲ್ಲಿ ಅಡಗಿ ಕುಳಿತಿಲ್ಲ, ಬದಲಾಗಿ ಅವನು ಎಲ್ಲೆಲ್ಲೂ ಅಸ್ತಿತ್ವವನ್ನು ಹೊಂದಿದ್ದಾನೆ ಎಂದು ಚೆನ್ನೈನ ರಾಮಕೃಷ್ಣ ಮಠದ ಸ್ವಾಮಿ ಸುಖಾತ್ಮಾನಂದಜಿ ಮಹಾರಾಜ್ ಹೇಳಿದರು.

ಅವರು ಇಲ್ಲಿನ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್‌ನಲ್ಲಿ ವಿವೇಕ ವಿಕಾಸ ಫೋರಂ ಆಯೋಜಿಸಿದ್ದ 'ಉತ್ತಮ ವ್ಯಕ್ತಿತ್ವ ನಿರ್ಮಾಣ ಹೇಗೆ?' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿ ಮಾತನಾಡಿದರು.

''ಜೀವನವನ್ನು ಪ್ರಾರ್ಥನೆ ಎಂದು ತಿಳಿಯಿರಿ. ಜೀವನದಲ್ಲಿ ಆಧ್ಯಾತ್ಮಿಕತೆಯನ್ನು ಅಳವಡಿಸಿಕೊಳ್ಳಿ, ಉತ್ತಮ ಚಾರಿತ್ರ್ಯವೇ ನಮ್ಮ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ,'' ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಎಸ್‌ಇಟಿ ಟ್ರಸ್ಟ್‌ನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ವಹಿಸಿ ಮಾತನಾಡಿದರು. ಟ್ರಸ್ಟ್‌ನ ಸಹ ಕಾರ್ಯದರ್ಶಿ ಸರೋಜ ನಂಜಪ್ಪ, ಪ್ರಾಂಶುಪಾಲರಾದ ಪ್ರೊ. ಜಯರಾಮ್, ಡಾ. ಆರ್. ಡಿ. ಸತೀಶ್, ಆರ್. ಡಿ. ನಂಜಪ್ಪ, ವಿರೂಪಾಕ್ಷ ಇದ್ದರು.



ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚೆನ್ನೈ ರಾಮಕೃಷ್ಣ ಮಠದ ಸ್ವಾಮಿ ಸುಖಾತ್ಮಾನಂದಜಿ ಮಹರಾಜ್ ಉಪನ್ಯಾಸ ನೀಡಿದರು.

ಈ ಸಂಜೆ

ಭಾನುವಾರ,
14 ಆಗಸ್ಟ್ 2016



ಕನ್ನಡ ಕ್ರಿಯಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ತೋಟಗಾರಿಕಾ ಭೀಷ್ಮ ಎಂ.ಎಚ್.ಮರಿಗೌಡ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ವಿ.ಗೋಪಾಲಗೌಡ ಸನ್ಮಾನಿಸಿದರು. ವಿಶ್ರಾಂತ ನ್ಯಾಯಮೂರ್ತಿ ನಾಗಮೋಹನದಾಸ್, ಶೇಷಾದ್ರಿಪುರ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೆ.ಪಿ.ಕೃಷ್ಣ, ಸಮಿತಿಯ ಅಧ್ಯಕ್ಷ ಕೆ.ಜಿ.ಕುಮಾರ್, ಹಸಿರು ಪ್ರತಿಷ್ಠಾನದ ಡಾ.ಎಂ.ಆರ್. ವೆಂಕಟೇಶ್ ಮತ್ತಿತರರು ಹಾಜರಿದ್ದರು.

ಇಂದಿನ ಕಾರ್ಯಕ್ರಮ

ಸಂಯುಕ್ತ ಕರ್ನಾಟಕ

ಭಾನುವಾರ | 14 | ಆಗಸ್ಟ್ | 2016

ಕನ್ನಡ ಕ್ರಿಯಾ ಸಮಿತಿ: ಪ್ರತಿಭಾ ಸೌರಭ ಪುರಸ್ಕಾರ, ಉದ್ಘಾಟನೆ: ನ್ಯಾ.ವಿ.ಗೋಪಾಲಗೌಡ, ಪುರಸ್ಕಾರ ವಿತರಣೆ: ನ್ಯಾ. ಎಚ್.ಎನ್.ನಾಗಮೋಹನ್‌ದಾಸ್, ಅಧ್ಯಕ್ಷತೆ: ಡಾ.ವೂಡೇ ಪಿ.ಕೃಷ್ಣ, ಮುಖ್ಯಅತಿಥಿ: ಚಂದ್ರಕಲಾ ಗಿರೀಶ್ ಲಕ್ಕಣ್ಣ, ಆರ್.ವೆಂಕಟೇಶ್, ಸ್ಥಳ: ಶೇಷಾದ್ರಿಪುರ ಕಾಲೇಜು ಆವರಣ, ಶೇಷಾದ್ರಿಪುರ. 10.30

ಕನ್ನಡಪ್ರಭ

ಭಾನುವಾರ 14.8.2016

ಕನ್ನಡ ಕ್ರಿಯಾ ಸಮಿತಿ: ಎಂ.ಎಚ್. ಮರಿಗೌಡ ಶತಮಾನೋತ್ಸವ, ಉದ್ಘಾಟನೆ- ನ್ಯಾ. ವಿ. ಗೋಪಾಲಗೌಡ, ಪುರಸ್ಕಾರ ವಿತರಣೆ- ನ್ಯಾ. ಎಚ್. ಎನ್. ನಾಗಮೋಹನ್‌ದಾಸ್, ಸೆಮಿನಾರ್ ಹಾಲ್, ಶೇಷಾದ್ರಿಪುರ ಕಾಲೇಜು ಆವರಣ, ಶೇಷಾದ್ರಿಪುರ.ಬೆ.10.30.

ಪ್ರಜಾವಾಣಿ

ಭಾನುವಾರ • ಆಗಸ್ಟ್ 14, 2016

ಎಂ.ಎಚ್. ಮರಿಗೌಡರ ಶತಮಾನೋತ್ಸವ ಹಾಗೂ ಪ್ರತಿಭಾ ಪುರಸ್ಕಾರ: ಉದ್ಘಾಟನೆ-ನ್ಯಾಯಮೂರ್ತಿ ವಿ. ಗೋಪಾಲಗೌಡ. ಅಧ್ಯಕ್ಷತೆ-ಡಾ. ವೂಡೆ ಪಿ. ಕೃಷ್ಣ. ಪುರಸ್ಕಾರ ವಿತರಣೆ- ಎಚ್.ಎನ್. ನಾಗಮೋಹನದಾಸ್. ಆಯೋಜನೆ-ಕನ್ನಡ ಕ್ರಿಯಾ ಸಮಿತಿ. ಸ್ಥಳ-ಶೇಷಾದ್ರಿಪುರ ಕಾಲೇಜು ಆವರಣ, ಸೆಮಿನಾರ್ ಹಾಲ್, ಶೇಷಾದ್ರಿಪುರ. ಬೆಳಿಗ್ಗೆ 10.30.

ಭಾನುವಾರ 14 ಆಗಸ್ಟ್ 2016
14 AUGUST 2016
VIJAYAVANI » BENGALURU



ಎಂ.ಎಚ್. ಮರಿಗೌಡ ಜನ್ಮಶತಮಾನೋತ್ಸವ. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ. ಉದ್ಘಾಟನೆ: ಸುಪ್ರೀಂಕೋರ್ಟ್ ನ್ಯಾ.ವಿ. ಗೋಪಾಲಗೌಡ. ಪುರಸ್ಕಾರ ವಿತರಣೆ: ಹೈಕೋರ್ಟ್‌ನ ನಿವೃತ್ತ ನ್ಯಾ.ಎಚ್.ಎನ್. ನಾಗಮೋಹನ್ ದಾಸ್. ಅಧ್ಯಕ್ಷತೆ: ಶೇಷಾದ್ರಿಪುರ ಶಿಕ್ಷಣ ದತ್ತಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ. ಮುಖ್ಯ ಅತಿಥಿಗಳು: ಕಾರ್ಪೋರೇಟರ್ ಚಂದ್ರಕಲಾ ಗಿರೀಶ್ ಲಕ್ಕಣ್ಣ, ಹಸಿರು ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ. ಎಂ.ಆರ್. ವೆಂಕಟೇಶ್, ಕುವೆಂಪು ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಆರ್. ವೆಂಕಟೇಶ್, ಆಸ್ತಾ ಫೈನಾನ್ಸ್‌ನ ನಿರ್ದೇಶಕ ಪಿ.ಕೆ. ಕುಮಾರ್. ಸ್ಥಳ: ಸೆಮಿನಾರ್ ಸಭಾಂಗಣ, ಶೇಷಾದ್ರಿಪುರಂ ಕಾಲೇಜು ಆವರಣ, ಶೇಷಾದ್ರಿಪುರ. ಬೆಳಗ್ಗೆ 10.30ಕ್ಕೆ.

ಬೆಂಗಳೂರು ಶನಿವಾರ, 6, ಆಗಸ್ಟ್, 2016, ಬೆಂಗಳೂರು ಸಂಯುಕ್ತ ಕರ್ನಾಟಕ

ಭಕ್ತಿಗೆ ವೈದಿಕ ಸಂಪ್ರದಾಯವೇ ಮೂಲ

ಭಕ್ತಿಗೆ ವೈದಿಕ ಸಂಪ್ರದಾಯವೇ ಮೂಲಬೇರು. ಭಕ್ತಿ ಎಂಬುದು ಹೊರಗಿನಿಂದ ನಡೆದ ಕ್ರಾಂತಿಯಾಗಿಲ್ಲ ಅದು ಪ್ರಾಚೀನ ವೈದಿಕ ಸಂಪ್ರದಾಯದ ವಿರೋಧದಿಂದ ಹುಟ್ಟಿದ್ದಲ್ಲ ಎಂದು ವಿದ್ವಾಂಸ ಡಾ. ಆರ್. ಗಣೇಶ್ ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ಸಂಸ್ಕೃತ ವಿವಿ ಮತ್ತು ಇಸ್ಕಾನ್ ಆಯೋಜಿಸಿರುವ 'ಭಕ್ತಿ ಪರಂಪರ ಅಂತಾರಾಷ್ಟ್ರೀಯ ಎರಡು ದಿನಗಳ ವಿಚಾರಸಂಕಿರಣದಲ್ಲಿ ಮಾತನಾಡಿದ ಅವರು, ಸಂಪ್ರದಾಯದ ಅಂತರಂಗದಲ್ಲಿ ಸ್ವಯಂ ವಿಶ್ಲೇಷಣೆ ನಡೆಸುವ ಮೂಲಕ ಭಕ್ತಿ ಸಂಪ್ರದಾಯ ಮೂಡಿಬಂದಿದೆ ಎಂದು ವಿಶ್ಲೇಷಿಸಿದರು.

ವೊಡೆ ಪಿ ಕೃಷ್ಣ ಮಾತನಾಡಿ, ದೇವರು ಬಹುಜನರನ್ನು ಹುಟ್ಟಿಸುತ್ತಾನೆ ಎನ್ನುವುದು ಸಮನ್ವಯವಲ್ಲ. ಅದನ್ನು ಹೇಗೆ ಕಾಪಾಡಿಕೊಳ್ಳಬೇಕು ಎನ್ನುವುದು ಪ್ರಶ್ನೆಯಾಗಿದೆ. ದೇವರ ಬಗೆಗಿನ ಕಲ್ಪನೆ ವ್ಯಕ್ತಿಯಿಂದ ವ್ಯಕ್ತಿಗೆ ಹೊಗುತ್ತದೆ. ಭಕ್ತಿಯಲ್ಲಿ ಗುರುವಿನ ಪಾತ್ರ



'ಭಕ್ತಿ ಪರಂಪರೆ' ಕುರಿತ ಅಂತಾರಾಷ್ಟ್ರೀಯ ವಿಚಾರಸಂಕಿರಣಕ್ಕೆ ವೊಡೆ ಪಿ ಕೃಷ್ಣ ಚಾಲನೆ ನೀಡಿದರು. ವಿದ್ವಾಂಸ ಡಾ.ಆರ್.ಗಣೇಶ್, ಸಂಸ್ಕೃತ ವಿವಿ ಕುಲಪತಿ ಪದ್ಮಶೇಖರ್, ಚಂಚಲಪತಿದಾಸ್, ಕವಿವಿ ಕುಲಸಚಿವ ಸಿದ್ದೇಗೌಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


ಬಹುಮುಖ್ಯ, ಸಂಗೀತ ಮತ್ತು ಸಾಹಿತ್ಯದಿಂದ ಭಕ್ತಿಯನ್ನು ಕಾಣಬಹುದು. ಚಂಚಲ ಮನಸ್ಸನ್ನು ಹತೋಟಿಯಲ್ಲಿಡಬೇಕಾದರೆ ದೇವರ ನಾಮಪದ ಅತಿ ಮುಖ್ಯ ಎಂದು ಈ ಮೂರು ಹಂತದಲ್ಲಿ ಭಕ್ತಿಯನ್ನು ಕಾಣಬಹುದು.

ಭಕ್ತಿಯು ಮನಸ್ಸಿಗೆ ನೆಮ್ಮದಿಯನ್ನು ಕೊಡುತ್ತದೆ. ಆದರೆ ಇಂದು ಭಕ್ತಿ ಪಾರಂಪರೆ ಮಾಯವಾಗುತ್ತಿರುವು ಬೇಸರದ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಕರ್ನಾಟಕ ಸಂಸ್ಕೃತಿ ವಿಶ್ವವಿದ್ಯಾಲಯ ಕುಲಪತಿ ಪದ್ಮಶೇಖರ್ ಮಾತನಾಡಿ, ದೈವದ ಬಗ್ಗೆ ಅತಿಯಾದ ಶ್ರದ್ಧೆಯನ್ನು ಇಟ್ಟುಕೊಳ್ಳುವುದೇ ನಿಜವಾದ ಶ್ರದ್ಧೆ. ಸಾಧನೆ ಮೂಲಕ ಮಾತ್ರ ಭಕ್ತಿಯನ್ನು ಗಳಿಸಿಕೊಳ್ಳಬಹುದು. ಜೀವನಕ್ಕೆ ಅರ್ಥ ಬರಬೇಕಾದರೆ ಅದು ದೈವಭಕ್ತಿಯಿಂದ ಮಾತ್ರ ಸಾಧ್ಯ. ಅದು ತುಂಬ ವೈಯಕ್ತಿಕವಾದುದು ಎಂದು ಹೇಳಿದರು. ಇಸ್ಕಾನ್ ಹಿರಿಯ ಉಪಾಧ್ಯಕ್ಷ ಚಂಚಲಪತಿ ದಾಸ, ಕರ್ನಾಟಕ ವಿವಿ ಕುಲಸಚಿವ ಸಿದ್ದೇಗೌಡ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಪ್ರಜಾವಾಣಿ ಭಾನುವಾರ ಮಾರ್ಚ್ 20, 2016

ಉನ್ನತ ಶಿಕ್ಷಣ ಸುಧಾರಣೆ ಅಗತ್ಯ

ಪ್ರಜಾವಾಣಿ ವಾರ್ತೆ



ಕಳೆದ ವರ್ಷದ ವಿಚಾರ ಸಂಕಿರಣ ಕುರಿತು ಹೊರತರಲಾದ ಪುಸ್ತಕವನ್ನು ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ.ಪಾಟೀಲ (ಬಲಗಡೆಯಿಂದ ಮೊದಲನೆಯವರು) ಬಿಡುಗಡೆ ಮಾಡಿದರು. (ಎಡದಿಂದ) ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್‌ನ ನಿರ್ದೇಶಕ ಎಂ.ಪ್ರಕಾಶ್, ಲಿಯಾನ್ನೆ ವ್ಯಾನ್ ಅಲ್ಲೆನ್ ಮತ್ತು ಅವರ ಪತಿ ಜಾನ್, ವೂಡೇ ಪಿ.ಕೃಷ್ಣ ಚಿತ್ರದಲ್ಲಿದ್ದಾರೆ

ಬೆಂಗಳೂರು: 'ಅನೇಕ ಸವಾಲು ಎದುರಿಸುತ್ತಿರುವ ನಮ್ಮ ಉನ್ನತ ಶಿಕ್ಷಣ ಕ್ಷೇತ್ರವನ್ನು ಗುಣಾತ್ಮಕವಾಗಿ ಎತ್ತರಕ್ಕೆ ಏರಿಸುವುದಕ್ಕಾಗಿ ಸಾಕಷ್ಟು ಸುಧಾರಣೆಗಳಾಗಬೇಕು. ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಉನ್ನತ ಶಿಕ್ಷಣ ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮದು ಜಗತ್ತಿನಲ್ಲಿಯೇ ಮೂರನೆ ಅತಿದೊಡ್ಡ ಶಿಕ್ಷಣ ವ್ಯವಸ್ಥೆ. ಇಷ್ಟಿದ್ದರೂ ಜಗತ್ತಿನ ಅತ್ಯುನ್ನತ 100 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ನಮ್ಮ ಒಂದೇ ಒಂದು ವಿವಿ ಸ್ಥಾನ ಪಡೆದಿಲ್ಲ ಎನ್ನುವುದು ನೋವಿನ ಸಂಗತಿ' ಎಂದು ಹೇಳಿದರು.

'ನಮ್ಮಲ್ಲಿ ಮೂಲ ವಿಜ್ಞಾನ ಕ್ಷೇತ್ರದಲ್ಲಿ ಅಧ್ಯಯನ, ಸಂಶೋಧನೆ ಬಹಳ ಕಡಿಮೆಯಾಗುತ್ತಿವೆ. ವೃತ್ತಿಪರ ಶಿಕ್ಷಣಕ್ಕೆ ಹೇಗೆ ಮಹತ್ವ ಬಂದಿದೆಯೋ ಹಾಗೇ ಉನ್ನತ ಶಿಕ್ಷಣ ಮಹತ್ವ ಪಡೆಯುತ್ತಿಲ್ಲ. ಮಾರುಕಟ್ಟೆ ಬೇಡಿಕೆ ಗಮನದಲ್ಲಿಟ್ಟುಕೊಂಡು ಪದವೀಧರರನ್ನು ತಯಾರಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಶಿಸ್ತು, ಗಂಭೀರತೆಯನ್ನು ಕಡೆಗಣಿಸಲಾಗಿದೆ. ಎಲ್ಲವನ್ನೂ ಲಘುವಾಗಿ ನೋಡಲಾಗುತ್ತಿದೆ. ಗ್ರಂಥಾಲಯಕ್ಕೆ ಹೋಗಿ ಓದುವ ಹವ್ಯಾಸ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗುತ್ತಿದೆ. ಮೊಬೈಲ್ ಜನಪ್ರಿಯವಾದ ಮೇಲಂತೂ ಅಧ್ಯಯನ ಶೀಲತೆ ಕುಸಿಯುತ್ತಿದೆ' ಎಂದು ವಿಷಾದಿಸಿದರು.


'ಇಂದಿನ ಮಾರುಕಟ್ಟೆ ಮತ್ತು ಸಮಾಜದ ಬೇಡಿಕೆ ಅರಿತುಕೊಂಡು ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಪುನರ್ ರೂಪಿಸುವ ಅಗತ್ಯವಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರ ದೃಷ್ಟಿಯಿಂದ ಯಾವ ರೀತಿಯ ಮಾರ್ಪಾಡುಗಳಾಗಬೇಕು ಆ ಕುರಿತು ಸಂಕಿರಣದಲ್ಲಿ ಚರ್ಚೆಗಳು ನಡೆದು, ಉತ್ತಮ ಶಿಫಾರಸುಗಳು ಹೊರಬರಲಿ' ಎಂದರು.

ಅಮೆರಿಕದ ಯೂನಿವರ್ಸಿಟಿ ಆಫ್ ಇಸ್ಕಾನ್‌ಸಿನ್ ರಿವರ್ ಫಾಲ್ಸ್‌ನ ಬಿಸಿನೆಸ್ ಅಂಡ್ ಎಕನಾಮಿಕ್ ಕಾಲೇಜಿನ ನಿರ್ದೇಶಕಿ ಲಿಯಾನ್ನೆ ವ್ಯಾನ್ ಅಲ್ಲೆನ್ ಮಾತನಾಡಿ, 'ಭವಿಷ್ಯದ ದೃಷ್ಟಿಯಿಂದ ನಾವು ಇಂದು ಉನ್ನತ ಶಿಕ್ಷಣವನ್ನು ಜಾಗತಿಕ ಮಟ್ಟದಲ್ಲಿ ಬೋಧಿಸುವ ಅಗತ್ಯವಿದೆ. ಪಠ್ಯಕ್ರಮವನ್ನು ಕೂಡ ಇದೇ ಹಾದಿಯಲ್ಲಿ ರೂಪಿಸಬೇಕಿದೆ. ಇದರಿಂದ ಯುವಜನತೆ ಅಪಾರ ಉದ್ಯೋಗಾವಕಾಶಗಳನ್ನು ಪಡೆಯಲು ಅನುಕೂಲವಾಗುತ್ತದೆ' ಎಂದು ಹೇಳಿದರು.

ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಮಾತನಾಡಿದರು. 'ತಂತ್ರಜ್ಞಾನ ಇಂದು ಶಿಕ್ಷಣ ವ್ಯವಸ್ಥೆಯ ಎಲ್ಲ ಸ್ತರಗಳಲ್ಲಿ ಹಾಸು ಹೊಕ್ಕಾಗಿದೆ. ಬೋಧನಾ ಕ್ಷೇತ್ರದಲ್ಲಿಯಂತೂ ಕ್ಷಿಪ್ರಗತಿಯ ಬದಲಾವಣೆಗಳಾಗಿವೆ. ಇವತ್ತು ವಿದ್ಯಾರ್ಥಿಗಳು ಜಾಗತಿಕ ಪರಿಸರದಲ್ಲಿ ಸ್ಪರ್ಧೆ ಎದುರಿಸಲು ಸಿದ್ಧರಾಗಬೇಕಿದೆ' ಎಂದು ಅವರು ಅನಿಸಿಕೆ ವ್ಯಕ್ತಪಡಿಸಿದರು.

ಸಂಯುಕ್ತ ಕರ್ನಾಟಕ

ಬುಧವಾರ, 2, ಮಾರ್ಚ್, 2016,



ಶೇಷಾದ್ರಿಪುರಂ ವಿದ್ಯಾ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಅವರಿಗೆ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿಯ ಫೆಲೋಶಿಪ್ ಲಭಿಸಿದೆ. ಉತ್ಪಾದನಾ ಹೆಚ್ಚಳದ ಮೂಲಕ ವಿಶ್ವಾದ್ಯಂತ ಜನರ ಜೀವನಮಟ್ಟ ಉತ್ತಮ ಪಡಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸಿದ ಗಣ್ಯರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಹಿಂದೆ ಟಾಟಾ ಸಂಸ್ಥೆಯ ಅಧ್ಯಕ್ಷ ರತನ್ ಟಾಟಾ ಹಾಗೂ ಕೇಂದ್ರ ಇಂಧನ ಇಲಾಖೆ ಕಾರ್ಯದರ್ಶಿ ಆರ್.ವಿ.ಸಾಹಿ ಅವರಿಗೆ ದೊರಕಿದೆ.

ವಿಜಯ ಕರ್ನಾಟಕ ಮಂಗಳವಾರ, 1 ಮಾರ್ಚ್ 2016

ಸಿಎಂ ಹೆಸರು ಇನ್ನು ಅಂತಿಮಗೊಂಡಿಲ್ಲ: ವಿವಿ ಅಧಿಕಾರಿಗಳು

ಬೆಂವಿವಿ ಗೌರವ ಡಾಕ್ಟರೇಟ್‌ಗೆ 19 ಗಣ್ಯರು

ವಿಕ ಸುದ್ದಿಲೋಕ ಬೆಂಗಳೂರು

ಪ್ರಸಕ್ತ ಸಾಲಿನ ಗೌರವ ಡಾಕ್ಟರೇಟ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಆದಿ ಚುಂಚನಗಿರಿ ಮಠದ ನಿರ್ಮಲಾನಂದ ನಾಥ ಸ್ವಾಮೀಜಿ ಸೇರಿದಂತೆ 19 ಹೆಸರುಗಳನ್ನು ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರ ನೇತೃತ್ವದ ಆಯ್ಕೆ ಸಮಿತಿಗೆ ಶಿಫಾರಸು ಮಾಡಲು ಬೆಂಗಳೂರು ವಿಶ್ವವಿದ್ಯಾಲಯ ಪಟ್ಟಿ ಸಿದ್ಧಪಡಿಸಿದೆ.





ವಿವಿಯ ಗೌರವ ಡಾಕ್ಟರೇಟ್‌ಗಾಗಿ ಈ ಬಾರಿ ಬಂದಿದ್ದ ಸುಮಾರು 30 ಅರ್ಜಿಗಳ ಪೈಕಿ ಅರ್ಹ 19 ಹೆಸರುಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಅದು ಶನಿವಾರ ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಆದರೆ ಅನುಮೋದನೆಯಾಗಿಲ್ಲ. ಹಾಗಾಗಿ ಮಾರ್ಚ್ 2ನೇ ವಾರದಲ್ಲಿ ನಡೆಯುವ ಸಭೆಯಲ್ಲಿ ಮತ್ತೆ ಮಂಡನೆಯಾಗಲಿದೆ ಎಂದು ವಿವಿಯ ಮೂಲಗಳು ತಿಳಿಸಿವೆ.

ಪಟ್ಟಿಯಲ್ಲಿರುವ ಹೆಸರುಗಳು: ಈ ಪಟ್ಟಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಗೀತ ವಿದ್ವಾಂಸ ಆರ್.ಕೆ. ಪದ್ಮನಾಭನ್, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಶಿಕ್ಷಣ ಸಚಿವ ಎಚ್.ಜಿ. ಗೋವಿಂದೇಗೌಡ, ಮಾಜಿ ಸಿಂಡಿಕೇಟ್ ಸದಸ್ಯ ಕೃಷ್ಣಾರೆಡ್ಡಿ, ಕ್ರೀಡಾ ಪಟುಗಳಾದ ಅಶ್ವಿನಿ ಪೊನ್ನಪ್ಪ, ಪಂಕಜ್ ಅಡ್ವಾಣಿ, ಕುಲ್‌ದೀಪ್ ನಯ್ಯರ್, ವಿಜಯಲಕ್ಷ್ಮಿ ದೇಶ್‌ಮಾನೆ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್, ವಿಜ್ಞಾನಿ ಎಂ.ಆರ್.ಎಸ್.ರಾವ್, ಶಿಕ್ಷಣ ತಜ್ಞವುಡೇ ಪಿ. ಕೃಷ್ಣ ಸೇರಿದಂತೆ ಒಟ್ಟು 19 ಹೆಸರುಗಳು ಇವೆ ಎಂದು ತಿಳಿದು ಬಂದಿದೆ. ಈ ಪಟ್ಟಿಯನ್ನು ವಿವಿ ನ್ಯಾಯಮೂರ್ತಿ ಅವರ ಸಮಿತಿಗೆ ಶಿಫಾರಸು ಮಾಡಿದರೆ, ಅದರಲ್ಲಿ ಮೂವರು ಗಣ್ಯರ ಹೆಸರನ್ನು ಮಾತ್ರ ಸಮಿತಿ ಗೌರವ ಡಾಕ್ಟರೇಟ್‌ಗೆ ಅಂತಿಮಗೊಳಿಸಿ ವಿವಿಗೆ ನೀಡಲಿದೆ. ಆ ಮೂರು ಹೆಸರುಗಳನ್ನು ಶಿಫಾರಸ್ಸಿಗಾಗಿ ರಾಜ್ಯಪಾಲರಿಗೆ ಕಳುಹಿಸಲಾಗುವುದು. ನಂತರ ರಾಜ್ಯಪಾಲರ ಅನುಮೋದನೆಯೊಂದಿಗೆ ಮಾರ್ಚ್‌ನಲ್ಲಿ ನಡೆಯುವ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ನಡೆಯಲಿದೆ.

ಸಿಎಂಗೆ ಕೊಡಬಹುದೇ?

ಕರ್ನಾಟಕ ಸರಕಾರದ ಆಡಳಿತದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿಯವರಿಗೆ ಗೌರವ ಡಾಕ್ಟರೇಟ್ ಕೊಡುವ ವಿಚಾರದಲ್ಲಿ ಹಲವು ಗೊಂದಲಗಳು ಸೃಷ್ಟಿಯಾಗಿವೆ. ಆಡಳಿತದ ಚುಕ್ಕಾಣಿ ಹಿಡಿದವರು ಸಿಎಂ, ಅನುದಾನ ಕೊಡುವವರು ಸಿಎಂ. ಹೀಗಿರುವಾಗ ಅವರಿಗೆ ಗೌರವ ಡಾಕ್ಟರೇಟ್ ನೀಡುವುದೆಂದರೆ 'ದುಡ್ಡು ಕೊಟ್ಟು ಪಡೆದಂತಾಗುತ್ತದೆ' ಎಂಬ ಬಗ್ಗೆ ಆರೋಪಗಳು ಕೇಳಿಬರುತ್ತವೆ. ''ಸಿಎಂ ಹೆಸರು ಅಂತಿಮವಲ್ಲ, ಆದರೆ ಅವರ ಹೆಸರು ಪಟ್ಟಿಯಲ್ಲಿದೆ. ಇದನ್ನು ಹೈಕೋರ್ಟ್ ನ್ಯಾಯಮೂರ್ತಿಗಳ ಸಮಿತಿಯಲ್ಲಿ ನಿರ್ಧರಿಸಬೇಕು. ಅದರ ನಂತರ ರಾಜ್ಯಪಾಲರು ಅಂತಿಮವಾಗಿ ಅನುಮೋದಿಸಿದರೆ ಮಾತ್ರ ಅವರಿಗೆ ನೀಡಲಾಗುವುದು'' ಎಂದು ವಿವಿ ಅಧಿಕಾರಿಗಳು ವಿವರಿಸಿದರು.

ಪ್ರಜಾವಾಣಿ

ಭಾನುವಾರ • ಫೆಬ್ರುವರಿ 28, 2016

‘ಕೌಶಲ ಕಲಿತರೆ ಉದ್ಯೋಗಾವಕಾಶ’

ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳು ಪದವಿಯೊಂದಿಗೆ ಕೌಶಲಗಳನ್ನು ಕಲಿತಾಗ ಮಾತ್ರ ಹೆಚ್ಚು ಹೆಚ್ಚು ಉದ್ಯೋಗಾವಕಾಶ ಪಡೆಯಲು ಅನುಕೂಲವಾಗುತ್ತದೆ’ ಎಂದು ಬಳ್ಳಾರಿಯ ವಿಜಯನಗರ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಎಂ.ಎಸ್. ಸುಭಾಷ್ ಹೇಳಿದರು.

ಯಲಹಂಕ ಉಪನಗರದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

‘ಯಾವುದೇ ವಿದ್ಯಾರ್ಥಿ ಶೈಕ್ಷಣಿಕವಾಗಿ ಮುಂದುವರಿಯಲು ಅವರ ಪೋಷಕರ ತ್ಯಾಗ ಬಹಳ ಮುಖ್ಯ. ಅದನ್ನು ಗಮನದಲ್ಲಿಟ್ಟುಕೊಂಡು ಪದವೀಧರರು ಪಾಲಕರನ್ನು ಗೌರವದಿಂದ ನೋಡಿಕೊಳ್ಳಬೇಕು’ ಎಂದು ಸುಭಾಷ್ ಅವರು ಹೇಳಿದರು.


ಘಟಿಕೋತ್ಸವದಲ್ಲಿ ಶೇಷಾದ್ರಿಪುರ ಶಿಕ್ಷಣ ದತ್ತಿಯ 6 ಅಂಗ ಸಂಸ್ಥೆಗಳ ವಿವಿಧ ವಿಭಾಗಗಳಲ್ಲಿ ಪದವಿ ಪೂರ್ಣಗೊಳಿಸಿದ 700 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.



ಘಟಿಕೋತ್ಸವದಲ್ಲಿ ಎಂ.ಎಸ್. ಸುಭಾಷ್ ಅವರು, ವಿದ್ಯಾರ್ಥಿನಿಯೊಬ್ಬರಿಗೆ ಪದವಿ ಪ್ರದಾನ ಮಾಡಿದರು. ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ವೂಡೇ. ಪಿ.ಕೃಷ್ಣ, ನಿರ್ದೇಶಕ ಎಂ. ಪ್ರಕಾಶ್, ಪ್ರಾಚಾರ್ಯ ಎಸ್.ಎನ್. ವೆಂಕಟೇಶ್ ಇದ್ದಾರೆ ಪ್ರಜಾವಾಣಿ ಚಿತ್ರ

ಈ ಸಂಜೆ

ಭಾನುವಾರ,
14 ಆಗಸ್ಟ್ 2016



ಕನ್ನಡ ಕ್ರಿಯಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ತೋಟಗಾರಿಕಾ ಭೀಷ್ಮ ಎಂ.ಎಚ್.ಮರಿಗೌಡ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ವಿ.ಗೋಪಾಲಗೌಡ ಸನ್ಮಾನಿಸಿದರು. ವಿಶ್ರಾಂತ ನ್ಯಾಯಮೂರ್ತಿ ನಾಗಮೋಹನದಾಸ್, ಶೇಷಾದ್ರಿಪುರ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೆ.ಪಿ.ಕೃಷ್ಣ, ಸಮಿತಿಯ ಅಧ್ಯಕ್ಷ ಕೆ.ಜಿ.ಕುಮಾರ್, ಹಸಿರು ಪ್ರತಿಷ್ಠಾನದ ಡಾ.ಎಂ.ಆರ್. ವೆಂಕಟೇಶ್ ಮತ್ತಿತರರು ಹಾಜರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಭಕ್ತಿ ಪರಂಪರೆ ವೈದಿಕದ ವಿರುದ್ಧವಲ್ಲ

ಶತವಾಧಾನಿ ಡಾ. ಆರ್. ಗಣೇಶ್ ಅಭಿಪ್ರಾಯ | ಇಸ್ಕಾನ್‌ನಲ್ಲಿ ಭಕ್ತಿ ಪರಂಪರೆ ಗೋಷ್ಠಿಗೆ ಚಾಲನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವೈದಿಕ ಸಂಪ್ರದಾಯಕ್ಕೆ ವಿರುದ್ಧವಾಗಿ ಹಾಗೂ ಬಹಿರಂಗ ಕ್ರಾಂತಿಯ ಸ್ವರೂಪದಲ್ಲಿ ಭಕ್ತಿ ಪರಂಪರೆ ಜನ್ಮತಾಳಿತು ಎಂಬ ವಾದ ಸರಿಯಲ್ಲ ಎಂದು ಬಹುಭಾಷಾ ವಿದ್ವಾಂಸ, ಶತಾವಧಾನಿ ಡಾ. ಆರ್. ಗಣೇಶ್ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇಸ್ಕಾನ್ ಸಂಸ್ಥೆ ಆವರಣದಲ್ಲಿ ಆಯೋಜಿಸಿರುವ 'ಭಕ್ತಿ ಪರಂಪರೆ' ಕುರಿತ 2 ದಿನಗಳ ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

» ಭಕ್ತಿ ಮಾರ್ಗಕ್ಕೆ ವೇದ ಸಂಸ್ಕೃತಿಯೇ ಮೂಲ

ವೈದಿಕ ಸಂಸ್ಕೃತಿಯ ಲೋಪಗಳನ್ನು ವಿರೋಧಿಸಿ ಭಕ್ತಿ ಪಂಥ ರೂಪ ತಾಳಲಿಲ್ಲ. ಈ ಕಾರಣ ಇಟ್ಟುಕೊಂಡು ಸಂಸ್ಕೃತಿಯಿಂದ ಹೊರ ಹೋಗದೆ ಅಂತರ್ಯದಲ್ಲಿ ಹೊಸ ರೂಪು ಕೊಡುವ ಕಾರ್ಯವನ್ನು ಭಕ್ತಿ ಪರಂಪರೆ ಮಾಡಿತು. ಸ್ವಯಂ ವಿಶ್ಲೇಷಣೆಯಿಂದ ವೈದಿಕ ಸಿದ್ಧಾಂತಗಳಿಗೆ ವಿಭಿನ್ನ ಸ್ವರೂಪ ದೊರೆಯಿತು. ಇದನ್ನು ಕ್ರಾಂತಿ, ಬಂಡಾಯ ಅಥವಾ ವಿರೋಧಿ ಎನ್ನುವುದು ತಪ್ಪು. ಭಕ್ತಿ ಮಾರ್ಗಕ್ಕೆ ವೇದ ಸಂಸ್ಕೃತಿಯೇ ಮೂಲ. ಭಕ್ತಿ ಭಾವವಿಲ್ಲದೆ ವಿಶ್ವದ ಯಾವುದೇ ಮತ ಧರ್ಮಗಳಿಲ್ಲ ಎಂದು ವಿವರಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಇಡೀ ಮನುಕುಲವನ್ನು ಬೆಸೆಯುವ ಶಕ್ತಿ ಇರುವುದು ಭಕ್ತಿಗೆ ಮಾತ್ರ. ಭಗವಂತನ ಸಾಕ್ಷಾತ್ಕಾರ ಪಡೆಯಲು ಇದುವೇ ಹೆದ್ದಾರಿ ಎಂದರು.

ಕರ್ನಾಟಕ ಸಂಸ್ಕೃತ ವಿವಿ ಶೈಕ್ಷಣಿಕ ವ್ಯವಹಾರಗಳ ನಿರ್ದೇಶಕ ಡಾ. ವೀರನಾರಾಯಣ ಪಾಂಡುರಂಗಿ, ರಿಜಿಸ್ಟ್ರಾರ್ ಪ್ರೊ. ವೈ. ಎಸ್. ಸಿದ್ದೇಗೌಡ ಮತ್ತಿತರರಿದ್ದರು.



ಭಕ್ತಿ ಪರಂಪರೆ ಕುರಿತ ರಾಷ್ಟ್ರೀಯ ವಿಚಾರಸಂಕಿರಣವನ್ನು ಶತಾವಧಾನಿ ಡಾ. ಆರ್. ಗಣೇಶ್ ಉದ್ಘಾಟಿಸಿದರು. ಡಾ. ವೂಡೇ ಪಿ. ಕೃಷ್ಣ, ಪ್ರೊ. ಪದ್ಮಾ ಶೇಖರ್, ಚಂಚಲಪತಿದಾಸ ಮತ್ತಿತರರಿದ್ದರು.

> ದೈವದ ಬಗ್ಗೆ ಅನನ್ಯ ಪ್ರೇಮ ಹೊಂದುವುದೇ ಭಕ್ತಿ. ಅರಿವು, ಸಾಧನೆ ಮೂಲಕ ಭಕ್ತಿಯನ್ನು ಮೈಗೂಡಿಸಿಕೊಳ್ಳಬಹುದು. ಜೈನ ಧರ್ಮದಲ್ಲಿ ದ್ರವ್ಯ ಹಾಗೂ ಭಾವ ಭಕ್ತಿಗಳಿವೆ. ದ್ರವ್ಯ ಭಕ್ತಿ ಕ್ರಿಯಾತ್ಮಕವಾದದ್ದು. ಭಾವಭಕ್ತಿಯಿಂದಲೇ ಮೋಕ್ಷ ಸಾಧ್ಯ ಎಂದು ಅದು ಹೇಳುತ್ತದೆ.
>
> | ಪ್ರೊ. ಪದ್ಮಾ ಶೇಖರ್
> ಕರ್ನಾಟಕ ಸಂಸ್ಕೃತ ವಿವಿ ಕುಲಪತಿ

> ಭಗವದ್ಗೀತೆಯಲ್ಲಿ ಅರ್ಜುನನಿಗೆ ಶ್ರೀಕೃಷ್ಣ ಅನೇಕ ರಹಸ್ಯಗಳನ್ನು ತಿಳಿಸುತ್ತಾನೆ. ಕೃಷ್ಣನ ಮೇಲೆ ಭಕ್ತಿ ಮತ್ತು ಶ್ರದ್ಧೆ ಹೊಂದಿದಾಗ ಮಾತ್ರ ಅತ್ಯಂತ ವಿಶಿಷ್ಟವಾಗಿರುವ ಅವುಗಳನ್ನು ತಿಳಿಯಲು ಸಾಧ್ಯ. ಪ್ರೀತಿ ಬೆಳೆಸಿಕೊಳ್ಳುವಲ್ಲಿ ಭಕ್ತಿ ಮೂಡುತ್ತದೆ. ಕೃಷ್ಣನ ಕುರಿತು ಪ್ರೀತಿ ಬೆಳೆಸಿಕೊಳ್ಳುವುದೇ ಒಲಿಸಿಕೊಳ್ಳುವ ಮಾರ್ಗ.
>
> | ಚಂಚಲಪತಿದಾಸ
> ಇಸ್ಕಾನ್ ಹಿರಿಯ ಉಪಾಧ್ಯಕ್ಷ

ಇಂದು ಕೊನೇ ದಿನ ವಿಚಾರಗೋಷ್ಠಿ ಶನಿವಾರ (ಆ.6) ಕೊನೆಗೊಳ್ಳಲಿದೆ. ವೈಷ್ಣವ ಭಕ್ತಿ, ವಿಷ್ಣು ಭಕ್ತಿ, ಕೃಷ್ಣ ಭಕ್ತಿ ಕುರಿತು ಗೋಷ್ಠಿಗಳು ನಡೆಯಲಿವೆ. ಅನಂತಪುರದ ಶ್ರೀಕೃಷ್ಣ ದೇವರಾಯ ವಿವಿ ಪ್ರೊ. ಜೆ. ಸದಾನಂದ ಶಾಸ್ತ್ರಿ, ಪುಣೆ ವಿವಿ ಸಹಾಯಕ ಪ್ರಾಧ್ಯಾಪಕ ಡಾ. ದಿನೇಶ್ ರಸಾಲ್, ಧಾರವಾಡ ವಿವಿ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಪ್ರೊ. ಮಳಗಿ ಜಯತೀರ್ಥಾಚಾರ್ಯ ಸೇರಿ ಹಲವು ವಿದ್ವಾಂಸರು ಪಾಲ್ಗೊಳ್ಳಲಿದ್ದಾರೆ. ಸಂಜೆ 4.15ರಿಂದ ಸಮಾರೋಪ ಸಮಾರಂಭ ಏರ್ಪಾಡಾಗಿದ್ದು, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ತಿರುಪತಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ ಕುಲಪತಿ ಪ್ರೊ. ಎಂ.ಎಲ್. ನರಸಿಂಹಮೂರ್ತಿ ಉಪಸ್ಥಿತರಿರಲಿದ್ದಾರೆ.

ನಮ್ಮ ಬೆಂಗಳೂರು
ವಿಜಯ ಕರ್ನಾಟಕ VK
ಶನಿವಾರ, 6 ಆಗಸ್ಟ್ 2016

ಇಸ್ಕಾನ್‌ನಲ್ಲಿ 'ಭಕ್ತಿ ಪರಂಪರೆ' ಕುರಿತ ರಾಷ್ಟ್ರೀಯ ವಿಚಾರಸಂಕಿರಣಕ್ಕೆ ಚಾಲನೆ

'ವಿಶ್ವ ಭ್ರಾತೃತ್ವಕ್ಕೆ ಭಕ್ತಿಯೇ ಮೂಲಮಾರ್ಗ'

■ ವಿಕ ಸುದ್ದಿಲೋಕ ಬೆಂಗಳೂರು

ವಿಶ್ವ ಭ್ರಾತೃತ್ವ ಹಾಗೂ ಸರ್ವ ಧರ್ಮಗಳ ಸಮಾನತೆಗೆ ಭಕ್ತಿಯೇ ಮೂಲ ಮಾರ್ಗ ಎಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಅಭಿಪ್ರಾಯಪಟ್ಟರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಇಸ್ಕಾನ್ ಸಹಯೋಗದಲ್ಲಿ ಇಸ್ಕಾನ್‌ನ ಮಲ್ಟಿ ವಿಷನ್ ಥಿಯೇಟರ್ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ 'ಭಕ್ತಿ ಪರಂಪರೆ' ಕುರಿತ ರಾಷ್ಟ್ರೀಯ ವಿಚಾರಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಭಗವಂತ, ಭಕ್ತಿ ಬಗ್ಗೆ ಚರ್ಚೆ ಅತೀತ. ದೇವರ ಬಗೆಗಿನ ಕಲ್ಪನೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾದುದು. ಆದರೆ, ಎಲ್ಲ ಧರ್ಮಗಳು ಕೂಡ ಭಕ್ತಿಯ ಸಾರವನ್ನೇ ಪ್ರತಿಪಾದಿಸುತ್ತವೆ. ದೇವರೇ ಇಲ್ಲ ಎಂದು ಹೇಳುವವರಿಗೆ ಭಕ್ತಿ ಮಾರ್ಗದ ಅವಶ್ಯಕತೆಯಿದೆ. ಪ್ರಾರ್ಥನೆಯೇ ಭಕ್ತಿ ಮಾರ್ಗದ ತಳಹದಿ. ಪ್ರೀತಿ ಮತ್ತು ಭಕ್ತಿಯ ಮೂಲಕ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು ಎಂದು ಭಗವದ್ಗೀತೆಯೇ ಸಾರಿ ಹೇಳುತ್ತದೆ. ಹೀಗಾಗಿ, ನಮ್ಮ ಚಂಚಲ ಮನಸ್ಸನ್ನು ಹತೋಟಿಯಲ್ಲಿಡಲು ನಾಮ ಜಪವೊಂದೇ ಏಕೈಕ ಮಾರ್ಗ,'' ಎಂದು ಹೇಳಿದರು.

ಬಂಡಾಯವಾಗಿ ಹುಟ್ಟಿದ್ದಲ್ಲ: ದಿಕ್ಸೂಚಿ ಭಾಷಣ ಮಾಡಿದ ವಿದ್ವಾಂಸ ಶತಾವಧಾನಿ ಆರ್. ಗಣೇಶ್, ''ಎಲ್ಲ ಧರ್ಮೀಯರೂ ಮತ-ಭೇದವಿಲ್ಲದೆ ಭಕ್ತಿಯನ್ನು ಒಪ್ಪಿಕೊಂಡಿದ್ದಾರೆ. ಜಾತಿ-ಮತ, ಕಟ್ಟಳೆ ಮೀರಿದ ಭ್ರಾತೃತ್ವ ಭಕ್ತಿ ಪರಂಪರೆಯಲ್ಲಿದೆ. ಆದರೆ, ಭಕ್ತಿ ಎನ್ನುವುದು ವೈದಿಕ ಪರಂಪರೆಯಲ್ಲಿನ ಆಚರಣೆಗಳನ್ನು ವಿರೋಧಿಸಿ ಬಂಡಾಯವಾಗಿ ಹುಟ್ಟಿದ್ದು ಎಂಬುದು ತಪ್ಪು ಪರಿಕಲ್ಪನೆ,'' ಎಂದು ಸ್ಪಷ್ಟಪಡಿಸಿದರು.

ನೆಮ್ಮದಿ ಬದುಕಿಗೆ ಭಕ್ತಿಯೇ ಸೂಕ್ತ ಮಾರ್ಗ: ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪದ್ಮಾ ಶೇಖರ್, ''ಇಂದಿನ ಲೌಕಿಕ ಜಂಜಾಟ, ಗೊಂದಲ-ತಲ್ಲಣಗಳಿಂದ ಪಾರಾಗಿ ಸಮಚಿತ್ತ ಕಾಯ್ದುಕೊಂಡು ನೆಮ್ಮದಿಯಿಂದ ಬದುಕಲು ಭಕ್ತಿಯೇ ಸೂಕ್ತ ಮಾರ್ಗ,'' ಎಂದು ಪ್ರತಿಪಾದಿಸಿದರು.

''ಭಕ್ತಿಗೆ ಭಾರತದ ಮಹಾಪರಂಪರೆಯಲ್ಲಿ ವಿಶಿಷ್ಟವಾದ ಸ್ಥಾನವಿದೆ. ಭಕ್ತಿ ಮೋಕ್ಷಕ್ಕೆ ಸಾಧನ. ಭಗವದ್ಗೀತೆ ಭಕ್ತಿಯ ಸಾಕ್ಷಾತ್ ದರ್ಶನ ಮಾಡಿಸಿದೆ. ಭಕ್ತಿ ಎಂಬುದು ಕೇವಲ ದೇವರಿಗೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ, ಜನ್ಮ ಕೊಟ್ಟ ತಂದೆ-ತಾಯಿ, ಗುರುಗಳಿಗೂ ಅನ್ವಯಿಸುತ್ತದೆ ಎಂಬುದು ವೇದ-ಉಪನಿಷತ್ತುಗಳಲ್ಲೇ ಉಲ್ಲೇಖವಾಗಿದೆ. ಮಾನಸಿಕ ಗೊಂದಲಗಳಿಂದ ಬಿಡುಗಡೆಗೊಂಡು ಧ್ಯಾನಸ್ಥ ಸ್ಥಿತಿಯಲ್ಲಿ ನಮ್ಮನ್ನು ನಾವು ಶೋಧಿಸಿಕೊಳ್ಳಲು ಭಕ್ತಿಯ ಮೊರೆ ಹೋಗುವುದು ಅನಿವಾರ್ಯ. ಅದು ಮನುಕುಲವನ್ನೂ ಉಳಿಸುತ್ತದೆ,'' ಎಂದರು.



ಇಸ್ಕಾನ್‌ನಲ್ಲಿ ಶುಕ್ರವಾರ ಆರಂಭವಾದ 'ಭಕ್ತಿ ಪರಂಪರೆ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಉದ್ಘಾಟಿಸಿದರು. ಇಸ್ಕಾನ್‌ನ ಹಿರಿಯ ಉಪಾಧ್ಯಕ್ಷ ಚಂಚಲಾಪತಿ ದಾಸ್, ವಿದ್ವಾಂಸ ಶತಾವಧಾನಿ ಆರ್. ಗಣೇಶ್, ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಪ್ರೊ. ಪದ್ಮಾ ಶೇಖರ್, ರಿಜಿಸ್ಟ್ರಾರ್ ಪ್ರೊ.ವೈ.ಎಸ್. ಸಿದ್ದೇಗೌಡ ಉಪಸ್ಥಿತರಿದ್ದರು.

ಇಸ್ಕಾನ್‌ನ ಹಿರಿಯ ಉಪಾಧ್ಯಕ್ಷ ಚಂಚಲಾಪತಿ ದಾಸ್ ಮಾತನಾಡಿ, ''ಶ್ರವಣಾದಿ ಶುದ್ಧ ಚಿತ್ತದಿಂದ ಹೃದಯದಲ್ಲಿ ಭಗವಂತನಿಗೆ ಸ್ಥಾನ ನೀಡಿದರೆ ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತದೆ,'' ಎಂದರು.

ಕರ್ನಾಟಕ ಸಂಸ್ಕೃತ ವಿವಿ ರಿಜಿಸ್ಟ್ರಾರ್ ಪ್ರೊ.ವೈ.ಎಸ್. ಸಿದ್ದೇಗೌಡ, ಪ್ರೊ. ಪಾಂಡುರಂಗಿ ಮತ್ತಿತರರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಭಕ್ತಿ ಪರಂಪರೆ ಬಗ್ಗೆ ಗೋಷ್ಠಿ, ಉಪನ್ಯಾಸ ನಡೆಯಲಿವೆ.

ವಿಜಯವಾಣಿ

ಭಾನುವಾರ 26 ಜೂನ್ 2016



ವಿಜಯವಾಣಿ ಚಿತ್ರ

ಕೆಂಗೇರಿ ಉಪನಗರದ ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನ ಪ್ರಥಮ ವರ್ಷದ ಪಿಯು ಸ್ವಾಗತ ಕಾರ್ಯಕ್ರಮದಲ್ಲಿ ಆರ್.ವಿ. ಕಾಲೇಜ್ ಪ್ರಾಂಶುಪಾಲ ಡಾ. ಕೆ.ಎನ್. ಸುಬ್ರಹ್ಮಣ್ಯ, ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಜಯರಾಮ್, ಪಿಯು ಕಾಲೇಜಿನ ಪ್ರಾಂಶುಪಾಲ ಡಾ. ಆರ್.ಡಿ. ಸತೀಶ್, ಎಸ್‌ಇಟಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಹ ಕಾರ್ಯದರ್ಶಿ ಸರೋಜಾ, ಕೆ.ಎಂ. ನಂಜಪ್ಪ, ಟ್ರಸ್ಟಿ ಕೃಷ್ಣಸ್ವಾಮಿ, ಅನಂತರಾಮ್, ಮಾಜಿ ಪ್ರಾಂಶುಪಾಲ ರಾಧಾಕೃಷ್ಣ ಹಾಜರಿದ್ದರು.

ವಿಶ್ವವಾಣಿ
21.06.2016 | ಮಂಗಳವಾರ

ತುಮಕೂರು ರಾಮಕೃಷ್ಣಾಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ ಪ್ರತಿಪಾದನೆ

ಅಧ್ಯಾತ್ಮ ಜಗತ್ತಿಗೆ ಕೊಟ್ಟ ಶ್ರೇಷ್ಠ ಕೊಡುಗೆ

ವಿಶ್ವವಾಣಿ ಸುದ್ದಿಮನೆ ಕೆಂಗೇರಿ ಉಪನಗರ

ವಿವೇಕಯುತ ಜೀವನದಿಂದ ಬಾಳಿನಲ್ಲಿ ಸಂತೋಷ ಹಾಗೂ ನೆಮ್ಮದಿ ದೊರಕುತ್ತದೆ ಎಂದು ತುಮಕೂರು ರಾಮಕೃಷ್ಣಾಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ ಹೇಳಿದರು. ಇಲ್ಲಿನ ಶೇಷಾದ್ರಿಪುರಂ ಸ್ವತಂತ್ರ ಕಾಲೇಜಿನಲ್ಲಿ ಕೆಂಗೇರಿ ರಾಮಕೃಷ್ಣಾಶ್ರಮದ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಿಶೋರಾವಸ್ಥೆಯಿಂದಲೇ ಸಂಸ್ಕಾರಯುಕ್ತ ನಡವಳಿಕೆಯಿಂದ, ಶ್ರೇಷ್ಠ ವಿಚಾರಗಳ ಅಧ್ಯಯನ ಹಾಗೂ ಅನುಷ್ಠಾನದ ಮೂಲಕ ನೈತಿಕ ಮಾರ್ಗದಿಂದ ಜೀವನದಲ್ಲಿ ಧನ್ಯತೆ ಪ್ರಾಪ್ತವಾಗುತ್ತದೆ. ಭಾರತೀಯ ಅಧ್ಯಾತ್ಮ ಹಾಗೂ ಚಿಂತನೆ, ಸನಾತನ ಧರ್ಮ ಜಗತ್ತಿಗೆ ಕೊಟ್ಟ ಶ್ರೇಷ್ಠ ಕೊಡುಗೆ. ಮನಷ್ಯ ಅಧ್ಯಾತ್ಮಿಕವಾಗಿ ಗಟ್ಟಿಯಾದಾಗ ಸಮಾಜದಲ್ಲಿ ಭ್ರಷ್ಟತೆ ಕಡಿಮೆಯಾಗಿ ನೈತಿಕವಾಗಿ ಬಲಗೊಳ್ಳುತ್ತದೆ ಎಂದರು.

ನೈತಿಕ ಮೌಲ್ಯ ಬೆಳೆಸಿ: ಚಿಕ್ಕ ವಯಸ್ಸಿನಿಂದ ಮಕ್ಕಳಲ್ಲಿ ಸನಾತನ ಧರ್ಮ ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸಿ, ಉನ್ನತ ಮಟ್ಟಕ್ಕೆ ಚಿಂತನೆಗಳನ್ನು ರೂಢಿಸಿಕೊಳ್ಳುವಂತೆ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸ್ಥೆಯ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಮಾತನಾಡಿ, ತ್ಯಾಗ ಮತ್ತು ಸೇವೆ ಎಂಬ ಆದರ್ಶವನ್ನುಧ್ಯೇಯವಾಗಿ ಇರಿಸಿಕೊಂಡು, ರಾಮಕೃಷ್ಣರ ಸಂದೇಶಗಳಂತೆ ವಿವೇಕಾನಂದರಿಂದ ಸ್ಥಾಪಿತವಾದ ರಾಮಕೃಷ್ಣ ಮಿಷನ್ ತನ್ನ ಸೇವೆಯನ್ನು ಪ್ರಪಂಚದಾದ್ಯಂತ ವಿಸ್ತರಿಸಿ, ಉನ್ನತ ಮೌಲ್ಯಗಳನ್ನು ಸಮಾಜದಲ್ಲಿ ಬಿತ್ತುತ್ತಿದೆ ಎಂದರು. ರಾಣಿಬೆನ್ನೂರು ರಾಮಕೃಷ್ಣಾಶ್ರಮದ ಪ್ರಕಾಶಾನಂದ ಸ್ವಾಮೀಜಿ, ಹರಿಹರದ ಶಾರದೇಶಾನಂದ ಸ್ವಾಮೀಜಿ, ರಾಮಕೃಷ್ಣ, ಶಾರದಾದೇವಿ ಹಾಗೂ ವಿವೇಕಾನಂದರ ಉನ್ನತ ಸಂದೇಶಗಳನ್ನು ತಿಳಿಸಿಕೊಟ್ಟರು.

ಕೆಂಗೇರಿ ರಾಮಕೃಷ್ಣಾಶ್ರಮದ ಶಾರದಾತ್ಮಾನಂದ ಸ್ವಾಮೀಜಿ, ಹೊಸಪೇಟೆಯ ಸುಭೇದಾನಂದರ ನೇತೃತ್ವದಲ್ಲಿ ನಡೆದ ಭಜನಾ ಕಾರ್ಯಕ್ರಮ ಭಕ್ತರಲ್ಲಿ ಅಧ್ಯಾತ್ಮಿಕ ಜಾಗೃತಿ ಮೂಡಿಸಿತು.



ಕೆಂಗೇರಿ ಉಪನಗರದ ಶೇಷಾದ್ರಿಪುರಂ ಸ್ವತಂತ್ರ ಕಾಲೇಜಿನಲ್ಲಿ ಕೆಂಗೇರಿ ರಾಮಕೃಷ್ಣಾಶ್ರಮದ ದಶಮಾನೋತ್ಸವ ಕಾರ್ಯಕ್ರಮವನ್ನು ಸಂಸ್ಥೆಯ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಉದ್ಘಾಟಿಸಿದರು. ವೀರೇಶಾನಂದಾ ಸರಸ್ವತಿ ಸ್ವಾಮೀಜಿ, ಪ್ರಕಾಶನಂದರು, ಶಾರದೇಶಾನಂದರು, ಸುಭೇದಾನಂದರು, ಶಾರದಾತ್ಮಾನಂದರು ಇದ್ದರು.

ಪ್ರಜಾವಾಣಿ ಭಾನುವಾರ ಮಾರ್ಚ್ 20, 2016

ಉನ್ನತ ಶಿಕ್ಷಣ ಸುಧಾರಣೆ ಅಗತ್ಯ

ಪ್ರಜಾವಾಣಿ ವಾರ್ತೆ



ಕಳೆದ ವರ್ಷದ ವಿಚಾರ ಸಂಕಿರಣ ಕುರಿತು ಹೊರತರಲಾದ ಪುಸ್ತಕವನ್ನು ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ.ಪಾಟೀಲ (ಬಲಗಡೆಯಿಂದ ಮೊದಲನೆಯವರು) ಬಿಡುಗಡೆ ಮಾಡಿದರು. (ಎಡದಿಂದ) ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್‌ನ ನಿರ್ದೇಶಕ ಎಂ.ಪ್ರಕಾಶ್, ಲಿಯಾನ್ನೆ ವ್ಯಾನ್ ಅಲ್ಲೆನ್ ಮತ್ತು ಅವರ ಪತಿ ಜಾನ್, ವೂಡೇ ಪಿ.ಕೃಷ್ಣ ಚಿತ್ರದಲ್ಲಿದ್ದಾರೆ

ಬೆಂಗಳೂರು: 'ಅನೇಕ ಸವಾಲು ಎದುರಿಸುತ್ತಿರುವ ನಮ್ಮ ಉನ್ನತ ಶಿಕ್ಷಣ ಕ್ಷೇತ್ರವನ್ನು ಗುಣಾತ್ಮಕವಾಗಿ ಎತ್ತರಕ್ಕೆ ಏರಿಸುವುದಕ್ಕಾಗಿ ಸಾಕಷ್ಟು ಸುಧಾರಣೆಗಳಾಗಬೇಕು. ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಉನ್ನತ ಶಿಕ್ಷಣ ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮದು ಜಗತ್ತಿನಲ್ಲಿಯೇ ಮೂರನೆ ಅತಿದೊಡ್ಡ ಶಿಕ್ಷಣ ವ್ಯವಸ್ಥೆ. ಇಷ್ಟಿದ್ದರೂ ಜಗತ್ತಿನ ಅತ್ಯುನ್ನತ 100 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ನಮ್ಮ ಒಂದೇ ಒಂದು ವಿವಿ ಸ್ಥಾನ ಪಡೆದಿಲ್ಲ ಎನ್ನುವುದು ನೋವಿನ ಸಂಗತಿ' ಎಂದು ಹೇಳಿದರು.

'ನಮ್ಮಲ್ಲಿ ಮೂಲ ವಿಜ್ಞಾನ ಕ್ಷೇತ್ರದಲ್ಲಿ ಅಧ್ಯಯನ, ಸಂಶೋಧನೆ ಬಹಳ ಕಡಿಮೆಯಾಗುತ್ತಿವೆ. ವೃತ್ತಿಪರ ಶಿಕ್ಷಣಕ್ಕೆ ಹೇಗೆ ಮಹತ್ವ ಬಂದಿದೆಯೋ ಹಾಗೇ ಉನ್ನತ ಶಿಕ್ಷಣ ಮಹತ್ವ ಪಡೆಯುತ್ತಿಲ್ಲ. ಮಾರುಕಟ್ಟೆ ಬೇಡಿಕೆ ಗಮನದಲ್ಲಿಟ್ಟುಕೊಂಡು ಪದವೀಧರರನ್ನು ತಯಾರಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಶಿಸ್ತು, ಗಂಭೀರತೆಯನ್ನು ಕಡೆಗಣಿಸಲಾಗಿದೆ. ಎಲ್ಲವನ್ನೂ ಲಘುವಾಗಿ ನೋಡಲಾಗುತ್ತಿದೆ. ಗ್ರಂಥಾಲಯಕ್ಕೆ ಹೋಗಿ ಓದುವ ಹವ್ಯಾಸ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗುತ್ತಿದೆ. ಮೊಬೈಲ್ ಜನಪ್ರಿಯವಾದ ಮೇಲಂತೂ ಅಧ್ಯಯನ ಶೀಲತೆ ಕುಸಿಯುತ್ತಿದೆ' ಎಂದು ವಿಷಾದಿಸಿದರು.

'ಇಂದಿನ ಮಾರುಕಟ್ಟೆ ಮತ್ತು ಸಮಾಜದ ಬೇಡಿಕೆ ಅರಿತುಕೊಂಡು ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಪುನರ್ ರೂಪಿಸುವ ಅಗತ್ಯವಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರ ದೃಷ್ಟಿಯಿಂದ ಯಾವ ರೀತಿಯ ಮಾರ್ಪಾಡುಗಳಾಗಬೇಕು ಆ ಕುರಿತು ಸಂಕಿರಣದಲ್ಲಿ ಚರ್ಚೆಗಳು ನಡೆದು, ಉತ್ತಮ ಶಿಫಾರಸುಗಳು ಹೊರಬರಲಿ' ಎಂದರು.

ಅಮೆರಿಕದ ಯೂನಿವರ್ಸಿಟಿ ಆಫ್ ಇಸ್ಕಾನ್‌ಸಿನ್ ರಿವರ್ ಫಾಲ್ಸ್‌ನ ಬಿಸಿನೆಸ್ ಅಂಡ್ ಎಕನಾಮಿಕ್ ಕಾಲೇಜಿನ ನಿರ್ದೇಶಕಿ ಲಿಯಾನ್ನೆ ವ್ಯಾನ್ ಅಲ್ಲೆನ್ ಮಾತನಾಡಿ, 'ಭವಿಷ್ಯದ ದೃಷ್ಟಿಯಿಂದ ನಾವು ಇಂದು ಉನ್ನತ ಶಿಕ್ಷಣವನ್ನು ಜಾಗತಿಕ ಮಟ್ಟದಲ್ಲಿ ಬೋಧಿಸುವ ಅಗತ್ಯವಿದೆ. ಪಠ್ಯಕ್ರಮವನ್ನು ಕೂಡ ಇದೇ ಹಾದಿಯಲ್ಲಿ ರೂಪಿಸಬೇಕಿದೆ. ಇದರಿಂದ ಯುವಜನತೆ ಅಪಾರ ಉದ್ಯೋಗಾವಕಾಶಗಳನ್ನು ಪಡೆಯಲು ಅನುಕೂಲವಾಗುತ್ತದೆ' ಎಂದು ಹೇಳಿದರು.

ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಮಾತನಾಡಿದರು. 'ತಂತ್ರಜ್ಞಾನ ಇಂದು ಶಿಕ್ಷಣ ವ್ಯವಸ್ಥೆಯ ಎಲ್ಲ ಸ್ತರಗಳಲ್ಲಿ ಹಾಸುಹೊಕ್ಕಾಗಿದೆ. ಬೋಧನಾ ಕ್ಷೇತ್ರದಲ್ಲಿಯಂತೂ ಕ್ಷಿಪ್ರಗತಿಯ ಬದಲಾವಣೆಗಳಾಗಿವೆ. ಇವತ್ತು ವಿದ್ಯಾರ್ಥಿಗಳು ಜಾಗತಿಕ ಪರಿಸರದಲ್ಲಿ ಸ್ಪರ್ಧೆ ಎದುರಿಸಲು ಸಿದ್ಧರಾಗಬೇಕಿದೆ' ಎಂದು ಅವರು ಅನಿಸಿಕೆ ವ್ಯಕ್ತಪಡಿಸಿದರು.

ವಿಜಯ ಕರ್ನಾಟಕ VK ಗುರುವಾರ,25 ಫೆಬ್ರವರಿ 2016

'ಆದರ್ಶಗಳ ಕಣ್ಮರೆ ಕಳವಳದ ಸಂಗತಿ'

ವಿಕ ಸುದ್ದಿಲೋಕ ಬೆಂಗಳೂರು


ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ರಾಜಕಾರಣಿಗಳು ಇಂದು ದೇಶದಲ್ಲಿ ವಿರಳವಾಗಿದ್ದಾರೆ. ಆದರೆ, ಸ್ವಾತಂತ್ರ್ಯಕ್ಕಾಗಿ ತ್ಯಾಗ ಮನೋಭಾವದಿಂದ ಹೋರಾಡಿದ ಲಾಲಾ ಲಜಪತ್ ರಾಯ್ ಅವರಂಥ ರಾಜಕಾರಣಿಗಳನ್ನು ನಾವು ಇಂದು ನೆನಪಿಸಿಕೊಳ್ಳಬೇಕಾಗಿದೆ ಎಂದು ನ್ಯಾ. ಸಂತೋಷ್ ಹೆಗ್ಡೆ ಹೇಳಿದ್ದಾರೆ.

ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ಲಾಲಾ ಲಜಪತ್‌ರಾಯ್ ಅವರ 150ನೇ ಜನ್ಮ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

''ಸಮಾಜದಲ್ಲಿ ಇಂದು ಎಲ್ಲ ರಂಗಗಳಲ್ಲೂ ಮೌಲ್ಯಗಳು ಕಣ್ಮರೆಯಾಗುತ್ತಿವೆ. ಇನ್ನಾದರೂ ನಾವೆಲ್ಲರೂ ದೇಶವನ್ನು ಪ್ರಗತಿಪಥಕ್ಕೆ ತಂದು ನಿಲ್ಲಿಸಿದ ಮಹನೀಯರನ್ನು ಮಾದರಿಯಾಗಿ ಕಾಣಬೇಕು,'' ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ. ಕೃಷ್ಣ ಮಾತನಾಡಿ ''ಲಾಲ್-ಬಾಲ್-ಪಾಲ್ ಎಂದು ಖ್ಯಾತರಾಗಿದ್ದ ಬಾಲ ಗಂಗಾಧರ್ ತಿಲಕ್, ಲಾಲಾ ಲಜಪತ್ ರಾಯ್ ಮತ್ತು ಬಿಪಿನ್‌ಚಂದ್ರ ಪಾಲ್ ಅವರ ಚಿಂತನೆಗಳ ಮೂಲಕ ದೇಶಕ್ಕೆ ಉತ್ತಮ ಅಡಿಪಾಯ ಬಿದ್ದಿದೆ. ಆ ಮೂವರ ಚಿಂತನೆಗಳಲ್ಲೂ ದೇಶದ ಹಿತವೇ ಪ್ರಧಾನವಾಗಿದೆ'' ಎಂದರು.

ರಾಷ್ಟ್ರಗೌರವ ಪರಿಷತ್ತಿನ ಅಧ್ಯಕ್ಷ ಟಿ. ರಾಮಕೃಷ್ಣ ಮಾತನಾಡಿ, ''ಲಾಲಾ ಲಜಪತ್ ರಾಯ್ ಅವರನ್ನು ಹಿಂದೂ ನಾಯಕ ಎಂದು ಕರೆಯಲಾದರೂ ಅವರು ಅಲ್ಪಸಂಖ್ಯಾತರ ಸಮಾನ ಹಕ್ಕಿಗಾಗಿ ಧ್ವನಿ ಎತ್ತಿದರು. ಧರ್ಮ ಯಾವುದಿದ್ದರೂ ಎಲ್ಲರೂ ಭಾರತೀಯರೆಂಬುದು ಅವರ ವಾದವಾಗಿತ್ತು. ಪಂಜಾಬ್ ನ್ಯಾಷನಲ್ ಬ್ಯಾಂಕ್, ಲಕ್ಷ್ಮಿ ವಿಮಾ ಕಂಪನಿ ಸ್ಥಾಪನೆ ಮೂಲಕ ಆರ್ಥಿಕ ಸುಧಾರಣೆಗೂ ಮುಂದಾಗಿದ್ದರು. ಗೋವಿನ ರಕ್ಷಣೆಯ ಪರವಾಗಿ ಮತ್ತು ಮತಾಂತರಕ್ಕೆ ವಿರುದ್ಧ ವಾದ ನಿಲುವು ಅವರದಾಗಿತ್ತು'' ಎಂದರು.




ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಲಾಲಾಲಜಪತ್ ರಾಯ್ ಕುರಿತು ಮಂಗಳವಾರ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು. ಈ ಸಂದರ್ಭದಲ್ಲಿ ವಿಮರ್ಶಕ ಡಾ.ಜಿ.ಬಿ.ಹರೀಶ, ವೂಡೇ ಪಿ.ಕೃಷ್ಣ, ನ್ಯಾ.ಸಂತೋಷ್ ಹೆಗ್ಡೆ ಮತ್ತು ಸತ್ಯಪಾಲ್ ಗ್ರೋವರ್ ಉಪಸ್ಥಿತರಿದ್ದರು.

ಸಂಜೆವಾಣಿ

3 ಬುಧವಾರ
ಫೆಬ್ರವರಿ 24, 2016

ಡಾ. ವೂಡೇ ಪಿ. ಕೃಷ್ಣರಿಗೆ ಫೆಲೋಶಿಪ್



ಶೇಷಾದ್ರಿಪುರಂ ವಿದ್ಯಾಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣರಿಗೆ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿಯ ಫೆಲೋಶಿಪ್ (ಫಂಕಖ) ಲಭಿಸಿದೆ.

ಉತ್ಪಾದನಾಹೆಚ್ಚಳದಮೂಲಕ ವಿಶ್ವಾದ್ಯಂತ ಜನರ ಜೀವನ ಮಟ್ಟ ಉತ್ತಮಪಡಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸಿದ ಗಣ್ಯರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು.

ವ್ಯಾಪ್ಸ್ ಫೆಲೋಶಿಪ್‌ವು ಈ ಹಿಂದೆ ಟಾಟಾ ಸಮೂಹ ಸಂಸ್ಥೆಯಅಧ್ಯಕ್ಷರಾದ ರತನ್ ಟಾಟಾಹಾಗೂಕೇಂದ್ರಇಂಧನ ಇಲಾಖಾ ಕಾರ್ಯದರ್ಶಿ ಆರ್. ವಿ. ಸಾಹಿ ಅವರಿಗೆ ದೊರೆತಿತ್ತು.

ಪುಟ 5
ಈ ಸಂಜೆ
ಬುಧವಾರ, 24-02-2016

ಡಾ.ವೂಡೇ.ಪಿ.ಕೃಷ್ಣರಿಗೆ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿ ಫೆಲೋಶಿಪ್

ಬೆಂಗಳೂರು, ಫೆ.24- ಶೇಷಾದ್ರಿಪುರಂ ವಿದ್ಯಾಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣರಿಗೆ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿಯ ಫೆಲೋಶಿಪ್ ಲಭಿಸಿದೆ.



ಉತ್ಪಾದನಾ ಹೆಚ್ಚಳದ ಮೂಲಕ ವಿಶ್ವಾದ್ಯಂತ ಜನರ ಜೀವನ ಮಟ್ಟ ಉತ್ತಮ ಪಡಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸಿದ ಗಣ್ಯರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು.

ವ್ಯಾಪ್ಸ್ ಫೆಲೋಶಿಪ್‌ವು ಈ ಹಿಂದೆ ಟಾಟಾ ಸಮೂಹ ಸಂಸ್ಥೆಯ ಅಧ್ಯಕ್ಷರಾದ ರತನ್ ಟಾಟಾ ಹಾಗೂ ಕೇಂದ್ರ ಇಂಧನ ಇಲಾಖಾ ಕಾರ್ಯದರ್ಶಿ ಆರ್.ವಿ.ಸಾಹಿ ಅವರಿಗೆ ದೊರೆತಿತ್ತು.

ಬೆಂಗಳೂರು ಉದಯವಾಣಿ
ಬುಧವಾರ | ಫೆಬ್ರವರಿ | 24 | 2016

'ಲಜಪತ್ ಆದರ್ಶವಿರುವ ರಾಜಕಾರಣಿಗಳು ವಿರಳ'

ಬೆಂಗಳೂರು: ಲಾಲಾ ಲಜಪತರಾಯರ ಆದರ್ಶಗಳನ್ನು ಹೊಂದಿದ್ದ ರಾಜಕಾರಣಿಗಳ ಸಂಖ್ಯೆ ವಿರಳ ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಎನ್. ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಲಾಲಾ ಲಜಪತರಾಯ ಅವರ 150ನೇ ಜನ್ಮದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಮೌಲ್ಯಗಳ ಕೊರತೆ ಎದ್ದುಕಾಣುತ್ತಿದ್ದು, ದೇಶವನ್ನು ಮುನ್ನಡೆಸಿದ ಮಹನೀಯರ ಆದರ್ಶ ಜೀವನ ಮಾದರಿಯಾಗಬೇಕು. ವಿದ್ಯಾರ್ಥಿಗಳು ಜೀವನವನ್ನು ಮೌಲ್ಯಯುತವಾಗಿ ಮುನ್ನಡೆಸಬೇಕು. ಶಿಕ್ಷಣದ ಮೂಲಕ ಹೇಳಿಕೊಡಲಾಗುತ್ತಿರುವ ನೈತಿಕ ವಿಜ್ಞಾನ ಎಂಬುದು ಮನೆಯಲ್ಲಿ ಪೋಷಕರಿಂದಲೇ ಲಭ್ಯವಾಗುತ್ತದೆ. ಬದುಕು ಮೌಲ್ಯಗಳಿಂದ ಕೂಡಿದಷ್ಟು ನೆಮ್ಮದಿಯಾಗಿರುತ್ತದೆ ಎಂದು ಕಿವಿಮಾತು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ. ಕೃಷ್ಣ ಮಾತನಾಡಿ, ಲಾಲ್ ಬಾಲ್ ಪಾಲ್ ಎಂದು ಖ್ಯಾತರಾಗಿದ್ದ ಬಾಲಗಂಗಾಧರ್ ತಿಲಕ್, ಲಾಲಾ ಲಜಪತರಾಯ, ಬಿಪಿನ್ ಚಂದ್ರಪಾಲ್ ರು ಬೇರೆ ಬೇರೆ ರಾಜ್ಯದವರಾಗಿದ್ದರೂ ಮೂವರ ಚಿಂತನೆಗಳ ಮೂಲಕ ದೇಶಕ್ಕೆ ಉತ್ತಮ ಅಡಿಪಾಯ ದೊರೆತ್ತಿತ್ತು ಎಂದು ಬಣ್ಣಿಸಿದರು.

ರಾಷ್ಟ್ರಗೌರವ ಪರಿಷತ್ತಿನ ಅಧ್ಯಕ್ಷ ಟಿ. ರಾಮಕೃಷ್ಣ ಮಾತನಾಡಿ, ಲಾಲಾ ಲಜಪತರಾಯ ಅವರನ್ನು ಹಿಂದೂ ನಾಯಕ ಎಂದು ಕರೆಯಲಾಗುತ್ತಿದ್ದರೂ ಅವರು ಅಲ್ಪಸಂಖ್ಯಾತರಿಗೆ ಸಮಾನ ಹಕ್ಕಿಗಾಗಿ ಧ್ವನಿ ಎತ್ತಿದವರು ಎಂದು ಸ್ಮರಿಸಿದರು.

ನಂತರ ನಡೆದ ವಿಚಾರ ಸಂಕಿರಣದಲ್ಲಿ ದಕ್ಷಿಣ ಏಷಿಯಾ ಸಂಸ್ಥೆಯ ಸತ್ಯಪಾಲ್ ಗ್ರೋವರ್, ವಿಮರ್ಶಕ ಡಾ.ಜಿ.ಬಿ.ಹರೀಶ್ ಮತ್ತಿತರರು ಉಪನ್ಯಾಸ ನೀಡಿದರು.

ಬುಧವಾರ, 24, ಫೆಬ್ರವರಿ [illegible] ಸಂಯುಕ್ತ ಕರ್ನಾಟಕ



ಲಾಲ ಲಜಪತರಾಯ್ ಅವರ 150 ನೇ ಜನ್ಮದಿನದ ಅಂಗವಾಗಿ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ, ಟಿ.ಎನ್.ರಾಮಕೃಷ್ಣ, ಸತ್ಯಪಾಲ್ ಗ್ರೋವರ್, ಜಿ.ಬಿ.ಕೃಷ್ಣ, ಪ್ರೊ.ಕೇಶವ ಕೃಷ್ಣ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಕನ್ನಡಪ್ರಭ
ಬುಧವಾರ 24.2.2016

ವಿದ್ಯಾರ್ಥಿಗಳಲ್ಲಿ ಮೌಲ್ಯಗಳ ಕೊರತೆ

KP



ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ಲಾಲಾ ಲಜಪತ್‌ರಾಯ್ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ, ಸತ್ಯಪಾಲ್ ಗ್ರೋವರ್ ಜತೆ ಸಂವಾದ ನಡೆಸಿದ ಕ್ಷಣ.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿದ್ಯಾರ್ಥಿಗಳಲ್ಲಿ ಮೌಲ್ಯಗಳ ಕೊರತೆ ಕಾಡುತ್ತಿದ್ದರೆ ಅಪ್ಪ ಅಮ್ಮಂದಿರಿಂದ ದುರಾಸೆಯ ರೋಗ ವಂಶವಾಹಿಯಾಗಿ ಬರುತ್ತಿದೆ ಎಂದು ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪತ್‌ರಾಯ್‌ರ 150ನೇ ಜನ್ಮ ದಿನಾಚರಣೆ ಪ್ರಯುಕ್ತ ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ಅಸಂತೃಪ್ತಿ ತಾಂಡವವಾಡುತ್ತಿದೆ. ಎಷ್ಟು ಗಳಿಸಿದರೂ ಸಾಲದೆಂಬ ದುರಾಸೆ ಬೆಳೆಯುತ್ತಿದೆ ಮಾತ್ರವಲ್ಲ ಈ ಎಲ್ಲವೂ ಸಾಂಕ್ರಾಮಿಕವಾಗಿ ಹರಡುತ್ತಿರುವ ಮದ್ದಿಲ್ಲದ ರೋಗಗಳಾಗಿ ಕಾಡತೊಡಗಿವೆ ಎಂದರು.

ಮಕ್ಕಳಲ್ಲಿ ಮೌಲ್ಯ ತುಂಬುವ ಬದಲು ಈ ರೋಗಗಳನ್ನು ಬಳುವಳಿಯಾಗಿ ನೀಡಲಾಗುತ್ತಿದೆ. ಕವಿಯೊಬ್ಬರು ಹೇಳಿದಂತೆ ಮೊದಲು ಮಾನವರಾಗಬೇಕಿದೆ. ಶಾಲೆ ಕಾಲೇಜುಗಳಲ್ಲಿ ಮೌಲ್ಯವನ್ನುತುಂಬುವಕೆಲಸವಾಗಬೇಕಿದ್ದು ಈಮೊದಲಿನಂತೆ ನೀತಿ ಪಾಠಗಳ ತರಗತಿ ನಡೆಸಬೇಕಿದೆ ಎಂದು ಹೇಳಿದರು.

ರಾಷ್ಟ್ರೀಯ ಅನುಷ್ಠಾನ ಸಮಿತಿ ಸದಸ್ಯ ಟಿ.ಎನ್.ರಾಮಕೃಷ್ಣ ದಕ್ಷಿಣ ಏಷ್ಯಾ ಸಮುದಾಯದ ಅಧ್ಯಕ್ಷ ಸತ್ಯಪಾಲ್ ಗ್ರೋವರ್, ವಿಮರ್ಶಕ ಡಾ.ಜಿ.ಬಿ.ಹರೀಶ್, ಶೇಷಾದ್ರಿಪುರಂ ಎಜುಕೇಶನ್ ಟ್ರಸ್ಟ್ ಕಾರ್ಯದರ್ಶಿ ಡಾ.ವುಡೇಪಿ.ಕೃಷ್ಣ, ಪ್ರಾಂಶುಪಾಲರಾದ ಡಾ.ಅನುರಾಧಾ ರಾಯ್ ಭಾಗವಹಿಸಿದ್ದರು.

ಸತ್ಯ ಮರೆಮಾಚುವ ಯತ್ನವೇ?: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ವಾಚ್ ವಿವರಗಳನ್ನು ಈಗ ಲೋಕಾಯುಕ್ತಕ್ಕೆ ಸಲ್ಲಿಸಿದರೆ ಏನು ಪ್ರಯೋಜನ. ಇದು ಸತ್ಯವನ್ನು ಮರೆಮಾಚುವ ಯತ್ನವೇ? ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಪ್ರಶ್ನಿಸಿದರು. ಸಿದ್ದರಾಮಯ್ಯ ವಾಚ್ ಅನ್ನು ಯಾವ ವರ್ಷ ಪಡೆದರು? ಈಗ ಲೋಕಾಯುಕ್ತಕ್ಕೆ ವಿವರ ಸಲ್ಲಿಸಿ ಏನು ಮಾಡುತ್ತಾರೆ? ಎಂದ ಅವರು, ಲೋಕಾಯುಕ್ತರ ಆಯ್ಕೆ ವಿವಾದವನ್ನು ಜೀವಂತವಾಗಿರಿಸಿ ಲೋಕಾಯುಕ್ತರ ನೇಮಕ ಮುಂದೂಡುವ ಪ್ರಯತ್ನ ಮಾಡಲಾಗುತ್ತಿದೆ, ಸರಕಾರಕ್ಕೆ ಲೋಕಾಯುಕ್ತರ ಆಯ್ಕೆಯಲ್ಲಿ ಆಸಕ್ತಿ ಇಲ್ಲ ಎಂಬುದನ್ನು ನಾನು ಈ ಮೊದಲೇ ಹೇಳಿದ್ದೆ ಎಂದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಬುಧವಾರ
24 ಫೆಬ್ರವರಿ 2016
24 FEBRUARY 2016

ಮೌಲ್ಯಯುತ ಬದುಕಿನಿಂದ ನೆಮ್ಮದಿ

ನಿವೃತ್ತ ನ್ಯಾ.ಎನ್. ಸಂತೋಷ್ ಹೆಗ್ಡೆ ಅಭಿಮತ

ಬೆಂಗಳೂರು: ಲಾಲಾ ಲಜಪತ್ ರಾಯ್‌ರಂತೆ ಆದರ್ಶಗಳನ್ನು ಹೊಂದಿದ್ದ ಮೇಧಾವಿಗಳನ್ನು ಪ್ರಸ್ತುತ ರಾಜಕಾರಣದಲ್ಲಿ ಕಾಣುವುದು ವಿರಳವಾಗಿದೆ ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಕಳವಳ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಲಾಲಾ ಲಜಪತ್ ರಾಯ್ 150ನೇ ಜನ್ಮವರ್ಷಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಅವರು, ಸಮಾಜದಲ್ಲಿ ಮೌಲ್ಯಗಳ ಕೊರತೆ ಕಾಣುತ್ತಿದ್ದು, ದೇಶವನ್ನು ಮುನ್ನಡೆಸಿದ ಮಹನೀಯರ ಆದರ್ಶ ಜೀವನ ಮಾದರಿ ಆಗಬೇಕೆಂದರು.

ವಿದ್ಯಾರ್ಥಿಗಳು ಜೀವನವನ್ನು ಮೌಲ್ಯಯುತವಾಗಿ ಮುನ್ನಡೆಸಬೇಕು. ಶಿಕ್ಷಣದ ಮೂಲಕ ಹೇಳಿಕೊಡಲಾಗುತ್ತಿರುವ ನೈತಿಕ ವಿಜ್ಞಾನ ಎಂಬುದು ಮನೆಯಲ್ಲಿ ಪಾಲಕರಿಂದಲೇ ಲಭ್ಯವಾಗುತ್ತದೆ. ಬದುಕು ಮೌಲ್ಯಗಳಿಂದ ಕೂಡಿದಷ್ಟೂ ನೆಮ್ಮದಿಯುತವಾಗಿರುತ್ತದೆ ಎಂದು ಕಿವಿಮಾತು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ ಮಾತನಾಡಿ, ಲಾಲ್ ಬಾಲ್ ಪಾಲ್ ಎಂದು ಖ್ಯಾತರಾಗಿದ್ದ ಬಾಲಗಂಗಾಧರ್ ತಿಲಕ್, ಲಾಲಾ ಲಜಪತ್ ರಾಯ್, ಬಿಪಿನ್‌ಚಂದ್ರ ಪಾಲ್ ಅವರು ಬೇರೆ ಬೇರೆ ರಾಜ್ಯದವರಾಗಿದ್ದರೂ ಮೂವರ ಚಿಂತನೆಗಳ ಮೂಲಕ ದೇಶಕ್ಕೆ ಉತ್ತಮ ಅಡಿಪಾಯ ದೊರೆತಿದೆ ಎಂದು ಬಣ್ಣಿಸಿದರು.

28ನೇ ವಯಸ್ಸಿನಲ್ಲಿಯೇ ಲಾಲಾ ಲಜಪತ್ ರಾಯ್ ಕಾರ್ಯಾಂಗ, ನ್ಯಾಯಾಂಗಗಳ ಮಾರ್ಗ ಬೇರೆ ಇರಬೇಕು ಎಂಬ ಚಿಂತನೆ ನೀಡಿದರು. ಅವರು ಯುವಕರಾಗಿದ್ದಾಗ ದೇಶದ ಕುರಿತ ಚಿಂತನೆಗಳನ್ನು ಹೊಂದಿದ್ದು, ಇಂದಿನ ಯುವ ಸಮೂಹಕ್ಕೆ ಮಾದರಿ ಆಗಬೇಕೆಂದು ಹೇಳಿದರು.

ನಂತರ ನಡೆದ ವಿಚಾರಸಂಕಿರಣದಲ್ಲಿ ದಕ್ಷಿಣ ಏಷ್ಯಾ ಸಂಸ್ಥೆಯ ಸತ್ಯಪಾಲ್ ಗ್ರೋವರ್, ವಿಮರ್ಶಕ ಡಾ. ಜಿ.ಬಿ.ಹರೀಶ್ ಮಾತನಾಡಿ ಲಾಲಾ ಲಜಪತ್ ರಾಯ್ ಅವರ ಬದುಕು, ರಾಜಕೀಯ ನಿಲುವು, ಸ್ವಾತಂತ್ರ್ಯದಲ್ಲಿ ಅವರ ಭಾಗಿತ್ವದ ಕುರಿತು ಉಪನ್ಯಾಸ ನೀಡಿದರು. ಪ್ರಾಂಶುಪಾಲೆ ಡಾ.ಅನುರಾಧ ರಾಯ್ ಉಪಸ್ಥಿತರಿದ್ದರು.



ಲಾಲಾ ಲಜಪತ್ ರಾಯ್ 150ನೇ ಜನ್ಮವರ್ಷಾಚರಣೆಯಲ್ಲಿ ನಿವೃತ್ತ ನ್ಯಾ.ಎನ್. ಸಂತೋಷ ಹೆಗ್ಡೆ, ಜಿ.ಬಿ.ಹರೀಶ್ ಮತ್ತಿತರರು ಇದ್ದರು.

“ ಲಾಲಾ ಲಜಪತ್ ರಾಯ್ ಅವರನ್ನು ಹಿಂದು ನಾಯಕ ಎಂದು ಕರೆದರೂ ಅವರು ಅಲ್ಪಸಂಖ್ಯಾತರ ಸಮಾನ ಹಕ್ಕಿಗಾಗಿ ಧ್ವನಿ ಎತ್ತಿದ್ದರು. ಧರ್ಮ ಯಾವುದಿದ್ದರೂ ಎಲ್ಲರೂ ಭಾರತೀಯರು ಎಂದು ಗುರುತಿಸಿಕೊಳ್ಳಬೇಕು ಎಂಬುದು ಅವರ ವಾದವಾಗಿತ್ತು. ಪಂಜಾಬ್ ನ್ಯಾಷನಲ್ ಬ್ಯಾಂಕ್, ಲಕ್ಷ್ಮೀ ವಿಮಾ ಕಂಪನಿ ಸ್ಥಾಪಿಸಿ ಆರ್ಥಿಕ ಸುಧಾರಣೆಗೂ ಮುಂದಾಗಿದ್ದರು. ಮತಾಂತರ ವಿರೋಧಿ ಹಾಗೂ ಗೋ ರಕ್ಷಣೆ ನಿಲುವು ಹೊಂದಿದ್ದರು.

| ಟಿ.ರಾಮಕೃಷ್ಣ ರಾಷ್ಟ್ರಗೌರವ ಪರಿಷತ್ತಿನ ಅಧ್ಯಕ್ಷ

ಲಾಲಾ ಲಜಪತ್ ರಾಯ್ 150ನೇ ಜನ್ಮ ವರ್ಷಾಚರಣೆ

ಇಂದಿನ ಯುವ ಸಮೂಹಕ್ಕೆ ಮಾದರಿ

5
ಬೆಂಗಳೂರು ಉದಯವಾಣಿ
ಮಂಗಳವಾರ | ಫೆಬ್ರವರಿ | 9 | 2016

20ನೇ ಶತಮಾನದಲ್ಲಿ ಮಾನವನ ಕ್ರೌರ್ಯ ಸ್ಫೋಟ

■ ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಅಭಿಮತ



ಜಾಣಗೆರೆ ಪತ್ರಿಕೆ ಪ್ರಕಾಶನವು ಸೋಮವಾರ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಮಹಾಯಾನ' ಸಾಮಾಜಿಕ ಕಾದಂಬರಿ ಲೋಕಾರ್ಪಣೆ ಮಾಡಲಾಯಿತು.

ಬೆಂಗಳೂರು: 20ನೇ ಶತಮಾನವು ಮಾನವನ ಕ್ರೌರ್ಯ ಅತ್ಯಂತ ಭೀಕರ ಪ್ರಮಾಣದಲ್ಲಿ ಸ್ಫೋಟಗೊಂಡ ಕಾಲಘಟ್ಟವಾಗಿದೆ ಎಂದು ನಿಡುಮಾಮಿಡಿ ಮಠದ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ ಅಭಿಪ್ರಾಯಪಟ್ಟರು.

ಜಾಣಗೆರೆ ಪತ್ರಿಕೆ ಪ್ರಕಾಶನವು ಸೋಮವಾರ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಮಹಾಯಾನ' ಸಾಮಾಜಿಕ ಕಾದಂಬರಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಭೂಮಿಯು ಸಹಸ್ರಾರು ವರ್ಷಗಳನ್ನು ಕಂಡಿದೆ. ಇಂತಹ ಸಹಸ್ರಾರು ವರ್ಷಗಳ ದೀರ್ಘ ಕಾಲದಲ್ಲಿ ರೂಪುಗೊಂಡಂತಹ ಮೌಲ್ಯಗಳು ಉತ್ತುಂಗಕ್ಕೆ ತಲುಪಿದ್ದು 20ನೇ ಶತಮಾನದಲ್ಲಿ. ಆದರೆ, ಇದೇ ಶತಮಾನದಲ್ಲಿ ಮಾನವನ ಕ್ರೌರ್ಯವೂ ಸಹ ಸ್ಫೋಟಗೊಂಡಿತು. ಹೀಗಾಗಿ ಈ ಶತಮಾನವನ್ನು ಮೌಲ್ಯಗಳ ವಿಕಸನ ಹಾಗೂ ವಿನಾಶ ಎರಡೂ ಸಂಕೇತಗಳನ್ನಾಗಿ ತಿಳಿಯಬಹುದು. ಗಾಂಧೀಜಿಯವರ ಪ್ರಭಾವ ಮರೆಯಾಗುತ್ತಾ ಬಂದಂತೆ ಮೌಲ್ಯರಹಿತ ಪರಿಸ್ಥಿತಿ ಎದುರಾಗುತ್ತದೆ ಎಂಬುದನ್ನು ಅರಿಯಬೇಕು ಎಂದರು.

ಸ್ವಾತಂತ್ರ್ಯ ಹೋರಾಟಗಾರ ಡಾ. ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಅಧಿಕಾರಿಶಾಹಿಗಳಿಂದ ಸಮಾಜಮುಖಿಯಾಗಿ ಕೆಲಸ ಮಾಡುವವರು ಹಾಗೂ ಜನಸಾಮಾನ್ಯರು ಕಡೆಗಣಿಸಲ್ಪಟ್ಟಿದ್ದಾರೆ. ಸಾಮಾನ್ಯಜನರಿಗೆ ಬೆಂಬಲವಿಲ್ಲದಂತಾಗಿದ್ದು, ಹೆಂಡ, ಜಾತಿ, ಹಣದ ಪ್ರಭಾವ ಬೀರುವವರಿಗೆ ಮಣೆ ಹಾಕಲಾಗುತ್ತಿದೆ. ಹೀಗಾಗಿ ಜನರು ಜಾಗೃತರಾಗಬೇಕಿದೆ ಎಂದು ಹೇಳಿದರು.

ವಿಮರ್ಶಕ ಬೈರಮಂಗಲ ರಾಮೇಗೌಡ ಮಾತನಾಡಿ, ಗಾಂಧಿ ಮುಂಚಿತವಾಗಿಯೇ ರಾಜಕಾರಣಿಗಳಿಂದ ಆಗಬಹುದಾದ ಆಪತ್ತುಗಳು ಮತ್ತು ಅವುಗಳ ನಿವಾರಣೋಪಾಯಗಳನ್ನು ತೋರಿಸಿಕೊಟ್ಟಿದ್ದಾರೆ. ಆದರೆ ಅದನ್ನು ಅಳವಡಿಸಿಕೊಳ್ಳುವ ಅರಿವು ಇಲ್ಲದಾಗಿದೆ. ಹೀಗಾಗಿ ಮತ್ತೆ ಮತ್ತೆ ಸಮಸ್ಯೆಗಳಿಗೆ ಸಿಲುಕುತ್ತಿದ್ದೇವೆ ಎಂದು ಹೇಳಿದರು.

ಹಿರಿಯ ವಿಮರ್ಶಕ ಪ್ರೊ.ಎಂ.ಎಚ್. ಕೃಷ್ಣಯ್ಯ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್, ಲೇಖಕ ಜಾಣಗೆರೆ ವೆಂಕಟರಾಮಯ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಪುಂಡಲೀಕ ಹಾಲಂಬಿ, ಶಿಕ್ಷಣ ತಜ್ಞ ಡಾ.ವೂಡೆ ಪಿ.ಕೃಷ್ಣ ಹಾಜರಿದ್ದರು.

ಮಂಗಳವಾರ, 9, ಫೆಬ್ರವರಿ, 2016, ಬೆಂಗಳೂರು, ಸಂಯುಕ್ತ ಕರ್ನಾಟಕ



ಜಾಣಗೆರೆ ವೆಂಕಟರಾಮಯ್ಯ ಅವರ 'ಮಹಾಯಾನ' ಕಾದಂಬರಿಯನ್ನು ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜೀ ಬಿಡುಗಡೆ ಮಾಡಿದರು.

ಗೂಂಡಾಗಿರಿ ಸಮಾಜ ನಿರ್ಮಾಣದ ಆತಂಕ: ದೊರೆಸ್ವಾಮಿ

- ಕನ್ನಡ ಸಂಘಟನೆಗಳು ಜಾಗೃತರಾಗಲಿ
- ಒಗ್ಗಟ್ಟಿನಿಂದ ಹೋರಾಡುವುದು ಅವಶ್ಯಕತೆ

ಬೆಂಗಳೂರು

ಪ್ರಸ್ತುತ ಸಂದರ್ಭವನ್ನು ಗಮನಿಸಿದರೆ ಗೂಂಡಾಗಿರಿ ಸಮಾಜ ನಿರ್ಮಾಣವಾಗುತ್ತದೆ ಎಂಬ ಭಯ ನನ್ನನ್ನು ಕಾಡುತ್ತಿದೆ ಎಂದು ಸ್ವಾತಂತ್ರ್ಯ ಹೋರಾಟಗಾರ ಡಾ. ಎಚ್.ಎಸ್.ದೊರೆಸ್ವಾಮಿ ಆತಂಕ ವ್ಯಕ್ತಪಡಿಸಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಜಾಣಗೆರೆ ಪತ್ರಿಕೆ ಪ್ರಕಾಶನ ಆಯೋಜಿಸಿದ್ದ ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ಅವರ 'ಮಹಾಯಾನ' ಕಾದಂಬರಿ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ರಾಜಕೀಯ ಬೆಳವಣಿಗೆಗಳು ಹಾಗೂ ಸನ್ನಿವೇಶಗಳು ರಾಜಕೀಯ ಪಕ್ಷಗಳು ರಾಜಕೀಯ ನಾಯಕರು ಮಾಡುತ್ತಿರುವ ಕೆಲಸಗಳನ್ನ ಗಮನಿಸಿದರೆ ಗೂಂಡಾಗಿರಿ ಸಮಾಜ ನಿರ್ಮಾಣವಾಗುತ್ತದೆ ಎಂಬ ಆತಂಕವಾಗುತ್ತಿದೆ. ಈ ಬಗ್ಗೆ ಕನ್ನಡಿಗರು ಹಾಗೂ ಕನ್ನಡ ಸಂಘಟನೆಗಳು ಜಾಗೃತರಾಗಬೇಕಾಗಿದೆ ಎಂದು ತಿಳಿಸಿದರು.

ಕೆಲವರು ಹುಚ್ಚಾಟದಿಂದ ಕನ್ನಡ ಸಂಘಟನೆಗಳ ಹೋರಾಟದ ದಿಕ್ಕು ಬದಲಾಗುತ್ತಿದೆ. ಎಲ್ಲಾ ಸಂಘಟನೆಗಳು ಒಗ್ಗಟ್ಟಿನಿಂದ ಹೋರಾಟ ಮಾಡುವ ಅವಶ್ಯಕತೆ ಇದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ಸಮಾಜ ಅತ್ಯಂತ ಕಷ್ಟ ಅನುಭವಿಸುವ ಬೇಕಾಗುತ್ತದೆ. ಕನ್ನಡಿಗರು ಈ ನಿಟ್ಟಿನಲ್ಲಿ ಕೆಲಸ ಮಾಡುವುದು ಅವಶ್ಯಕವಾಗದೆ ಎಂದರು.

ಇಂದಿನ ರಾಜಕೀಯ ಪರಿಸ್ಥಿತಿ ಅತ್ಯಂತ ಹೀನಾಯ ಸ್ಥಿತಿಗೆ ತಲುಪಿದೆ. ಒಬ್ಬರ ಕಾಲು ಒಬ್ಬರು ಎಳೆಯುತ್ತ ಅಧಿವೇಶನದಲ್ಲಿ ಚರ್ಚೆ ನಡೆಯುವುದಕ್ಕೆ ಬಿಡದೇ ಅಧಿವೇಶನಗಳನ್ನು ಹಾಳು ಮಾಡುತ್ತಿದ್ದಾರೆ. ಜನರಿಗೆ ಶಾಸನ ಸಭೆಯಲ್ಲಿ ಅಂಗೀಕರಿಸಿದ ಮಸೂದೆಗಳ ಬಗ್ಗೆ ಅರಿವು ಮೂಡಿಸುವ ಬದ್ಧತೆಯನ್ನು ಕಳೆದುಕೊಂಡಿದ್ದಾರೆ. ಹಣ, ಹೆಂಡ, ಮಾಂಸವನ್ನು ನೀಡಿದವರಿಗೆ ಜನನಾಯಕರಾಗುತ್ತಿದ್ದಾರೆ. ಯೋಗ್ಯತೆ ಕಳೆದು ಕೊಂಡ ರಾಜಕಾರಣಿಗಳು ಕೋಟ್ಯಧಿಪತಿಗಳಾಗುತ್ತಿದ್ದಾರೆ. ಜನರಿಗಾಗಿ ಕೆಲಸ ಮಾಡುತ್ತಿರುವವರನ್ನು ಗುರುತಿಸುತ್ತಿಲ್ಲ ಎಂದರು.

> “ಪೇಜಾವರ ಶ್ರೀಗಳು ಏನು ಮಾತನಾಡುತ್ತಾರೆ ಎಂಬುದೇ ಅವರಿಗೆ ಗೊತ್ತಿಲ್ಲ. ಒಂದು ಕಡೆ ಹಿಂದುಳಿದ ವರ್ಗದ ಬೀದಿಗಳಲ್ಲಿ ಪಾದಯಾತ್ರೆ ಮಾಡುತ್ತಾರೆ. ಇನ್ನೊಂದು ಕಡೆ ಸಹಪಂಕ್ತಿ ಭೋಜನ ಬೇಡ ಎನ್ನುತ್ತಾರೆ.
>
> -ಪುಂಡಲೀಕ ಹಾಲಂಬಿ.

ನಿಡುಮಾಡಿ ಮಠದ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಮಾತನಾಡಿ, ಸಾವಿರಾರು ವರ್ಷಗಳಿಂದ ರೂಪಗೊಂಡಿರುವ ಮೌಲ್ಯಗಳು ನಾಶವಾಗುತ್ತಿವೆ. 20ನೇ ಶತಮಾನ ಅತ್ಯಂತ ಕ್ರೂರವಾದ ಶತಮಾನವಾಗಿದೆ. 20ನೇ ಶತಮಾನದಲ್ಲಿ ವಿಕಾಸನವು ಇದೆ. ವಿರಸನವು ಇದೆ. ಈ ಶತಮಾನದಲ್ಲಿ ಗಾಂಧೀಜಿ ಪ್ರಭಾವ ಕಡಿಮೆಯಾಗುತ್ತಿದಂತೆ ಅವರ ಮೌಲ್ಯಗಳು ಪತನವಾಗುತ್ತಿವೆ. ಶಾಂತಿ ಪ್ರೀತಿಯನ್ನು ನೀಡುವ ಸ್ಥಳಗಳು ದ್ವೇಷವನ್ನು ಬೆಳೆಸುವ ತಾಣಗಳಾಗಿವೆ. ನೈತಿಕ ಮೌಲ್ಯಗಳು ಬೆಳೆಸಬೇಕಾದ ಸ್ಥಳಗಳು ಅನೈತಿಕತೆಯನ್ನು ಬೆಳೆಸುವ ತಾಣಗಳಾಗಿವೆ. ಈ ಕಳವಳಕಾರಿ ಪರಿವರ್ತನೆಗೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಬೆಳವಣಿಗೆಗಳೇ ಕಾರಣ ಎಂದು ಅಭಿಪ್ರಾಯಪಟ್ಟರು.

ಜನಪದ ಗಾಯಕ ಬಂಡ್ಲಹಳ್ಳಿ ವಿಜಯಕುಮಾರ್ ಹಾಗೂ ರೈತ ಬಂಧು ಸಿದ್ದಪ್ಪ ಅವರನ್ನು ಅಭಿನಂದಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಪುಂಡಲೀಕ ಹಾಲಂಬಿ, ವಿಮರ್ಶಕರಾದ ಪ್ರೊ.ಎಂ.ಎಚ್.ಕೃಷ್ಣಯ್ಯ, ಡಾ.ಬೈರಮಂಗಲ ರಾಮೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್, ಶಿಕ್ಷಣ ತಜ್ಞ ಡಾ.ವೂಡೆ ಪಿ.ಕೃಷ್ಣ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ VK

ಮಂಗಳವಾರ,9 ಫೆಬ್ರವರಿ 2016

‘ಗೂಂಡಾರಾಜ್ಯ ನಿರ್ಮಾಣದ ಆತಂಕ ’

■ ವಿಕ ಸುದ್ದಿಲೋಕ ಬೆಂಗಳೂರು

ಸದ್ಯಕ್ಕೆ ನಮ್ಮ ದೇಶ ಮತ್ತು ರಾಜ್ಯಗಳಲ್ಲಿ ನಡೆಯುತ್ತಿರುವ ರಾಜಕೀಯ ಘಟನಾವಳಿಗಳನ್ನು ಗಮನಿಸಿದರೆ ಗೂಂಡಾರಾಜ್ಯ ನಿರ್ಮಾಣವಾಗುತ್ತಿದೆ ಎನ್ನುವ ಆತಂಕ ಕಾಡುತ್ತಿದೆ. ಈ ಬಗ್ಗೆ ಕನ್ನಡಿಗರು ಮತ್ತು ಕನ್ನಡ ಸಂಘಟನೆಗಳು ಎಚ್ಚರದಿಂದ ಇರಬೇಕಾಗಿದೆ ಎಂದು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಹೇಳಿದ್ದಾರೆ.

ಅವರು ಜಾಣಗೆರೆ ವೆಂಕಟರಾಮಯ್ಯನವರ ‘ಮಹಾಯಾನ’ ಕಾದಂಬರಿ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಸೋಮವಾರ ಮಾತನಾಡಿದರು.

‘‘ಕೆಲವರು ಸಾರ್ವಜನಿಕ ಸೇವೆಯ ಹೆಸರಿನಲ್ಲಿ ಹುಚ್ಚಾಟ ಆಡುತ್ತಿದ್ದಾರೆ. ಇಂಥವರ ವಿರುದ್ಧವೂ ಪ್ರಾಮಾಣಿಕ ಸಂಘಟನೆಗಳು ಒಗ್ಗಟ್ಟಿನಿಂದ ಹೋರಾಟ ಮಾಡುವ ಅವಶ್ಯಕತೆ ಇದೆ. ಇಲ್ಲದಿದ್ದರೆ ಭವಿಷ್ಯ ಭೀಕರವಾಗಿರಲಿದೆ. ನಮ್ಮ ರಾಜಕೀಯ ವ್ಯವಸ್ಥೆಯಂತೂ ಪಾತಾಳ ತಲುಪಿದೆ,’’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಮಾತನಾಡಿ ‘‘ಇಂದು ಶಾಂತಿ-ಅಹಿಂಸೆಗಳನ್ನು ಬೋಧಿಸಬೇಕಾದ ತಾಣಗಳು ಪ್ರಕ್ಷುಬ್ಧತೆಯ ಕೇಂದ್ರಗಳಾಗಿವೆ. 20ನೇ ಶತಮಾನದ ಕೊನೆಯ ಭಾಗದಿಂದ ಈಚೆಗೆ ಸಮಾಜದಲ್ಲಿ ಯಾರೊಬ್ಬರೂ ಒಳ್ಳೆಯ ಮಾದರಿಯಾಗಿ ಕಾಣುತ್ತಲೇ ಇಲ್ಲ, ಈ ಬಗ್ಗೆ ಇಡೀ ಸಮಾಜ ಅವಲೋಕನ ಮಾಡಿಕೊಳ್ಳಬೇಕಾಗಿದೆ’’ ಎಂದರು.

ಇಡೀ ಸಮಾಜದಲ್ಲಿ ಇಂದು ನೂರಾರು ಸಮಸ್ಯೆಗಳು ತಾಂಡವವಾಡುತ್ತಿವೆ. ಇದಕ್ಕೆ ನಾವು ತರ್ಕಬದ್ಧವಾಗಿ ಯಾವ್ಯಾವುದೋ ಕಾರಣಗಳನ್ನು ತೋರಿಸುತ್ತಿದ್ದೇವೆ. ಆದರೆ ನೈತಿಕ ಉತ್ಕರ್ಷವನ್ನು ಮರೆತಿರುವುದೇ ನಮ್ಮ ಸಮಸ್ಯೆಗಳಿಗೆಲ್ಲ ಮೂಲಕಾರಣ ಎಂದು ಅವರು ಹೇಳಿದರು.

ವಿಮರ್ಶಕ ಬೈರಮಂಗಲ ರಾಮೇಗೌಡ ಮಾತನಾಡಿ ‘‘ಮಹಾತ್ಮ ಗಾಂಧೀಜಿಯವರನ್ನು ನಮ್ಮ ದೇಶದ ಶಿಕ್ಷಣ ಕ್ರಮದಿಂದ ಕೂಡ ಕೈಬಿಡಲಾಗಿದೆ. ಜಾಣಗೆರೆಯವರ ಕಾದಂಬರಿಯಲ್ಲಿ ಸ್ವಾತಂತ್ರ್ಯದ ನಂತರದ ಭಾರತದ ಅವಸಾನವನ್ನು ಸಾಂಕೇತಿಕವಾಗಿ ಹೇಳಲಾಗಿದೆ. ಇಂದು ದೇಶಕ್ಕೆ ಗಾಂಧೀವಾದಿಗಳಿಗಿಂತ ಹೆಚ್ಚಾಗಿ ಗಾಂಧಿ ಅನುಯಾಯಿಗಳು ಬೇಕಾಗಿದ್ದಾರೆ’’ ಎಂದರು.

ಕಾರ್ಯಕ್ರಮದಲ್ಲಿ ಕಸಾಪ ಮಾಜಿ ಅಧ್ಯಕ್ಷ ಪುಂಡಲೀಕ ಹಾಲಂಬಿ, ಪ್ರೊ.ಎಂ.ಎಚ್. ಕೃಷ್ಣಯ್ಯ, ಪೂಡೇ ಪಿ ಕೃಷ್ಣ ಬಂಜಗೆರೆ ಜಯಪ್ರಕಾಶ್ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಗಾಯಕ ಬಂಡ್ಲಹಳ್ಳಿ ವಿಜಯಕುಮಾರ್ ಮತ್ತು ಕೃಷಿ ಪ್ರಾಧ್ಯಾಪಕ ಸಿದ್ದಪ್ಪ ಅವರನ್ನು ಸನ್ಮಾನಿಸಲಾಯಿತು.



ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಜಾಣಗೆರೆ ವೆಂಕಟರಾಮಯ್ಯನವರ ಕಾದಂಬರಿಯನ್ನು ಬಿಡುಗಡೆ ಮಾಡಲಾಯಿತು. ಎಚ್.ಎಸ್. ದೊರೆಸ್ವಾಮಿ, ಎಂ.ಎಚ್. ಕೃಷ್ಣಯ್ಯ, ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಬೈರಮಂಗಲ ರಾಮೇಗೌಡ ಮುಂತಾದವರಿದ್ದರು.

ಕನ್ನಡಪ್ರಭ
ಮಂಗಳವಾರ 9.2.2016

ಜನಹಿತ ಮರೆತ ರಾಜಕಾರಣಿಗಳು

ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ ಬೇಸರ



ಬೆಂಗಳೂರಿನಲ್ಲಿ ಸೋಮವಾರ ಜಾಣಗೆರೆ ಪತ್ರಿಕೆ ಪ್ರಕಾಶನ ಹೊರತಂದಿರುವ 'ಮಹಾಯಾನ' ಬೃಹತ್ ಸಾಮಾಜಿಕ ಕಾದಂಬರಿಯನ್ನು ಸ್ವಾತಂತ್ರ್ಯ ಹೋರಾಟಗಾರ ಡಾ.ಎಚ್.ಎಸ್.ದೊರೆಸ್ವಾಮಿ ಲೋಕಾರ್ಪಣೆಗೊಳಿಸಿದರು. ವಿಮರ್ಶಕ ಪ್ರೊ.ಎಂ.ಎಚ್.ಕೃಷ್ಣಯ್ಯ, ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಲೇಖಕ ಜಾಣಗೆರೆ ವೆಂಕಟರಾಮಯ್ಯ ಹಾಜರಿದ್ದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಇಂದು ಸಮಾಜಮುಖಿಯಾಗಿ ಕೆಲಸ ನಿರ್ವಹಿಸುವವರು, ಜನಸಾಮಾನ್ಯರು ಅಧಿಕಾರಿಶಾಹಿಗಳಿಂದ ಕಡೆಗಣಿಸಲ್ಪಟ್ಟಿದ್ದಾರೆ ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಎಚ್.ಎಸ್. ದೊರೆಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಜಾಣಗೆರೆ ಪತ್ರಿಕೆ ಪ್ರಕಾಶನ ಹೊರತಂದಿರುವ ಮಹಾಯಾನ ಸಾಮಾಜಿಕ ಕಾದಂಬರಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ರಾಜ್ಯದ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಜನರಿಗೆ ತಿಳುವಳಿಕೆ ಮೂಡಿಸಬೇಕೆಂಬ ವಿವೇಚನೆ ರಾಜಕೀಯ ವ್ಯಕ್ತಿಗಳಿಗಿಲ್ಲ. ಜನಪ್ರತಿನಿಧಿಗಳು ದಿನದಿಂದ ದಿನಕ್ಕೆ ಕೋಟ್ಯಾಧಿಪತಿಗಳಾಗುತ್ತಿದ್ದಾರೆ. ಹೆಂಡ, ಜಾತಿ, ಹಣದ ಪ್ರಭಾವ ಬೀರುವವರಿಗೆ ಮಣೆ ಹಾಕಲಾಗುತ್ತಿದೆ. ಬಹುಶಃ ಮುಂದೊಂದು ದಿನ ಗೂಂಡಾ ರಾಜ್ಯವಾಗುವ ಭಯ ನನ್ನನ್ನು ಕಾಡುತ್ತಿದೆ ಎಂದು ಹೇಳಿದರು.

ಜನರು ಜಾಗೃತರಾಗಿ ಅನ್ಯಾಯಗಳನ್ನು ಬಡಿದೋಡಿಸುವ ನಿಟ್ಟಿನಲ್ಲಿ ಹೋರಾಟಕ್ಕಿಳಿಯಬೇಕು. ವಿಫಲರಾದರೆ ನಾವು ಒಗ್ಗಟ್ಟಾಗಿ ಕಾರ್ಯನಿರ್ವಹಿಸುವ ಯೋಗ್ಯತೆ ಕಳೆದುಕೊಂಡು ಹಿಂದೆಬಿದ್ದಿದ್ದೇವೆ ಎಂದು ಹೇಳಿದರು.

ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಮಾತನಾಡಿ, ಸಹಸ್ರಾರು ವರ್ಷಗಳ ಕಾಲದಲ್ಲಿ ರೂಪುಗೊಂಡಂತಹ ಮೌಲ್ಯಗಳು ಉತ್ಕರ್ಷಕ್ಕೇರಲು ಹಿಡಿದು 20ನೇ ಶತಮಾನದಲ್ಲಿ ಇದ್ದು ಮಾನವನ ಕ್ರೌರ್ಯ ಸ್ಫೋಟಗೊಂಡ ಕಾಲಘಟ್ಟ. ಹೀಗಾಗಿ, ಈ ಶತಮಾನ ವಿಕಸನ ಮೌಲ್ಯಗಳ ಹಾಗೂ ವಿನಾಶಕಾರಿ ಸಂಕೇತ ಎಂದರು.

ವಿಮರ್ಶಕ ಬೈರಮಂಗಲ ರಾಮೇಗೌಡ ಮಾತನಾಡಿ, ರಾಜಕಾರಣಿಗಳಿಂದ ಆಗಬಹುದಾದ ಆಪತ್ತುಗಳು ಮತ್ತು ಅವುಗಳ ನಿವಾರಣೋಪಾಯಗಳನ್ನು ಗಾಂಧಿ ಮುಂಚಿತವಾಗಿಯೇ ತೋರಿಸಿಕೊಟ್ಟಿದ್ದಾರೆ. ಆದರೆ ಅದನ್ನು ಅಳವಡಿಸಿಕೊಳ್ಳುವ ಅರಿವು ಇಲ್ಲದಾಗಿದೆ. ನಾವಿಂದು ಮತ್ತೆ ಮತ್ತೆ ಸಮಸ್ಯೆಗಳಿಗೆ ಸಿಲುಕುತ್ತಿದ್ದೇವೆ. ಇಂಥ ಸಂಕಟಗಳಿಂದ ಪಾರಾಗಬೇಕಾದರೆ ಗಾಂಧಿ ಮಾರ್ಗ ಅವಶ್ಯವೆಂದು ಈ ಕಾದಂಬರಿ ಸೂಚಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ವಿಮರ್ಶಕ ಪ್ರೊ.ಎಂ.ಎಚ್.ಕೃಷ್ಣಯ್ಯ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್, ಲೇಖಕ ಜಾಣಗೆರೆ ವೆಂಕಟರಾಮಯ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಪುಂಡಲೀಕ ಹಾಲಂಬಿ, ಶಿಕ್ಷಣ ತಜ್ಞ ಡಾ.ವೂಡೆ ಪಿ.ಕೃಷ್ಣ ಇದ್ದರು.

ವಿಜಯ ಕರ್ನಾಟಕ
24 ಜನವರಿ 2016

ವೂಡಿ ಪಿ ಕೃಷ್ಣಗೆ ಫೆಲೋಶಿಪ್

ಕೆಂಗೇರಿ ಉಪನಗರ: ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೂಡಿ ಪಿ ಕೃಷ್ಣ ರಿಗೆ ಕೆನಡಾದ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿಯ ಫೆಲೋ ಶಿಪ್ ದೊರೆತಿದೆ. ಈ ಹಿಂದೆ ಟಾಟಾ ಸಮೂಹ



ಸಂಸ್ಥೆಗಳ ಮುಖ್ಯಸ್ಥ ರತನ್ ಟಾಟಾ ಹಾಗು ಕೇಂದ್ರ ಇಂಧನ ಸಚಿವಾಲಯದ ಕಾರ್ಯದರ್ಶಿ ಆರ್‌ವಿ ಸಾಹಿ ಅವರಿಗೆ ಈ ಫೆಲೋಶಿಪ್ ಲಭಿಸಿತ್ತು. ಉತ್ಪಾದನೆ ಹೆಚ್ಚಳದ ಮೂಲಕ ಜನರ ಜೀವನಮಟ್ಟ ಸುಧಾರಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸಿದ ಸಾಧಕರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

ಕ್ರಿಸಾಲಿಸ್ ಡೇ ಆಚರಣೆ

ಕೆಂಗೇರಿ ಉಪನಗರ: ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೂಡಿ ಪಿ ಕೃಷ್ಣರಿಗೆ ಕೆನಡಾದ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿಯ ಫೆಲೋಶಿಪ್ ದೊರೆತಿದೆ. ಈ ಹಿಂದೆ ಟಾಟಾ ಸಮೂಹ ಸಂಸ್ಥೆಗಳ ಮುಖ್ಯಸ್ಥ ರತನ್ ಟಾಟಾ ಹಾಗು ಕೇಂದ್ರ ಇಂಧನ ಸಚಿವಾಲಯದ ಕಾರ್ಯದರ್ಶಿ ಆರ್‌ವಿ ಸಾಹಿ ಅವರಿಗೆ ಈ ಫೆಲೋಶಿಪ್ ಲಭಿಸಿತ್ತು. ಉತ್ಪಾದನೆ ಹೆಚ್ಚಳದ ಮೂಲಕ ಜನರ ಜೀವನಮಟ್ಟ ಸುಧಾರಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸಿದ ಸಾಧಕರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.


ವಿವೇಕೋತ್ಸಾಹದಿಂದ ಮಾತ್ರ ಜೀವನದ ಯಶಸ್ಸು

ತುಮಕೂರು

ಮಾನವನ ಬದುಕಿನ ವೈಪರಿತ್ಯವೆಂದರೆ ಅವನಲ್ಲಿ ಅಪಾರ ಉತ್ಸಾಹವಿದ್ದಾಗ ವಿವೇಕದ ಕೊರತೆ ಇರುತ್ತದೆ, ಅವನು ವಿವೇಕವನ್ನು ಸಂಪಾದಿಸುವ ವೇಳೆಗೆ ಉತ್ಸಾಹವು ಕಡಿಮೆ ಯಾಗಿರುತ್ತದೆ. ಆದ್ದರಿಂದ ಉತ್ಸಾಹದ ಜೊತೆ ಜೊತೆಗೆ ಮಾನವನು ವಿವೇಕಿಯಾದಾಗ ಮಾತ್ರವೇ ಜೀವನದ ಯಶಸ್ಸು ಸಾಧ್ಯ ಎಂದು ಖ್ಯಾತ ಶಿಕ್ಷಣತಜ್ಞರಾದ ಡಾ|| ವೂಡೆ. ಪಿ. ಕೃಷ್ಣರವರು ಅಭಿಪ್ರಾಯಪಟ್ಟರು. ಅವರು ನಗರದ ರಾಮಕೃಷ್ಣ-ವಿವೇಕಾನಂದ ಆಶ್ರಮದ 23ನೇ ವಾರ್ಷಿಕೋತ್ಸವದ ಅಂಗವಾಗಿ ನೆರವೇರಿದ ವಿವೇಕ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅವರು ಮುಂದುವರಿದು ಮಾತನಾಡಿ, ಮಾನವನ ಯೋಗ್ಯತೆಯನ್ನು ಅವನ ಆಲೋಚನೆಗಳು ನಿರ್ಧರಿಸುವುದರಿಂದ ಅವನು ಉನ್ನತ ಆಲೋಚನೆಗಳನ್ನು ತನ್ನದಾಗಿಸಿಕೊಳ್ಳುವತ್ತ ಶ್ರಮಿಸಬೇಕು. ಸಕಾರಾತ್ಮಕ ಮತ್ತು ಧನಾತ್ಮಕ ಚಿಂತನೆಗಳು ಅವನ ವ್ಯಕ್ತಿತ್ವವನ್ನು ಮೇರುಮಟ್ಟಕ್ಕೆ ಒಯ್ಯುತ್ತವೆ. ಆದ್ದರಿಂದ ವಿದ್ಯಾರ್ಥಿ ಜೀವನದಲ್ಲಿ ಬದುಕಿನ ಯಶಸ್ಸಿನೊಂದಿಗೆ ಸಾರ್ಥಕತೆಯ ಕಡೆಗೂ ಗಮನವೀಯಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶಾಸಕ ಡಾ|| ರಫೀಕ್ ಅಹ್ಮದ್‌ರವರು ಮಾತನಾಡಿ, ಧಾರ್ಮಿಕ ಸಂಸ್ಥೆಯಾದ ರಾಮಕೃಷ್ಣಾಶ್ರಮವು ಸಮಾಜದ ಎಲ್ಲ ಅಗತ್ಯತೆಗಳನ್ನು ಗಮನದಲ್ಲಿರಿಸಿಕೊಂಡು ತನ್ನ ಕಾರ್ಯಕ್ರಮಗಳನ್ನು ಯೋಜಿಸುತ್ತಾ ಕ್ರಿಯಾಶೀಲವಾಗಿ ಮುನ್ನಡೆಯುತ್ತಿದೆ. ಸಂಸ್ಥೆಯು ಕೇವಲ ಜಾತಿ ಹಾಗೂ ಮತಕೇಂದ್ರಿತವಾಗದೆ ವ್ಯಕ್ತಿಕೇಂದ್ರಿತವಾಗಿ ಶ್ರಮಿಸುತ್ತಿರುವುದು ಹರ್ಷದಾಯಕ ಸಂಗತಿ. ಆಶ್ರಮವು ಯುವಜನರ ಮತ್ತು ಯುವಮನಸ್ಸುಗಳ ತಾಣವಾಗಿರುವುದು ಸಮಾಜದ ಪುಣ್ಯವಿಶೇಷವೇ ಸರಿ. ಜಗತ್ತಿನ ಯುವಜನತೆಗೆ ಯೋಗ್ಯ ಮಾದರಿಯೆಂದೆನಿಸಿರುವ ಸ್ವಾಮಿ ವಿವೇಕಾನಂದರ



ಕುರಿತಾದ ಆಶ್ರಮದ ಚಟುವಟಿಕೆಗಳಿಗೆ ಪೂರ್ಣ ಸಹಕಾರ ನೀಡುತ್ತೇನೆ, ಎಂದರು.

ಆಶೀರ್ವಚನ ನೀಡಿದ ಸ್ವಾಮಿ ವೀರೇಶಾನಂದ ಸರಸ್ವತಿಯವರು, ವಿದ್ಯಾರ್ಥಿ ಬದುಕಿನಲ್ಲಿ ಪ್ರಾಮಾಣಿಕತೆಯು ವಿಶೇಷವಾಗಿ ಇರುತ್ತದೆ. ಈ ಹಂತದಲ್ಲಿ ಆಲೋಚಿಸುವ ಮತ್ತು ಪ್ರಶ್ನಿಸುವ ಪ್ರವೃತ್ತಿ ಅತ್ಯಗತ್ಯ. ವ್ಯಕ್ತಿತ್ವಕ್ಕೆ ಶಕ್ತಿ ದೊರಕುವುದೇ ಉನ್ನತ ಆಲೋಚನೆಗಳ ಮೂಲಕ. ಪ್ರಶ್ನಿಸದೆ ಇರುವಾಗ ಜೀವನ ನಿಂತ ನೀರಾಗುತ್ತದೆ ಮತ್ತು ಅದೊಂದು ಸಾಂಕ್ರಾಮಿಕ ಪೀಡೆಗೆ ಕಾರಣವಾಗುತ್ತದೆ. ಪ್ರಶ್ನಿಸುವ ಪ್ರವೃತ್ತಿಯಿಂದ ಬದುಕಿಗೆ ಚಲನಶೀಲತೆ ಮೂಡುತ್ತದೆ ಮತ್ತು ಈ ಪ್ರವೃತ್ತಿಯು ವಿಕಾಸದ ಸೋಪಾನದತ್ತ ನಮ್ಮನ್ನು ಕೊಂಡೊಯ್ಯುತ್ತದೆ ಎಂದರು. ಕಾರ್ಯಕ್ರಮದಲ್ಲಿ ಸ್ವಾಮಿ ಧೀರಾನಂದಜೀ ಸ್ವಾಗತಿಸಿದರು ಮತ್ತು ಟಿ. ಸುನಿಲ್ ವಂದಿಸಿದರು.

ವಿವೇಕ ಉತ್ಸವ ಸ್ಪರ್ಧಾ ವಿಜೇತರು: ನಗರದ ರಾಮಕೃಷ್ಣ-ವಿವೇಕಾನಂದ ಆಶ್ರಮದ 23ನೇ ವಾರ್ಷಿಕೋತ್ಸವದ ಅಂಗವಾಗಿ ತುಮಕೂರು ಜಿಲ್ಲೆಯ ಜಿಲ್ಲಾಮಟ್ಟದ ಕಾಲೇಜು ವಿಭಾಗಕ್ಕೆ, ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ನಿರ್ಮಾಣ ಬೋಧನೆಗಳನ್ನು ಮರೆತಿರುವುದೇ ಇಂದಿನ ದುಃಸ್ಥಿತಿಗೆ ಕಾರಣ ಎಂಬ ವಿಷಯಾಧಾರಿತ ಭಾಷಣ ಸ್ಪರ್ಧೆಯಲ್ಲಿ ಬಹುಮಾನ ವಿಜೇತರಾದವರ ವಿವರಗಳು ಇಂತಿವೆ:

ಪ್ರಥಮ ಬಹುಮಾನ:ಬಿ. ಚೈತ್ರ (ದ್ವಿತೀಯ ಬಿ.ಎ.), ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು, ದ್ವಿತೀಯ ಬಹುಮಾನ:ಎಂ. ಎಚ್. ಮಂಜುಶ್ರೀ (ತೃತೀಯ ಬಿ.ಎಸ್. ಸಿ.), ಕಲ್ಪತರು ಪದವಿ ವಿಜ್ಞಾನ ಕಾಲೇಜು, ತಿಪಟೂರು. ತೃತೀಯ ಬಹುಮಾನ:ಎಚ್. ಎನ್. ನಾಗೇಂದ್ರ (ದ್ವಿತೀಯ ಪಿ.ಯು.), ಶ್ರೀ ಕೆ. ಮಲ್ಲಣ್ಣ ಸ್ಮಾರಕ ರಂಗನಾಥ ಕಿರಿಯ ಕಾಲೇಜು, ಶಿರಾ, ಪರ್ಯಾಯ ಪಾರಿತೋಷಕ:ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು

ಪ್ರೌಢಶಾಲಾ ವಿಭಾಗದಲ್ಲಿ ವಿದ್ಯಾರ್ಥಿಯ ವ್ಯಕ್ತಿತ್ವ ಬೆಳವಣಿಗೆಗೆ ಶಾಲೆಗಿಂತ ಕುಟುಂಬದ ಹೊಣೆಗಾರಿಕೆ ಅಧಿಕ ಎಂಬ ವಿಷಯಾಧಾರಿತ ಜಿಲ್ಲಾಮಟ್ಟದ ಕನ್ನಡ ಚರ್ಚಾಸ್ಪರ್ಧೆಯಲ್ಲಿ ಬಹುಮಾನ ವಿಜೇತರಾದವರ ವಿವರಗಳು ಇಂತಿವೆ: ಪ್ರಥಮ ಬಹುಮಾನ:ಸುಶ್ರಿತ ಭಾರದ್ವಾಜ್, (9ನೇ ತರಗತಿ), ಮಾರುತಿ ವಿದ್ಯಾಕೇಂದ್ರ, ಬೆಳಗುಂಬ, ತುಮಕೂರು, ದ್ವಿತೀಯ ಬಹುಮಾನ:ಪ್ರಿಯಾಂಕ ಎಸ್. (10ನೇ ತರಗತಿ), ಕಲ್ಪತರು ಸೆಂಟ್ರಲ್ ಸ್ಕೂಲ್, ತಿಪಟೂರು, ತೃತೀಯ ಬಹುಮಾನ: ಶಾಂಭವಿ (8ನೇ ತರಗತಿ), ಜೆ.ಕೆ. ಮೆಮೊರಿಯಲ್ ಸೆಂಟ್ರಲ್ ಸ್ಕೂಲ್, ಕೊರಟಗೆರೆ, ಪರ್ಯಾಯ ಪಾರಿತೋಷಕ: ಮಾರುತಿ ವಿದ್ಯಾಕೇಂದ್ರ, ಬೆಳಗುಂಬ, ತುಮಕೂರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಶನಿವಾರ
23 ಜನವರಿ 2016
23 JANUARY 2016

ವೂಡೇ ಪಿ. ಕೃಷ್ಣಗೆ ವ್ಯಾಪ್ಸ್ ಪ್ರಶಸ್ತಿ

ಬೆಂಗಳೂರು: ಶೇಷಾದ್ರಿಪುರಂ ವಿದ್ಯಾಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅವರು ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿ ಫೆಲೋಷಿಪ್(ಡಬ್ಲ್ಯುಎಪಿಎಸ್) ಪ್ರಶಸ್ತಿಗೆ ಭಾಜನರಾಗಿದ್ದಾರೆ. ಉತ್ಪಾದನಾ ಹೆಚ್ಚಳದ ಮೂಲಕ ವಿಶ್ವಾದ್ಯಂತ ಜನರ ಜೀವನ ಮಟ್ಟ ಉತ್ತಮಪಡಿಸಲು ಶ್ರಮಿಸಿದ ಗಣ್ಯರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ವ್ಯಾಪ್ಸ್ ಫೆಲೋಷಿಪ್ ಈ ಹಿಂದೆ ಟಾಟಾ ಸಮೂಹ ಸಂಸ್ಥೆ ಅಧ್ಯಕ್ಷ ರತನ್ ಟಾಟಾ, ಕೇಂದ್ರ ಇಂಧನ ಇಲಾಖಾ ಕಾರ್ಯದರ್ಶಿ ಆರ್.ವಿ. ಸಾಹಿಗೆ ಲಭಿಸಿದೆ.



2

ಉದಯವಾಣಿ ಬೆಂಗಳೂರು

ಶುಕ್ರವಾರ | ಜನವರಿ | 22 | 2016

ಮಿನಿ ಸುದ್ದಿ

ವೂಡೇ ಪಿ. ಕೃಷ್ಣಗೆ ಕೆನಡಾ ಫೆಲೋಶಿಪ್



ಬೆಂಗಳೂರು: ಶೇಷಾದ್ರಿಪುರಂ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅವರಿಗೆ ಕೆನಡಾದ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿಯ (ಡಬ್ಲ್ಯೂಎಪಿಎಸ್) ಫೆಲೋಶಿಪ್ ಲಭಿಸಿದೆ. ಉತ್ಪಾದನಾ ಹೆಚ್ಚಳದ ಮೂಲಕ ವಿಶ್ವಾದ್ಯಂತ ಜನರ ಜೀವನಮಟ್ಟ ಉತ್ತಮಪಡಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸುವ ಸಾಧಕರಿಗೆ ಈ ಫೆಲೋಶಿಪ್ ಪ್ರಶಸ್ತಿ ನೀಡಲಾಗುತ್ತದೆ. ಈ ಹಿಂದೆ ಟಾಟಾ ಸಮೂಹ ಸಂಸ್ಥೆಗಳ ಮುಖ್ಯಸ್ಥ ರತನ್ ಟಾಟಾ ಹಾಗೂ ಕೇಂದ್ರ ಇಂಧನ ಸಚಿವಾಲಯದ ಕಾರ್ಯದರ್ಶಿ ಆರ್.ವಿ. ಸಾಹಿ ಅವರಿಗೆ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿಯ ಫೆಲೋಶಿಪ್ ಲಭಿಸಿತ್ತು.

ಪ್ರಜಾವಾಣಿ ತುಮಕೂರು ಸೋಮವಾರ • ಜನವರಿ 18, 2016



ತುರುವೇಕೆರೆಯಲ್ಲಿ ಭಾನುವಾರ ನಡೆದ 'ಯುವಜನರಿಗೆ ಸ್ವಾಮಿ ವಿವೇಕಾನಂದ ಮತ್ತು ಗಾಂಧೀಜಿಯವರ ಸಂದೇಶ ಹಾಗೂ ಶಿಕ್ಷಕರ ಪಾತ್ರ' ಕಾರ್ಯಕ್ರಮದಲ್ಲಿ ತುರುವೇಕೆರೆಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ಕಿದ್ವಾಯಿ ಸ್ಮಾರಕ ಸಂಸ್ಥೆಯ ನಿರ್ದೇಶಕ ಡಾ.ಕೆ.ಬಿ.ಲಿಂಗೇಗೌಡ ಅವರನ್ನು ಸನ್ಮಾನಿಸಲಾಯಿತು.

ಮೈ ಬಣ್ಣ ಆಧರಿಸಿ ಶೋಷಣೆ

ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವದ ಅಣಕ: ಕೃಷ್ಣೇಗೌಡ

ತುರುವೇಕೆರೆ: ನಮ್ಮ ದೇಶದಲ್ಲಿ ಮೈ ಬಣ್ಣ ಆಧರಿಸಿ ಶೋಷಣೆ ನಡೆಸುತ್ತಿರುವುದು ಪ್ರಜಾಪ್ರಭುತ್ವದ ಅಣಕದಂತಿದೆ ಎಂದು ಹಾಸ್ಯ ಲೇಖಕ ಪ್ರೊ.ಎಂ. ಕೃಷ್ಣೇಗೌಡ ಹೇಳಿದರು.

ಪಟ್ಟಣದ ಕೆ.ಹಿರಣ್ಣಯ್ಯ ಬಯಲು ರಂಗ ಮಂದಿರದಲ್ಲಿ ಭಾನುವಾರ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಎಂ.ಎಸ್. ಸಂದೀಪ್ ಟ್ರಸ್ಟ್ ಹಾಗೂ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ನಡೆದ 'ಎಂ.ಎಸ್.ಸಂದೀಪ್ ದತ್ತಿ ಕಾರ್ಯಕ್ರಮ'ದಲ್ಲಿ 'ಯುವಜನರಿಗೆ ಸ್ವಾಮಿ ವಿವೇಕಾನಂದ ಮತ್ತು ಗಾಂಧೀಜಿ ಸಂದೇಶ ಹಾಗೂ ಶಿಕ್ಷಕರ ಪಾತ್ರ' ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಭ್ರಷ್ಟ ವ್ಯವಸ್ಥೆಯ ವಿಷ ವರ್ತುಲದ ಪ್ರಭಾವವು ಮಕ್ಕಳ ಮನಸ್ಸಿನ ಆಂತರ್ಯದ ಆಳದಲ್ಲಿ ಗಾಢವಾಗಿ ಬೇರಿಳಿದಿದೆ. ಇದರಿಂದ ಶಿಕ್ಷಣ ಮತ್ತು ಸಾಮಾಜಿಕ ಸ್ವಾಸ್ಥ್ಯ ಹಾಳಾಗುತ್ತಿದೆ. ಬದುಕಿನ ಎಲ್ಲ ಸವಾಲುಗಳನ್ನು ಮೀರಿ ನಿಲ್ಲುವ ಮಾನಸಿಕ ಮತ್ತು ದೈಹಿಕ ಶಕ್ತಿಯನ್ನು ಮಕ್ಕಳಲ್ಲಿ ತುಂಬ ಬೇಕಾದ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು.

ಗಾಂಧೀಜಿ ತಮ್ಮೊಳಗಿನ ಅಸಮಾಧಾನ, ಸಂಕಟ, ವೇದನೆ, ಹತಾಶೆಗಳನ್ನು ಅನುಭವಿಸುತ್ತಲೇ ಅಸಾಧರಣ ಚಳವಳಿ ರೂಪಿಸಿದರು. ಅವರ ಹೋರಾಟದ ಪಥ ನಮಗೂ ಸ್ಫೂರ್ತಿಯಾಗಬೇಕು. ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಒಡೆದು ಹೋಗಿದ್ದ ದೇಶವನ್ನು ಗಾಂಧೀಜಿ ರೂಪಿಸಿದ ಹೋರಾಟ ಒಗ್ಗೂಡಿಸಿತು ಎಂದು ನುಡಿದರು.

ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ವೀರೇಶಾನಂದ ಸರಸ್ವತಿ ಮಾತನಾಡಿ, ಪಠ್ಯ ಬೋಧನೆಯ ಜೊತೆಗೆ ಮಕ್ಕಳಿಗೆ ಮಾನವೀಯ ಮೌಲ್ಯಗಳನ್ನು ಕಲಿಸುವುದೂ ಶಿಕ್ಷಣರ ಹೊಣೆಗಾರಿಕೆಯ ಭಾಗ ಎಂದರು.

ಡಾ.ಹೊ.ಶ್ರೀನಿವಾಸಯ್ಯ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ.ಶಂಕರಲಿಂಗೇಗೌಡ, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಬಿ.ಆರ್.ಮಮತಾ ಮಾತನಾಡಿದರು.

ಬೆಂಗಳೂರು ಕಿದ್ವಾಯಿ ಸ್ಮಾರಕ ಸಂಸ್ಥೆಯ ನಿರ್ದೇಶಕ ಡಾ.ಕೆ.ಬಿ.ಲಿಂಗೇಗೌಡ ಅವರನ್ನು ಸನ್ಮಾನಿಸಲಾಯಿತು. ಅಪ್ಪಗೆರೆ ತಿಮ್ಮರಾಜು ಜಾನಪದ ಗೀತೆಗಳನ್ನು ಹಾಡಿದರು. ಡಾ.ವೂಡೆ.ಪಿ.ಕೃಷ್ಣ ಆಶಯನುಡಿ ಆಡಿದರು.

ಬಿಇಒ ರಂಗಧಾಮಯ್ಯ, ಬಿಆರ್‌ಸಿ ಯೋಗೀಶ್, ಪ್ರೊ.ಕೃಷ್ಣಪ್ಪ, ವಕೀಲ ಧನಪಾಲ್, ಎಂ.ಎನ್.ಚಂದ್ರೇಗೌಡ, ನರಸಿಂಹಯ್ಯ, ಗಂಗಾಧರ್ ದೇವರಮನೆ, ಪ್ರಾಚಾರ್ಯ ಪ್ರಕಾಶ್, ಪ್ರಸನ್ನ ಕುಮಾರ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಕೆಂಪರಾಜು ಇತರರು ಇದ್ದರು.

ಶಿಕ್ಷಕರ ಪಾತ್ರ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೊ|| ಎಂ. ಕೃಷ್ಣೇಗೌಡ ಕರೆ

ಮಕ್ಕಳಲ್ಲಿ ಮಾನಸಿಕ-ದೈಹಿಕ ಶಕ್ತಿ ತುಂಬಿ

ತುರುವೇಕೆರೆ

ಇಂದಿನ ಬದುಕಿನ ಎಲ್ಲಾ ಸವಾಲುಗಳನ್ನು ಮೀರಿ ನಿಲ್ಲುವ ಮಾನಸಿಕ ಮತ್ತು ದೈಹಿಕ ಶಕ್ತಿಯನ್ನು ಮಕ್ಕಳಲ್ಲಿ ತುಂಬಬೇಕಾದ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ನಗೆ ಸಾಹಿತಿ ಹಾಗೂ ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ಪ್ರಾಚಾರ್ಯ ಪ್ರೊ.ಎಂ.ಕೃಷ್ಣೇಗೌಡ ಹೇಳಿದರು.

ಪಟ್ಟಣದ ಕೆ.ಹಿರಣಯ್ಯ ಬಯಲು ರಂಗ ಮಂದಿರದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಎಂ.ಎಸ್.ಸಂದೀಪ್ ಟ್ರಸ್ಟ್ ಬೆಂಗಳೂರು, ಲಯನ್ಸ್ ಕ್ಲಬ್, ಕ್ಷೇತ್ರ ಶಿಕ್ಷಣಾಧಿಕಾರಿಗಳ ಇಲಾಖೆ, ತಾಲ್ಲೂಕು ಶಿಕ್ಷಕರು ಹಾಗೂ ತಾಲ್ಲೂಕು ಪ್ರೌಢ ಶಾಲಾ ಭಾಷಾ ಬೋಧಕರ ಸಂಘ ಇವುಗಳ ಸಂಯುಕ್ತ ಆಶ್ರಯದಲ್ಲಿ ಎಂ.ಎಸ್. ಸಂದೀಪ್ ದತ್ತಿ ಕಾರ್ಯಕ್ರಮದಲ್ಲಿ ಯುವಜನರಿಗೆ ವಿವೇಕಾನಂದ ಸ್ವಾಮಿ ಮತ್ತು ಗಾಂಧೀಜಿಯವರ ಸಂದೇಶ ಹಾಗೂ ಶಿಕ್ಷಕರ ಪಾತ್ರ ಎಂಬ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದರು.



ತುರುವೇಕೆರೆ ಕೆ.ಹಿರಣಯ್ಯ ಬಯಲು ರಂಗ ಮಂದಿರದಲ್ಲಿ ಯುವಜನರಿಗೆ ವಿವೇಕಾನಂದ ಸ್ವಾಮಿ ಮತ್ತು ಗಾಂಧೀಜಿಯವರ ಸಂದೇಶ ಹಾಗೂ ಶಿಕ್ಷಕರ ಪಾತ್ರ ಎಂಬ ಕಾರ್ಯಕ್ರಮವನ್ನು ನಿವೃತ್ತ ಐ.ಎ.ಎಸ್ ಅಧಿಕಾರಿ ಎಂ.ಕೆ.ಶಂಕರಲಿಂಗೇಗೌಡ ಉದ್ಘಾಟಿಸಿದರು.

ಭ್ರಷ್ಟ ವ್ಯವಸ್ಥೆಯ ವಿಷ ವರ್ತುಲದ ಪ್ರಭಾವವು ಮಕ್ಕಳ ಮನಸ್ಸಿನ ಆಂತರ್ಯದ ಆಳದಲ್ಲಿ ಗಾಢವಾಗಿ ಬೇರಿಳಿದು ಶೈಕ್ಷಣಿಕ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿದೆ. ಹಿಂದಿನ ಮಕ್ಕಳು ಮತ್ತು ಈಗಿನ ಮಕ್ಕಳು ಶಿಕ್ಷಣ ಪಡೆಯುತ್ತಿರುವ ರೀತಿ ನೀತಿಗಳಲ್ಲಿ ಬಹಳಷ್ಟು ಅಂತರಗಳನ್ನು ಕಾಣ ಬಹುದಾಗಿದೆ. ಏನನ್ನು, ಎಷ್ಟು ಮತ್ತು ಹೇಗೆ ಮಾತನಾಡಬೇಕೆಂಬ ಮಾತಿನ ಮೌಲ್ಯಿಕತೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಕೊಡಬೇಕು.

ಗಾಂಧೀ ತನ್ನೊಳಗಿನ ಅಸಮಧಾನ, ಸಂಕಟ, ವೇದನೆ, ಹತಾಶಯಗಳನ್ನು ತನ್ನೊಡ ಲಲ್ಲಿಟ್ಟುಕೊಂಡು ಅಸಾಧಾರಣ ಚಳವಳಿ ಮಾಡಿದ ಅವರ ಹೋರಾಟದ ಪಥಗಳು ನಮಗೆ ಸ್ಫೂರ್ತಿಯಾಗಬೇಕು. ಜಾತಿ, ಧರ್ಮ, ಭಾಷೆ, ಸಂಸ್ಕೃತಿಗಳ ನಡುವೆ ತಿಕ್ಕಾಟದ ಸಂಘರ್ಷಗಳಿಂದ ದೇಶ ಹರಿದು ಹಂಚಿಹೋಗಿತ್ತು. ಆದರೆ ಗಾಂಧಿ ಸ್ವಾತಂತ್ರ್ಯ ಹೋರಾಟದ ಅನಂತರ ಐಕ್ಯತೆಯನ್ನು ಸಾಧಿಸಿತು ಎಂದು ವಿವರಿಸಿದರು.

ಈ ದೇಶದಲ್ಲಿ ಮೈ ಬಣ್ಣದ ಸೋಗಿನಲ್ಲಿ ಬಹುದೊಡ್ಡ ಶೋಷಣೆ, ದೌರ್ಜನ್ಯಗಳು ನಡೆಯುತ್ತಿರುವುದು ಪ್ರಜಾಪ್ರಭುತ್ವವನ್ನು ಅಣಕಿಸುವಂತಿದೆ. ಆಧುನಿಕ ಶಿಕ್ಷಣ ಸೃಷ್ಟಿಸಿರುವ ಧಿಮಾಕುಗಳು ಭಯಾನಕ ವಾತಾವರಣವನ್ನು ಸೃಜಿಸುತ್ತಿದೆ. ಪ್ರತಿಯೊಬ್ಬ ಶಿಕ್ಷಕನು ತನ್ನೊಳಗಿನ ಆಂತರಿಕ ಹೋರಾಟಗಳ ಮೂಲಕ ವ್ಯಕ್ತಿತ್ವವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಬೇಕು. ಶಿಕ್ಷಕನಾದವನಿಗೆ ತಾಯಿಗಿರುವ ತಳಮಳ, ಸಂಕಟಗಳ ಜೊತೆಗೆ ಅವನಲ್ಲಿರುವ ಅಹಂಕಾರ, ಸ್ವಾರ್ಥ, ಕ್ರೋಧಗಳನ್ನು ನೀಗಿಕೊಳ್ಳದ ಹೊರತು ಉತ್ತಮ ಶಿಕ್ಷಕನಾಗಲು ಸಾಧ್ಯವಿಲ್ಲ ಎಂದರು.

ಶಿಕ್ಷಕರು ಮಕ್ಕಳಿಗೆ ಕೇವಲ ಸಿಲಬಸ್ ಪಠ್ಯದ ಜೊತೆಗೆ ಆದರ್ಶ, ತ್ಯಾಗ, ಕರುಣೆ, ಸಹೋದರತೆಯ ಮಾನವೀಯ ಮೌಲ್ಯ ಗಳನ್ನು ಕಲಿಸಿಕೊಡ ಬೇಕು. ತಾಂತ್ರಿಕ ಮತ್ತು ತಾಂತ್ರಿಕೇತರ ವಿದ್ಯಾರ್ಥಿಗಳಲ್ಲಿ ನೈತಿಕತೆ, ವಾಸ್ತವ ಬದುಕಿನ ಏಕತಾನತೆಗಳು, ಸಾಮಾಜಿಕ ಕಳಕಳಿಯ ಬದ್ಧತೆ ಇಲ್ಲದಿರುವುದನ್ನು ಇಂದು ಕಾಣಬಹುದಾಗಿದೆ ಎಂದು ತುಮಕೂರು ರಾಮಕೃಷ್ಣಾಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ.ಹೊ.ಶ್ರೀನಿವಾಸಯ್ಯ, ನಿವೃತ್ತ ಐ.ಎ.ಎಸ್ ಅಧಿಕಾರಿ ಎಂ.ಕೆ.ಶಂಕರಲಿಂಗೇ ಗೌಡ, ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಬಿ.ಆರ್. ಮಮತಾ ಮಾತನಾಡಿದರು. ಬೆಂಗಳೂರು ಕಿದ್ವಾಯಿ ಸ್ಮಾರಕ ಸಂಸ್ಥೆಯ ನಿರ್ದೇಶಕ ಡಾ.ಕೆ.ಬಿ.ಲಿಂಗೇಗೌಡ ಅವರನ್ನು ಸನ್ಮಾನಿಸಲಾಯಿತು. ಟ್ರಸ್ಟ್ ಆರೋಗ್ಯ ಕ್ಷೇತ್ರದಲ್ಲಿ ಸಾಧನೆ ಗೈದ ಅಪ್ಪಗೆರೆ ತಿಮ್ಮರಾಜು ಅವರಿಂದ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಡಾ.ವೂಡೆ.ಪಿ.ಕೃಷ್ಣ ಆಶಯ ನುಡಿಗಳನ್ನಾಡಿದರು.

ಬಿ.ಇ.ಒ ರಂಗ ಧಾಮಯ್ಯ, ಬಿ.ಆರ್ .ಸಿ.ಯೋಗೀಶ್, ಪ್ರೊ.ಕೃಷ್ಣಪ್ಪ, ವಕೀಲ ಧನಪಾಲ್, ಲಯನ್ಸ್ ಅಧ್ಯಕ್ಷ ಮಲ್ಲಿಕಾರ್ಜುನ್ ದುಂಡಾ, ಎಂ.ಎನ್.ಚಂದ್ರೇಗೌಡ, ನರಸಿಂಹಯ್ಯ, ಗಂಗಾಧರ್ ದೇವರಮನೆ, ಪ್ರಾಚಾರ್ಯ ಪ್ರಕಾಶ್, ಪ್ರಸನ್ನ ಕುಮಾರ್, ಪಿಎಲ್.ಡಿ. ಬ್ಯಾಂಕ್ ಕೆಂಪರಾಜು ಸೇರಿದಂತೆ ಇತರರು ಇದ್ದರು. ಬಿ. ಗಂಗಣ್ಣ ಸ್ವಾಗತಿಸಿ, ಪ್ರೊ.ಶಿವರಾಜು ನಿರೂಪಿಸಿ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಗುರುವಾರ
7 ಜನವರಿ 2016

ಪುಸ್ತಕದ ಜತೆ ಮಸ್ತಕ ಜ್ಞಾನವೂ ಅಗತ್ಯ

ಸಾಹಿತಿ ಡಾ.ಆರ್.ಕೆ. ನಲ್ಲೂರು ಪ್ರಸಾದ್ ಅಭಿಮತ

ಬೆಂಗಳೂರು: ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಲ್ಲಿ ಪುಸ್ತಕ ಜ್ಞಾನದೊಂದಿಗೆ ಮಸ್ತಕ ಜ್ಞಾನ ಹೆಚ್ಚಿಸುವ ಕೆಲಸ ಮಾಡಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ಆರ್.ಕೆ. ನಲ್ಲೂರು ಪ್ರಸಾದ್ ತಿಳಿಸಿದ್ದಾರೆ.

ಶೇಷಾದ್ರಿಪುರಂ ಪಿಯು ಕಾಲೇಜಿನ 45ನೇ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ 'ನಿನಾದ 2015-16' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಅಂಕ ಗಳಿಸಿದ ಕಾಲೇಜುಗಳೇ ಶ್ರೇಷ್ಠ ಎಂಬ ಭಾವನೆ ಇದೆ. ಆದರೆ, ಮಕ್ಕಳಿಗೆ ಕೇವಲ ಶಿಕ್ಷಣ ನೀಡುವುದಷ್ಟೇ ಅಲ್ಲದೆ ಅವರನ್ನು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲೂ ಅಭಿವೃದ್ಧಿ ಹೊಂದುವಂತೆ ಮಾಡಬೇಕು. ಪರಿಪೂರ್ಣ ವಿದ್ಯಾರ್ಥಿ ರೂಪಿಸುವತ್ತ ಶಿಕ್ಷಕರು ಗಮನಹರಿ ಸಬೇಕು. ಶಿಕ್ಷಣೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡವರು ಯಾವಾಗಲೂ ಲವಲವಿಕೆಯಿಂದ ಇರುತ್ತಾರೆ. ಕಾಲೇಜಿನಲ್ಲಿ ಆರೋಗ್ಯಕರ ವಾತಾವರಣ ಸೃಷ್ಟಿಯಾದಾಗ ಮಾತ್ರ ಉತ್ತಮ ವಿದ್ಯಾರ್ಥಿ ರೂಪುಗೊಳ್ಳಲು ಸಾಧ್ಯ ಎಂದರು.

ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವೆ ಹಿಂದಿನ ಆಪ್ತತೆ ಈಗಿಲ್ಲದಂತಾಗಿದೆ. ಹಿಂದೆ ತಪ್ಪು ಮಾಡಿದರೆ ವಿದ್ಯಾರ್ಥಿಗಳನ್ನು ಹೊಡೆಯಲಾಗುತ್ತಿತ್ತು.

ಆದರೆ, ಆ ರೀತಿ ಶಿಕ್ಷೆ ನೀಡುವಲ್ಲಿ ವಿದ್ಯಾರ್ಥಿಗಳ ಮೇಲೆ ಪ್ರೀತಿ ಇರುತ್ತಿತ್ತು. ಈಗ ಆ ರೀತಿಯ ಸಂಬಂಧಗಳೇ ಇಲ್ಲವಾಗಿದೆ. ವಿದ್ಯಾರ್ಥಿಗಳಿಗೆ ಶಿಕ್ಷಕರು, ಶಿಕ್ಷಣ ಸಂಸ್ಥೆ ಮತ್ತು ಪಾಲಕರ ಮೇಲೆ ಗೌರವ ಇರಬೇಕು.ಆಗ ಮಾತ್ರ ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯ ಎಂದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ, ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಕಾಲೇಜು ಅಭಿವೃದ್ಧಿ ಸಮಿತಿ ಖಜಾಂಚಿ ಬಿ.ಎಂ. ಪಾರ್ಥಸಾರಥಿ, ಪ್ರಾಂಶುಪಾಲೆ ಪ್ರೊ. ಟಿ.ಎಸ್. ಚಂಪಕ ಮತ್ತಿತರರು ಉಪಸ್ಥಿತರಿದ್ದರು.



ಶೇಷಾದ್ರಿಪುರಂ ಪಿಯು ಕಾಲೇಜಿನ 45ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ 'ನಿನಾದ-16' ಕಾರ್ಯಕ್ರಮವನ್ನು ಡಾ. ಆರ್.ಕೆ. ನಲ್ಲೂರು ಪ್ರಸಾದ್ ಉದ್ಘಾಟಿಸಿದರು. ಡಾ. ವೂಡೇ ಪಿ.ಕೃಷ್ಣ, ಎನ್.ಆರ್. ಪಂಡಿತಾರಾಧ್ಯ, ಪ್ರೊ. ಟಿ.ಎಸ್. ಚಂಪಕ ಮತ್ತಿತರರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ VK

ಶನಿವಾರ, 26 ಡಿಸೆಂಬರ್ 2015

ಲೇಖಕ 'ಪುಸ್ತಕಮನೆ' ಹರಿಹರಪ್ರಿಯ ಅಭಿಮತ

ಕುವೆಂಪು ಕಂಡಿದ್ದೇ ನಿಜವಾದ ಹಿಂದೂ ಧರ್ಮ

■ ವಿಕ ಸುದ್ದಿಲೋಕ ಬೆಂಗಳೂರು

ಕುವೆಂಪು ಅವರು ಹಿಂದೂ ಧರ್ಮದ ಜೀವ, ಜಗತ್ತು ಮತ್ತು ಈಶ್ವರ ಸಂಬಂಧಗಳನ್ನು ಹಾಗೂ ವೇದ, ಉಪನಿಷತ್ತುಗಳನ್ನೆಲ್ಲ 'ಮನುಜ ಮತ ವಿಶ್ವಪಥ' ತತ್ತ್ವವಾಗಿ ಪರಿವರ್ತಿಸಿದರು. ಅವರು ಕಂಡಿದ್ದೇ ನಿಜವಾದ ಹಿಂದೂ ಧರ್ಮ ಎಂದು ಲೇಖಕ 'ಪುಸ್ತಕಮನೆ' ಹರಿಹರಪ್ರಿಯ ಹೇಳಿದ್ದಾರೆ.

ಗಾಂಧಿ ಶಾಂತಿ ಪ್ರತಿಷ್ಠಾನವು ಗುರುವಾರ ನಗರದ ಗಾಂಧೀ ಭವನದಲ್ಲಿ ಏರ್ಪಡಿಸಿದ್ದ ಡಬ್ಲ್ಯು.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಹಿಂದೂ ಧರ್ಮ ಮತ್ತು ಕುವೆಂಪು' ವಿಚಾರ ಕುರಿತು ಅವರು ಮಾತನಾಡಿದರು.

"ಗಾಂಧೀಜಿಯವರ ಸರ್ವೋದಯ ತತ್ತ್ವವನ್ನು ಕುವೆಂಪು ಸಂಪೂರ್ಣವಾಗಿ ಒಪ್ಪಿದ್ದರು. ಆದರೆ, ಗಾಂಧೀಜಿಯವರಿಗೆ ಅದರೊಳಗಿದ್ದ ವರ್ಣ ವ್ಯವಸ್ಥೆ ಗೊತ್ತಾಗಲಿಲ್ಲ. ಕುವೆಂಪು ಅವರು ವರ್ಣ ವ್ಯವಸ್ಥೆಯ ಗೊಡವೆ ಇಲ್ಲದೆ ಸರ್ವೋದಯ ತತ್ತ್ವವನ್ನು ರೂಪಿಸಿಕೊಂಡರು. ಅವರ 'ಕಾನೂರು ಹೆಗ್ಗಡತಿ' ಕಾದಂಬರಿಯು ಸಮನ್ವಯ ದೃಷ್ಟಿಗೂ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಪೂರ್ಣದೃಷ್ಟಿಗೂ ಮತ್ತು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವು ಸರ್ವೋದಯ ದೃಷ್ಟಿಗೂ ಅತ್ಯುತ್ತಮ ಉದಾಹರಣೆಗಳಾಗಿವೆ," ಎಂದು ಅವರು ವಿಶ್ಲೇಷಿಸಿದರು.

"ಇದೇ ರೀತಿಯಲ್ಲಿ ಕುವೆಂಪು ಅವರು ರಾಮಕೃಷ್ಣ ಪರಮಹಂಸರ ಕಾಳಿ ಮಾತೆಯಿಂದಲೂ ಮತ್ತು ಮಹರ್ಷಿ ಅರವಿಂದರ ಅತಿಮಾನವತ್ವದ ಪರಿಕಲ್ಪನೆಯಿಂದಲೂ ಹಿಂದೂ ಧರ್ಮವನ್ನು ಬಿಡಿಸಿದರು. ಅವರು ಅಂತಿಮವಾಗಿ ಹಿಂದೂ ಮತವನ್ನು ಒಂದು ಧರ್ಮತತ್ತ್ವವನ್ನಾಗಿ ಪರಿವರ್ತಿಸಿದರು. ಅವರು ಸತ್ಯವನ್ನೇ ಅವತಾರವೆಂದು ಪ್ರತಿಪಾದಿಸಿದರು. ಇದನ್ನು ಅವರು ಪರಮಹಂಸ ಮತ್ತು ವಿವೇಕಾನಂದರಿಂದ ಸ್ವೀಕರಿಸಿದರು," ಎಂದು ವಿವರಿಸಿದರು.

"ಹಿಂದೂ ಧರ್ಮ ಇನ್ನೂ ಜಗತ್ತಿನಲ್ಲಿ ಉಳಿದಿರಲು ಮಠಮಾನ್ಯಗಳು ಕಾರಣವಲ್ಲ. ಅದಕ್ಕೆ ಕುವೆಂಪು ಅವರಂಥವರ ಕಾಣ್ಕೆಯೇ ಕಾರಣ. ಹಿಂದೂ ಧರ್ಮದೊಳಗಿನ ತಾರತಮ್ಯವನ್ನು ಕಂಡು ಅಂಬೇಡ್ಕರ್ ಬೇರೆ ಧರ್ಮಕ್ಕೆ ಹೋದರೆ, ಕುವೆಂಪು ಒಳಗಿದ್ದುಕೊಂಡೇ ಸಹಸ್ರ ಪುರುಷನಂತೆ ಬೆಳೆದರು," ಎಂದರು.

"ಇಂದು ಸಹಿಷ್ಣುತೆ ಬಗ್ಗೆ ತುಂಬಾ ಚರ್ಚೆಯಾಗುತ್ತಿದೆ. ಆದರೆ 'ಕವಿರಾಜಮಾರ್ಗ'ದಲ್ಲೇ ಸಹಿಷ್ಣುತೆಯ ಅಗತ್ಯ ಪ್ರತಿಪಾದನೆ ಆಗಿದೆಯೆಂದರೆ ಆಗಿನ ಸಮಾಜದಲ್ಲೂ ಅಸಹಿಷ್ಣುತೆ ಇತ್ತೆಂದೇ ಅರ್ಥ. ಈ ದೇಶದಲ್ಲಿ ರಾಮಾಯಣ, ಮಹಾಭಾರತಗಳ ಕಾಲದಿಂದಲೂ ಅಸಹಿಷ್ಣುತೆ ಇದೆ. ಕುವೆಂಪು ಅವರು ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್‌ನಂಥ ಕೃತಿಗಳನ್ನು ಬರೆದಾಗ ಕೂಡ ಇಂಥ ಅಸಹಿಷ್ಣುತೆ ಅವರನ್ನು ಕಾಡಿತ್ತು," ಎಂದು ಅವರು ಪುರಾವೆಗಳನ್ನು ನೀಡಿದರು.

ಚಿಂತಕ ಮಲ್ಲೇಪುರಂ ವೆಂಕಟೇಶ್, ಗಾಂಧೀವಾದಿ ಹೊ.ಶ್ರೀನಿವಾಸಯ್ಯ, ದತ್ತಿ ಸಂಸ್ಥಾಪಕ ಡಬ್ಲ್ಯು.ಎಚ್.ದೇವಕುಮಾರ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

ಈ ಸಂಜೆ

ಭಾನುವಾರ,
06 ಡಿಸೆಂಬರ್ 2015

ಭ್ರಷ್ಟಾಚಾರ ನಿರ್ಮೂಲನೆಗೆ ಪಣತೊಡಿ

ಬೆಂಗಳೂರು, ಡಿ.6-ತಾಂಡವವಾಡುತ್ತಿರುವ ಭ್ರಷ್ಟಾಚಾರ ನಿರ್ಮೂಲನೆಗೆ ಪ್ರತಿಯೊಬ್ಬರು ಪಣ ತೊಡಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಇಂದಿಲ್ಲಿ ಸಲಹೆ ಮಾಡಿದರು.

ನಗರದಲ್ಲಿಂದು ನಡೆದ ಅಖಿಲ ಭಾರತ ಎರಡನೇ ಸ್ವಾತಂತ್ರ್ಯ ಚಳುವಳಿ ಸಂಸ್ಥೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ತತ್ವ, ಸಿದ್ಧಾಂತದ ಮೇಲೆ ಅಧಿಕಾರಕ್ಕೆ ಬಂದ ದೆಹಲಿ ಸರ್ಕಾರ, ಬೇಕಾಬಿಟ್ಟಿ ಶಾಸಕರ ವೇತನ ಹೆಚ್ಚಳ ಮಾಡಿದೆ. ಇದರಿಂದ ಜನರ ನಂಬಿಕೆ, ವಿಶ್ವಾಸವನ್ನು ಕಳೆದುಕೊಳ್ಳುತ್ತಿದೆ ಎಂದರು.


ಸಾಮಾಜಿಕ ಹೋರಾಟಗಾರ ಅಣ್ಣಾಹಜಾರೆ ನೇತೃತ್ವದ ಸಮಿತಿ ಸಿದ್ಧಪಡಿಸಿದ ಲೋಕಪಾಲ್ ಮಸೂದೆ ಬದಲಿಗೆ ಬೇರೆ ರೀತಿಯ ಲೋಕಪಾಲನ್ನು ದೆಹಲಿ ಸರ್ಕಾರ ಜಾರಿಗೆ ತಂದಿದೆ. ಅಲ್ಲದೆ, ಪ್ರಧಾನಿ ವೇತನಕ್ಕಿಂತಲೂ ಶಾಸಕರ ವೇತನ ಹೆಚ್ಚಾಗಿರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಂಸತ್ತಿನಲ್ಲಿ ಗಂಭೀರ ಚರ್ಚೆ ನಡೆಯುತ್ತಿಲ್ಲ, ಯುಪಿಎ ಸರ್ಕಾರವಿದ್ದಾಗ ಜಿಎಸ್‌ಟಿ ಮಸೂದೆ ಮಂಡಿಸಿದಾಗ ಎನ್‌ಡಿಎ ವಿರೋಧ ಮಾಡಿತ್ತು. ಈಗ ಎನ್‌ಡಿಎ ಮಂಡಿಸುವ ಜಿಎಸ್‌ಡಿ ವಿಧೇಯಕವನ್ನು ಯುಪಿಎ ವಿರೋಧಿಸುತ್ತಿದೆ. ಜನರ ಅನುಕೂಲಕ್ಕಿಂತ ಅವರ ಪಕ್ಷದ ಪ್ರತಿಷ್ಠೆ ಮುಖ್ಯವಾಗಿದೆ. ರಾಜ್ಯ ಲೋಕಾಯುಕ್ತ ಸಂಸ್ಥೆಯಲ್ಲಿ ಒಳ್ಳೆ ಕೆಲಸ ಮಾಡಿದ ತೃಪ್ತಿ ಇದೆ ಎಂದರು.



ನಗರದ ಗಾಂಧಿಭವನದಲ್ಲಿ ನಡೆದ ಅಖಿಲ ಭಾರತ ಎರಡನೇ ಸ್ವಾತಂತ್ರ್ಯ ಚಳುವಳಿ ಸಂಸ್ಥೆಯನ್ನು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಸಂಸ್ಥೆಯ ಗೌರವಾಧ್ಯಕ್ಷ ಬಿ.ತಿಪ್ಪೇರುದ್ರಪ್ಪ, ಪ್ರೊ.ಕೆ.ಪಿ.ಕೃಷ್ಣ ಮುಂತಾದವರು ಪಾಲ್ಗೊಂಡಿದ್ದರು.

ಪ್ರಜಾವಾಣಿ ಭಾನುವಾರ • ನವೆಂಬರ್ 1, 2015



ನಿವೃತ್ತ ಶಿಕ್ಷಕ ಪ್ರೊ.ಪರಮೇಶ್ವರಯ್ಯ ಅವರನ್ನು ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಸನ್ಮಾನಿಸಿದರು. ಹೊ. ಶ್ರೀನಿವಾಸಯ್ಯ, ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ.ಪಿ.ಕೃಷ್ಣ ಮತ್ತು ಕೋಶಾಧಿಕಾರಿ ಬಿ.ಎಂ.ಪಾರ್ಥಸಾರಥಿ ಚಿತ್ರದಲ್ಲಿದ್ದಾರೆ

ನಿಜಗುಣಪ್ರಭು ಸ್ವಾಮೀಜಿ ವಿಷಾದ

ಅಂತಃಕರಣದ ಶಿಕ್ಷಣ ಕಣ್ಮರೆ

ಬೆಂಗಳೂರು: 'ಇಂದು ಅಂತಃಕರಣದ ಶಿಕ್ಷಣ ಕಣ್ಮರೆಯಾಗುತ್ತಿದೆ. ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಅಗತ್ಯವಾದ ಹಣ ಗಳಿಸುವ ಶಿಕ್ಷಣ ಮಾತ್ರ ಮಕ್ಕಳಿಗೆ ದೊರೆಯುತ್ತಿದೆ' ಎಂದು ಗದಗ ಜಿಲ್ಲೆ ಮುಂಡರಗಿ ತೋಂಟದಾರ್ಯ ಮಠದ ನಿಜಗುಣಪ್ರಭು ಸ್ವಾಮೀಜಿ ವಿಷಾದಿಸಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಸ್ನೇಹ ಸಮ್ಮಿಲನ ಹಾಗೂ ಶೇಷಾದ್ರಿಪುರ ಪ್ರೌಢಶಾಲೆಯ ಅಮೃತ ಮಹೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಇತ್ತೀಚಿನ ದಿನಗಳಲ್ಲಿ ತಂದೆ-ತಾಯಿಗಳನ್ನು ಪೋಷಿಸುವವರು ಕಡಿಮೆಯಾಗುತ್ತಿದ್ದಾರೆ. ಪರಿಣಾಮ ಭಾರತದಾದ್ಯಂತ 35 ಸಾವಿರ ವೃದ್ಧಾಶ್ರಮಗಳು ತಲೆಎತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ಮಕ್ಕಳಿಗೆ ಹಿರಿಯರನ್ನು ಗೌರವಿಸುವಂತಹ ಶಿಕ್ಷಣ ನೀಡುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಗಾಂಧಿ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಹೊ.ಶ್ರೀನಿವಾಸಯ್ಯ ಮಾತನಾಡಿ, 'ಇಂದು ಪ್ರಾಮಾಣಿಕತೆ ಮತ್ತು ಮಾನವೀಯತೆಯ ಕೊರತೆ ಎಲ್ಲೆಡೆ ಎದ್ದು ಕಾಣುತ್ತಿದೆ. ಹೀಗಾಗಿ, ಮಕ್ಕಳಿಗೆ ಮೌಲ್ಯಯುತ ಶಿಕ್ಷಣದ ತುರ್ತಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 11 ನಿವೃತ್ತ ಶಿಕ್ಷಕರಿಗೆ 'ಶಿಕ್ಷಕಸೇವಾ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಶೇಷಾದ್ರಿಪುರ ಪ್ರೌಢಶಾಲೆಗೆ 75 ವರ್ಷ ತುಂಬಿದ ಸವಿನೆನಪಿಗಾಗಿ 'ಅಮೃತ ಬಿಂಬ' ಎಂಬ ಸ್ಮರಣಸಂಚಿಕೆ ಬಿಡುಗಡೆಗೊಳಿಸಲಾಯಿತು.

ಸಂಯುಕ್ತ ಕರ್ನಾಟಕ ಭಾನುವಾರ । 1 । ನವೆಂಬರ್ । 2015



ಯಲಹಂಕದ ಶೇಷಾದ್ರಿಪುರ ಪ್ರೌಢಶಾಲೆಯ ಅಮೃತ ಮಹೋತ್ಸವದ ಅಂಗವಾಗಿ "ಅಮೃತ ಬಿಂಬ" ಸ್ಮರಣೆ ಸಂಚಿಕೆಯನ್ನು ತೋಂಟದಾರ್ಯ ಶಾಖಾ ಮಠದ ನಿಜಗುಣಪ್ರಭು ತೋಂಟದಾರ್ಯಸ್ವಾಮಿ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ಹೊ.ಶ್ರೀನಿವಾಸಯ್ಯ, ಶೇಷಾದ್ರಿಪುರ ವಿದ್ಯಾಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಡಾ.ವೂಡೇ.ಪಿ ಕೃಷ್ಣ ಬಿಡುಗಡೆ ಮಾಡಿದರು.

ಶಿಕ್ಷಣದಲ್ಲಿ ಅಂತಃಕರಣ ಕೊರತೆ: ಸ್ವಾಮೀಜಿ ವಿಷಾದ

- **ಬದುಕನ್ನು ಕಟ್ಟುವ ಶಕ್ತಿ ಶಿಕ್ಷಣಕ್ಕಿದೆ**
- **ಮಾನವೀಯ ಮೌಲ್ಯಗಳ ಅರಿವು ಮೂಡಿಸಿ**

ಪ್ರಾಮಾಣಿಕತೆ ಎಲ್ಲಾ ರಂಗದಲ್ಲೂ ಮರೆಯಾಗುತ್ತಿದೆ. ಶಿಕ್ಷಣದಲ್ಲಿ ಅಂತಃಕರಣದ ಕೊರತೆ ಎದ್ದು ಕಾಣುತ್ತಿದೆ ಎಂದು ಮುಂಡರಗಿ-ಬೈಲೂರು ಮಠಾಧೀಶ ತೋಂಟದಾರ್ಯ ಶಾಖಾ ಮಠದ ನಿಜಗುಣ ತೋಂಟದಾರ್ಯಸ್ವಾಮಿ ಆತಂಕ ವ್ಯಕ್ತಪಡಿಸಿದರು.

ಯಲಹಂಕ ಉಪನಗರದ ಶೇಷಾದ್ರಿಪುರ ವಿದ್ಯಾಸಂಸ್ಥೆಯ ಸ್ನೇಹ-ಸಮ್ಮಿಲನ ಕಾರ್ಯಕ್ರಮದ ಅಮೃತಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜಕೀಯ, ಧಾರ್ಮಿಕ ಸಾಮಾಜಿಕ ಎಲ್ಲಾ ರಂಗದಲ್ಲಿ ಅಂತಃಕರಣ ಯಾ-ರಿಗೂ ದೊರೆತಿಲ್ಲ ದೊರೆತಿದ್ದರೂ ನಮ್ಮ ಹೃದಯದಿಂದ ಮಾತನಾಡುವ ಶಕ್ತಿ ಕಳೆದುಕೊಂಡಿದ್ದೇವೆ. ಆದ್ದರಿಂದಲೇ ಅಪ್ರಾಮಾಣಿಕತೆ ಎದ್ದು ಕಾಣುತ್ತಿದೆ ಎಂದರು.

ಮಾತೃ, ಪಿತೃ, ಗುರುದೇವೋಭವ ಎನ್ನುವ ನಮ್ಮ ದೇಶದಲ್ಲಿ 35 ಸಾವಿರ ವೃದ್ಧಾಶ್ರಮಗಳು ಹುಟ್ಟಿಕೊಂಡಿವೆ. ಮಾತೃದೇವೋಭವ, ಪಿತೃದೇವೋಭವ ಎಲ್ಲಿ ಹುಡಕಬೇಕು ಎಂದು ಪ್ರಶ್ನಿಸಿದರು.

ಹಿಂದೆ ಅನಕ್ಷರತೆ ಶಿಕ್ಷಣ ಹೆಚ್ಚಿದರೂ ಮಾನವೀಯತೆ ಕೊರತೆ ಇರಲಿಲ್ಲ. ಶಿಕ್ಷಣ ಎನ್ನುವುದು ಕೇವಲ ಹೊಟ್ಟೆಪಾಡಿಗಾಗಿ ಬಂದಿರುವುದಂತಹುದಲ್ಲ. ಅದರಲ್ಲಿ ದೇಶದ ಅಭಿವೃದ್ಧಿ ಜನಾಂಗ ಕೈಗಾರಿಕೆ ಕೃಷಿ ಕುಟುಂಬದ ಭಾವೈಕತೆಯ ಮಹತ್ವದ ಬದುಕನ್ನು ಕಟ್ಟುವ ಶಕ್ತಿ ಶಿಕ್ಷಣಕ್ಕಿದೆ ಎಂದರು.

ಸ್ವಾತಂತ್ರ್ಯ ಹೋರಾಟಗಾರ ಡಾ.ಹೊ.ಶ್ರೀನಿವಾಸಯ್ಯ ಮಾತನಾಡಿ, ಇಂದು ನಮ್ಮಲ್ಲಿ ಅಕ್ಷರಾಭ್ಯಾಸ-ವಿದ್ಯಾಭ್ಯಾಸ ಎನ್ನುವ ಎರಡು ರೀತಿಯ ಶಿಕ್ಷಣ ಇದೆ. ಅಕ್ಷರಾಭ್ಯಾಸ ಸಂಬಳವನ್ನು ಲೆಕ್ಕ ಹಾಕುವುದನ್ನು ಕಲಿಸುತ್ತದೆ.

ಈ ರೀತಿಯ ಕಲಿಕೆ ಪ್ರಮಾಣ ಹೆಚ್ಚುತ್ತಿದೆ. ಆದರೆ, ವಿದ್ಯಾಭ್ಯಾಸದ ಮೂಲಕ ಬದುಕನ್ನು ಕಲಿಸುವ ಶಿಕ್ಷಣದ ಸಂಖ್ಯೆ ಕ್ಷೀಣಿಸುತ್ತಿದೆ. ನಮ್ಮ ಹಿರಿಯರಿಗೆ ಅಕ್ಷರಾಭ್ಯಾಸ ಇರಲಿಲ್ಲ. ಅವರಿಗೆ ವಿದ್ಯಾಭ್ಯಾಸ ಇತ್ತು. ಅವರು ಬದುಕುವುದನ್ನು ಕಲಿತ್ತಿದ್ದರು. ನಮ್ಮಲ್ಲಿ ಶಿಕ್ಷಣ ಪಡೆದಿದ್ದೇವೆ. ಪ್ರಾಮಾಣಿಕತೆ, ಮಾನವೀಯತೆ ಕೊರತೆ ಎದ್ದು ಕಾಣುತ್ತದೆ ಎಂದರು.

ಇವತ್ತಿನ ವಿದ್ಯಾಭ್ಯಾಸದಲ್ಲಿ ಶಿಕ್ಷಕರು, ಮಕ್ಕಳಿಗೆ ಗುರುಹಿರಿಯರು, ತಂದೆ ತಾಯಿಗಳನ್ನು ಗೌರವಿಸಿ, ಪ್ರಾಮಾಣಿಕತೆಯಿಂದ ಪ್ರೀತಿ ವಿಶ್ವಾಸಗಳಿಸಿ ಬದುಕುವುದು ಹೇಗೆ ಎಂಬುದನ್ನು ಕಲಿಸಿ, ಚರಿತ್ರೆ ಹೇಳುವ ಮೂಲಕ ಮಾನವೀಯ ಮೌಲ್ಯಗಳ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದು ಕಿವಿಮಾತು ಹೇಳಿದರು.

ಶೇಷಾದ್ರಿಪುರ ವಿದ್ಯಾಸಂಸ್ಥೆಗೆ 75 ವರ್ಷ ತುಂಬಿದ ನೆನಪಿಗಾಗಿ "ಅಮೃತ ಬಿಂಬ" ಸ್ಮರಣೆ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಹಿರಿಯರಿಗೆ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಕ್ಕಳಿಂದ "ಗೀತ ನಾಟಕ" ಮತ್ತು ಆಪ್ ಸಂಸ್ಥೆಯಿಂದ ಮಾಮಾ ಮೋಷೆ ಎಂಬ ನಾಟಕಗಳ ಪ್ರದರ್ಶನ ಏರ್ಪಸಲಾಗಿತ್ತು. ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎನ್.ಆರ್.ಪಂಡಿತಾರಾಧ್ಯ, ಉಪಾಧ್ಯಕ್ಷರಾದ ಡಬ್ಲ್ಯೂ.ಹೆಚ್. ಅನಿಲ್‌ಕುಮಾರ್, ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಸಹಾಯಕ ಕಾರ್ಯದರ್ಶಿ ಸರೋಜ, ಕೆ.ಎಂ.ನಂಜಪ್ಪ, ಎಸ್.ಶೇಷನಾರಾಯಣ ಉಪಸ್ಥಿತರಿದ್ದರು.

7 ಈ ಸಂಜೆ
ಸೋಮವಾರ, 11-01-2016

ಸಂಸ್ಕೃತಿ-ಪರಂಪರೆ ಉಳಿಸಲು ಕರೆ



ಬೆಂಗಳೂರು, ಜ.11- ವಿದ್ಯಾರ್ಥಿಗಳು ಭಾರತೀಯ ಸಂಸ್ಕೃತಿ-ಪರಂಪರೆಗಳನ್ನು ಉಳಿಸುವತ್ತ ಗಮನ ಹರಿಸಬೇಕೆಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಕರೆ ನೀಡಿದರು.

ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಕಸಾಪ ಮಾಜಿ ಅಧ್ಯಕ್ಷ ಡಾ.ಆರ್.ಕೆ.ನಲ್ಲೂರು ಪ್ರಸಾದ್, ವಿದ್ಯಾರ್ಥಿಗಳು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡು ಪಠ್ಯ-ಪಠ್ಯೇತರ ಚಟುವಟಿಕೆಗಳಿಂದ ವ್ಯಕ್ತಿತ್ವ ರೂಪಿಸಿಕೊಳ್ಳುವಂತೆ ಕರೆ ನೀಡಿದರು.

ತಂದೆ, ತಾಯಿ, ಗುರುಗಳಿಗೆ ವಿಧೇಯರಾಗಿದ್ದಾಗ ಮಾತ್ರ ಜೀವನದಲ್ಲಿ ಗುರಿ ತಲುಪಲು ಸಾಧ್ಯ ಎಂದು ಹೇಳಿದರು.

ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಸಮಾಜಕ್ಕೆ ಒಳ್ಳೆಯ ಕೊಡುಗೆಗಳನ್ನು ನೀಡುವ ಜೊತೆಗೆ ಮಾನವೀಯತೆಯನ್ನು ಮೈಗೂಡಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ಶಿಕ್ಷಣ ದತ್ತಿಯ ಸಹಕಾರ್ಯದರ್ಶಿ ಸರೋಜ ಕೆ.ಎಂ.ನಂಜಪ್ಪ, ಖಜಾಂಚಿ ಬಿ.ಎಂ.ಪಾರ್ಥಸಾರಥಿ, ಅಧ್ಯಯನ ನಿರ್ದೇಶಕ ಡಾ.ಎಂ.ಪ್ರಕಾಶ್, ಪ್ರಾಂಶುಪಾಲರಾದ ಪ್ರೊ.ಟಿ.ಎಸ್.ಚಂಪಕ, ಉಪ ಪ್ರಾಂಶುಪಾಲ ಪಿ.ನಾರಾಯಣ ಸ್ವಾಮಿ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ

ಗುರುವಾರ 7 ಜನವರಿ 2016

ಹೊ. ಶ್ರೀನಿವಾಸಯ್ಯ 92ನೇ ಜನ್ಮದಿನಾಚರಣೆ


ಮಲ್ಲೇಶ್ವರ: ಸ್ವಾತಂತ್ರ್ಯ ಹೋರಾಟಗಾರ ಹೊ. ಶ್ರೀನಿವಾಸಯ್ಯ ಅವರ 92ನೇ ಹುಟ್ಟುಹಬ್ಬ ಸಮಾರಂಭ ಹಾಗೂ ಚಾರಿಟಬಲ್ ಟ್ರಸ್ಟ್ ಅನ್ನು ಸಚಿವ ಎಚ್.ಕೆ. ಪಾಟೀಲ್ ಉದ್ಘಾಟಿಸಿದರು.

ಸಚಿವ ಎಚ್.ಕೆ. ಪಾಟೀಲ್ ಉದ್ಘಾಟನೆ

ಶ್ರೀನಿವಾಸಯ್ಯ ಗ್ರಾಮೀಣ ಬಡ ರೈತಕುಟುಂಬದಲ್ಲಿ ಜನಿಸಿದರೂ, ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಪಡೆದು ನಂತರ ಎಚ್ಎಎಲ್‌ನಲ್ಲಿ ವೃತ್ತಿ ಪ್ರಾರಂಭಿಸಿ ಬಿಇಎಂಎಲ್ ಸಂಸ್ಥೆಯಲ್ಲಿ ಜನರಲ್ ಮ್ಯಾನೇಜರ್ ಆಗಿ ನಿವೃತ್ತರಾದವರು. ತಮ್ಮ ಹುಟ್ಟೂರಾದ ಚೌದರಿಕೊಪ್ಪಲನ್ನು ಮಾದರಿ ಹಳ್ಳಿಯನ್ನಾಗಿ ಅಭಿವೃದ್ಧಿಪಡಿಸಿದ್ದಾರೆ. ಗ್ರಾಮವನ್ನು ಬಯಲು ಶೌಚಮುಕ್ತವನ್ನಾಗಿಸಿದ್ದು, ಸ್ವಚ್ಛತೆ, ನೈರ್ಮಲ್ಯಕ್ಕೆ ಒತ್ತುಕೊಟ್ಟಿದ್ದಾರೆ. ನೀರಿನ ಸಮಸ್ಯೆ ನೀಗಿಸಲು ಕ್ರಮ ಕೈಗೊಂಡಿದ್ದಾರೆ ಎಂದು ಸಚಿವ ಎಚ್.ಕೆ. ಪಾಟೀಲ್ ಶ್ಲಾಘಿಸಿದರು.

ಶ್ರೀನಿವಾಸಯ್ಯ ಗಾಂಧಿ ಅನುಯಾಯಿ. 9ನೇ ವಯಸ್ಸಿನಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯಿಂದ ಪ್ರಭಾವಿತರಾಗಿ ಅಂದಿನಿಂದಲೂ ಖಾದಿ ಬಟ್ಟೆ ಧರಿಸಿದವರು. ಅವರ ವಿಚಾರಗಳನ್ನು ಪರಿಣಾಮಕಾರಿಯಾಗಿ ಪಸರಿಸುತ್ತ ಜನಮಾನಸದಲ್ಲಿ ನೆಲೆಯಾಗಿದ್ದಾರೆ ಎಂದರು.

ಆದಿಚುಂಚನಗಿರಿಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಡಾ. ಸಿ.ಎನ್. ಅಶ್ವತ್ಥನಾರಾಯಣ, ಡಾ. ವೂಡೇ ಪಿ. ಕೃಷ್ಣ, ಮಾಜಿ ಮೇಯರ್ ರಾಮಚಂದ್ರಯ್ಯ ಮತ್ತಿತರರು ಉಪಸ್ಥಿತರಿದ್ದರು.



ಸ್ವಾತಂತ್ರ್ಯ ಹೋರಾಟಗಾರ ಹೊ. ಶ್ರೀನಿವಾಸಯ್ಯ ಹುಟ್ಟುಹಬ್ಬ ಹಾಗೂ ಚಾರಿಟಬಲ್ ಟ್ರಸ್ಟ್ ಅನ್ನು ಸಚಿವ ಎಚ್.ಕೆ. ಪಾಟೀಲ್ ಉದ್ಘಾಟಿಸಿದರು. ಆದಿಚುಂಚನಗಿರಿಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಎಂ.ವಿ. ರಾಜಶೇಖರನ್, ಡಾ. ವೂಡೇ. ಪಿ. ಕೃಷ್ಣ ಮತ್ತಿತರರಿದ್ದರು.

ಗುರುವಾರ,7 ಜನವರಿ 2016

ವಿಜಯ ಕರ್ನಾಟಕ

ಕಾಲೇಜು ವಾರ್ಷಿಕೋತ್ಸವ

ವಿದ್ಯಾರ್ಥಿಗಳಿಗೆ ಆಲಿಸುವ ಗುಣ ಇರಬೇಕು. ಆಗ ಮಾತ್ರ ಅವರು ಉನ್ನತ ಸ್ಥಾನಕ್ಕೇರಲು ಸಾಧ್ಯವಾಗುತ್ತದೆ ಎಂದು ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಪ್ರಾಯಪಟ್ಟರು. ನಗರದ ಶೇಷಾದ್ರಿಪುರ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ''ಇಂದಿನ ಮಕ್ಕಳಿಗೆ ಅನುಭವದ ಪಾಠಕ್ಕಿಂತ ಮಾದರಿಯ ಕೊರತೆ ಇದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಕನಸು ಕಾಣುವುದನ್ನು ಕಲಿಯಬೇಕು. ವಿದ್ಯಾರ್ಥಿಗಳಿಗೆ ಓದುತ್ತಿರುವ ಸಂಸ್ಥೆಯು ವಿದ್ಯೆಯ ಜತೆಗೆ ಒಂದು ಸಂಸ್ಕೃತಿಯನ್ನು ಕಲಿಸಿಕೊಡುತ್ತದೆ,'' ಎಂದರು.' ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪಂಡಿತಾರಾಧ್ಯ , ಕಾರ್ಯದರ್ಶಿ ವೂಡೆ ಪಿ. ಕೃಷ್ಣ, ಪ್ರಾಂಶುಪಾಲ ಮಂಜುನಾಥ್ ಪಾಲ್ಗೊಂಡಿದ್ದರು.

ಈ ಸಂಜೆ ಬುಧವಾರ, 6-1-2016





ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜಿನ 21ನೆ ಕಾಲೇಜು ವಾರ್ಷಿಕೋತ್ಸವದಲ್ಲಿ ಶೇಷಾದ್ರಿಪುರಂ ಶಿಕ್ಷಣದತ್ತಿ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಬಂಜಾರ ಅಕಾಡೆಮಿ ಅಧ್ಯಕ್ಷ ಡಾ.ಅಲಿ ಕ್ವಾಜ, ಖ್ಯಾತ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಪಾಲ್ಗೊಂಡಿದ್ದರು. ಇದೇ ವೇಳೆ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ಪ್ರೇಕ್ಷಕರ ಮನಸೂರೆಗೊಂಡಿತು.

ವಿಜಯವಾಣಿ ಭಾನುವಾರ 3 ಜನವರಿ 2016

ಪಾಶ್ಚಾತ್ಯರ ಅಂಧಾನುಕರಣೆ ಸರ್ವಥಾ ಸಲ್ಲ

ವಾಗ್ಮಿ ಸೂಲಿಬೆಲೆ ಪ್ರತಿಪಾದನೆ | ಮೈತ್ರೀ ಸಂಸ್ಕೃತ-ಸಂಸ್ಕೃತಿ ಪ್ರತಿಷ್ಠಾನದ ವಿಜ್ಞಾನಯಾನ


ಬೆಂಗಳೂರು: ವೇದಗಳ ಕಾಲದಿಂದಲೇ ಭಾರತದಲ್ಲಿ ವಿಜ್ಞಾನ ಅನ್ವೇಷಣೆಗಳು ನಡೆದಿವೆ. ಆದರೂ ಈ ವಿಷಯದಲ್ಲಿ ನಾವು ಪಾಶ್ಚಾತ್ಯರನ್ನು ಅನುಕರಿಸುತ್ತಿರುವುದು ದುರಂತ ಎಂದು ವಾಗ್ಮಿ ಚಕ್ರವರ್ತಿ ಸೂಲಿಬೆಲೆ ವಿಷಾದಿಸಿದ್ದಾರೆ.

ಶೇಷಾದ್ರಿಪುರಂ ಕಾಲೇಜಿನಲ್ಲಿ ಮೈತ್ರೀ ಸಂಸ್ಕೃತ-ಸಂಸ್ಕೃತಿ ಪ್ರತಿಷ್ಠಾನ ಆಯೋಜಿಸಿದ್ದ 'ವಿಜ್ಞಾನ ಯಾನ: ಒಂದು ದಿನದ ವಿಚಾರಗೋಷ್ಠಿ'ಯಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ವೇದಗಳಿಗೂ ಮುನ್ನ ವಿಜ್ಞಾನವಿತ್ತು. ಈ ಬಗ್ಗೆ ವೇದಗಳಲ್ಲಿ ಉಲ್ಲೇಖವಿದೆ. ಸಂಸ್ಕೃತ ಬಲ್ಲವರು ವೇದಗಳನ್ನು ಓದುವ ಮೂಲಕ ಆ ವಿಜ್ಞಾನದ ಅಚ್ಚರಿಗಳನ್ನು ಅರಿಯಬಹುದು. ವೈಜ್ಞಾನಿಕವಾಗಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ, ವಿಜ್ಞಾನವೆನ್ನುತ್ತಲೇ ಅದು ಪಾಶ್ಚಾತ್ಯರು ನೀಡಿರುವ ಕೊಡುಗೆ ಎಂದು ಜನ ಭಾವಿಸುತ್ತಾರೆ. ವೇದಭಾಷೆ ಸಂಸ್ಕೃತವನ್ನು ಮೂಲೆಗುಂಪು ಮಾಡಿದ ಪಾಶ್ಚಾತ್ಯರು ಅದರಲ್ಲಿರುವ ವಿಜ್ಞಾನ ಜನರಿಗೆ ತಲುಪದಂತೆ ನೋಡಿಕೊಂಡರು. ಇದರಿಂದ ಇಂದು ನಿಜವಾದ ವಿಜ್ಞಾನದ ಸಂಗತಿಗಳನ್ನು ಒಪ್ಪಿಕೊಳ್ಳದಂತಹ ಸ್ಥಿತಿಯಲ್ಲಿ ನಾವಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾರತೀಯ ಸಂಸ್ಕೃತಿ ಹಾಗೂ ಜೀವನ ಶೈಲಿಯಲ್ಲೆ ವೈಜ್ಞಾನಿಕ ಸತ್ಯ ಅಡಗಿವೆ. ಆದರೆ, ಇದನ್ನೆಲ್ಲ ಕಡೆಗಣಿಸಲಾಗುತ್ತಿದೆ. ಬ್ರಾಹ್ಮೀ ಮುಹೂರ್ತದಲ್ಲಿ ಏಳಬೇಕೆಂಬ ಪರಿಪಾಠವಿದ್ದರೂ, ಸೂರ್ಯ ಉದಯಿಸಿದ ನಂತರವೇ ಏಳುತ್ತೇವೆ. ಪಿಜ್ಜಾ- ಬರ್ಗರ್ ರುಚಿಗೆ ಮಾರುಹೋಗಿ ಆಹಾರ ಪದ್ಧತಿ ಬದಲಾಯಿಸಿಕೊಳ್ಳುತ್ತಿದ್ದೇವೆ. ಸಂಸ್ಕೃತ ವಿಶ್ವದ ಸಂಪರ್ಕ ಭಾಷೆ ಎಂಬುದನ್ನು ಮರೆತು ಇಲ್ಲಸಲ್ಲದ ಆರೋಪ ಮಾಡುತ್ತಿದ್ದೇವೆ. ಆದರೆ, ಎಲ್ಲ ಭಾಷೆ ಮತ್ತು ವಿಜ್ಞಾನಕ್ಕೆ ಸಂಸ್ಕೃತವೇ ಮೂಲವೆಂದು ಪ್ರತಿಪಾದಿಸಿದರು.

ಹಿರಿಯ ವಿಜ್ಞಾನಿ ಡಾ. ಕೆ.ಎಸ್. ರಾವ್, ಡಾ. ಗಣಪತಿ ಹೆಗಡೆ, ಸಂಚಾಲಕ ಡಾ. ಗಣಪತಿ ಭಟ್ ಮತ್ತಿತರರಿದ್ದರು.



ಶೇಷಾದ್ರಿಪುರಂ ಕಾಲೇಜಿನಲ್ಲಿ ಶನಿವಾರ ಮೈತ್ರೀ ಸಂಸ್ಕೃತ-ಸಂಸ್ಕೃತಿ ಪ್ರತಿಷ್ಠಾನ ಆಯೋಜಿಸಿದ್ದ 'ವಿಜ್ಞಾನಯಾನ' ವಿಚಾರಗೋಷ್ಠಿಯನ್ನು ದೀಪಕ್ಕೆ ತೈಲ ಹಾಕುವ ಮೂಲಕ ಉದ್ಘಾಟಿಸಲಾಯಿತು. ಚಕ್ರವರ್ತಿ ಸೂಲಿಬೆಲೆ, ಕೆ.ಜಿ. ರಾವ್, ಪ್ರೊ. ಪಿ. ಕೃಷ್ಣ, ಡಾ. ಗಣಪತಿ ಭಟ್, ಡಾ. ಗಣಪತಿ ಹೆಗಡೆ, ಭವಾನಿ ಹೆಗಡೆ ಉಪಸ್ಥಿತರಿದ್ದರು.

Attachments

- MVyana-VV.jpg (738.42 KB)
- MVyana.jpg (737.10 KB)

ಈ ಸಂಜೆ ಶನಿವಾರ, 02-01-2016



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ಯಾನ-ಭಾರತೀಯ ವೈಜ್ಞಾನಿಕ ಪರಂಪರೆ ಕುರಿತ ಕಾರ್ಯಾಗಾರವನ್ನು ಅಂಕಣಕಾರ ಚಕ್ರವರ್ತಿ ಸೂಲಿಬೆಲೆ ಉದ್ಘಾಟಿಸಿದರು. ವೂಡೆ ಪಿ. ಕೃಷ್ಣ , ಪ್ರೊ.ಕೆ.ಜಿ. ರಾವ್ ಪಾಲ್ಗೊಂಡಿದ್ದರು.

ಕರ್ನಾಟಕ 1 ನವೆಂಬರ್ 2015, ಬೆಂಗಳೂರು



ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ 'ಅಮೃತಬಿಂಬ' ಸ್ಮರಣಸಂಚಿಕೆಯನ್ನು ತೋಂಟಧಾರ್ಯ ಶಾಖಾ ಮಠದ ನಿಜಗುಣಪ್ರಭು, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಹೊ ಶ್ರೀನಿವಾಸಯ್ಯ, ಎನ್ ಆರ್ ಪಂಡಿತಾರಾಧ್ಯ, ಡಾ ವೂಡೇ ಪಿ ಕೃಷ್ಣ ಬಿಡುಗಡೆ ಮಾಡಿದರು.

'ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಳ ವಿಪರ್ಯಾಸ'

ವಿಕ ಸುದ್ದಿಲೋಕ, ಯಲಹಂಕ

ಹೆತ್ತವರು ಮತ್ತು ಗುರುಗಳು ದೇವರ ಸಮಾನ ಎಂದು ಹೇಳುವ ನಮ್ಮ ದೇಶದಲ್ಲಿ 35 ಸಾವಿರ ವೃದ್ಧಾಶ್ರಮವಿರುವುದು ವಿಪರ್ಯಾಸ ಎಂದು ಮುಂಡರಗಿ, ಬೈಲೂರು ತೋಂಟದಾರ್ಯ ಶಾಖಾ ಮಠದ ಮಠಾಧೀಶ ಶ್ರೀ ನಿಜಗುಣ ಪ್ರಭು ತೋಂಟದಾರ್ಯ ಸ್ವಾಮಿಗಳು ಹೇಳಿದರು.

ಯಲಹಂಕ ಉಪನಗರದ ಶೇಷಾದ್ರಿಪುರಂ ವಿದ್ಯಾಸಂಸ್ಥೆಯ ಸ್ನೇಹ-ಸಮ್ಮಿಲನ ಕಾರ್ಯಕ್ರಮದ ಅಮೃತ ಮಹೋತ್ಸವ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿ "ಅಂತಃಕರಣದ ಶಿಕ್ಷಣದ ಕೊರತೆ ನಮ್ಮಲ್ಲಿದೆ," ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರ ಹೊ ಶ್ರೀನಿವಾಸಯ್ಯ ಮಾತನಾಡಿ "ಇಂದು ಶಿಕ್ಷಣ ಎರಡು ರೀತಿಯಲ್ಲಿ ವಿಂಗಡಣೆಯಾಗಿದೆ. ಒಂದು ಅಕ್ಷರಾಭ್ಯಾಸ. ಇನ್ನೊಂದು ವಿದ್ಯಾಭ್ಯಾಸ. ಮೊದಲನೆಯದ್ದು ಸಂಬಳದ ಲೆಕ್ಕವಾದರೆ, ಇನ್ನೊಂದು ನಿಜವಾದ ಶಿಕ್ಷಣವಾಗಿರುತ್ತದೆ. ಆದರೆ, ಅಕ್ಷರಾಭ್ಯಾಸವನ್ನು ಮಾಡುವ ಜನರೇ ಹೆಚ್ಚಾಗಿದ್ದಾರೆ," ಎಂದು ಹೇಳಿದರು. ಇದೇ ವೇಳೆ ಶೇಷಾದ್ರಿಪುರಂ ವಿದ್ಯಾಸಂಸ್ಥೆಗೆ 75 ವರ್ಷ ತುಂಬಿದ ನೆನಪಿಗಾಗಿ 'ಅಮೃತ ಬಿಂಬ' ಸ್ಮರಣಸಂಚಿಕೆ ಬಿಡುಗಡೆ ಮಾಡಲಾಯಿತು. ಶಾಲಾ ಮಕ್ಕಳು 'ಗೀತ ನಾಟಕ' ಪ್ರದರ್ಶಿಸಿದರು. ಆಪ್ ಸಂಸ್ಥೆಯಿಂದ 'ಮಾಮಾ ಮೋಷೆ' ನಾಟಕ ಪ್ರದರ್ಶನವಾಯಿತು.

ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎನ್ ಆರ್ ಪಂಡಿತಾರಾಧ್ಯ, ಉಪಾಧ್ಯಕ್ಷ ಡಬ್ಲ್ಯು ಎಚ್ ಅನಿಲ್‌ಕುಮಾರ್, ಕಾರ್ಯದರ್ಶಿ ಡಾ ವೂಡೇ ಪಿ ಕೃಷ್ಣ ಸರೋಜ ಕೆ ಎಂ ನಂಜಪ್ಪ, ಎಸ್ ಶೇಷನಾರಾಯಣ ಇತರರು ಇದ್ದರು.

ಹೊಸ ದಿಗಂತ
ಬೆಂಗಳೂರು
ಭಾನುವಾರ, 18 ಅಕ್ಟೋಬರ್ 2015

ಭ್ರಷ್ಟಾಚಾರ ಹೆಚ್ಚಳ: ನಿವೃತ್ತ ನ್ಯಾ.ಮಳಿಮಠ್ ವಿಷಾದ

ನಾಡಿನ ಸಂಪತ್ತು ಕಾಯಬೇಕಾದವರೇ ಲೂಟಿ ಮಾಡುತ್ತಿದ್ದಾರೆ

ಬೆಂಗಳೂರು: ನಮ್ಮನ್ನು ಹಾಗೂ ನಾಡಿನ ಸಂಪತ್ತನ್ನು ಕಾಯಬೇಕಾದವರೇ ಅದನ್ನು ಲೂಟಿ ಮಾಡುತ್ತಿರುವುದು ಭಾರತೀಯ ಸಂವಿಧಾನದ ದುರಂತ ಎಂದು ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಾ.ವಿ.ಎಸ್. ಮಳಿಮಠ್ ಅಭಿಪ್ರಾಯಪಟ್ಟರು.

ಡಾ.ಎಂ. ರಾಮಾಜೋಯಿಸ್ ಅವರ ಅವರ್ ಪಾರ್ಲಿಮೆಂಟ್ ಎಂಬ ಪುಸ್ತಕ ಕುರಿತು ಶನಿವಾರ ನಗರದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಇಂದಿನ ದಿನದಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ಸಮಾಜದಲ್ಲಿ ಆಳುವವರೇ ಹೆಚ್ಚು ಪ್ರಾಬಲ್ಯವಂತರಾಗುತ್ತಿದ್ದಾರೆ. ಸಂವಿಧಾನದ ಮೂಲತತ್ವವಾದ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಎಂಬ ವಾಕ್ಯ ಈಗ ಜನನಾಯಕರಿಂದ, ಜನನಾಯಕರಿಗಾಗಿ, ಜನನಾಯಕರಿಗೋಸ್ಕರ ಎಂಬಂತಾಗಿದೆ ಎಂದರು.

ನಮ್ಮನ್ನು ಹಾಗೂ ನಾಡಿನ ಸಂಪತ್ತನ್ನು ಕಾಯುವವರೇ ಲೂಟಿ ಮಾಡುತ್ತಿರುವ ಪ್ರಸಂಗಗಳೇ ಹೆಚ್ಚುತ್ತಿದೆ. ಅತ್ಯಾಚಾರ ಪ್ರಕರಣಗಳು ಸಮಾಜವನ್ನು ತಲ್ಲಣಗೊಳಿಸುತ್ತಿದೆ. ಸಮಾಜದಲ್ಲಿ ಉತ್ತಮ ನಡತೆಯೇ ಕಾಣೆಯಾಗುತ್ತಿದೆ. ಜನರ ಗುಣ ನಡತೆಯಲ್ಲಿ ಅತ್ಯಂತ ಶ್ರೀಮಂತಿಕೆ ಹೊಂದಿದ್ದ ದೇಶ ಇಂದು ಮೌಲ್ಯರಹಿತ ದೇಶದತ್ತ ಸಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿದರು.

ಅನ್ಯಾಯದೊಂದಿಗೆ ಸ್ಪರ್ಧೆ

ಸ್ವಾತಂತ್ರ್ಯಪೂರ್ವದಲ್ಲಿ ಜನರು ಸತ್ಯ, ಅಹಿಂಸೆಗಳಿಗಾಗಿ ಹೋರಾಡುತ್ತಿದ್ದರು. ಆದರೆ, ಪ್ರಸ್ತುತ ವಿದ್ಯಮಾನದಲ್ಲಿ ನಾವು ಕೊಲೆ, ದರೋಡೆ, ಹಿಂಸೆ ಹಾಗೂ ಅನ್ಯಾಯದೊಂದಿಗೆ ಸ್ಪರ್ಧೆಗಿಳಿದಿದ್ದೇವೆ. ಮಾತ್ರವಲ್ಲದೆ ಅತ್ಯಂತ ದೊಡ್ಡ ಹುದ್ದೆಗಳು ಲಭಿಸುವ ಎಲ್ಲಾ ರೀತಿಯ ಶಿಕ್ಷಣವನ್ನು ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿದ್ದೇವೆ. ಆದರೆ, ಮೌಲ್ಯಾಧಾರಿತ, ಸಂಸ್ಕೃತಿ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡುತ್ತಿಲ್ಲ. ರಾಷ್ಟ್ರೀಯ ಭಾವೈಕ್ಯತೆ, ವಿಚಾರವಂತ ಯುವಕರು ಸಮಾಜದಲ್ಲಿ ವಿರಳ ಎಂದು ವಿಷಾದ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳ ಮಾತು ದಾಖಲಾಗಬೇಕು

ಜನರಿಂದ ಆಯ್ಕೆಯಾಗಿರುವ ಜನಪ್ರತಿನಿಧಿಗಳು ಸಂಸತ್ ಕಲಾಪದಲ್ಲಿ ಆಡಿದ ಮಾತುಗಳು, ಮಂಡಿಸಿದ ವಿಚಾರಗಳು ಹಾಗೂ ಭಾಷಣಗಳನ್ನು ಪುಸ್ತಕ ರೂಪದಲ್ಲಿ ಹೊರತರಬೇಕು. ಇದನ್ನು ಸರ್ಕಾರ ಕಡ್ಡಾಯಗೊಳಿಸಬೇಕು. ಹೀಗಾದಲ್ಲಿ ಮಾತ್ರ ಪ್ರತಿಯೊಬ್ಬ ಜನನಾಯಕನ ದಾಖಲೆ ಅಚ್ಚಳಿಯದೇ ಉಳಿಯುವಂತಾಗುತ್ತದೆ ಎಂದು ಹೇಳಿದರು.

ಇಂದಿನ ಜನನಾಯಕರು ಸಂಸತ್‌ನಲ್ಲಿ ತಮ್ಮ ಕ್ಷೇತ್ರದ ಬಗ್ಗೆ ಮಾತನಾಡದೇ ಇರುವುದು ವಿಷಾದನೀಯ. ಪುಸ್ತಕ ರೂಪದಲ್ಲಿ ಸಂಸತ್ ಕಲಾಪದಲ್ಲಾದ ವಿಚಾರಗಳನ್ನು ಹೊರತರುವುದರಿಂದ ಜನರಿಗೂ ತಮ್ಮ ಜನನಾಯಕರ ಸಾಮರ್ಥ್ಯದ ಅರಿವಾಗುತ್ತದೆ. ಸಮಾಜಕ್ಕಾಗಿ ಜನಪ್ರತಿನಿಧಿಗಳ ಕರ್ತವ್ಯವನ್ನು ದಾಖಲಿಸುವ ಕೆಲಸವಾಗಬೇಕು ಎಂದು ನುಡಿದರು.

ಬಾಕಿ ಪ್ರಕರಣ ಹೆಚ್ಚಾಗುತ್ತಿದೆ

ನ್ಯಾಯಾಲಯಗಳಲ್ಲಿ ಪ್ರಕರಣಗಳು ಅಧಿಕವಾಗುತ್ತಿದೆ. ಹೆಚ್ಚುತ್ತಿರುವ ಪ್ರಕರಣಗಳು ಹಾಗೂ ಮೇಲ್ಮನವಿ ಪ್ರಕರಣಗಳಿಂದ ಕೇಸುಗಳು ಬಾಕಿ ಉಳಿಯುತ್ತಿವೆ. ಕೋರ್ಟ್‌ಗಳಲ್ಲಿ ಅಗತ್ಯ ಪ್ರಮಾಣದಲ್ಲಿ ನ್ಯಾಯಾಧೀಶರು ಇಲ್ಲದೇ ಇರುವುದರಿಂದ ಒತ್ತಡ ಹೆಚ್ಚಾಗುತ್ತಿದೆ. ಎತ್ತನ್ನಡೆ ಸಿವಿಲ್ ಕೇಸುಗಳನ್ನು ಹೈಕೋರ್ಟ್‌ಗೆ ಅಂತಿಮಗೊಳಿಸಿ, ಸುಪ್ರೀಂ ಕೋರ್ಟ್ ಮೇಲಿರುವ ಒತ್ತಡವನ್ನು ಕಡಿಮೆ ಮಾಡಬೇಕಾಗಿದೆ. ಹೈಕೋರ್ಟ್‌ನಲ್ಲಿಯೂ ಪ್ರಕರಣವನ್ನು ಏಕಪೀಠದಿಂದ ವಿಭಾಗೀಯ ಪೀಠ ಹೀಗೆ ಅನೇಕ ಬಾರಿ ಮೇಲ್ಮನವಿ ಹಾಕುತ್ತಾರೆ. ಇದರಿಂದ ಹೆಚ್ಚು ಪ್ರಕರಣಗಳು ಬಾಕಿ ಆಗುತ್ತಿವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಜಾರ್ಖಂಡ್ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಾ.ಎಂ. ರಾಮಜೋಯಿಸ್, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಆರ್ ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ.ವುಡೆ ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ಡಾ.ಎಂ. ರಾಮಾಜೋಯಿಸ್ ಅವರ ಅವರ್ ಪಾರ್ಲಿಮೆಂಟ್ ಎಂಬ ಪುಸ್ತಕ ಕುರಿತು ಶನಿವಾರ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಡಾ.ವಿ.ಎಸ್. ಮಳಿಮಠ್ ಉದ್ಘಾಟಿಸಿದರು.

ವಿಜಯ ಕರ್ನಾಟಕ 28 ಜೂನ್ 2015, ಬೆಂಗಳೂರು



ಅನಿಕೇತನ ಕನ್ನಡ ಬಳಗವು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಕನ್ನಡ ವಿಮರ್ಶಾ ಕಥನ' ಗ್ರಂಥವನ್ನು ಲೇಖಕಿ ಡಾ. ವಿಜಯಾ ಮತ್ತಿತರರು ಲೋಕಾರ್ಪಣೆ ಮಾಡಿದರು.